ಸಂವಾದ

ಸೆಪ್ಟಂಬರ್ ೨೦೦೧
ರೂ. ೨೦

ಸ್ಥಿತ್ಯಂತರ ರಾಜಕಾರಣದ ಸುತ್ತ...

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೧೧

ಸೆಪ್ಟಂಬರ್ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೩
❑ ಅಂತರಂಗ ೪
❑ ನೇಣಿನತ್ತ... ಅನ್ನದಾತ ೬
○ ನರಸಿಂಹ ಗುಂಜಹಳ್ಳಿ
❑ ಪಾಶ್ಚಾತ್ಯ ಮಾಧ್ಯಮಗಳಲ್ಲಿ ಭಾರತ ೮
○ ಎಸ್. ಕೃಷ್ಣಮೂರ್ತಿರಾವ್
❑ ಸಮುದಾಯ ಕೇಂದ್ರಿತ ಪರಿಸರ ೧೦
○ ವಿ. ಜಗನ್ನಾಥ
❑ ಮೀಸಲಾತಿ: ಹೊಸ ಚಿಂತನೆಯ ಅವಶ್ಯಕತೆ ೧೪
○ ಡಾ॥ ಬಸವರಾಜ ಕಲ್ಗುಡಿ
❑ ಮೀಸಲಾತಿ ಧಿಕ್ಕರಿಸುವ ಕಾಲ ಬರಲಿ ೧೭
○ ಡಿ. ಎಂ. ಚಿಣ್ಣಪ್ಪ
❑ ಶ್ರೇಷ್ಠತೆ ಒಳಗೆ ಅಪರಿಮಿತ ದ್ವೇಷ ೧೮
○ ಸಿ. ಹರೀಶ್ ಕುಮಾರ್
❑ ಸ್ಥಿತ್ಯಂತರ ರಾಜಕಾರಣದ ಸುತ್ತ... ೨೨
○ ಡಿ.ಎಸ್. ನಾಗಭೂಷಣ
❑ ಕುವೆಂಪು: ಕೈಮರ ಕಾಯಕದ ದಿಗ್ದರ್ಶನ ೨೬
○ ವಿ. ಚಂದ್ರಶೇಖರ ನಂಗಲಿ



❑ ಹೊಸ ಪುಸ್ತಕ ೨೬
❑ ನೀರಿನ ಖಾಸಗೀಕರಣ-ಅಗ್ನಿ ಮುಖದಲ್ಲಿ ಕರ್ನಾಟಕ ೩೦
○ ಟಿ.ಎಸ್. ವಿವೇಕಾನಂದ
❑ ವ್ಯವಸ್ಥೆಯನ್ನು ಒರೆಗಲ್ಲಿಗೆ ಹಚ್ಚಿದ ಪೋಳ ೩೪
○ ಡಾ॥ ಎಚ್.ಟಿ. ಪೋತೆ
❑ ಪಂಪ ಭಾರತ-ಪುರುಷ ವ್ಯಾಖ್ಯಾನಗಳು -ನಾಟಕ ವಿಮರ್ಶೆ ೩೬
❑ ದಲಿತ್ ಡೈರಿ ೩೮
○ ಚಂದ್ರ ಭಾನ್ ಪ್ರಸಾದ್
❑ ಬುದ್ಧಾಯಣ ೪೨
○ ಸಿ. ಎಚ್. ರಾಜಶೇಖರ್

ಕವನಗಳು : ❑ ದಿಗಂಬರ ದಿಂಬ ೧೩ ❑ ಬೆಳಕಿನ ತುಂತುರು ನಾದ ೨೧
❑ ಹನಿಗವಿತೆಗಳು ೨೬ ❑ ಮಾರಿಯ ಗುಡಿ ಮುಂದೆ ೩೫

ಮುಖಪುಟ ಕಲೆ: ವೆಂಕಟಾಚಲಪತಿ, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಇದು ಹೇಗೆ ಸಾಧ್ಯವಾಯಿತು?

ಪ್ರೀತಿಯ ಸಂಪಾದಕರೇ,

ಭಗವತ್ ಗೀತೆಯಲ್ಲಿ ಚಾತುರ್ವರ್ಣದ ಮಾತಿದೆ.

ಭಗವದ್ಗೀತೆ ಹುಟ್ಟಿಕೊಂಡ ದಿನದಿಂದ ೧೮-೧೯ ನೇ ಶತಮಾನದ ವರೆಗೆ, ಬೇಡ ೧೫ನೇ ಶತಮಾನದವರೆಗೆ ಭರತ ವರ್ಷದ ಸಮಾಜದಲ್ಲಿ ಬ್ರಾಹ್ಮಣನಿಗೆ ಅಗ್ರಮಾನ್ಯ ಪಟ್ಟ ಇತ್ತು. ಬ್ರಾಹ್ಮಣನಿಗೆ ಇದ್ದ ಆಸ್ತಿ ವಿದ್ಯೆ ಒಂದೇ- ಅದನ್ನು ಒಂದು ಅಸ್ತ್ರವಾಗಿ ಮಾಡಿಕೊಂಡು ಇಡೀ ಸಮಾಜವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದ. ಅವರನ್ನು ಅಜ್ಞಾನದ ಅಂಧಕಾರದಲ್ಲಿಟ್ಟಿದ್ದ. ತನ್ನ ಆಜ್ಞಾಧಾರಕರನ್ನಾಗಿ ಮಾಡಿಕೊಂಡಿದ್ದ. ಇದು ಹೇಗೆ ಸಾಧ್ಯವಾಯಿತು? ಬ್ರಾಹ್ಮಣನಿಗೆ ಹಣದ ಬಲ ಇರಲಿಲ್ಲ. ತೋಳ್ಬಲ ಇರಲಿಲ್ಲ. ಅಧಿಕಾರಬಲ ಇರಲಿಲ್ಲ. ಜಾತಿ ಬಲವೂ ಇರಲಿಲ್ಲ. ಅವನು ಕೇವಲ ೪ ಪರ್ಸೆಂಟ್. ಹೀಗಿದ್ದೂ ಅವನು ತೋಳ್ಬಲದವರನ್ನು ಹತೋಟಿಯಲ್ಲಿಟ್ಟುಕೊಂಡಿದ್ದ. ವ್ಯವಹಾರಸ್ಥ ವೈಶ್ಯನನ್ನೂ ಹತೋಟಿಯಲ್ಲಿಟ್ಟುಕೊಂಡಿದ್ದ. ಜಗತ್ತನ್ನೇ ಸಾಕುವ ಒಕ್ಕಲಿಗನನ್ನು ತನ್ನ ತೋಳ ತೆಕ್ಕೆಗೆ ತೆಗೆದುಕೊಂಡಿದ್ದ. ಅಂದರೆ ವಿದ್ಯೆಗೆ ಅಂತಹ ಪ್ರಚಂಡ ಶಕ್ತಿ ಇದೆಯೇ? ಬ್ರಾಹ್ಮಣನ ಈ ಸರ್ವಾಧಿಕಾರವನ್ನು ಆಗ ಯಾರೂ ಪ್ರಶ್ನಿಸಲಿಲ್ಲ ಎಂತಲ್ಲ. ಆದರೆ ಹಾಗೆ ಪ್ರಶ್ನಿಸಿದವರು ಬೆರಳೆಣಿಕೆಯಷ್ಟು ಜನ. ಉಳಿದವರೆಲ್ಲ ಅವನ ಉಪಟಳವನ್ನು ಹೇಗೆ ಸಹಿಸಿಕೊಂಡಿದ್ದರು? ಬ್ರಾಹ್ಮಣನನ್ನು ಬಿಟ್ಟು ಉಳಿದ ಎಲ್ಲಾ ಸಮಾಜ ಅಜ್ಞಾನ, ಮೂಢನಂಬಿಕೆಗಳಲ್ಲಿ ಅದ್ದಿ ಹೋಗಿತ್ತು ಎಂತಲೇ? ವಿದ್ಯೆಯ ಶಕ್ತಿಯಿಂದ ಅವನನ್ನು ಗೆಲ್ಲಲು ಸಾಧ್ಯವಿಲ್ಲವಾದರೂ ದೈಹಿಕ ಬಲದಿಂದ, ಪಾಶವೀ ಶಕ್ತಿಯಿಂದ, ಈ ಅಲ್ಪ ಸಂಖ್ಯಾತನನ್ನೂ ನಾಮಾವಶೇಷ ಮಾಡಲು ಸಾಧ್ಯವಾಗುತ್ತಿರಲಿಲ್ಲವೇ? ಆದರೆ ಎಲ್ಲ ಜನಾಂಗದವರೂ ಮಂತ್ರ ಮುಗ್ಧರಂತೆ, ಷಂಡರಂತೆ, ನಿಷ್ಕ್ರಿಯರಾಗಿದ್ದುದು ಹೇಗೆ? ಮನುಷ್ಯ ಯಾವುದೇ ಒತ್ತಡ, ದಮನಕಾರಿ ಕ್ರಿಯೆಗೆ ಒಳಗಾಗದಿದ್ದಾಗ, ಬಿಡುಬೀಸಾಗಿ ಇದ್ದು ಬಿಡಬಹುದು. ಆದರೆ ಬ್ರಾಹ್ಮಣನ ಉಪಟಳ ಉಳಿದೆಲ್ಲ ವರ್ಣದವರ ಮೇಲೆ, ಇಡೀ ಸಮಾಜದ ಮೇಲೆ ಒಂದು ನಿಯತಕಾಲದಲ್ಲಿ ಶತಮಾನಗಳ ಕಾಲನಡೆದಾಗಲೂ ಜನಸತ್ತಂತಿದ್ದರಲ್ಲಾ ಇದಕ್ಕೆ ಕಾರಣವೇನಿರಬಹುದು? ನಿಮ್ಮ ಸಂವಾದ ಪತ್ರಿಕೆಯಲ್ಲಿ ಇದರ ಪ್ರಥಕ್ಕರಣೆ ನಡೆಸಿಕೊಂಡಿರೆಂದು ವಿನಂತಿಸುತ್ತೇನೆ.

ಎಚ್.ಎಸ್. ದೊರೆಸ್ವಾಮಿ,
ಬೆಂಗಳೂರು

ದಲಿತರ ಬೈಬಲ್

ಗೌರವಾನ್ವಿತ ಸಂಪಾದಕರೇ,

ಶ್ರೀ ಚಂದ್ರ ಭಾನ್ ಪ್ರಸಾದ್ ಅವರ ದಲಿತ ಡೈರಿಯನ್ನು ತಪ್ಪದೇ ಓದುತ್ತಿದ್ದೇನೆ. ದಲಿತ ಡೈರಿ ಕೇವಲ ಡೈರಿ ಅಲ್ಲ. ಅದು ದಲಿತರ ಬೈಬಲ್. ಹೊಸಯುಗದ ದಲಿತರ ಪಾಲಿಗೆ ಅದು ನಿಜವಾಗಲೂ ಜೀವ ದ್ರವ್ಯ. ದಲಿತ ಚಳವಳಿಯ ಎಲ್ಲ ನಾಯಕರು, ರಾಜಕೀಯ ಪಕ್ಷಗಳ ದಲಿತ ಮುಖಂಡರು, ದಲಿತ ಸಾಹಿತಿ-ಚಿಂತಕರು ತಮ್ಮ ಕೊಳೆತು ಹೋದ ಹಳೇ ಆಲೋಚನೆಗಳನ್ನು ಬಿಟ್ಟು, ಹೊಸತನ ಹೊಸ ಚಿಂತನೆಗಳನ್ನು ಬೆಳಸಿಕೊಳ್ಳಲು ದಲಿತ ಡೈರಿ ನಿಜವಾಗಿಯೂ ಸಹಕಾರಿ. ಆ ಕೆಲಸಕ್ಕೆ ಅವರುಗಳು ಮುಂದಾಗಲಿ ಎಂದು ಹಾರೈಸುತ್ತೇನೆ. ಇಂಥ ಆಲೋಚನಾ ಕ್ರಮಗಳು ಪ್ರಸಾ ರಗೊಳ್ಳಲು ಕಾರಣವಾದ 'ಸಂವಾದ'ಕ್ಕೆ ನನ್ನ ಅನಂತ ಪ್ರಣಾಮಗಳು.

ಚಿರಂತನ್ ಕುಮಾರ್
ಬಳ್ಳಾರಿ

...ತ್ರಗಳು

...ೋಮಾಂಚಕ ಸಂದರ್ಶನ

... ಇಂದೂಧರ ಹೊನ್ನಾಪುರ ಅವರಿಗೆ ...ನೆಗಳು.

... ಆಗಸ್ಟ್ ತಿಂಗಳ 'ಸಂವಾದ'ದಲ್ಲಿ ... ಬಂದ 'ಶೌರಿ ಬೆವರಳಿಸಿದ ಥಾಪರ್' ...ಶ ಖುಷಿ ಕೊಟ್ಟಿತು. ಇಡೀ ಭಾರತಕ್ಕೆ ...ಾದ ಡಾ॥ ಅಂಬೇಡ್ಕರ್ ಅವರ ಬಗ್ಗೆ ...ತ ಹೀನಾಯವಾಗಿ ಮಾತಾಡುವ ...ಕ ದೇಶದ ಬಡವರೆಲ್ಲರ ಕೆಂಗಣ್ಣಿಗೆ ...ಾಗಿದ್ದ, ಭಂಡತನವನ್ನೇ ಬಂಡವಾಳ ...ಕೊಂಡಿರುವ ಶೌರಿಯನ್ನು ಥಾಪರ್ ... ವಾಗ್ಬಾಣಗಳ ಮೂಲಕ ಬಾಯಿ ...ಸಿರುವುದು ರೋಮಾಂಚನಕಾರಿ ...ದೆ.

... ದಲಿತರಿಗೂ ಮೀಸಲಾತಿ ಬೇಡ ... ಹೇಳುವ ಮೂಲಕ ಶೌರಿ ಸಂಘ ...ದದ ಅಂತರಾಳವನ್ನು ಬಯಲು ...ದ್ದಾನೆ. ಮುಕ್ತ ಸ್ಪರ್ಧೆಯಲ್ಲಿ ದಲಿತರು ಸ್ಪರ್ಧಿಸಿ ಗೆಲ್ಲಬೇಕಾದರೆ, ಇನ್ನೂ ಅವರಿಗೆ ಕಾಲವಕಾಶ ಇದೆ ಎಂದು ಹೇಳುವ ಮೂಲಕ, ತಳ ಸಮುದಾಯಗಳು ಸಮಾಜದ ಮುಖ್ಯವಾಹಿನಿಗೆ ಬರುವುದನ್ನು ತಡೆಯುವ ಸಂಘ ಪರಿವಾರದ ಪಿತೂರಿ ಕೂಡ ಹೊರಬಿದ್ದಿದೆ.

ಇಂಥ ಸಂದರ್ಶನವನ್ನು ನಡೆಸಿಕೊಟ್ಟ ಕರಣ್ ಥಾಪರ್, ಅನುವಾದಿಸಿದ ಸತ್ಯಪ್ರಕಾಶ್, ಹಾಗೂ ಪ್ರಕಟಿಸಿದ ನಿಮಗೆ ನನ್ನ ಹೃದಯ ಪೂರ್ವಕ ಧನ್ಯವಾದಗಳು.

ಶರಣಕುಮಾರ ಹಾದಿಮನಿ
ಧಾರವಾಡ ಶಹರ.

ರೈತ ವಿರೋಧಿಗಳಿಗೆ ಪಾಠ ಕಲಿಸಬೇಕು.

ಪ್ರೀತಿಯ ಹೊನ್ನಾಪುರ ಅವರಿಗೆ,

ಆಗಸ್ಟ್-೦೬ ರ ಸಂಚಿಕೆಯ ಸಂಪಾದಕೀಯ ಅದ್ಭುತವಾಗಿದೆ. ದೇವೇಗೌಡ ಮತ್ತು ಅವರ ಕುಟುಂಬ ಹೇಗೆ ಸತತವಾಗಿ ಎಲ್ಲರಿಗೂ ಮಂಕು ಬೂದಿ ಎರಚಿ ಅಧಿಕಾರದಲ್ಲಿ ಮುಂದುವರೆಯುತ್ತಿದೆ ಎಂಬುದನ್ನು ಅತ್ಯಂತ ಸಮರ್ಥವಾಗಿ ಮಂಡಿಸಿದ್ದೀರಿ.

ರೈತರ ಹೆಸರನ್ನು ಹೇಳಿಕೊಂಡು, ರೈತರನ್ನೇ ಶೋಷಣೆ ಮಾಡುತ್ತಿರುವವರು ಕರ್ನಾಟಕದಲ್ಲಿ ಯಾರಾದರೂ ಇದ್ದರೆ ದೇವೇಗೌಡರ ಕುಟುಂಬದವರೇ ಅದರಲ್ಲಿ ಮೊದಲನೆಯವರು. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಲ್ಲೂ ಅವರಿಗೇ ಅಗ್ರ ಸ್ಥಾನ. ರೈತ ರೈತ ಎಂದು ಬಾಯಿ ಬಡಿದುಕೊಂಡು ಅಧಿಕಾರಕ್ಕೆ ಬರುವ ದೇವೇಗೌಡರು, ಅಧಿಕಾರಕ್ಕೆ ಬಂದ ಕೂಡಲೇ ರೈತರ ಬಾಯಿಗೆ ಮಣ್ಣು ಹಾಕಿದ್ದು ಈಗ ಜಗಜ್ಜಾಹೀರಾಗಿದೆ.

ದೇವೇಗೌಡರಿಗೆ ರೈತರ ಹೆಸರನ್ನು ಹೇಳುವ ಯಾವುದೇ ನೈತಿಕ ಅಧಿಕಾರ ಇಲ್ಲ. ನಿಜವಾದ ರೈತ ದ್ರೋಹಿಯೇ ಅವರು. ಅನ್ನ ನೀಡುವ ರೈತರ ಭೂಮಿಯನ್ನು ಪರಭಾರೆ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಇಡೀ ರೈತ ಕುಲಕ್ಕೇ ಬೆಂಕಿ ಹಾಕಿದ ಮಹಾ ಮೋಸಗಾರ. ಕರ್ನಾಟಕದ ಜನ ಈಗಲಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಇಂಥ ರೈತ ದ್ರೋಹಿಗಳಿಗೆ ಬುದ್ಧಿ ಕಲಿಸುವುದರ ಮೂಲಕ ಅವರಿಗೆ ಸರಿಯಾದ ಪಾಠವನ್ನು ಕಲಿಸಬೇಕಾಗಿದೆ.

ಇನ್ನು ಕುಮಾರ ಸ್ವಾಮಿ. ಇವರ ಬಗ್ಗೆ ಏನನ್ನೂ ಹೇಳದೇ ಇರುವುದೇ ಒಳ್ಳೆಯದು. ಅತಿ ವಿನಯ ಮತ್ತು ಅತಿ ಧೂರ್ತತೆ ಒಬ್ಬ ಮನುಷ್ಯನಲ್ಲೇ ಇದ್ದರೆ ಉಳಿಯುವುದು ಧೂರ್ತತೆಯೇ ಹೊರತು ವಿನಯವಲ್ಲ. ಕುಮಾರ ಸ್ವಾಮಿಯ ಲೂಟಿ ಕಾರ್ಯಗಳನ್ನು ಗಮನಿಸಿದರೆ, -ಅವರೇನಾದರೂ ಇನ್ನೊಂದಷ್ಟು ಕಾಲ ಅಧಿಕಾರದಲ್ಲಿ ಮುಂದುವರೆದರೆ- ಕರ್ನಾಟಕ ಪೂರ್ತಿ ದೇವೇಗೌಡ ಕುಟುಂಬದ ಖಾಸಗಿ ಆಸ್ತಿಯಾಗಿ ಪರಿಣಯಿಸುವುದಲ್ಲಿ ಆಶ್ಚರ್ಯವೇನಿಲ್ಲ.

ಹಾಗಾಗದಂತೆ ಕರ್ನಾಟಕ ವನ್ನು ಉಳಿಸಬೇಕಾದರೆ ಕುಮಾರ ಸ್ವಾಮಿ ಮತ್ತು ಅವರ ಪಟಾಲಂ ಅನ್ನು ಕೆಳಗಿಳಿಸಲೇ ಬೇಕು. ಅದು ಎಲ್ಲರ ಜವಾಬ್ದಾರಿ.

ಅರವಿಂದ ನಾಯಕ್
ಬೆಂಗಳೂರು.

...ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	...ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
...ದ್ಯಾರ್ಥಿಗಳು/ಕಾರ್ಯಕರ್ತರಿಗೆ	...೧೦೦/-	ರೂ.೩೦೦/-	ರೂ.೫೦೦/-
...ನೌಕರರು ಮತ್ತು ವೃತ್ತಿಪರರಿಗೆ	...೨೦೦/-	ರೂ.೫೦೦/-	ರೂ.೮೦೦/-
...ಂಘ-ಸಂಸ್ಥೆಗಳು/ಉದ್ಯಮಿಗಳಿಗೆ	...೨೫೦/-	ರೂ.೬೦೦/-	ರೂ.೧೦೦೦
...ವಿಶೇಷ ಹಿತೈಷಿ ಚಂದದಾರರಿಗೆ	...೨೦/-	ರೂ.೧೫೦೦/-	ರೂ.೨೫೦೦/-

...ಜೀವ ಚಂದಾ ರೂ.೫,೦೦೦/-
...ೋಷಕ ಚಂದಾ ರೂ.೧೦,೦೦೦/-

...: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ



ಅಂತರಂಗ



ದೇವೇಗೌಡ ಕುಟುಂಬದ

ದೇವೇಗೌಡರು ಅಖಾಡಕ್ಕೆ ಇಳಿದಿದ್ದಾರೆ.

'ಮಾಡು ಇಲ್ಲವೇ ಮಡಿ' ಎಂಬ ಅವರ ಘೋಷ ವಾಕ್ಯ ಈಗ ಹಳೆಯದಾಗಿದೆ. ಅವರದೀಗ ಚೈತ್ರಯಾತ್ರೆ! (ತೀರ್ಥಯಾತ್ರೆಗಿನ್ನೂ ಅವರಿಗೆ ಕಾಲ ಕೂಡಿ ಬಂದಿಲ್ಲ!!)

ಮಗನ ದುರಾಡಳಿತ-ಭ್ರಷ್ಟಾಚಾರ ಎಲ್ಲವೂ ಮೇರೆ ಮೀರಿದ ಮೇಲೆ ಅಖಾಡಕ್ಕಿಳಿದಿರುವ ಈ ವೃದ್ಧ ಗೌಡರಿಗೀಗ ಒಂದೇ ಆಸೆ. ಅದು ಜೆಡಿಎಸ್ (ಜನತಾ ದೇವೇಗೌಡ ಸನ್ಸ್) ಪಕ್ಷವನ್ನು ಬಲಪಡಿಸುವುದು. ಹಾಗಂತ ಅವರೇ ಹೇಳಿಕೊಂಡಿದ್ದಾರೆ. ಅಂದರೆ ಅಪ್ಪ ಮಕ್ಕಳು ಭದ್ರವಾಗುವುದು ಅಂತ ವಿವರಿಸಬೇಕಾಗಿಲ್ಲ ಅಲ್ಲವೆ?

ಈ ಜನತಾ ದಳ ಅನ್ನುವುದು ಒಂದು ರಾಜಕೀಯ ಪಕ್ಷವೇ ಎನ್ನುವ ಬಗೆಗೆ ನಾಡಿನ ಜನತೆಗೆ ನಿಜವಾಗಲು ಅನುಮಾನಗಳಿವೆ. ಚುನಾವಣಾ ಆಯೋಗದಲ್ಲಿ ರಾಜಕೀಯ ಪಕ್ಷ ಎಂದು ನೋಂದಣಿ ಆದ ಮೇಲೆ ಇಂದೆಂಥಾ ಪ್ರಶ್ನೆ ಎಂದು ನೀವು ಕೇಳ ಬಹುದು. ಆದರೆ ನನ್ನ ಪ್ರಕಾರ ಒಂದು ಪಕ್ಷಕ್ಕೆ ತನ್ನದೇ ಆದ ಸಿದ್ಧಾಂತ, ಸಂವಿಧಾನ, ನಿಯಮಾವಳಿ, ಪ್ರಣಾಳಿಕೆ ಇತ್ಯಾದಿಗಳಿರಬೇಕಲ್ಲವೆ? ಕನಿಷ್ಟ ಪದಾಧಿಕಾರಿಗಳನ್ನಾದರೂ ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡಬೇಕಲ್ಲವೆ? ಈ ಯಾವುದಾದರೂ ಈ ದೇವೇಗೌಡ ಮತ್ತು ಮಕ್ಕಳ ಪಕ್ಷದಲ್ಲಿ ಇವೆಯೆ?

ಇವೆಯೇ ಎಂಬ ಪ್ರಶ್ನೆಯೇ ಬೇಕಿಲ್ಲ. ಯಾಕೆಂದರೆ ಈ ಯಾವುವೂ ಇಲ್ಲ. ಜೆಡಿಎಸ್ ಈಗ ದೇವೇಗೌಡ ಎಂಬ ಸಾಮ್ರಾಟನ ಖಾಸಗಿ ಆಸ್ತಿ. ಅವರ ಖುಷಿಗೆ ತಕ್ಕಂತೆ ಅದರ ಚಟುವಟಿಕೆಗಳು ನಡೆಯುತ್ತಿವೆ. ಅವರಿಗೆ ಇಷ್ಟವಾದವರು ಗದ್ದುಗೆ ಏರುತ್ತಾರೆ. ಇಷ್ಟವಾಗದವರು, ಗೇಟ್ ಪಾಸು ಪಡೆದು ಟಾಟಾ ಹೇಳಬೇಕಾಗುತ್ತದೆ. ಇಂಥ ಒಂದು ಪಾಳೇಗಾರರ ಗುಂಪನ್ನು ಪಕ್ಷವೆಂದು ಕರೆಯುವುದಾದರೂ ಹೇಗೆ? ಅಲ್ಲಿ ಪದಾಧಿಕಾರಿಯಾಗುವ ಯಾರೇ ವ್ಯಕ್ತಿ ಸ್ವಂತ ವ್ಯಕ್ತಿತ್ವದವನಾಗಿರಬಾರದು. ಆತನಿಗೆ ಅಭಿಪ್ರಾಯಗಳಿರಬಾರದು. ಅಧಿಕಾರ ಚಲಾಯಿಸುವುದನ್ನಂತೂ ಕನಸು ಮನಸಿನಲ್ಲಿಯೂ ಎಣಿಸಬಾರದು.

ದೇವೇಗೌಡರ ಮಕ್ಕಳಿಗೆ ಮಾತ್ರ ಸಂವಿಧಾನೇತರ ಹಕ್ಕುಗಳಿರುತ್ತವೆ. ಅವರು ಬೇಕೆಂದಾಗ ಬೇಕಾದ್ದು ಮಾಡಬಹುದು ಶಾಸಕಾಂಗ ಪಕ್ಷದ ನಾಯಕನ ಗಮನಕ್ಕೆ ಬರದಂತೆ ಶಾಸಕಾಂಗ ಸಭೆಯನ್ನು ಸಹ ನಡೆಸಬಹುದು. ಸರ್ಕಾರದ ಕಡತಗಳನ್ನು ಮನೆಗೆ ತರಿಸಿಕೊಂಡು ಪರಿಶೀಲಿಸಬಹುದು. ಅಧಿಕಾರಿಗಳ ವರ್ಗಾವಣೆಗೆ ಆದೇಶ ನೀಡಬಹುದು, ಯಾವುದೇ ಭದ್ರತೆ ನೀಡದೆ ಬ್ಯಾಂಕುಗಳಿಂದ ಕೋಟಿಗಟ್ಟಲೆ ಸಾಲ ಪಡೆಯಬಹುದು. ಅಷ್ಟೇ ಏಕೆ ಬೆಳಗಾಗುವುದರಲ್ಲಿ ಸರ್ಕಾರಗಳನ್ನು ಬೀಳಿಸಿ ತಾವೇ ಮುಖ್ಯಮಂತ್ರಿ ಕೂಡ ಆಗಬಹುದು!

ದೇವೇಗೌಡರ ಈ ಸಕಲೆಂಟು ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ನಾಡಿನ ಎಲ್ಲ ಕರ್ಮಠ ಜೋತಿಷಿಗಳ ಆರ್ಶಿವಾದ ಇರುತ್ತದೆ. ದಶದಿಕ್ಕುಗಳ ದೇವಾನುದೇವತೆಗಳ ಅನುಗ್ರಗವೂ ಇರುತ್ತದೆ. ಕಳ್ಳದಂಧೆ, ಕಪ್ಪು ಹಣದವರ ಥೈಲಿ ಸೇವೆಯೂ ಇರುತ್ತದೆ. ನೆಲ-ಜಲ-ಗಣಿ-ಕುಳಗಳ (ಸೇವಾದುರಂಧರ) ಕಾಲಾಳು ಪಡೆ ಬೆನ್ನಿಗಿರುತ್ತದೆ. ಕುಟುಂಬದ ಸುಮಂಗಲೆಯರ ನಿತ್ಯೋತ್ಸವವೂ ಜತೆಗಿರುತ್ತದೆ.

ಇಂಥ ಜಗದೇಕವೀರ ದೇವೇಗೌಡ ಮತ್ತವರ ಸಂತಾನ ಇಡೀ ಜನತಾದಳ ಎಂಬ ಖಾಸಗಿ ಆಸ್ತಿಯನ್ನು ಗುತ್ತಿಗೆ ತೆಗೆದುಕೊಂಡಿದ್ದರೆ ಅದರಲ್ಲಿ ಆಶ್ಚರ್ಯವೇನು? ಅದರ ಉಳಿವಿಗಾಗಿ ಅಖಾಡಕ್ಕಿಳಿದರೆ ತಪ್ಪೇನು? 'ಮಾಡು ಇಲ್ಲವೇ ಮಡಿ' ಎಂದವರು ಅದನ್ನು ಬಿಟ್ಟು ಚೈತ್ರಯಾತ್ರೆ ಆರಂಭಿಸಿದರೆ ಅದನ್ನು ಪ್ರಶ್ನಿಸುವವರು ಯಾರು? ಸಾಮ್ರಾಟನನ್ನು ಎದುರು ಹಾಕಿಕೊಳ್ಳುವ ಶಕ್ತಿ ಸಾಮಂತರಿಗಿರುವುದೆ?

ಇಷ್ಟೆಲ್ಲ ವ್ಯಂಗ್ಯ, ವಿಲಕ್ಷಣ ಪ್ರಶ್ನೆಗಳಿಂದಾಗಿ ಓದುಗರಿಗೆ ಗೊಂದಲವಾಗಿದ್ದರೆ ಕ್ಷಮಿಸಿ. ಇವೆಲ್ಲ ಮುಂದೆ ವಿವರಿಸಬೇಕೆಂದಿರುವ ಸಮಾಚಾರಗಳ ಪೀಠಿಕೆ ಅಷ್ಟೆ.

ಅಧಿಕಾರಕ್ಕೆ ಬಂದ ಅದೇ ತಿಂಗಳಲ್ಲಿ ಮೂರಾಬಟ್ಟೆಯಾಗಿ ಕುಮಾರಸ್ವಾಮಿ ಮತ್ತವರ ಕುಟುಂಬದ ಐಲಾಟಗಳನ್ನು ವಿವರಿಸಲು ಹೇಳಬೇಕಾಯಿತು. ಈ ಕುಮಾರಸ್ವಾಮಿ ಬಿನ್ ದೇವೇಗೌಡ ಅವರ ವ್ಯಾ ರಿಕ ಬದುಕಿನತ್ತ ಕಣ್ಣ ಹಾಯಿಸುವ ಮುನ್ನ ಅವರ ಅಲೌಕಿಕ ಬದುಕಿನ ಗಮನ ಹರಿಸಬೇಕು. ಅದೊಂದು ವಿಚಿತ್ರವೂ ವಿಕ್ಷಿಪ್ತವೂ ಆದ ಮಾ ಸ್ಥಿತಿ. ಅಲ್ಲಿ ಕುಟುಂಬದ ಹೊರತಾಗಿ ಎಲ್ಲರೂ ಕಾಲಾಳುಗಳು. ಜೀತಗಾ

ಒಂದು ಮಾತನ್ನು ನೀವು ಗಮನಿಸಿರಬಹುದು. ದೇವೇಗೌಡರಾ ಅವರ ಮಕ್ಕಳಾಗಲಿ, ಸೊಸೆಯಂದಿರಾಗಲಿ ಎಲ್ಲರೂ ಮಾತು ಮಾ 'ತಮ್ಮ ಕುಟುಂಬ'ದ ಬಗ್ಗೆ ಹೇಳುತ್ತಾರೆ. 'ಕಳೆದ ೨೫-೩೦ ವರ್ಷಗಳಿಂ ತಮ್ಮ ಕುಟುಂಬದ ಮೇಲೆ ಆಪಾದನೆ ಬರುತ್ತಿವೆ. ಅವುಗಳಿಗೆ ನಾವು ಹೆದ ದಿಲ್ಲ, ಬದಲಾಗಿ ಎದುರಿಸುತ್ತೇವೆ' ಎನ್ನುತ್ತಾರೆ. ತಮ್ಮಿಂದ ಉಪಯೆ ಪಡೆದವರೆಲ್ಲ ತಮಗೆ 'ದ್ರೋಹ' ಬಗೆಯುತ್ತಾರೆಂದು ದೂರುತ್ತಾರೆ. ಕುಟುಂಬಕ್ಕೆ ನಿಷ್ಠೆಯಿಂದ. ಭಕ್ತಿಯಿಂದ ಸೇವೆ ಸಲ್ಲಿಸುತ್ತಿಲ್ಲ ಎಂದು ' ನಿಂದೆ'ಯ ಅಪವಾದವನ್ನು ಹೊರಿಸುತ್ತಾರೆ. ಬಿನ್ನಾಭಿಪ್ರಾಯ ವ್ಯಕ್ತ ಪ ವರನ್ನು ದ್ರೋಹಿಗಳು ಎಂದು ನಿಂದಿಸುತ್ತಾರೆ. ಕುಟುಂಬ ಸದಸ್ಯರಿ ಸಮನಾಗಿ ನಿಲ್ಲಲು ಯತ್ನಿಸಿದವರನ್ನು ಕೃತಘ್ನರೆಂದು ದೂರವಿಡು ಸಣ್ಣ ಪುಟ್ಟ ಅಧಿಕಾರಕ್ಕೆ ಹಂಬಲಿಸಿದವರನ್ನು 'ರಾಜ ದ್ರೋಹ'ದ ಆರೋ ಮೇಲೆ ದಂಡಿಸುತ್ತಾರೆ.

ಇಲ್ಲಿ ಕುಟುಂಬವೇ ಸರ್ವಸ್ವ, ಬೇರೆ ಎಲ್ಲ ನಗಣ್ಯ. ಕುಟುಂ ಯಜಮಾನ. ಅಪ್ಪ ದೊಡ್ಡ ಯಜಮಾನನಾದರೆ, ಮಗ ಚಿಕ್ಕ ಯಜಮ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು ಎಲ್ಲರೂ ಈ ಯಜ ಯಾದಿಯಲ್ಲಿ ಬರುವವರೇ. ಉಳಿದವರೆಲ್ಲ ಜೀತಗಾರರು. ಅದಕ್ಕೇ ಸಿದ್ಧರಾಮಯ್ಯ ಅವರ ನಂತರ ಶಾಸಕಾಂಗ ಪಕ್ಷದ ನಾಯಕರಾಗಿ ನೆ ಗೊಂಡ ಎಂ.ಪಿ. ಪ್ರಕಾಶ್ 'ತನ್ನದು ಬಯಸದೇ ಬಂದ ಭಾಗ್ಯ' ಎ ನಿಷ್ಠೆ ತೋರಿದ್ದರು. ನಾಯಕತ್ವ ಅರ್ಹತೆಯಿಂದ ಬಂದದ್ದೆಂದು ಹೇ ಧೈರ್ಯ ಸಮಾಜವಾದಿ(?) ಪ್ರಕಾಶ್ ಅಂಥವರಿಗೂ ಇಲ್ಲದೆ ಹೋ ಉಳಿದವರ ಪಾಡೇನು?

ಕುಮಾರ ಸ್ವಾಮಿ ಮುಖ್ಯ ಮಂತ್ರಿ ಆದ ಮೇಲಿನ ವಿದ್ಯಮಾನ ನೋಡಿ. ಚುನಾವಣೆಯೂ ಸೇರಿದಂತೆ ಬೇರೆ ಬೇರೆ ಸಂದರ್ಭ 'ಕುಟುಂಬಕ್ಕೆ' ಕೋಟಿಗಟ್ಟಲೆ ಹಣ ಸಹಾಯ ಮಾಡಿದ ಯಾರೂ ಅವರ ಜತೆ ಇಲ್ಲ. ಅವರ ಮೇಲೆ ಕುಮಾರಸ್ವಾಮಿಗಾಗಲಿ, ಕುಟು ಇತರೆ ಯಾರಿಗೆ ಆಗಲಿ ಈಗ ನಂಬಿಕೆ ಇಲ್ಲ. ಮೊದಲೇ ಇಷ್ಟೊಂದು ಸಹಾಯ ಮಾಡುವವರು, ನಮ್ಮ ಸಹಾಯ ಪಡೆದರೆ ಎಷ್ಟು ಹಣ ಸಂಪ ಬಹುದೆಂಬ ಗುಮಾನಿ ಒಂದೆಡೆಯಾದರೆ, ನನಗೇ ಇಷ್ಟು ಕೊಟ್ಟ ಬೇರೆಯವರಿಗೆ ಇನ್ನೆಷ್ಟು ಕೊಡಬಹುದು ಎಂಬ ಅನುಮಾನ ಇನ್ನೊ ಹಾಗಾಗಿ ಸಹಾಯ ಮಾಡಿದವರ ಮೇಲೆ ಶಂಕೆ! ಭೀತಿ! ಆತಂಕ!

ಬೇರೊಬ್ಬನನ್ನು ಬೀಳಿಸಿ ನನ್ನನ್ನು ತಂದವನು, ನಾಳೆ ನನ್ನನ್ನು ಬ ಬೇರೊಬ್ಬನನ್ನು ತರುವುದಿಲ್ಲ ಅನ್ನುವುದಕ್ಕೆ ಖಾತ್ರಿ ಏನು? ಇದು ಕು ಸ್ವಾಮಿಯ ಮನಶ್ಶಾಸ್ತ್ರ. ಹಾಗಾಗಿಯೇ ಅವರು ತನ್ನನ್ನು ಅಧಿಕಾರಕ್ಕೆ ಯಾರನ್ನು ಇಂದು ನಂಬುವ ಸ್ಥಿತಿಯಲ್ಲಿ ಇಲ್ಲ. ಚನ್ನಿಗಪ್ಪ ಚಲುವ ಸ್ವಾಮಿ ಇರಲಿ, ಸಾಧುಗಳಲ್ಲಿ ಸಾಧುವಾದ ಚನ್ನರಾಯಪ ಪುಟ್ಟೇಗೌಡರನ್ನು ನಂಬದೇ ಅವರ ಮೇಲೆ ಒಬ್ಬನನ್ನು ಈಗಾಗಲೆ ಕಟ್ಟಿ ಕೂರಿಸುವ ಸಂಚು ಆರಂಭವಾಗಿದೆ.

ದೇವೇಗೌಡ ಕುಟುಂಬದ ಇನ್ನೊಂದು ವಿಚಿತ್ರ ನಡವಳಿಕೆ ಎ ಎಲ್ಲರಿಂದ ನಿಷ್ಠೆಯನ್ನು ಬಯಸುವುದು. ಅದು ಒಂಥರ ಢಕಾಯಿತ

ಮನಃಶಾಸ್ತ್ರ



ದೆ ಢಕಾಯಿತ ಯಜಮಾನನೊಬ್ಬ ತನ್ನ ಸಹ ಢಕಾಯಿತರನ್ನು ನಿಭಾಯಿಸುವ ರೀತಿಯದ್ದು ಸಹ ಢಕಾಯಿತರೆಲ್ಲ ಸುತ್ತಲಿನ ಊರು ಕೊಳ್ಳೆ ಹೊಡೆದು ತಂದು ಯಜಮಾನ ಯತನ ಮುಂದೆ ಸುರಿಯಬೇಕು. ಅದನ್ನು ಯಜಮಾನ ತೆಗೆದುಕೊಂಡು, ತೋಚಿದ್ದನ್ನು ದೋಚಿದ ಢಕಾಯಿತರಿಗೆ ನೀಡುತ್ತಾನೆ.

ದೇವೇಗೌಡರ ಕುಟುಂಬ ಬಯಸುವುದೂ ಇದನ್ನೇ. ಕುಮಾರಸ್ವಾಮಿ ಮಂತ್ರಿ ಮಂಡಲದ ತೇಕ ಸಚಿವರು ಸಹ ಢಕಾಯಿತರ ಪಾತ್ರವನ್ನೇ ನಿರ್ವಹಿಸುತ್ತಿದ್ದಾರೆ. ಯಾರೂ ತಾವೇ ಯುತಿ ಮಾಡುವಂತಿಲ್ಲ. ಯಜಮಾನ ಹೇಳಿದಂತೆ ಕೊಳ್ಳೆ ಹೊಡೆದು ಆತನ ಮಡಿಲಿಗೇ ಬೇಕು. ಯಜಮಾನ ಬಾಚಿಕೊಂಡು ಉಳಿದದ್ದು ಮಾತ್ರ ಅವರಿಗೆ. ಹಿಂದೆ ಧರ್ಮಸಿಂಗ್ ಮಂತ್ರಿಯಾಗಿದ್ದಾಗ, ಅವರೇ ಕೊಳ್ಳೆಹೊಡದು ಇವರಿಗೆ ಕೊಡಬೇಕಾಗಿತ್ತು. ಅದೊಂಥರ ಬಳಸು ದಾರಿ. ಎಷ್ಟು ಬರುತ್ತಿತ್ತೋ ಏನೋ ಅಂದಾಜಿಲ್ಲ. ಆದರೆ ಈಗಿನದು ಸೀದ ! ಬಂದದ್ದೇಲ್ಲಾ ತನಗೇ!

ನಿಮಗೆಲ್ಲ ಗೊತ್ತಿದೆ. ಹಿಂದೆ ಧರ್ಮಸಿಂಗ್ ಮುಖ್ಯ ಮಂತ್ರಿಯಾಗಿದ್ದಾಗ, ಸಿದ್ಧರಾಮಯ್ಯ ಾಸು ಸಚಿವ. ಮುಖ್ಯಮಂತ್ರಿ ಗಿರಿ ತಪ್ಪಿಸಿದರೆಂದು ದೇವೇಗೌಡರ ವಿರುದ್ಧ ಗುರುಗುಟ್ಟ ಗಿದ್ದ ಸಿದ್ಧರಾಮಯ್ಯ, ಮುಂದಿನ ರಾಜಕೀಯದ ದೃಷ್ಟಿಯಿಂದ ದುಡ್ಡು ಮಾಡಲು ಭಿಸಿದ್ದಾರೆಂಬ ಗುಸುಗುಸು ರಾಜಕೀಯ ವಲಯದಲ್ಲಿ ಹಾರಾಡತೊಡಗಿತು. ಇದು ದ ಕೂಡಲೇ ಅಪ್ಪ-ಮಕ್ಕಳು ಎಚ್ಚರಾಗಿ ಬಿಟ್ಟರು. ಹಂತ ಹಂತವಾಗಿ ಸಿದ್ಧರಾಮಯ್ಯ ನ್ನು ಕಡೆಗಣಿಸತೊಡಗಿದರು. ಸ್ವಾಭಿಮಾನಕ್ಕೆ ಕಟ್ಟುಬಿದ್ದು ಸಿದ್ಧರಾಮಯ್ಯ 'ಗೌಡಿಕೆ' ವಿರುದ್ಧ ಾಗಿ ಯುದ್ಧಕ್ಕೆ ನಿಂತರು. ಫಲಿತಾಂಶ ನಿಮಗೇ ಗೊತ್ತಿದೆ. ಬಹಷಃ ಸಿದ್ಧರಾಮಯ್ಯ ಮಾಡಲು ಆರಂಭಿಸದೇ ಇದ್ದಿದ್ದರೆ ಅಪ್ಪ-ಮಕ್ಕಳ ಕ್ಯಾಣ ಅಷ್ಟು ಬೇಗ ಕೆರಳುತ್ತಿರಲಿಲ್ಲ. ೇ ತ್ಯಾಪೆ ಹಾಕಿಕೊಂಡು ಹೋಗುತ್ತಿದ್ದರು.

ದೇವೇಗೌಡ ಕುಟುಂಬದ ಜಾಯಮಾನ ಅಪರೂಪದ್ದೇ. ಯಾಕಂದರೆ ಇವರು, ೂ ಬೆಳೆಯುವುದನ್ನು ಸಹಿಸುವುದಿಲ್ಲ. ಇದಕ್ಕಿಂತಲೂ ಹೆಚ್ಚಿನದ್ದೆಂದರೆ ಇವರಿಗೆ ಒಳ್ಳೆಯವರು, ವಂತರು ಯಾರೂ ಇರಬಾರದು. ಇವರು ಮತ್ತು ಇವರ ಕುಟುಂಬದ ಸದಸ್ಯರನ್ನು ಒಳ್ಳೆಯವರು ಮತ್ತು ಬುದ್ಧಿವಂತರ ಜತೆ ಹೋಲಿಸಲು ಅವಕಾಶವೇ ಇರಬಾರದು. ಲು ತಮ್ಮದೇ ಜಾತಿ ಒಕ್ಕಲಿಗರಲ್ಲಿ ಬುದ್ಧಿವಂತರು ಒಳ್ಳೆಯವರು ಇರಬಾರದು. ಯಾರೂ ು ಕೆಲಸ ಮಾಡಬಾರದು. ನಂತರ ಇತರೆ ಜಾತಿಯವರಲ್ಲೂ ಯೋಗ್ಯರು ಒಳ್ಳೆಯವರು ರದು. ಹಾಗೇನಾದರೂ ಒಳ್ಳೆತನ ಕಂಡು ಬಂದರೆ ಅವನೇ ಇವರ ಮೊದಲ ವೈರಿ. ನ್ನು ಮುಗಿಸುವವರೆಗೂ ಬಿಡುವುದಿಲ್ಲ. ಯಾರೂ ಹಣವನ್ನೂ ಮಾಡಬಾರದು. ಭೂಮಿ ು ಮಾಡಬಾರದು. ಏನೇ ಆದರೂ ತಮ್ಮಿಂದ ತಮಗಾಗಿ ಮಾತ್ರ ಸೀಮಿತವಾಗಿರಬೇಕು. ಎಸ್.ಎಂ. ಕೃಷ್ಣ, ಸಿದ್ಧಾರ್ಥ ಮತ್ತು ಡಿಕೆಶಿ ಮೇಲೆ ದೇವೇಗೌಡರು ಮತ್ತವರ ಮಕ್ಕಳಿಗೆ ಸಿಟ್ಟು ಯಾಕೆ ಅಂತ ಯಾರಾದರೂ ಕೇಳಿದರೆ, ಅವರು ಹೇಳುವುದು ಇಷ್ಟು 'ಬೋಳಿಮಕ್ಕಳು ೂರಿನ ಸುತ್ತಲಿನ ಭೂಮಿಯನ್ನೆಲ್ಲ ದೋಚಿಕೊಂಡಿದ್ದಾರೆ. ನಾವೇನು ಮಾಡುವುದು?'. ಅಂದರೆ ದೇವೇಗೌಡರು ಮತ್ತವರ ಮಕ್ಕಳಿಗಿಂತ ಕೃಷ್ಣ ಮತ್ತವರ ಪಟಾಲಂ ಹೆಚ್ಚು ಭೂಗಳ್ಳತನ ಮಾಡಿದ್ದೇ ಅವರಿಗೆ ಸಿಟ್ಟು. ಕಳ್ಳತನದಲ್ಲೂ ತಮ್ಮನ್ನು ಯಾರು ಮೀರಿಸಬಾರದು. ಅದು ಮನೆತನದ ಗೌರವಕ್ಕೆ ಬಿದ್ದ ದೊಡ್ಡ ಪೆಟ್ಟು!

ತಲೆ ಮಾರಿನಿಂದ ತಲೆ ಮಾರಿಗೆ ಈ ಕುಟುಂಬದ ಸರ್ವಸ್ವವೂ ವರ್ಗಾವಣೆ ಆಗ ಬೇಕು. ಇದರಲ್ಲಿ ಮೊದಲ ಆದ್ಯತೆ ಅಸೂಯೆ, ಸಣ್ಣತನ, ಅಪನಂಬಿಕೆ ಪಿತೂರಿಗೆ. ನಂತರದ್ದು ಇತರೆ ಚಟುವಟಿಕೆಗೆ. ಒಂದೇ ಬದಲಾವಣೆ ಅಂದರೆ ಜೀತಗಾರಿಕೆಯ ವಿಧಿ ವಿಧಾನ ಮಾತ್ರ. ದೇವೇಗೌಡರ ಕಾಲದಲ್ಲಿ ಮೋಜು ಮೇಜವಾನಿಗೆ ಅಷ್ಟೊಂದು ಅವಕಾಶ ಇರಲಿಲ್ಲ. ಕುಮಾರ ಸ್ವಾಮಿ ಕಾಲದಲ್ಲಿ ಅದಕ್ಕೆ ವಿಫುಲ ಅವಕಾಶ. ಎಲ್ಲಾ ಜೀತಗಾರ 'ಬ್ರದರ್'ಗಳಿಗೂ ಕುಮಾರಸ್ವಾಮಿ ಹಬ್ಬದ ಆತಿಥ್ಯ ನೀಡುತ್ತಾರೆ.

ಢಕಾಯಿತರು ಕೊಳ್ಳೆ ಹೊಡೆದ ವಸ್ತುಗಳನ್ನೆಲ್ಲ ತಂದು ಯಜಮಾನನ ಮುಂದೆ ಸುರಿದಾಗ ಗುಂಡು-ಡ್ಯಾನ್ಸ್‌ಗಳೆಲ್ಲ ಆರಂಭವಾಗುವುದಿಲ್ಲವೇ ಹಾಗೆ! ಕೊಳ್ಳೆಯ ನಂತರ ಕುಣಿತ. ಒಳ್ಳೊಳ್ಳೆ ಕಡೆ ಪ್ರವಾಸ. ರೆಸಾರ್ಟ್ ವಾಸ. ಇತ್ಯಾದಿ ಇತ್ಯಾದಿ. 'ಬ್ರದರ್'ಗಳಿಗೆಲ್ಲ ಅದರಲ್ಲೇ ಸ್ವರ್ಗ! ರಾಗಿ ಮುದ್ದೆ ಸೊಪ್ಪಿನ ಸಾರಿಗೆ ಬದಲಾಗಿ ವೆಜ್‌ಗಳಿಗೆ ಗೋಬಿ ಮಂಚೂರಿ, ನಾನ್ ವೆಜ್‌ಗಳಿಗೆ ಕಬಾಬ್, ಚಿಕನ್ ಫ್ರೈಯ್ಡ್ ರೈಸ್! ಜತೆಯಲ್ಲಿ 'ಗುಂಡು'ರಾಯರು!

ದೇವೇಗೌಡರು ಹ್ಯಾಪಮೋರೆ ಮಾಡಿಕೊಂಡು, ಹೊಳೆನರಸೀಪುರದ ಲೋಕೋಪ ಯೋಗಿ ಇಲಾಖೆಯ ಜವಾನ ಯಾರ ಪರ ಇದ್ದಾನೆ, ಪುಟ್ಟಸ್ವಾಮಿ ಗೌಡನ ಕಡೆಯೋ ನನ್ನ ಕಡೆಯೋ ಅಂತ ಯೋಚಿಸುತ್ತಿದ್ದರೆ, ಕುಮಾರಸ್ವಾಮಿ ಪಡ್ಡೆ ಹುಡುಗರ ಶೈಲಿಯಲ್ಲಿ ಕಣ್ಣು ಹೊಡೆಯುತ್ತ ಯಾವ ಆಸ್ತಿಯನ್ನು ಹ್ಯಾಗೆ ಯಾಮಾರಿಸಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಯೋಚಿಸುತ್ತಾರೆ. ಎಂದಿಗೆ ಆ 'ಡಿಕೆಶಿ'ಗಿಂತ ಒಂದು ಗುಂಟೆ ಭೂಮಿಯನ್ನಾದರೂ ಹೆಚ್ಚು ಲಪಟಾಯಿಸ ಬಹುದೆಂದು ಲೆಕ್ಕ ಹಾಕುತ್ತಿರುತ್ತಾರೆ. ಯಾರ್‍ಯಾರಿಗೆ ಏನೇನು ಸುಳ್ಳು ಆಶ್ವಾಸ ನೀಡಿ 'ಬ್ರದರ್ ಹುಡ್' ಬೆಳೆಸಿಕೊಳ್ಳಬಹುದೆಂಬ ಸಿದ್ಧತೆಯಲ್ಲಿರುತ್ತಾರೆ. ಬಹುಷಃ ಇಷ್ಟು ವ್ಯತ್ಯಾಸ ಬಿಟ್ಟರೆ ತಲೆ ಮಾರಿನ ಅಂತರ ಅಪ್ಪ-ಮಕ್ಕಳಲ್ಲಿ ಇಲ್ಲವೇ ಇಲ್ಲ.

ಮುಖ್ಯ ಮಂತ್ರಿ ಆದನಂತರ ಕುಮಾರಸ್ವಾಮಿ ನೀಡಿರುವ ಆಶ್ವಾಸನೆಗಳು ಎಷ್ಟು? ಯಾರಾದರೂ ಅದರ ಲೆಕ್ಕ ಇಟ್ಟಿದ್ದರೆ ಅವರಿಗೊಂದು ನೋಬೆಲ್ ಪ್ರಶಸ್ತಿ ಕೊಡಿಸಬಹುದು. ಮುಖ್ಯ ಮಂತ್ರಿಯ ಪ್ರತಿ ಮಾತನ್ನು-ಆಶ್ವಾಸನೆಯನ್ನು ಲೆಕ್ಕ ಇಟ್ಟುಕೊಳ್ಳಲು (ರೆಕಾರ್ಡ್ ಮಾಡಿಕೊಳ್ಳಲು) ಸರ್ಕಾರಿ ಸಿಬ್ಬಂದಿ ಇರುತ್ತಾರೆ. ಎಲ್ಲ ಮುಖ್ಯ ಮಂತ್ರಿಗಳ ಎಲ್ಲ ಮಾತುಗಳೂ, ಆಶ್ವಾಸನೆಗಳೂ ದಾಖಲಾಗುತ್ತವೆ. ಈ ಸರ್ಕಾರಿ ದಾಖಲೆಗಳ ಪ್ರಕಾರ ಕುಮಾರ ಸ್ವಾಮಿ ಏನಿಲ್ಲವೆಂದರೂ ಪ್ರತಿ ದಿನ ಮೂರು ನಾಲ್ಕು ಆಶ್ವಾಸನೆಗಳನ್ನು ನೀಡಿದ್ದಾರೆ. ಅಂದರೆ ಹಿಂದಿನ ಎಲ್ಲಾ ಮುಖ್ಯ ಮಂತ್ರಿಯವರನ್ನು ಮೀರಿಸಿದ್ದಾರೆ. ಇದುವರೆಗೆ ಆಶ್ವಾಸನೆಗಳ ಗರಿಷ್ಠ ಯಾದಿಯಲ್ಲಿದ್ದ ಗುಂಡೂರಾವ್ ಮತ್ತು ವೀರಪ್ಪ ಮೊಯ್ಲಿ ಹಿಂದೆ ಬಿದ್ದಿದ್ದಾರೆ. ಅವುಗಳಲ್ಲಿ ಸಣ್ಣ ನೌಕರಿ ಕೊಡಿಸುವುದರಿಂದ ಹಿಡಿದು ಸಾವಿರಾರು ಕೋಟಿ ವೆಚ್ಚದ 'ಅಭಿವೃದ್ಧಿ' ಕೆಲಸಗಳೂ ಸೇರಿವೆ. ಅಂದರೆ ಕಳೆದ ಆರು ತಿಂಗಳ ಅವಧಿಯಲ್ಲಿ ಏನಿಲ್ಲವೆಂದರೂ ೫೦೦ರಿಂದ ಆರುನೂರು ಆಶ್ವಾಸನೆಗಳು ಅವರ ಬಾಯಿಂದ ಉದುರಿವೆ! ಅಂದರೆ ಅವುಗಳನ್ನು ಈಡೇರಿಸಲು ಕನಿಷ್ಟ ಒಂದು ಜೀವಿತಾವಧಿ ಬೇಕು. ಕನಿಷ್ಟ ಭಾರತ ಸರ್ಕಾರದ ಒಟ್ಟು ಬಜೆಟ್‌ನಷ್ಟು ಹಣ ಬೇಕು. ಅಂದರೆ ಕುಮಾರಸ್ವಾಮಿ ಅಜೀವ ಮುಖ್ಯ ಮಂತ್ರಿಯಾಗಿ ಮುಂದುವರೆಯಬೇಕು! ಅಷ್ಟರಲ್ಲಿ ಇನ್ನೆಷ್ಟು ಆಶ್ವಾಸನೆಗಳು ಬಂದಿರುತ್ತವೋ? ಆ 'ದೇವ'(ದೇವೇಗೌಡನೇ)ನೇ ಕಾಪಾಡಬೇಕು.

ಯಾರು ಏನೇ ಕೇಳಿದರು ಕುಮಾರಸ್ವಾಮಿ ಇಲ್ಲ ಅನ್ನುವುದಿಲ್ಲ. ಅವರ ಅಪ್ಪ ದೇವೇಗೌಡರು ಕಣ್ಣು ಮುಚ್ಚಿ, ಮುಖ ಕಿವುಚಿ, ಎದುರಿಗಿದ್ದವರು ಹೇಸಿಗೆ ಪಟ್ಟು ಎದ್ದು ಹೋಗುವಷ್ಟರಲ್ಲಿ 'ಆಯ್ತು ಗುರುಗಳೇ ನೋಡೋಣ, ನಡೀರಿ' ಅನ್ನುತ್ತಿದ್ದರು. ಆದರೆ ಕುಮಾರ ಸ್ವಾಮಿ ಹಾಗಲ್ಲ. ನಗು ನಗುತ್ತ 'ಆಗಲಿ ಬಿಡಿ ಬ್ರದರ್, ನಿಮಗಲ್ಲದೆ ಇನ್ನಾರಿಗೆ ಮಾಡಲಿ' ಎಂದು ಸಾಗ ಹಾಕುತ್ತಾರೆ. ಒಂದಲ್ಲ, ಎರಡಲ್ಲ ನೀವು ನೂರು ಬಾರಿ ಕೇಳಿದರೂ ಅದನ್ನೇ ಹೇಳುತ್ತಾರೆ. ಮತ್ತೂ ಒತ್ತಡ ಬಂದರೆ 'ಮುಖ್ಯ ಮಂತ್ರಿ ನಾನಲ್ಲ, ನೀವೇ ಅಂದುಕೊಳ್ಳಿ' ಅನ್ನುತ್ತಾರೆ. ಅಲ್ಲಿಗೆ ನಿಮ್ಮ ಕೆಲಸ ಮುಗೀತು!

ಏನೇ ಇರಲಿ ಕುಮಾರ ಸ್ವಾಮಿ, ಕುಮಾರಣ್ಣನಾಗಿ, ಅಪ್ಪನಿಗೆ ತಕ್ಕ ಮಗನಾಗಿ, ಉದ್ಯಮಿಯಾಗಿ, ಬೇನಾಮಿ ವ್ಯವಹಾರ ಚತುರನಾಗಿ, ಸುಳ್ಳು ಆಶ್ವಾಸನೆಗಳ ಸರದಾರನಾಗಿ, ಕೋಟಿಗಳಿಗೆ ಸೊನ್ನೆ ಗೊತ್ತಿಲ್ಲದವನಾಗಿ ಕಡೆಗೆ ಮುಖ್ಯ ಮಂತ್ರಿಯಾಗಿ ನಮ್ಮನ್ನೆಲ್ಲ ಆಳುವ ದೊರೆಯಾಗಿರುವುದು ಈ ನಾಡಿನ ಸೌಭಾಗ್ಯವಲ್ಲದೆ ಮತ್ತೇನು?!

ಜೈ ಕರ್ನಾಟಕ ಮಾತೆ!

○ ಇಂದೂಧರ ಹೊನ್ನಾಪುರ

ನೇಣಿಗೆ ತಲೆಯೊಡ್ಡುವ ರೈತರೆಂದರೆ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಮಾತ್ರ. ಇವರಿಗೆ ಸ್ವಾಭಿಮಾನ ಹೆಚ್ಚು. ಗೌರವವನ್ನು ಹಣಕ್ಕಿಂತ ಹೆಚ್ಚಿನ ಮೌಲ್ಯ ಎಂದು ತಿಳಿದುಕೊಂಡಿರುವವರು. ಬೆಳೆ ವಿಫಲವಾದಾಗ ತಮ್ಮ ಕುಟುಂಬ ವರ್ಗದವರನ್ನು ಸಾಕುವ ಮಾರ್ಗಗಳು ತಿಳಿಯದೇ ಬರದ ಬಾರಕ್ಕೆ ನಲುಗುವವರು. ಕೃಷಿವಲಯದಲ್ಲಿ ಹೆಚ್ಚಾಗಿ ಆರ್ಥಿಕವಾಗಿ ಹಿಂದುಳಿದವರು ತೊಡಗಿಸಿಕೊಂಡಿರುತ್ತಾರೆ. ಇವರದು ತುತ್ತು ಅನ್ನಕ್ಕೆ ಪದಡಾಡುವ ಸ್ಥಿತಿಯಿರುತ್ತದೆ. ಬ್ಯಾಂಕುಗಳಲ್ಲಿ ರೈತರಿಗೆ ಸಾಲ ನಿರಾಕರಿಸುವುದರಿಂದ ಮತ್ತು ಅವುಗಳ ಬಗ್ಗೆ ಮಾಹಿತಿ ಇಲ್ಲದಿರುವುದುರಿಂದ ರೈತರು ಸಾಲಕ್ಕಾಗಿ ಶ್ರೀಮಂತರನ್ನು ಆಶ್ರಯಿಸುವುದು ಅನಿವಾರ್ಯ, ಈ ಅವಕಾಶವನ್ನೇ ಶ್ರೀಮಂತ ಲೇವಾದೇವಿಯವರು ಬಳಸಿಕೊಂಡು ರೈತರನ್ನು ಮತ್ತಷ್ಟು ಶೋಷಿಸಿ ಅವರ ಬದಕನ್ನು ನಾಶ ಮಾಡುತ್ತಿದ್ದಾರೆ.

ನರಸಿಂಹ ಗುಂಜಹಳ್ಳಿ

ಭೂಮಿಯ ಮೇಲೆ ಪ್ರತಿಯೊಬ್ಬರು ಇನ್ನೊಬ್ಬರ ಪ್ರಾಣಕ್ಕಿಂತ ತನ್ನ ಪ್ರಾಣವನ್ನು ಹೆಚ್ಚಾಗಿ ಪ್ರೀತಿಸುತ್ತಾರೆ. ಎಲ್ಲರೂ ಬದುಕಲೆಂದೆ ಹುಟ್ಟಿದವರು. ಅಂಥದರಲ್ಲಿ ಬದುಕೆ ಬೇಡ ಎಂದು ಹತಾಶೆ ಆಕ್ರೋಶ. ಅಸಾಹಕತೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಬದುಕನ್ನು ಜನರು ಅರ್ಥಮಾಡಿಕೊಳ್ಳಬೇಕು. ಅದು ಅವರ ಆತ್ಮಹತ್ಯೆಗೆ ಸೃಸ್ಟಿಯಾದ ಪರಿಸರ ವ್ಯವಸ್ಥೆಯ ವಿರುದ್ಧ ತೀವ್ರ ಪ್ರತಿಭಟನೆ.

೧೯೯೫ ರಿಂದ ೨೦೦೩ ಅವಧಿಯಲ್ಲಿ ದೇಶದಲ್ಲಿ ಒಟ್ಟು ೯.೨೬ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎಂದು ಕೇಂದ್ರ ಗೃಹ ಖಾತೆ ಹೇಳಿದೆ. ಅಂದರೆ ಸರಾಸರಿ ದಿನಕ್ಕೆ ೩೧೮ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಕರ್ನಾಟಕ ರಾಜ್ಯದಲ್ಲಿ ೧೯೯೮-೯೯ ರಲ್ಲಿ ೨೦೩೯ ರೈತರು, ೧೯೯೯-೨೦೦೦ ರಲ್ಲಿ ೨೩೭೯, ೨೦೦೦-೦೧ ರಲ್ಲಿ ೨೬೩೦, ೨೦೦೧-೦೨ ರಲ್ಲಿ ೨೫೦೫ ರೈತರು. ೨೦೦೨-೦೩ ರಲ್ಲಿ ೨೩೪೦, ಒಟ್ಟು ಐದು ವರ್ಷಗಳಲ್ಲಿ ೧೧, ೮೯೩ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ರಾಜ್ಯ ಸರಕಾರವೇ ಹೇಳಿದೆ. ೨೦೦೧-೦೬ ರ ಇದುವರೆಗಿನ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ೫೯೧೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರದ ವಿದರ್ಭದಲ್ಲಿ ಕಳೆದ ಆರುವರ್ಷಗಳಿಂದ ೧೬೦೦ ರೈತರು ಹಾಗೂ ಕಳೆದ ಒಂದು ವರ್ಷದ ಅವಧಿಯಲ್ಲಿ ೬೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗಲೂ ಇದು ಮುಂದುವರೆದಿದೆ. ಆಂಧ್ರಪ್ರದೇಶ ಸರಕಾರವು ದೇಶೀಯ ದತ್ತ ತಳಿಗಳನ್ನು ಕೈಬಿಟ್ಟು ಅಮೆರಿಕಾದ ತಳಿಗಳನ್ನು ಬಳಸುವಂತೆ ರೈತರ ಮೇಲೆ ಬಲವಂತವಾಗಿ ಒತ್ತಡ ಹಾಕಿತು. ರೈತರ ವಾಣಿಜ್ಯ ದೇಶಿಯ ತಳಿಗಳು ಮೂಲೆಗುಂಪಾದವು. ೨೦೦೪ ರಲ್ಲಿ ಆಂಧ್ರಪ್ರದೇಶ ೩೦೦೦ ರೈತರು ಬರದ ಬಾರಕ್ಕೆ ನಲುಗಿದ್ದಾರೆ. ೧೯೯೭ ರಿಂದ ೨೦೦೪ ಅವಧಿಯಲ್ಲಿ ಅನಂತಪುರ ಜಿಲ್ಲೆವೊಂದರಲ್ಲಿಯೇ ೧೮೨೬ ರೈತರು ನೇಣಿನ ಕುಣಿಕೆಗೆ ತಲೆ ಯೊಡ್ಡಿದ್ದಾರೆ.

ಜಾಗತೀಕರಣ ಭರಾಟೆಯಿಂದ ಆಂಧ್ರ ಮಹಾರಾಷ್ಟ್ರ ಕೇರಳ, ಕನಾ-ಟಕ ರಾಜ್ಯಗಳಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚುತ್ತಲಿವೆ.

ದಲಿತರು ಮತ್ತು ಆಸ್ತಿಪಾಸ್ತಿ ಹೊಂದಿದ ರೈತರು ಆತ್ಮಹ-ಮಾಡಿಕೊಳ್ಳುವುದು ಬಹಳ ವಿರಳ. ಏಕೆಂದರೆ ದಲಿತರು ಹೊತ್ತಿ-ಗಂಜಿಯನ್ನು ಅವತೇ. ಸಂಪಾದನೇ ಮಾಡಿ ಬದುಕುವವರು. ಆ-ಹತ್ಯೆ ಮಾಡಿಕೊಳ್ಳುವ ರೈತರಿಗಿಂತ, ಬಹಳ ಕಷ್ಟದಲ್ಲಿ ಜೀವನಸಾ-ಸುತ್ತಿರುತ್ತಾರೆ. ಈಗಾಗಲೆ ದಲಿತರು ಬಹಳ ಹೀನಾಯ ಸ್ಥಿತಿಯಲ್ಲಿ-ವುದರಿಂದ ಅದಕ್ಕಿಂತ ಕೆಳಮಟ್ಟಕ್ಕೆ ಜಾರುವ ಸಾಧ್ಯತೆಯಿಲ್ಲ. ಆದ್ದರಿಂ-ದಲಿತರಿಗೆ ಆತ್ಮಹತ್ಯೆ ಯೋಚನೆಯಿಲ್ಲ. ಏನಿದ್ದರೂ ತಮ್ಮ ಬದುಕನ್-ಉನ್ನತ ಮಟ್ಟಕ್ಕೆ ತಲಿಪಿಸುವ ಯೋಚನೆ. ಅದೇ ರೀತಿ ಆಸ್ತಿಪಾ-ಹೊಂದಿದ ದೊಡ್ಡ ರೈತರು ಕೂಡ ಒಂದೇರಡು ಬೆಳೆ ವಿಫಲವಾದ-ಬೀದಿಪಾಲಾಗುವ ಸಾಧ್ಯತೆಗಳು ಕಡಿಮೆ. ಆದ್ದರಿಂದ ಈ ವರ್ಗಗಳ-ಆತ್ಮಹತ್ಯೆ ಪ್ರಕರಣಗಳು ಬಹಳ ಕಡಿಮೆ.

ನೇಣಿಗೆ ತಲೆಯೊಡ್ಡುವ ರೈತರೆಂದರೆ ಸಣ್ಣ ಮತ್ತು ಮಧ್ಯ-ವರ್ಗದ ರೈತರು ಮಾತ್ರ. ಇವರಿಗೆ ಸ್ವಾಭಿಮಾನ ಹೆಚ್ಚು ಗೌರವವನ್-ಹಣಕ್ಕಿಂತ ಹೆಚ್ಚಿನ ಮೌಲ್ಯ ಎಂದು ತಿಳಿದುಕೊಂಡಿರುವವರು. ಬೆ-ವಿಫಲವಾದಾಗ ತಮ್ಮ ಕುಟುಂಬ ವರ್ಗದವರನ್ನು ಸಾಕುವ ಮಾರ್ಗ-ಗಳು ತಿಳಿಯದೇ ಬರದ ಬಾರಕ್ಕೆ ನಲುಗುವವರು. ಕೃಷಿವಲಯದ-ಹೆಚ್ಚಾಗಿ ಆರ್ಥಿಕವಾಗಿ ಹಿಂದುಳಿದವರು ತೊಡಗಿಸಿಕೊಂಡಿರುತ್ತಾ-ಇವರದು ತುತ್ತು ಅನ್ನಕ್ಕೆ ಪರದಾಡುವ ಸ್ಥಿತಿಯಿರುತ್ತದೆ. ಬ್ಯಾಂಕುಗಳ-ರೈತರಿಗೆ ಸಾಲ ನಿರಾಕರಿಸುವುದರಿಂದ ಮತ್ತು ಅವುಗಳ ಬಗ್ಗೆ ಮಾ-ತಿಯಿಲ್ಲದೆಯಿರುವುದರಿಂದ ರೈತರು ಸಾಲಕ್ಕಾಗಿ ಶ್ರೀಮಂತರನ್-ಆಶ್ರಯಿಸಿರುವುದು ಅನಿವಾರ್ಯ, ಈ ಅವಕಾಶವನ್ನೇ ಶ್ರೀಮಂ-ಲೇವದೇವಿಯವರು ಬಳಿಸಿಕೊಂಡು ರೈತರನ್ನು ಮತ್ತಷ್ಟು ಶೋಷಿ-ಅವರ ಬದುಕನ್ನು ನಾಶಮಾಡುತ್ತಿದ್ದಾರೆ.

ಎಂಬತ್ತರ ದಶಕದಲ್ಲಿ ಅಮೆರಿಕಾ ವ್ಯಾಪಾರ ತಂತ್ರಗಳನ್-

ನೇಣಿನತ್ತ... ಅನ್ನದಾತ...

> **ಮನುಷ್ಯನ ನಾಗರೀಕತೆಯ ವಿಕಾಸದ ಮಾರ್ಗದಲ್ಲಿ ಬೇಟೆಗಾರಿಕೆ ನಂತರ ಕೃಷಿಯೇ ಮುಖ್ಯ ಕಸುಬು. ಭಾರತ ಕೃಷಿ ಪ್ರಧಾನ ದೇಶ ಶೇ ೬೯ರಷ್ಟು ಜನಸಂಖ್ಯೆಗೆ ಉದ್ಯೋಗ ಮತ್ತು ಬದಕನ್ನು ಕೃಷಿವಲಯ ನೀಡಿದೆ. ಕೃಷಿ ಹಾಗೂ ಕೈಗಾರಿಕೆ ಯಾವುದೇ ಆರ್ಥಿಕತೆಯ ಆಧಾರ ಸ್ಥಂಭಗಳು. ಈ ಎರಡು ಕ್ಷೇತ್ರಗಳು ಬೆಳವಣಿಗೆ ಯಾದರೆ ಸೇವಾ ಕ್ಷೇತ್ರ ಬೆಳವಣಿಗೆಯಾಗುತ್ತದೆ ದೇಶ ಅಭಿವೃದ್ಧಿ ಹೊಂದಬೇಕಾದರೆ ಕೃಷಿ ಶೇ ೬೦ ಕೈಗಾರಿಕೆ ಶೇ. ೨೦ ಹಾಗೂ ಸೇವಾಕ್ಷೇತ್ರ ಶೇ ೨೦. ಅಭಿವೃದ್ಧಿ ಹೊಂದಬೇಕು. ನಿರುದ್ಯೋಗ ಹೆಚ್ಚುತ್ತಿರುವ ಈ ದೇಶದಲ್ಲಿ ಉದ್ಯೋಗವ ಕಾಶಗಳಿಗೆ ಕೃಷಿ ವಲಯ ಸೂಕ್ತ ಪರಿಹಾರ ನೀಡಬಲ್ಲದು ಆದರೆ ಪ್ರಭುತ್ವ ಕೃಷಿ ವಲಯವನ್ನು ನಿರ್ಲಕ್ಷಿಸುತ್ತ ಬಂದಿದೆ.**

ಸಿ ತೊಂಭತ್ತರ ದಶಕದಲ್ಲಿ ಪ್ರಪಂಚದ್ಯಾಂತ ಬಿತ್ತಿರಿಸ ಗಿದ ಈ ಹೊಸ ಆರ್ಥಿಕ ಸುಧಾರಣೆಗಳೇ ಉದಾ ಣ ಜಾಗ ತೀಕರಣ–ಖಾಸಗೀಕರಣಗಳು. ೧೯೯೧ GATT ಒಪ್ಪಂದಕ್ಕೆ ಸಹಿಹಾಕಿದ ಎಲ್ಲಾ ರಾಷ್ಟ್ರಗಳು ಮಾರುಕಟ್ಟೆ ಮೂಲದ ಜಾಗತೀಕರಣಕ್ಕೆ ಬದ್ಧವಾ ಜಾಗತೀಕರಣ ನೀತಿಗಳನ್ನು ಜಾರಿಗೆ ತರಲು ೫ ರಿಂದ ವಿಶ್ವ ವ್ಯಾಪರ ಸಂಸ್ಥೆ (WTO) ಉಸ್ತು ವಹಿಸಿ ಕೊಂಡಿತು. ಭಾರತ ಸರಕಾರ ಎಲ್ಲಾ ಸಬ್ಸಿಡಿ ಸರಿಸಾಗಟಗಿ ನಿಲ್ಲಿಸಬೇಕೆಂಬುದು, ಹಾಗೂ ನಿನ ಮತ್ತು ರಫ್ತಿನ ಮೇಲಿನ ನಿರ್ಬಂಧಗಳನ್ನು ಬೇಕೆಂಬುದು WTO ಷರತ್ತು ಕಳಪೆ. WTO ಯ ದದ ಎಲ್ಲಾ ನೀತಿಗಳು ೨೦೦೪ ರ ಡಿಸೆಂಬರ್ ಜಾರಿಯಾಗಿರುತ್ತವೆ.

ಆದುದರಿಂದ ಭಾರತದಲ್ಲಿ ೨೦೦೪ ರಲ್ಲಿ ೦೦ ರೈತರು ಹಾಗೂ ಆಂಧ್ರಪ್ರದೇಶದಲ್ಲಿ ೨೦೦೪ ೩೦೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೋಪು ಅಮೆರಿಕದವರು ಪ್ರಾಚೀನ ಜಗತ್ತಿನ ಬಡ ದೇಶಗಳಿಗೆ ಸಬ್ಸಿಡಿ (ಸಹಾಯಧನ) ಕಡಿತಗೊಳಿ ಂದು ಸಲಹೆ ನೀಡುತ್ತ ತಮ್ಮ ದೇಶಗಳಲ್ಲಿ ರೈತರಿಗೆ ಬಿಲಿಯನ್ ಡಾಲರು (ಶೇ. ೮೫) ಸಬ್ಸಿಡಿ ನೀಡು ಅಗತ್ಯವಿಲ್ಲದಿದ್ದರೂ ಸರಕಾರ ಕೃಷಿ ಉತ್ಪನ್ನಗಳನ್ನು ದರಕ್ಕೆ ಆಮದು ಮಾಡಿಕೊಂಡರೇ ಇಲ್ಲಿನ ರೈತರು ಂಬನೆಯಾಗಿ ಬದುಕುವುದಾದರೂ ಹೇಗೆ? ಹಲ ಸಮಸ್ಯೆಗಳ ಮಧ್ಯೆ ಆರು ತಿಂಗಳು ಶ್ರಮಪಟ್ಟು ಬೆಳೆಗಳನ್ನು ಮಾರುಕಟ್ಟೆಗೆ ತಂದರೆ ಬೆಲೆಸಿಗದೇ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೈಪೋಟಿ ಎದುರಿಸ ೇ ಈರುಳ್ಳಿ, ಆಲೂಗೆಡ್ಡೆ, ಟಮೋಟ, ಕೊತ್ತಂಬರಿ ತಂದು ರೈತರು ಟೆಂಪೋ ಬಾಡಿಗೆ ದಾರಿ ಗೂ ಆಗದ ಬೆಲೆಯಿಂದಾಗಿ ರಸ್ತೆ–ಬೀದಿಗಳಲ್ಲಿ ಚೆಲ್ಲಿ ಹೋಗಿರುವ ಘಟನೆಗಳು ಹಲವಾರು ಇವೆ. ಭಾರ ಷಿ ಉತ್ಪಾದನೆಗಳಲ್ಲಿ ಸಂಸ್ಕರಿಸಲಾಗುತ್ತಿರುವ ಉತ್ಪಾ ೇವಲ ೨.೧% ಮಾತ್ರ. ಜಾಗತೀಕರಣ ನೆಪದಲ್ಲಿ ಶಗಳ ಮೇಲೆ ಶ್ರೀಮಂತ ದೇಶಗಳ ಹಿಡಿತ ಮತ್ತು ರೈತರ ಆತ್ಮಹತ್ಯೆಗೆ ಕಾರಣ ವಾಗಿದೆ.

ಮನುಷ್ಯನ ನಾಗರೀಕತೆಯ ವಿಕಾಸದ ಮಾರ್ಗದಲ್ಲಿ ರಿಕೆ ನಂತರ ಕೃಷಿಯೇ ಮುಖ್ಯ ಕಸುಬು. ಭಾರತ ಪ್ರಧಾನ ದೇಶ ಶೇ ೬೯ರಷ್ಟು ಜನಸಂಖ್ಯೆಗೆ ೋಗ ಮತ್ತು ಬದುಕನ್ನು ಕೃಷಿವಲಯ ನೀಡಿದೆ. ಹಾಗೂ ಕೈಗಾರಿಕೆ ಯಾವುದೇ ಆರ್ಥಿಕತೆಯ ಸ್ಥಂಭಗಳು. ಈ ಎರಡು ಕ್ಷೇತ್ರಗಳು ಬೆಳವಣಿಗೆ ರೆ ಸೇವಾ ಕ್ಷೇತ್ರ ಬೆಳವಣಿಗೆಯಾಗುತ್ತದೆ ದೇಶ ದ್ಧಿ ಹೊಂದಬೇಕಾದರೆ ಕೃಷಿ ಶೇ ೬೦ ಕೈಗಾರಿಕೆ ೦ ಹಾಗೂ ಸೇವಾಕ್ಷೇತ್ರ ಶೇ ೨೦. ಅಭಿವೃದ್ಧಿ ಬೇಕು. ನಿರುದ್ಯೋಗ ಹೆಚ್ಚುತ್ತಿರುವ ಈ ದೇಶದಲ್ಲಿ ೋಗವ ಕಾಶಗಳಿಗೆ ಕೃಷಿ ವಲಯ ಸೂಕ್ತ ಪರಿಹಾರ ಲ್ಲದು. ಆದರೆ ಪ್ರಭುತ್ವ ಕೃಷಿ ವಲಯವನ್ನು ನಿರ್ಲಕ್ಷಿ ಂದಿದೆ.

ಮೊದಲನೆಯ ಪಂಚವಾರ್ಷಿಕ ಯೋಜನೆ (೧–೫೬) ಯಲ್ಲಿ ಒಟ್ಟು ಯೋಜನೆ ವೆಚ್ಚದಲ್ಲಿ ೬ ಕೃಷಿವಲಯಕ್ಕೆ ಖರ್ಚು ಮಾಡಿದ್ದರೆ ಹತ್ತನೆಯ ವಾರ್ಷಿಕ ಯೋಜನೆ (೨೨೦–೦೭)ಯಲ್ಲಿ ೫.೨% ಮಾಡಿರುತ್ತಾರೆ. ೧೯೯೧ ರಲ್ಲಿ ಕೃಷಿ ಬಂಡವಾಳ ಹೂಡಿಕೆ (GDP ಯಲ್ಲಿ ಶೇಕಾಡ ಪಾಲು) ಶೇ. ೨.೨ ರಷ್ಟಿದ್ದರೆ ೨೦೦೧ ರ ಸುಮಾರಿಗೆ ಈ ಹೂಡಿಕೆ ಶೇ. ೧.ಕ್ಕೆ ಇಳಿದಿದೆ. ಬ್ಯಾಂಕುಗಳಲ್ಲಿ ೧೯೯೧–೯೨ರಲ್ಲಿ ಒಟ್ಟು ಸಾಲದ ಪ್ರಮಾಣ ೧೫.೯% ರಷ್ಟಿದ್ದರೆ ೨೦೦೩ರ ಹೊತ್ತಿಗೆ ೯.೮% ಇಳಿದಿದೆ. ೧೯೯೧–೨೦೦೩ ನಡುವೆ ಗ್ರಾಮೀಣ ಪ್ರದೇಶಗಳಲ್ಲಿ ೨೭೭೧ ಬ್ಯಾಂಕು ಶಾಖೆಗಳನ್ನು ಮುಚ್ಚಿವೆ. ೩೮೧೨ ಬ್ಯಾಂಕ್ ಶಾಖೆಗೆ ಕೇಂದ್ರ ಬಜೆಟ್‌ನಲ್ಲಿ ಕೃಷಿಗೆ ಶೇ ೨ರಷ್ಟು ಅನುದಾನ ಬಿಡುಗಡೆಯಾಗುತ್ತಿದೆ. ಇಂದು ಕೃಷಿ ಕ್ಷೇತ್ರ ಗಣನೀಯವಾಗಿ ಕುಸಿಯುತ್ತ ಬಂದಿದೆ. ೧೯೫೦–೫೯ ರಲ್ಲಿ ಶೇ. ೭೩.೧ ಜನರಿಗೆ ಕೃಷಿಕ್ಷೇತ್ರ ಉದ್ಯೋಗ ಒದಗಿಸಿದ್ದರೆ. ಅದು ೧೯೯೪ ರಲ್ಲಿ ಶೇ. ೬೪ ಕ್ಕೆ ಹಾಗೂ ೧೯೯೯–೨೦೦೦ ರಲ್ಲಿ ಶೇ. ೫೬ಕ್ಕೆ ಕುಸಿದಿದೆ. ೧೯೫೦–೫೧ ರಲ್ಲಿ ಒಟ್ಟು GDP ಯ ಶೇ. ೪೯ ರಷ್ಟು ಇದ್ದ ಆದಾಯ ೨೦೦೦–೦೧ರಲ್ಲಿ ಶೇ. ೨೬ಕ್ಕೆ ಇಳಿದಿದೆ. ೨೦೦೧–೦೨ರಲ್ಲಿ ೨೧೨ ಮಿಲಿಯನ್ ಟನ್‌ಗಳಷ್ಟು ಆಹಾರದಾನ್ಯಗಳ ಉತ್ಪಾದನೆಯಾದರೆ ೨೦೦೨–೦೩ ರಲ್ಲಿ ೧೭೪.೨ ಮಿಲಿಯನ್ ಟನ್‌ಗೆ ಕುಸಿತ (ಶೇ. ೧೭.೮) ವಾಗಿದೆ. ಒಟ್ಟಾರೆ ಕೃಷಿಕ್ಷೇತ್ರದ ಬೆಳವಣಿಗೆ ಶೇ೨.ಕ್ಕೆ ೧೯೯೩–೨೦೦೪ರಲ್ಲಿ ಕುಸಿದಿದೆ. ಕೃಷಿ ಇಳಿಮುಖವಾಗುತ್ತಿದ್ದರೆ, ಅದರ ತೀವ್ರ ಹೊಡೆತವನ್ನು ಅನುಭವಿಸುತ್ತಿರುವವರು ಭೂಹೀನ ಕಾರ್ಮಿಕರು ಹಾಗೂ ಸಣ್ಣ ಹಾಗೂ ಮಧ್ಯಮ ವರ್ಗದ ರೈತರು. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಜಾಗತೀಕರಣ ಭರಾಟೆ ಹೆಚ್ಚಾದಂತೆ ಕೃಷಿವಲಯಕ್ಕೆ ಪ್ರೋತ್ಸಾಹ ನೀಡದೇ ಇರುವುದು ಎದ್ದು ಕಾಣುತ್ತದೆ. ಇದು ಮನ್‌ಮೋಹನ ಮಿಕ್ಸ್ ನೀತಿ ಕೃಷಿಯ ಮೇಲೆ ಬೀರಿರುವ ಗಂಭೀರ ಪರಿಣಾಮ

ದೇಶದಲ್ಲಿ ೧೯೮೧ ರಿಂದ ೨೦೦೧ ರವರೆಗಿನ ಕೇವಲ ೨೦ ವರ್ಷಗಳಲ್ಲಿ ಹಳ್ಳಿಗಳ ಒಟ್ಟು ಜನಸಂಖ್ಯೆಹೆಚ್ಚಿದೆ. ವ್ಯವಸಾಯಗಾರರ ಸಂಖ್ಯೆ ೧೩% ಇಳಿದಿದೆ. ಹಳ್ಳಿಯ ಒಟ್ಟು ಕುಟುಂಬಗಳಲ್ಲಿ ಭೂಹೀನ ಕಾರ್ಮಿಕರ ಸಂಖ್ಯೆ ೪೨% ರಷ್ಟಿದೆ ಹಾಗೂ ೧/೨ ಎಕರೆ ಹೊಂದಿರುವ ರೈತರ ಸಂಖ್ಯೆ ೪೩% ರಷ್ಟಿದೆ. ಒಟ್ಟಾರೆ ದೇಶದ ಶೇ. ೫ ಜನರ ಕೈಯಲ್ಲಿ ಶೇ. ೪೦ ರಷ್ಟು ಭೂಮಿಯಿದೆ. ವಿಶ್ವಬ್ಯಾಂಕ್ (WB) ಸಲಹೆಯಿಂದ ಬೀಜ ಗೊಬ್ಬರ ಕ್ರಿಮಿನಾಶಕಗಳ ಮೇಲಿನ ಸಬ್ಸಿಡಿಯನ್ನು ತೆಗೆದಿರುವುದ ರಿಂದ ಸಣ್ಣ ರೈತ ಕುಟುಂಬಗಳ ಸಂಖ್ಯೆ ಶೇ ೧೯ರಿಂದ ಶೇ. ೨೨ ಕ್ಕೆ ಇರಿದೆ. ಹಾಗೂ ಭೂಹೀನ ಕೃಷಿಕರ ಸಂಖ್ಯೆ ಶೇ. ೩೫ರಿಂದ ಶೇ. ೪೧ಕ್ಕೆ ಏರಿದೆ. ವಿಶ್ವಬ್ಯಾಂಕ್‌ನ ದತ್ತು ಪುತ್ರ ಚಂದ್ರಬಾಬುನಾಯ್ಡು ೨೦೨೦ ರೊಳಗೆ ಆಂಧ್ರದ ಜನತೆಗೆ ಚಂದ್ರ ಲೋಕವನ್ನುತೋರಿಸುತ್ತೇನೆಂದು ವಿಶ್ವಬ್ಯಾಂಕ್‌ನಿಂದ ಹೆಚ್ಚು ಸಾಲ ಪಡೆದ. ಆ ರಾಜ್ಯ ಯಾವ ರೀತಿ ಅಭಿವೃದ್ಧಿಯಾಗಿದೆಯೆಂದರೆ ಆಂಧ್ರ ಪ್ರದೇಶದಲ್ಲಿ ಶೇ. ೬೧ ರಷ್ಟು ಸಣ್ಣ ರೈತರಿಗೆ ಭೂಮಿ ಇರುವುದು ಒಂದು ಎಕರೆ ಮಾತ್ರ, ಮಧ್ಯಮ ವರ್ಗದ ರೈತರಿಗೆ ೩.೫ ಎಕರೆ ಮಾತ್ರ. ಆಂಧ್ರ ಪ್ರದೇಶದಲ್ಲಿ ೨೦ ವರ್ಷದ ಹಿಂದೆ ವ್ಯವಸಾಯ ಕಾರ್ಮಿಕರ ಸಂಖ್ಯೆ ಶೇ. ೪೭–೫೩% ಇದ್ದರೆ ಈಗ ಅದು ೩೬%–೬೪%ಕ್ಕೆ ಬದಲಾಗಿದೆ. ಒಟ್ಟಾರೆ ರೈತರ ಸಂಖ್ಯೆ ೧೧% ಕುಸಿದು ಭೂಹೀನ ಕಾರ್ಮಿಕರ ಸಂಖ್ಯೆ ೧೧%ಕ್ಕೆ ಏರಿದೆ. ಅಂದರೆ ಪ್ರತಿ ವರ್ಷ ೬೫ ಸಾವಿರ ರೈತರು ಭೂಹೀನ ಕಾರ್ಮಿಕರಾಗಿ ಪರಿವರ್ತನೆಯಾಗು ತ್ತಿದ್ದಾರೆ. ಒಟ್ಟಾರೆ ಇಂದು ಆಂಧ್ರದಲ್ಲಿ ೧೩ ಲಕ್ಷ ಜನ ಭೂಹೀನಾ ಕಾರ್ಮಿಕರಾಗಿದ್ದಾರೆ. ಇಂದು ಕೇಂದ್ರದ ಹೊಸ ಆರ್ಥಿಕ ನೀತಿಗಳು ಮತ್ತು ಕೃಷಿ ನೀತಿಗಳಿಂದ ರೈತರು ತಮ್ಮ ಜೀವನೋಪಾಯಗಳನ್ನು ಕಳೆದುಕೊಂಡು ದಿವಾಳಿಯೇಳುತ್ತಿದ್ದಾರೆ. ಭಾರತದಲ್ಲಿ ಶ್ರೀಮಂತರು ಕಾರುಗಳನ್ನು ಕೊಳ್ಳಲು ಬ್ಯಾಂಕ್‌ಗಳು ವಿಧಿಸುವ ವಾರ್ಷಿಕ ಬಡ್ಡಿದರ ಶೇ. ೬, ಅದೇ ಗ್ರಾಮೀಣ ಪ್ರದೇಶದಲ್ಲಿ ರೈತರ ಟ್ರ್ಯಾಕ್ಟರ್‌ಗಳನ್ನು ಕೊಳ್ಳಲು ವಿಧಿಸುವ ವಾರ್ಷಿಕ ಬಡ್ಡಿ ಯದರ ಶೇ. ೧೬.

ಬರ ಪ್ರಕೃತಿ ವಿಕೋಪದಿಂದ ಸೃಷ್ಟಿಯಾದರೆ ಬಡತನ ಮಾನವನಿಂದ ಸೃಷ್ಟಿಯಾದದ್ದು. ಬರ ಮತ್ತು ಬಡತನ ಹಿಂದಿನಿಂದಲೂ ಬರುತ್ತಲೆ ಇವೆ. ರೈತರಿಗೆ ಕೃಷಿ ವಲಯದಲ್ಲಿ ಬೆಳೆ ವಿಫಲವಾದರೆ ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಹೋಗದಂತೆ ಆತ್ಮಹತ್ಯೆಗೆ ಅವಕಾಶ ನೀಡಿದೆ. ಗುಡಿ ಕೈಗಾರಿಕೆಗಳು ಸಾಂಪ್ರದಾಯಿಕ ಕಸುಬುಗಳು ಕೃಷಿಯೇತರ ಚಟುವಟಿಕೆಗಳು ಜೀವನಾಧಾರ ಒದಗಿಸುತ್ತಿದ್ದವು. ಆದರೆ ಇಂದು ಅವುಗಳೆಲ್ಲವು ಜಾಗತೀಕರಣ ಪ್ರಭಾವದಿಂದ ಮೂಲೆಗುಂಪಾಗಿವೆ. ಹಳ್ಳಿಗಳಲ್ಲಿ ಕೆಲಸ ಸಿಗದೇ ಬಾಂಬೆ, ಗೋವಾ, ಬೆಂಗಳೂರಿ ನಂತಹ ಪಟ್ಟಣಗಳಿಗೆ ವಲಸೆ ಪ್ರಮಾಣ ಹೆಚ್ಚುತ್ತಿದೆ. ಇಂದು ಜನತೆಯನ್ನು ಕೃಷಿಯಿಂದ ಹೊರಗೆ ತಳ್ಳಲು ಪ್ರಜ್ಞಾಪೂರ್ವಕವಾದ ಯೋಜನೆಗಳು ರೂಪಿಸಲಾಗುತ್ತಿದೆ.

ಆಗಸ್ಟ್ ೧೬–೨೦೦೫ ರಂದು ಅಮೆರಿಕಾದ ಬಿಸಿನೆಸ್ ಪತ್ರಿಕೆ ಮೆಕಸ್ಸಿಗೆ ತಪ್ಪೊಪ್ಪಿಗೆ ಸಂದರ್ಶನದಲ್ಲಿ ಮಾನವೀಯ ಗುಣ ಹೊಂದದೇ ಮಾನವೀಯ ಮುಖ ಹೊಂದಿದ ಮನಮೋಹನ್‌ಸಿಂಗ್ "ಸಾಧ್ಯವಾದಷ್ಟು ಜನತೆಯನ್ನು ಕೃಷಿಯಿಂದ ಹೊರಗಿಡುವುದೇ ಈ ದೇಶದ ಮೋಕ್ಷ ಮಾರ್ಗವೆಂದು" ಹೇಳಿದ್ದಾರೆ. ಬಹುಶಃ ಈ

(೯ನೇ ಪುಟಕ್ಕೆ)

ಪಾಶ್ಚಾತ್ಯ ಮಾಧ್ಯಮಗಳಲ್ಲಿ ಭಾರತ

ಶತಮಾನಗಳಿಂದ ಪಾಶ್ಚಾತ್ಯ ದೇಶಗಳು ಭಾರತದ ಬಗ್ಗೆ ಬರೆದುದಕ್ಕಿಂತ ವ್ಯತಿರಿಕ್ತವಾದ ಚಿತ್ರಣ ಇದು. ಹಿಂದೆ ಭಾರತವನ್ನು ಬಡವರ, ನಿರ್ಗತಿಕರ, ಹಾವಾಡಿಗರ, ಮಾಟ-ಮಂತ್ರದ, ಆನೆಗಳ ನಾಡೆಂದು ಬಣ್ಣಿಸಲಾಗುತ್ತಿತ್ತು. ಹೊಸ ಐಟಿ-ಬಿಟಿ ಚಿತ್ರಣ ಇದನ್ನೆಲ್ಲ ಬದಲಿಸಿದೆ. ಭಾರತ ಈಗ ಜ್ಞಾನ ಸಮಾಜವಾಗಿ ಪರಿವರ್ತಿತವಾಗಿದೆ. ಮೂರರಲ್ಲಿ ಒಂದರಷ್ಟು ಭಾರತೀಯರು ಅವಿದ್ಯಾವಂತರಾದರೂ ಜ್ಞಾನ ಸಮಾಜವೆನ್ನಲು ಅಡ್ಡಿಯಾಗಬೇಕಿಲ್ಲ ಅಲ್ಲವೇ? ಉಳ್ಳವರು ಇವೆಲ್ಲ ಬೊಗಳೆ ಬಿಡುವುದು ಸ್ವಾರ್ಥಕ್ಕಾಗಿ ಎಂದು ಎಲ್ಲರಿಗೂ ಗೊತ್ತಿದೆ. ನೈಜ ಸ್ಥಿತಿಯನ್ನು ಪರಿಶೀಲಿಸಿದರೆ ಇವೆಲ್ಲವೂ ಶುದ್ಧ ಸುಳ್ಳು ಎಂಬುದು ಅರಿವಾಗುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ ತಾರತಮ್ಯ ಹೆಚ್ಚಾಗಿರುವುದು ನಾವೆಲ್ಲರೂ ಅನುಭವಿಸುತ್ತಿರುವ ವಿಷಯ.

ಪ್ರಫುಲ್ ಬಿದ್ವಾಯ್
ಅನು:
ಎಸ್. ಕೃಷ್ಣಮೂರ್ತಿ ರಾವ್

ಪಶ್ಚಿಮದ ಮಾಧ್ಯಮಗಳಲ್ಲಿ ಈಚೆಗೆ ಬರುತ್ತಿರುವ ಭಾರತದ ಅಭಿವೃದ್ಧಿ ಸಂಬಂಧಿ ಚಿತ್ರಣ ಒಂದು ಲಕ್ಷಕ್ಕೂ ಹೆಚ್ಚಿನ ರೈತರ ಆತ್ಮಹತ್ಯೆಯ ವಿಚಾರಗಳನ್ನು ಮರೆಮಾಚುತ್ತದೆ.

ಇತ್ತೀಚೆಗೆ ಇಂಡಿಯಾದಲ್ಲಿ ಘಟಿಸಿದಂತಹ ಅತ್ಯಂತ ಘೋರ ಮತ್ತು ದುಃಖದ ಸಂಗತಿಯನ್ನು ಗುರುತಿಸಲು ನನ್ನನ್ನು ಕೇಳಿದರೆ ಮುಖ್ಯವಾಗಿ ಕಾಣಿಸಿಕೊಳ್ಳುವ ವಿಚಾರ, ಶರದ್ ಪವಾರ್ ಸದನದಲ್ಲಿ ಮಂಡಿಸಿದ ರೈತರ ಆತ್ಮಹತ್ಯೆಯ ಅಂಕಿ-ಅಂಶ. ೧೯೯೩ರಿಂದ ೨೦೦೩ರ ಅವಧಿಯಲ್ಲಿ ನಡೆದಂತಹ ಆತ್ಮಹತ್ಯೆಯ ಸಂಖ್ಯೆ ೧೦೦,೨೪೮ ರಷ್ಟಿದೆ. ಇಂಡಿಯಾದ ೧೯೯೧ರ ನಂತರದ ಕೃಷಿ ಮತ್ತು ಆರ್ಥಿಕ ನೀತಿಯ ಅತ್ಯಂತ ಕಟು ಟೀಕಾಕಾರರು ಮಾಡಿರುವ ನಿರೀಕ್ಷೆಯ ಎರಡರಷ್ಟಿದೆ ಈ ಅಂಕಿ-ಅಂಶ.

ಈ ಹೃದಯವಿದ್ರಾವಕ ಮತ್ತು ಆಘಾತಕಾರಿ ವಸ್ತುಸ್ಥಿತಿಯನ್ನು ಮೇಲಿನ ಅಂಕಿ-ಅಂಶದಿಂದಲೇ ತಿಳಿದುಕೊಳ್ಳಬಹುದು: ಕಡಿಮೆಯಾಗುತ್ತಿರುವ ಉತ್ಪನ್ನ, ಹೆಚ್ಚುತ್ತಿರುವ ಸಾಲದ ಹೊರೆ-ಬಡ್ಡಿ ದರ, ಸರ್ಕಾರದ ತೀವ್ರ ನಿರ್ಲಕ್ಷ್ಯ ಇದಕ್ಕೆ ಕಾರಣ. ಇದರ ಜತೆಗೆ ನಶಿಸುತ್ತಿರುವ ಮಣ್ಣಿನ ಫಲವತ್ತತೆ, ಅತಿಯಾದ ರಾಸಾಯನಿಕಗಳ ಬಳಕೆ, ಸುಸ್ಥಿರವಲ್ಲದ ಕೃಷಿ ಪದ್ಧತಿಗಳು (ಉದಾಹರಣೆಗೆ ಪಂಜಾಬ್‌ನಲ್ಲಿ ನಡೆಯುವಂತಹ ಭತ್ತ-ಗೋಧಿ-ಭತ್ತ ಮಾದರಿಯ ಬಿತ್ತನೆ ಪದ್ಧತಿ) ಕೂಡ ಇದಕ್ಕೆ ಕಾರಣ.

ಇತಿಹಾಸದಲ್ಲಿ ಈ ರೀತಿ ಅಧಿಕ ಸಂಖ್ಯೆಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ವಿರಳ. ತಮ್ಮ ಸಂಕಷ್ಟದಿಂದ ಪಾರಾಗಲು ಯಾವ ಮಾರ್ಗಗಳೂ ಇಲ್ಲದೆ ಮರಣಕ್ಕೆ ಶರಣಾಗುತ್ತಿರುವ ರೈತರ ತೀವ್ರತರಹದ ಅಸಹಾಯಕತೆಯನ್ನು ಇದು ತೋರಿಸುತ್ತದೆ. ಇದು ಗ್ರಾಮೀಣ ಭಾರತದಲ್ಲಿನ ರೈತರ ಕರಾಳ ಸ್ಥಿತಿಯನ್ನು ಬಿಂಬಿಸುವುದಷ್ಟೇ ಅಲ್ಲದೆ ಸಾಮಾಜಿಕ ಸ್ವಾಸ್ಥ್ಯ, ಪಾಪ ಪ್ರಜ್ಞೆ ಮತ್ತು ಸಾಮಾಜಿಕ ಜವಾಬ್ದಾರಿಗಳಂತಹ ವಿಷಯಗಳನ್ನು ಒಳಗೊಂಡಿದೆ. ಒಂದು ಅತೀವ ಹಿಂಸೆಯ ಮನಸ್ಥಿತಿಯಲ್ಲಿಯೇ ಮನುಷ್ಯ ಆತ್ಮಹತ್ಯೆಯಂತಹ ನಿರ್ಧಾರ ಕೈಗೊಳ್ಳುವುದು. ೨೦೦೨ರವರೆಗೆ ಹದಿನೆಂಟು ಸಾವಿರ ಆತ್ಮಹತ್ಯೆಗಳಾದ ನಂತರವೂ ಸರ್ಕಾರ ಇದುವರೆಗೆ ಸರಿಯಾದ ಕ್ರಮ ಕೈಗೊಂಡಿಲ್ಲ.

ಇಷ್ಟೆಲ್ಲ ಆತ್ಮಹತ್ಯೆಗಳಾದರೂ ಮಾಧ್ಯಮಗಳಲ್ಲಿ ಇದಕ್ಕೆ ಸಿಗಬೇಕಾದ ಪ್ರಾಮುಖ್ಯತೆ ಸಿಗದಿರುವುದು ಅತ್ಯಂತ ದೊಡ್ಡ ದುರಂತ. ನಿರಂತರವಾಗಿ ನಡೆಯುತ್ತಿರುವ ಈ ದುರಂತ ಒಂದೆಡೆಯಾದರೆ ಮಾಧ್ಯಮಗಳ ಬೇಜವಾಬ್ದಾರಿ ಇನ್ನೊಂದು ಕಡೆ. 'ಭಾರತ ಪ್ರಕಾಶಿಸುತ್ತಿದೆ', 'ಆರ್ಥಿಕ ಸೂಪರ್ ಪವರ್', 'ಮುನ್ನುಗ್ಗುತ್ತಿರುವ ಭಾರತ', ಎಂಬುದಾಗಿ ಗುಲ್ಲೆಬ್ಬಿಸಲಷ್ಟೇ ಮಾಧ್ಯಮಗಳು ತಮ್ಮ ಶಕ್ತಿಯನ್ನು ವಿನಿಯೋಗಿಸುತ್ತಿವೆ.

ಇದು ಭಾರತದಲ್ಲಾಗುತ್ತಿರುವ ಪ್ರಕ್ರಿಯೆಯಷ್ಟೇ ಅಲ್ಲದೆ ಹೊರದೇಶಗಳಲ್ಲೂ ಈ ರೋಗವನ್ನು ಕಾಣಬಹುದು. ಇತ್ತೀಚಿನ ನಾಲ್ಕು ವಿದೇಶಿ ಭೇಟಿಗಳಲ್ಲಿ ಭಾರತದ ಮೇಲಿನ ವರದಿಗಳನ್ನು ಓದಿ ನಾನು ದಂಗಾದೆ. 'ಭಾರತವನ್ನು ಪ್ರಪಂಚದ ಬ್ಯಾಕ್ ಆಫೀಸ್' ಎಂದು ವೈಭವೀಕರಿಸುವ ಲೇಖನಗ[...] ಸರಮಾಲೆಗಳಿಗೆ ಲೆಕ್ಕವೇ ಇಲ್ಲ (ಭಾರತದ ಅರ್ಧ ಬಿಲಿಯ[...] ಕೆಲಸಗಾರರಲ್ಲಿ, ಐಟಿ ಸಂಬಂಧಿ ಸೇವೆಗಳು ಕೇವಲ ಐದು ಲ[...] ಜನರಿಗೆ ಉದ್ಯೋಗ ಒದಗಿಸಿರುವುದು ನಿಜವಾದರೂ ಉತ್ಪ್ರೇಕ್ಷೆಗೇನ[...] ಕಡಿಮೆಯಿಲ್ಲ). ಭಾರತ ಐಟಿ ಕ್ಷೇತ್ರದ ಮಹಾನ್ ಶಕ್ತಿಯೆಂದು ಹುಬ್ಬೇ[...] ಸುವುದಕ್ಕೂ ವಿನಾಯಿತಿ ಇಲ್ಲ. "ಭಾರತದ ಹೊಸ ಹೆಜ್ಜೆ", ಇ[...] 'ಟೈಂ ಏಷ್ಯಾ' ಪತ್ರಿಕೆಯ ಮುಖಪುಟ ವರದಿ. ಇದೇ ಅರ್ಥ ಬರು[...] ರೋಚಕ ವರದಿಗಳು, 'ಎಕಾನಮಿಸ್ಟ್' ಮತ್ತು 'ಬಿಬಿಸಿ ವರ್ಲ್ಡ್'ಗಳಿ[...] ನಿರಂತರವಾಗಿ ಬರುತ್ತಲೇ ಇವೆ. ಇದು ಬರಿಯ ಭಟಾಟಟ್ಟು ಆಗಿರ[...] ಭಾರತದ ಬಗ್ಗೆ bull headed ಆಗಿರುವುದಂತೂ ದಿಟ.

ಭಾರತವನ್ನು ಅನೇಕ ಸಲ ಚೈನಾದೊಂದಿಗೆ ಹೋಲಿಸಲಾ[...]ತ್ತದೆ. ಚೈನಾ ಅನೇಕ ವಿಷಯಗಳಲ್ಲಿ ಭಾರತಕ್ಕಿಂತ ಅತ್ಯಂತ ಭಿ[...] ಆದರೂ ಹೋಲಿಕೆ ಮಾಡುತ್ತಾ ಭಾರತವನ್ನು ಅತ್ಯಂತ ಕ್ಷಿಪ್ರಗತಿಯ[...] ಮುನ್ನುಗ್ಗುತ್ತಿರುವ ಆರ್ಥಿಕತೆ ಎಂದು, ಅಗತ್ಯವಾದ ವಿಶ್ವಾಸ ಮ[...] ಶಕ್ತಿ ಹೊಂದಿರುವ ಜನರಿದ್ದಾರೆಂದು, ಮೈಕ್ರೋಪ್ರೋಸೆಸರ್‌ನಿ[...] ರಾಕೆಟ್ ತಯಾರಿಸುವ ಪ್ರತಿಭಾಶಕ್ತಿ ಇದೆ ಎಂದು ಹೇಳಲಾಗುತ್ತದೆ.

ಚೈನಾಕ್ಕೆ ಕಡಿಮೆ ಸಂಬಳಕ್ಕೆ ಸಿಗುವ ಕೆಲಸಗಾರರಿರಬಹುದು[...] ಆದರೆ ಭಾರತಕ್ಕೆ ಪ್ರತಿಭಾಶಕ್ತಿ ಮತ್ತು ವಿಜ್ಞಾನ-ತಂತ್ರಜ್ಞಾನದಲ್ಲಿ ಕು[...]ಲತೆ ಇದೆ ಎಂದು ಹೇಳಲಾಗುತ್ತದೆ. ಇವೆಲ್ಲದರ ಜತೆಗೆ ಭಾರ[...] ಒಂದು ಪ್ರಜಾತಂತ್ರವೆಂದು, ನ್ಯಾಯಬದ್ಧ ಸಮಾಜವೆಂದು ಬಣ್ಣಿಸ[...]ಗುತ್ತದೆ.

ಶತಮಾನಗಳಿಂದ ಪಾಶ್ಚಾತ್ಯ ದೇಶಗಳು ಭಾರತದ ಬ[...] ಬರೆದುದಕ್ಕಿಂತ ವ್ಯತಿರಿಕ್ತವಾದ ಚಿತ್ರಣ ಇದು. ಹಿಂದೆ ಭಾರತವ[...] ಬಡವರ, ನಿರ್ಗತಿಕರ, ಹಾವಾಡಿಗರ, ಮಾಟ-ಮಂತ್ರದ, ಆನೆ[...] ನಾಡೆಂದು ಬಣ್ಣಿಸಲಾಗುತ್ತಿತ್ತು. ಹೊಸ ಐಟಿ-ಬಿಟಿ ಚಿತ್ರಣ ಇದನ್[...] ಬದಲಿಸಿದೆ. ಭಾರತ ಈಗ ಜ್ಞಾನ ಸಮಾಜವಾಗಿ ಪರಿವರ್ತಿತವಾಗಿ[...] ಮೂರರಲ್ಲಿ ಒಂದರಷ್ಟು ಭಾರತೀಯರು ಅವಿದ್ಯಾವಂತರಾದರ[...] ಜ್ಞಾನ ಸಮಾಜವೆನ್ನಲು ಅಡ್ಡಿಯಾಗಬೇಕಿಲ್ಲ ಅಲ್ಲವೇ? ಉಳ್ಳವ[...] ಇವೆಲ್ಲ ಬೊಗಳೆ ಬಿಡುವುದು ಸ್ವಾರ್ಥಕ್ಕಾಗಿ ಎಂದು ಎಲ್ಲರಿಗ[...] ಗೊತ್ತಿದೆ.

ನೈಜ ಸ್ಥಿತಿಯನ್ನು ಪರಿಶೀಲಿಸಿದರೆ ಇವೆಲ್ಲವೂ ಶುದ್ಧ ಸು[...]

ಬರೀ ಮಾತು ಮತ್ತು 'ಪ್ಯಾಕೇಜ್'ಗಳಿಗಷ್ಟೇ ರೈತರು ಸಂತೃಪ್ತರಾಗಬೇಕು

> ಯಾಂಗವು ಒಂದೆರಡು ದಶಕಗಳಿಂದ ನಾಗರೀಕ ಹಕ್ಕುಗಳಿಗೆ ಸರ್ಕಾರವನ್ನು ಟೆಗೆ ತೆಗೆದು ಕೊಳ್ಳುವುದರ ಮೂಲಕ ಸಂವಿಧಾನದ ಆಶಯವನ್ನು ಪಾಡುತ್ತಿತ್ತು. ಆದರೆ ಈಗ ಪರಿಸ್ಥಿತಿ ದಲಾಗಿದೆ. ನ್ಯಾಯಾಂಗ ಈಗ ನವ ದಾರೀಕರಣ ನೀತಿಯ ರಕ್ಷಕ ಮತ್ತು ೀಷಕ ಅಂಗವಾಗಿ ಕಾಣಿಸಿಕೊಳ್ಳುತ್ತಿದೆ. ಆದಿ ವಾಸಿಗಳ ಮೇಲೆ ದೌರ್ಜನ್ಯ, ಕೊಳಚೆವಾಸಿಗಳ ಹಕ್ಕು, ಪರಿಸರ ಗೃತಿ, ಶಿಕ್ಷಣದಲ್ಲಿ ಸಮಾನ ಅವಕಾಶ ಮುಂತಾದ ವಿಷಯಗಳಲ್ಲಿ ಕಾಳಜಿ ಡಿಮೆಯಾಗಿದೆ. ದುರ್ಗತಿಯೆಂದರೆ ಸಾರ್ವಜನಿಕ ಭಾಗವಹಿಸುವಿಕೆಯ ರುದ್ಧ ಕಾರ್ಪೊರೆಟ್ ಪ್ರೇರಿತ ವ್ಯಾಜ್ಯ ಹೂಡಿಕೆಯನ್ನು ನ್ಯಾಯಾಂಗ ಪ್ರೋತ್ಸಾಹಿಸುತ್ತಿರುವುದು.

ದು ಅರಿವಾಗುತ್ತದೆ. ಆರ್ಥಿಕವಾಗಿ, ಸಾಮಾಜಿಕ ತಾರತಮ್ಯ ಹೆಚ್ಚಾಗಿರುವುದು ನಾವೆಲ್ಲರೂ ಅನುಭವಿ ವ ವಿಷಯ. ಇಳಿಮುಖ ಕಾಣುತ್ತಿರುವ ಆಹಾರ ಕೆ ಮತ್ತು ತಲೆವಾರು ಧಾನ್ಯ ಬಳಕೆ (ಕಳೆದ ಐದು ರಲ್ಲಿ ವಾರ್ಷಿಕ ಸರಾಸರಿ ಏಳು ಕೆ.ಜಿ.ಯಷ್ಟು ಕಡಿಮೆ ದೆ), ಅಪೌಷ್ಠಿಕತೆ (೯/೧೦ ಗರ್ಭಿಣಿಯರಲ್ಲಿ ಹಾಗು ನಷ್ಟು ಮಕ್ಕಳಲ್ಲಿ), ಹೆಚ್ಚುತ್ತಿರುವ ಬಡತನ, ಮತ್ತು ಗ್ಯ ವ್ಯವಸ್ಥೆಯ ಗುಣಮಟ್ಟದಲ್ಲಿ ಕುಸಿತ- ಈ ರ ಕೆಲವಷ್ಟಾದರೂ ಅಂಕಿ-ಅಂಶಗಳನ್ನು ಪರಿಗಣಿಸಿ ಸ್ಥೆಯ ಮಾನವ ಅಭಿವೃದ್ಧಿ ಸೂಚಕದಲ್ಲಿ ಭಾರತಕ್ಕೆ ೇ ಸ್ಥಾನವನ್ನು ಕೊಟ್ಟು ಗೌರವಿಸಲಾಗಿದೆ! ಇದೆಲ್ಲ ಭಾರತದ ಬಹುಸಂಖ್ಯಾತ ಜನರ ಪರಿಸ್ಥಿತಿ ಗಣ ವಾಗಿ ಹದಗೆಟ್ಟಿರುವುದು ನಿಜ.

ಭಾರತದ ರಾಜಕೀಯ ಮತ್ತು ನ್ಯಾಯಾಂಗ ಇವೆಲ್ಲದಕ್ಕಿಂತ ಹತಾಶೆಯ ಸ್ಥಿತಿ ತಲುಪಿದೆ. ಯುತೆ ತಾರಕಕ್ಕೇರಿದೆ. ಹೆಂಗಸರ ಮೇಲಿನ ನ್ಯ ಹೆಚ್ಚುತ್ತಿದೆ. ಹೆಣ್ಣು ಭ್ರೂಣ ಹತ್ಯೆ, ಶಿಕ್ಷಣದಲ್ಲಿ ತ, ಆಸ್ತಿ ವಿಷಯದಲ್ಲಿ ತಾರತಮ್ಯ, ಹೆಚ್ಚುತ್ತಿರುವ ಮ ದ್ವೇಷ, ಸಿನೆಮಾ ಮತ್ತು ಪುಸ್ತಕಗಳನ್ನು ವಿರೋ ಅಸಹನೀಯ ಸಂಸ್ಕೃತಿ (ಎಂ. ಎಫ್. ಹುಸೇನ್ ವಬೆದರಿಕೆ) ಕೂಡ ಎಲ್ಲೆ ಮೀರಿದೆ.

ಶೈಕ್ಷಣಿಕ ವಲಯದಲ್ಲಿ ಮೀಸಲಾತಿ ವಿರೋಧಿ ನೆಗಳಿಂದ ಭಾರತದ ಮೇಲು ಜಾತಿಗಳ ಮನಸ್ಥಿತಿ ಗದಿರುವುದು ತಿಳಿಯುತ್ತ ದೆ. 'ಸಿಎನ್‌ಎನ್-ಿ-ಇಂಡಿಯನ್ ಎಕ್ಸ್‌ಪ್ರೆಸ್', 'ಎ. ಸಿ. ನೀಲ್ಸನ್'ರ ನಡೆದ ೭೮೬ ಮಾದರಿಯನ್ನೊಳಗೊಂಡ ಸಮೀ ಪ್ರಕಾರ ಮೀಸಲಾತಿಯ ಬಗ್ಗೆ ಮೇಲು ಜಾತಿಗಳಿ ದ್ವೇಷ ಮಿಶ್ರಿತ ಮೌಢ್ಯ ಅರ್ಥವಾಗುತ್ತದೆ. ೫೨% ಜನರಿಗೆ ಮಂಡಲ್ ಆಯೋಗದ ಬಗ್ಗೆ ಅರಿವೇ ಇಲ್ಲ. ೩೯% ಜನರಿಗೆ ಉನ್ನತ ಶಿಕ್ಷಣದಲ್ಲಿ ಇತರೆ ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಒದಗಿಸುವ ಸರ್ಕಾರದ ಪ್ರಸ್ತಾಪವೇ ತಿಳಿದಿಲ್ಲ. ೩೬ರಿಂದ ೪೨% ಜನರಿಗೆ ಮಾತ್ರ ಇದರ ಬಗ್ಗೆ ಮಾಹಿತಿ ಇದೆ. ೧೪% ಜನರಿಗೆ ಮಾತ್ರ ಮೀಸಲಾತಿ ಮೇಲೆ ಸ್ಪಷ್ಟ ಮಾಹಿತಿ ಇದೆ.

೫೭% ಜನರು ಸರ್ಕಾರದ ಪ್ರಸ್ತಾಪವನ್ನು ಬೆಂಬಲಿಸಿದರೆ, ಮೇಲು ಜಾತಿಗಳಲ್ಲಿ ಅದು ೩೮% ಅಷ್ಟೆ (ಆದರೆ ೪೬% ಜನರು ಇದರಿಂದ ಹೆಚ್ಚಿನ ಅವಕಾಶಗಳು ಒದಗುತ್ತವೆ ಎಂದು ಒಪ್ಪಿಕೊಳ್ಳುತ್ತಾರೆ). ಸಮೀಕ್ಷೆಯಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ ೫ರಲ್ಲಿ ೩ರಷ್ಟು ಸವರ್ಣೀಯರಿಗೆ ಇಂದಿಗೂ ಹಿಂದುಳಿದ ವರ್ಗಗಳನ್ನು ಒಟ್ಟಿಗೇ ಕೊಂಡೊಯ್ಯುವ, ಹಂಚಿಕೊಂಡು ಸಹಬಾಳ್ವೆ ನಡೆಸಬೇಕೆಂಬ ಆಸ್ಥೆ ಇಲ್ಲ.

ಮಧ್ಯಮ ವರ್ಗದವರಲ್ಲಿ ಒಂದು ಸ್ಪಷ್ಟವಾದ ನೈತಿಕ ಪ್ರಜ್ಞೆ ಇಲ್ಲದಿರುವುದು ಭಾರತದ ದುರಂತ. ಸಹಾನುಭೂತಿಯನ್ನು ಬಿಡಿ. ನ್ಯಾಯ, ಜಾತೀಯತೆ ಮತ್ತು ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಇವರಿಗೆ ಎಳ್ಳಷ್ಟೂ ಜ್ಞಾನವಿಲ್ಲ. ಮೇಲು ವರ್ಗದವರಿಗೆ ಗಾಂಧೀಜಿಯವರ ಧರ್ಮ ಆಧಾರಿತ ನೈತಿಕತೆಯಾಗಲೀ, ವ್ಯಕ್ತಿಗತ ಪರಿಶುದ್ಧತೆಯಾಗಲೀ ಅಥವಾ ನೆಹರು ಅವರಿಗಿದ್ದ ಸಮುದಾಯ ಪ್ರಜ್ಞೆಗಾಗಲೀ ಬೆಲೆಯೇ ಇಲ್ಲ. ಸಮಾಜ ನಿಂತ ನೀರಾಗಿ ನಾರುತ್ತಿರುವುದಂತೂ ನಿಜ.

ನ್ಯಾಯಾಂಗವು ಒಂದೆರಡು ದಶಕಗಳಿಂದ ನಾಗರೀಕ ಹಕ್ಕುಗಳಿಗೆ ಸರ್ಕಾರವನ್ನು ತರಾಟೆಗೆ ತೆಗೆದು ಕೊಳ್ಳುವುದರ ಮೂಲಕ ಸಂವಿಧಾನದ ಆಶಯವನ್ನು ಕಾಪಾಡುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ನ್ಯಾಯಾಂಗ ಈಗ ನವ ಉದಾರೀಕರಣ ನೀತಿಯ ರಕ್ಷಕ ಮತ್ತು ಪೋಷಕ ಅಂಗವಾಗಿ ಕಾಣಿಸಿಕೊಳ್ಳುತ್ತಿದೆ. ಆದಿವಾಸಿಗಳ ಮೇಲೆ ದೌರ್ಜನ್ಯ, ಕೊಳಚೆವಾಸಿಗಳ ಹಕ್ಕು, ಪರಿಸರ ಜಾಗೃತಿ, ಶಿಕ್ಷಣದಲ್ಲಿ ಸಮಾನ ಅವಕಾಶ ಮುಂತಾದ ವಿಷಯಗಳಲ್ಲಿ ಕಾಳಜಿ ಕಡಿಮೆಯಾಗಿದೆ. ದುರ್ಗತಿಯೆಂದರೆ ಸಾರ್ವಜನಿಕ ಭಾಗವಹಿಸುವಿಕೆಯ ವಿರುದ್ಧ ಕಾರ್ಪೊರೆಟ್ ಪ್ರೇರಿತ ವ್ಯಾಜ್ಯ ಹೂಡಿಕೆಯನ್ನು ನ್ಯಾಯಾಂಗ ಪ್ರೋತ್ಸಾಹಿಸುತ್ತಿರುವುದು.

ಇದು ಮೂಲಭೂತವಾಗಿ ಆಡಳಿತ ಯಂತ್ರವನ್ನು ದುಸ್ತರಗೊಳಿಸಿದೆ. ಅನೇಕ ರಾಜ್ಯಗಳಲ್ಲಿ ಸರ್ಕಾರಕ್ಕೆ ಬೆನ್ನು ಮೂಳೆಯಲ್ಲದೆ ಗೂಂಡಾರಾಜ್ ಮತ್ತು ಹಿಂಸೆ ತಾಂಡವವಾಡುತ್ತಿದೆ. ಸರ್ಕಾರ ಬದ್ಧ ಶಾಸನಗಳು ಕಾಲು ಭಾಗ ಜಿಲ್ಲೆಗಳಲ್ಲೂ ಅನುಷ್ಠಾನಗೊಳ್ಳದೆ ನಕ್ಸಲ್‌ವಾದವನ್ನು ಸಮಂಜಸವಾಗಿ ಪರಿಹರಿಸಲಾಗುತ್ತಿಲ್ಲ. ನ್ಯಾಯಬದ್ಧವಾಗಿ ನಕ್ಸಲ್‌ವಾದವನ್ನು ಎದುರಿಸದೆ, ಸಮಾಜದಲ್ಲಿನ ತಾರತಮ್ಯದ ಬೇರುಗಳನ್ನು ಕಿತ್ತೊಗೆಯಲು ಸಾಧ್ಯವಾಗದೆ, ಸರ್ಕಾರಗಳು ಅಸಂವಿಧಾನಿಕ ಮಾರ್ಗಗಳಿಂದ ಹಿಂಸೆ, ಸಶಸ್ತ್ರೀಕರಣಗಳಿಗೆ ಶರಣಾಗಿವೆ. 'ಸಲ್ವಾ ಜುದಮ್'ನಂತಹ ಗುಂಪುಗಳನ್ನು ಪ್ರೋತ್ಸಾಹಿಸುವ ಮೂಲಕ ಛತ್ತೀಸ್‌ಗಡದಲ್ಲಿ ಸಂಸಾರಗಳನ್ನು ಮತ್ತು ಸಮಾಜವನ್ನು ಒಡೆಯಲಾಗುತ್ತಿದೆ. ಇದಕ್ಕಿಂತ ಅಪಾಯಕರ ಮುನ್ಸೂಚನೆ ಬೇಕೆ?

ಇವೆಲ್ಲದರ ವ್ಯತಿರಿಕ್ತ ಪರಿಣಾಮಗಳನ್ನು ಎದುರಿಸಲು ಮಾರ್ಗೋಪಾಯ ಮತ್ತು ರಾಜಕೀಯ ಸಂಕಲ್ಪ ಸ್ಪಷ್ಟವಾಗಬೇಕಿರುವುದು ಈಗಿನ ತುರ್ತು.

ಸೌಜನ್ಯ: ಫ್ರಂಟ್ ಲೈನ್ □

ನೇಣಿನತ್ತ... ಅನ್ನದಾತ...

(೭ನೇ ಪುಟದಿಂದ)

ಮಾತು ಅವರಿಗೆ ೧೯೯೧ರಲ್ಲಿ ತಾವು ಆರ್ಥಿಕ ಮಂತ್ರಿಯಾಗಿದ್ದಾಗ IMF, WB, WTOಗಳು ಹೇಳಿರುವ ಕಿವಿಮಾತು ಇರಬಹುದೆಂದು ಅನುಮಾನ ಬರುತ್ತದಲ್ಲವೇ?

ಕೃಷಿ ಕ್ಷೇತ್ರದಲ್ಲಿ ಅಳವಡಿಸುತ್ತಿರುವ ತಂತ್ರಜ್ಞಾನ ಬಂಡವಾಳಶಾಹಿ ಹೊಟ್ಟೆಯೊಳಗಿನಿಂದ ಹುಟ್ಟಿ ಬಂದಿದ್ದು. ಅದು ಸಂಪತ್ತನ್ನು ಕ್ರೋಢಿಕರಿಸುತ್ತ ಆರ್ಥಿಕ ಅಸಮಾನತೆ ನಿರುದ್ಯೋಗ, ಅರಾಜಕತೆ, ಬಡತನ, ಹೆಚ್ಚಾಗಲು ಕಾರಣವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಆತ್ಮಹತ್ಯೆಗೈಯುತ್ತಿರುವ ಸಣ್ಣ ಹಾಗೂ ಮಧ್ಯಮ ವರ್ಗದ ರೈತರ ಬದುಕನ್ನು ಸುಧಾರಣೆ ಮಾಡುವ ಬದಲು ಪ್ರಭುತ್ವ ಗ್ರಾಮೀಣ ಪ್ರದೇಶವನ್ನು ಕಾರ್ಪೊರೇಟ್ ವಲಯಕ್ಕೆ ಅನುಕೂಲವಾಗುವಂತೆ ಮಾರ್ಪಡಿಸುತ್ತಿದ್ದಾರೆ.

ಅಧಿಕ ನೆಲ ಜಲ ಸಂಪನ್ಮೂಲಗಳನ್ನು ಬಳಸಿ ಕೆಲವರ ಬದುಕಿಗೆ ಪ್ರಯೋಜನವಾಗುವಂತಹ ಬೆಳೆಗಳನ್ನು ಹಾಗೂ ಕೆಟ್ಟ ರಫ್ತು ದೃಷ್ಟಿಯಿಂದ ದುಬಾರಿ ವಿದೇಶಿ ಮೂಲದವೆನ್ನಲ್ಲಾದ BT ಹತ್ತಿ ನೀಲಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಸಾಮಾನ್ಯವಾಗಿ ಇಂತಹ ಬೆಳೆಗಳೇ ಹೆಚ್ಚು ನೀರು, ರಸಗೊಬ್ಬರ, ಕ್ರಿಮಿನಾಶಕಗಳನ್ನು ಬೇಡುತ್ತ ಜಮೀನನ್ನು ಬಂಜಾರು ಭೂಮಿಯನ್ನಾಗಿ ಮಾಡುತ್ತವೆ. ವಿಶ್ವಬ್ಯಾಂಕ್ ನಿರ್ದೇಶನದಿಂದ ಆಗಿರುವ ಹಸಿರು ಕ್ರಾಂತಿ ಭಾರತದ ಕೃಷಿಯನ್ನು ವಿನಾಶದತ್ತಕೊಂಡೊಯ್ದಿದೆ. ಈ ಹಸಿರು ಕ್ರಾಂತಿ ರಸಗೊಬ್ಬರ, ಕೀಟನಾಶಕಗಳ ಬಳಕೆಯನ್ನು ಅನಿವಾರ್ಯವನ್ನಾಗಿಸಿದೆ. ಹಸಿರು ಕ್ರಾಂತಿ ಮಾದರಿಗಳಾದ ರಸಾಯನಿಕವನ್ನು ಬಹಳಷ್ಟು ಬಳಸಿ ಗೋಧಿ ಬೆಳೆದ ಪಂಜಾಬ್, ಹರಿಯಾಣದಲ್ಲಿ ಇಂದು ಹುಲ್ಲು ಕೂಡ ಬೆಳೆಯಲಾಗದ ಸ್ಥಿತಿ ಉಂಟಾಗಿದೆ.

ಭೌಗೋಳಿಕ ಅಗತ್ಯಗಳನ್ನು ಅನುಸರಿಸಿ ಬಹುಸಂಖ್ಯಾತ ಜನರು ಬಳಸುವ ಬೆಳೆಗಳಾದ ರಾಗಿ, ಜೋಳ, ಕಬ್ಬು, ತೊಗರಿ, ಅಡಿಕೆ, ರೇಷ್ಮೆ, ವಿಳ್ಳದೆಲೆ, ಈ ಬಗೆಯ ವಾಣಿಜ್ಯ ಬೆಳೆಗಳ ಉತ್ಪಾದನೆಯಿಂದ ಕೃಷಿಯಲ್ಲಿ ಗ್ರಾಮೀಣ ಆರ್ಥಿಕತೆಯಲ್ಲಿ ಬಂಡವಾಳಶಾಹಿ ಸಂಬಂಧಗಳು ಕಾಣಿಸಿಕೊಳ್ಳಲು ಪ್ರಾರಂಭವಾಗಿ ಉಳಿಗಮಾನ್ಯ ಶೋಷಣೆ ವಿಧಾನಗಳು ನಿಧಾನವಾಗಿ ನಾಶವಾಗಬಹುದು. ಸಾಲ ಮರು ಪಾವತಿ ಮಾಡುವ ಅವಧಿ ವಿಸ್ತರಣೆ, ಬಡ್ಡಿ ಸಾಲವನ್ನು ಇವುಗಳಿಂದ ರೈತರಿಗೆ ಶಾಶ್ವತ ಪರಿಹಾರ ನೀಡದೇ ಮತ್ತಷ್ಟು ಪರವಲಂಬಿಯನ್ನಾಗಿಸುತ್ತವೆ. ಕಾರ್ಪೊರೇಟ್ ವಲಯ ಕೃಷಿಕ್ಷೇತ್ರವನ್ನು ಪ್ರವೇಶಿಸುವುದನ್ನು ತಡೆಗಟ್ಟಬೇಕು. WTO ನಿಂದ ಹೊರಗೆ ಬರಬೇಕು.

ಕೃಷಿಯಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಹೂಡಿಕೆಗೆ ಅವಕಾಶ ಕೊಡಬಾರದು. ಕೃಷಿಕರ ಜೀವನ ವರ್ಷದಿಂದ ವರ್ಷಕ್ಕೆ ಹದಗಡುತ್ತಲೆಯಿದೆ. ಇತ್ತೀಚಿನ ವರದಿ ಪ್ರಕಾರ ಭಾರತದ ಕೃಷಿಕರ ಮಾಸಿಕ ತಲಾ ಆದಾಯ ಕೇವಲ ೫೦೩ ರೂಗಳು. ಆದರೆ ಟಾಟಾ, ಬಿರ್ಲಾ ಪುಟುಜಿ, IT,BT ದಣಿಗಳ ಮಾಸಿಕ ವೇತನ ಕೋಟಿ ಮೊತ್ತದಲ್ಲಿ ರುತ್ತದೆ. ನಾವು ಕಾರ್ಪೊರೇಟ್ ಸಂಬಳ ತಿಳಿದು ಸಂತೋಷ ಪಡಬೇಕೆ ಅಥವಾ ಮೂರು ಪಟ್ಟು ತಿನ್ನು ವಷ್ಟು ಬೆಳೆದರೂ ಉಪವಾಸದಿಂದ ನರಳಿ ಆತ್ಮಹತ್ಯೆಗೈಯುತ್ತಿರುವ ರೈತರ ಬವಣೆಗೆ ಮರುಗಬೇಕೆ? □

ಸಮುದಾಯ ಕೇಂದ್ರಿತ ಪರಿಸರ ನಿರ್ವಹಣೆ: ಯಶೋಗಾಥೆಗಳು

ವಿ. ಜಗನ್ನಾಥ

ಪ್ರತಿ ವ್ಯಕ್ತಿ ಸಮುದಾಯಕ್ಕೆ ಸಂಪನ್ಮೂಲಗಳ ಸೂಕ್ತ ಹಂಚಿಕೆಯಾಗಬೇಕು ಮತ್ತು ಅವುಗಳ ನಿರ್ವಹಣೆಗೆ ಸಮಾನಾವಕಾಶ ದೊರೆಯಬೇಕು .ಮಾಹಿತಿ ಮತ್ತು ತಂತ್ರಜ್ಞಾನಗಳ ವಿನಿಮಯ ನಿರಂತರವಾಗಿರಬೇಕು. ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಭಾಗವಹಿಸಲು ಎಲ್ಲರಿಗೂ ಅವಕಾಶಗಳಿರಬೇಕು. ಪರಿಸರ ನಿರ್ವಹಣಾ ಚಟುವಟಿಕೆಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ನೀಡಬೇಕು. ಹಾಗಾದಾಗ ಮಾತ್ರ ಪರಿಸರ ಸಂರಕ್ಷಣೆ ಯಶಸ್ವಿಯಾಗಲು ಸಾಧ್ಯ.

ಸಂಪನ್ಮೂಲಗಳ ಜೊತೆಗೆ ಸಮುದಾಯ ಕೇಂದ್ರಿತ ಚಟುವಟಿಕೆಗಳಿಗೆ ವ್ಯಕ್ತಿ, ಸಂಸ್ಥೆ ಮತ್ತು ಸರ್ಕಾರದ ಮಟ್ಟದಲ್ಲಿ ಒಂದು ಸ್ಪಷ್ಟ ಪರಿಸರ ನೀತಿ, ಕಾರ್ಯತಂತ್ರ ಮತ್ತು ಕಾರ್ಯಸೂಚಿ ರಾಜ್ಯದಲ್ಲಿ ಅವಶ್ಯಕ. ೨೦೦೬ನೇ ಇಸವಿಯ ವಿಶ್ವ ಪರಿಸರ ದಿನದ ಶೀರ್ಷಿಕೆ ಮರುಭೂಮಿಗಳು ಸೃಷ್ಟಿಯಾಗುವುದನ್ನು ತಡೆಯುವುದಾಗಿದೆ. ನಮ್ಮ ಜೀವನ ಶೈಲಿಯಲ್ಲಿ ಶಕ್ತಿ ಮತ್ತು ವಸ್ತುಗಳ ಪರಿಸರ ದಿನಕ್ಕೆ ಪೂರಕ. ಕೃಷಿ ಸಮಾಜದಲ್ಲಿ ನೀರನ್ನು ನಿಲ್ಲಿಸಿ ಇಂಗಿಸುವುದು, ಜೀವ ವೈವಿಧ್ಯತೆ ಉಳಿಸಿಕೊಳ್ಳುವುದು, ಕಾರ್ಖಾನೆ ಮತ್ತು ಉದ್ಯಮಗಳಲ್ಲಿ ಮಾಲಿನ್ಯ ನಿವಾರಕ ಪರಿಸರ ಸ್ನೇಹಿ ತಂತ್ರಜ್ಞಾನ ಅನಿವಾರ್ಯ. ಸೇವಾ ಸೌಲಭ್ಯಗಳಲ್ಲಿ ಪರಿಸರಕ್ಕೆ ಹಾನಿಕಾರಕವಲ್ಲದ ರೀತಿಯಲ್ಲಿ ಚಟುವಟಿಕೆ ಅಗತ್ಯ.

ಮಾನವ ಜನಾಂಗದ ಪರಿಸರ ನಿರ್ವಹಣೆಯ ಕಾರ್ಯಸೂಚಿ-೨೧ ಅತ್ಯಂತ ಪ್ರಮುಖ ಘಟ್ಟ, ಕೃಷಿ ಕೈಗಾರಿಕೆ, ನಗರ ಪ್ರದೇಶ ಮತ್ತು ಸೇವೆಗಳಲ್ಲಿ ಸಮಯಬದ್ಧ ಕಾರ್ಯಸೂಚಿ ನೀಡಿದ ಭೂಮಿಸಮ್ಮೇಳನ ಪರಿಸರಕ್ಕೆ ಬಹುಮುಖ್ಯ. ಭಾರತದೇಶವೂ ಕೂಡಾ ಕಾರ್ಯಸೂಚಿ-೨೧ಕ್ಕೆ ಸಹಿ ಮಾಡಿರುವುದು ಗಮನಾರ್ಹ. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಸಮುದಾಯ ಕೇಂದ್ರಿತ ಯಶಸ್ವಿ ಪರಿಸರ ನಿರ್ವಹಣೆಯ ಉದಾಹರಣೆ ಅಪಾರ. ೭೩ನೇ ಮತ್ತು ೭೪ನೇ ಸಂವಿಧಾನ ತಿದ್ದುಪಡಿಯಲ್ಲಿ ರಾಜ್ಯಾಂಗ ವಿಕೇಂದ್ರಿತ ಪರಿಸರ ನಿರ್ವಹಣೆಗೆ ಒಲುವು ತೋರಿದೆ. ಸಮುದಾಯ ಸಬಲೀಕರಣಕ್ಕೆ ಸ್ಪಷ್ಟ ಗುರಿಗಳನ್ನು ಪಟ್ಟಿ ಮಾಡಬಹುದು. ಕರ್ನಾಟಕದ ಪರಿಸರ ಪರಿಸ್ಥಿತಿಯ ವರದಿಯಲ್ಲಿ ಹಾಲಿ ಪರಿಸ್ಥಿತಿಗಳನ್ನು ಪಟ್ಟಿಮಾಡಲಾಗಿದೆ. ಸ್ತ್ರೀಶಕ್ತಿ ಸಂಘಗಳು, ನಿವಾಸಿ ಕ್ಷೇಮಾಭಿವೃದ್ಧಿ ಸಂಘ, ಸ್ವಯಂ ಸೇವಾ ಸಮುದಾಯ ಸಂಘಟನೆಗಳು ತಮ್ಮ ತನು, ಮನ, ಧನ ಮತ್ತು ಸಹಕಾರವನ್ನು ನೀಡಿದಲ್ಲಿ ಪರಿಸರ ಸಂರಕ್ಷಣೆಗೆ ನಾಂದಿಯಾಗಬಲ್ಲವು. ಕೇವಲ ಕಾನೂನಿನ ಮೂಲಕ ಪರಿಸರ ಸಂರಕ್ಷಣೆ ಸಾಧ್ಯವಿಲ್ಲ.

ಇವತ್ತಿನ ದಿನ ಸಂಪನ್ಮೂಲಗಳ ಜೊತೆಗೆ ಸಮುದಾಯ ಕೇಂದ್ರಿತ ಚಟುವಟಿಕೆಗಳಿಗೆ ವ್ಯಕ್ತಿ, ಸಂಸ್ಥೆ ಮತ್ತು ಸರ್ಕಾರದ ಮಟ್ಟದಲ್ಲಿ ಒಂದು ಸ್ಪಷ್ಟ ಪರಿಸರ ನೀತಿ, ಕಾರ್ಯತಂತ್ರ ಮತ್ತು ಕಾರ್ಯಸೂಚಿ ರಾಜ್ಯದಲ್ಲಿ ಅವಶ್ಯಕ. ೨೦೦೬ನೇ ಇಸವಿಯ ವಿಶ್ವ ಪರಿಸರ ದಿನದ ಶೀರ್ಷಿಕೆ ಮರುಭೂಮಿಗಳು ಸೃಷ್ಟಿಯಾಗುವುದನ್ನು ತಡೆಯುವುದಾಗಿದೆ. ನಮ್ಮ ಜೀವನ ಶೈಲಿಯಲ್ಲಿ ಶಕ್ತಿ ಮತ್ತು ವಸ್ತುಗಳ ಪರಿಸರ ದಿನಕ್ಕೆ ಪೂರಕ. ಕೃಷಿ ಸಮಾಜದಲ್ಲಿ ನೀರನ್ನು ನಿಲ್ಲಿಸಿ ಇಂಗಿಸುವುದು, ಜೀವ ವೈವಿಧ್ಯತೆ ಉಳಿಸಿಕೊಳ್ಳುವುದು, ಕಾರ್ಖಾನೆ ಮತ್ತು ಉದ್ಯಮಗಳಲ್ಲಿ ಮಾಲಿನ್ಯ ನಿವಾರಕ ಪರಿಸರ ಸ್ನೇಹಿ ತಂತ್ರಜ್ಞಾನ ಅನಿವಾರ್ಯ. ಸೇವಾ ಸೌಲಭ್ಯಗಳಲ್ಲಿ ಪರಿಸರಕ್ಕೆ ಹಾನಿಕಾರಕವಲ್ಲದ ರೀತಿಯಲ್ಲಿ ಚಟುವಟಿಕೆ ಅಗತ್ಯ. ಕೃಷಿ ಕೈಗಾರಿಕೆ, ಸೇವಾ ಸೌಲಭ್ಯ ಮತ್ತು ನಗರಾಭಿವೃದ್ಧಿಯಲ್ಲಿ ಯಶೋಗಾಥೆಗಳ ಲಯವನ್ನು ಗುರುತಿಸಿ ಇಡೀ ನಾಡಿನಲ್ಲಿ ಪರಿಸರ ಸಂರಕ್ಷಣೆಗೆ ಕಂಕಣಬದ್ಧರಾಗೋಣ.

ಜಲ ಸಂರಕ್ಷಣೆ ಯಶೋಗಾಥೆಗಳು

ಕಳಸದ ಚೆಂಬು-ಗಾಂಧಿ: ನೀರೇ ಬಾರದ ನಲ್ಲಿಗಳು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರತೀಕ. ನಲ್ಲಿಗಳನ್ನು ಕೇವಲ ನೀರನ್ನು ಸಂಗ್ರಹಿಸಲು ಬಳಸುವುದು. ಉಳಿದೆಲ್ಲಾ ಸಮಯದಲ್ಲಿ ಕೇವಲ ಚೆಂಬನ್ನು ಬಳಸುವುದು ಪರಿಸರ ಸಂರಕ್ಷಣೆಗೆ ಅತ್ಯುತ್ತಮ ಯಶೋಗಾಥೆಯ ಆಯುಧ. ಕೃಷಿ ಪದ್ಧತಿಯಲ್ಲಿ ರಾಜ್ಯದಲ್ಲಿ ಸುಜಲ ಜಲಾನಯನ, ಜಲಸಂರಕ್ಷಣಾ ಯೋಜನೆ, ಕೆರೆ ಸಮುದಾಯ ಈಗ ಜಾರಿಯಲ್ಲಿರುವ ಯಶಸ್ವಿ ಪರಿಣಾಮಕಾರಿ ಯೋಜನೆಗಳು. ಇಸ್ರೊ ಸಂಸ್ಥೆ

ದೇಶದ ೧೮೫ ಜಿಲ್ಲೆಗಳಲ್ಲಿ ೧೯೮೫ರಿಂದ ಚಾಲ್ತಿಯಲ್ಲಿದ್ದು ಇದ
ಸುಸ್ಥಿರ ಅಭಿವೃದ್ಧಿ ಯೋಜನೆ ಜನ ಸಮುದಾಯ ಕೇಂದ್ರಿತ ಯಶೋ
ಗಾಥೆ. ಜಲಸಂಪನ್ಮೂಲ, ಜೀವವೈವಿಧ್ಯತೆ, ನೆಲದ ಬಳಕೆಗೆ

ಜನೆ ದೇಶಾದ್ಯಂತ ತಂತ್ರಜ್ಞಾನವನ್ನು ಎಲ್ಲೆಡೆ ನಿತ್ಯದ ಯನ್ನಾಗಿಸಿದೆ. ಒಂದು ರೀತಿಯಲ್ಲಿ ನೀರಿನ ಬವಣೆ ರ್ಪಕ ನಿರ್ವಹಣೆಯ ಕಾರಣವೇ ಆಗಿದೆ. ನೀರಿನ ಯಲ್ಲಿ, ಕೃಷಿ ಪದ್ಧತಿಗಳಲ್ಲಿ ಇಸ್ರೇಲ್‌ತಂತ್ರಜ್ಞಾನ ನಮ್ಮ ಗೆ ಪ್ರಸ್ತುತ.

ಮಹಾರಾಷ್ಟ್ರದ ಅಣ್ಣಾ ಹಜಾರೆ, ರಾಜಾಸ್ತಾನದ ಶ್ರೀ ಂದ್ರ ಸಿಂಗ್ ಇವರುಗಳ ಚಳುವಳಿ ಇಡೀ ಗ್ರಾಮ ಸ್ವಾವಲಂಬನೆಯತ್ತ ನಡೆಸಿದೆ ಮತ್ತು ಜಲಬವಣೆ ನ್ನಾಗಿಸಿವೆ. ನಮ್ಮ ರಾಜ್ಯದಲ್ಲಿ ಸುಮಾರು ೨ ಲಕ್ಷ ಬಾವಿಗಳು ವಿಫಲವಾಗಿವೆ. ಇವುಗಳ ಮೂಲಕ ಲವನ್ನು ಹೆಚ್ಚಿಸಲು ಪ್ರತಿ ಕೊಳವೆ ಬಾವಿಗೆ ಸಾವಿರ ಯಿಗಿಂತಲೂ ಕಡಿಮೆ ವೆಚ್ಚವಾಗುತ್ತದೆ. ಪ್ರತಿಮನೆ ಅನೇಕ ಬಗೆಯಲ್ಲಿ ನೀರಿನ ಸದ್ಬಳಕೆ ಸಾಧ್ಯ. ೨೦ ವರ್ಷಗಳಿಂದಲೂ ಕೊಳಚೆನೀರನ್ನು ಕುಡಿ ನೀರಿನ ಬದಲಾಗಿ ಅಂದರೆ ಕೊಳಚೆ ದಬ್ಬಲು, ಗಾರಿಕೆ ಮತ್ತು ಹವಾನಿಯಂತ್ರಣಕ್ಕೆ ಬಳಸಲಾ

ಹೀಗೆ ಅನೇಕ ದಶಕಗಳಿಂದ ಅನೇಕ ಬಗೆಯ ಯುವ ನೀರಿನ ಬದಲಾಗಿ ಬಳಕೆಗೆ ಇಸ್ರೊ, ಬಿಇ ಹೆಚ್‌ಎಂಟಿ, ಐಟಿಐ, ಮೈಕೊ ಮತ್ತಿತರ ಕೈಗಾರಿಕಾ ಗಳು ಕುಡಿಯುವ ನೀರನ್ನು ಹೊರತು ಪಡಿಸಿ ಲ್ಲ ಬಳಕೆಗೆ ಶುದ್ಧೀಕರಿಸದ ನೀರನ್ನು ಬಳಸುತ್ತಿವೆ. ಕೈಗಾರಿಕೆಗಳಲ್ಲಿ ಪರಿಸ್ಥಿತಿ ಇನ್ನೂ ಉತ್ತಮವಾಗ ದೆ. ಉದಾಹರಣೆಗೆ ಬೆಂಗಳೂರಿಗೆ ಪರ್ಯಾಯ ಅಭಿವೃದ್ಧಿಯಾಗುತ್ತಿರುವ ಮೈಸೂರು ಕೈಗಾರಿಕಾಭಿ ಗಮನಿಸೋಣ. ನಗರ ಪ್ರವೇಶಕ್ಕೆ ಹೊಂದಿ ಂತೆ ಸುಮಾರು ೫೦ ಕೈಗಾರಿಕೆಗಳಲ್ಲಿ ಇಂದಿಗೂ ಓಲರಷ್ಟು ಶುದ್ಧವಾದ ಕಾವೇರಿ ನೀರು ಬಳಕೆ

ಇಲ್ಲಿ ಮಳೆ ನೀರಿನ ಸಂಗ್ರಹಣೆ, ಕೊಳಚೆ ನೀರಿನ ಳಕೆ ಅತ್ಯಂತ ಅನಿವಾರ್ಯ, ಗೃಹಬಳಕೆಯಲ್ಲಿ ನ್ಯವಾಗಿ ಕುಡಿಯುವುದರ ಹೊರತಾಗಿ ಬಳಕೆಗೆ ಾದ ನೀರು ಪೋಲಾಗುತ್ತಿದೆ. ಬಟ್ಟೆ ಒಗೆದ ಕಕ್ಕಸ್ಸುಗಳಲ್ಲಿ ಕೊಳಚೆ ದಬ್ಬಲು ಬಳಸುವುದು ರ್ಯ. ಹಾಗೆಯೇ ನಲ್ಲಿಗಳನ್ನು ಕೇವಲ ನೀರು ಲು ಬಳಸಬೇಕಾಗಿದೆ.

ಇವತ್ತಿನ ದಿನ ಕೃಷಿಪದ್ಧತಿಯಲ್ಲಿ ಬಹುಪಾಲು ವ್ಯರ್ಥವಾಗುತ್ತಿದೆ. ವಿಶ್ವ ಸಂಸ್ಥೆಯ ಒಂದು ಅಧ್ಯ ಪ್ರಕಾರ ಇಡೀ ಭೂಮಿಯಲ್ಲಿ ಕೃಷಿ ಪದ್ಧತಿಗಳಲ್ಲಿ ಳಕೆ ಅತ್ಯಂತ ಪರಿಣಾಕಾರಿಯಾಗಬಲ್ಲದು. ಕೇವಲ ೧೫ ರಷ್ಟು ಕೃಷಿ ಪದ್ಧತಿಯಲ್ಲಿ ನೀರಿನ ಬಳಕೆ ಕೊಂಡರೆ, ಗೃಹ ಮತ್ತು ಕೈಗಾರಿಕೆಗಳ ಒಟ್ಟಾರೆ ಎರಡು ಪಟ್ಟು ಜಲ ಉಳಿತಾಯವಾಗಬಲ್ಲದು.

ಮುದಾಯದಲ್ಲಿ ಪರಿಸರಸಂರಕ್ಷಣೆ ಯಶಸ್ವಿಯಾ ವು ಸ್ಪಷ್ಟ ನೀತಿ ಸಂಹಿತೆಗಳು ಅಗತ್ಯ. ಅವುಗಳಲ್ಲಿ ದವುಗಳನ್ನು ಹೀಗೆ ಪಟ್ಟಿ ಮಾಡಬಹುದು.

ಟೈಮ್ಸ್ ಆಫ್ ಇಂಡಿಯಾ ೨೭.೫.೨೦೦೩

* ಪ್ರತಿ ವ್ಯಕ್ತಿ ಮತ್ತು ಸಮುದಾಯಕ್ಕೆ ಸಂಪನ್ಮೂ ೂಕ್ತ ಹಂಚಿಕೆಯಾಗಿ ಅವುಗಳ ನಿರ್ವಹಣೆಗೆ ವಕಾಶ ನೀಡಬೇಕು.

* ಮಾಹಿತಿ, ನೈಪುಣ್ಯ ಹಾಗೂ ತಂತ್ರಜ್ಞಾನಗಳ ು ನಿರಂತರವಾಗಿರಬೇಕು.

* ಸಂರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಭಾಗವಹಿಸು ವಿಕೆಯನ್ನು ತೀವ್ರಗೊಳಿಸಬೇಕು.

* ಕ್ರಿಯಾಶೀಲ ನಿರ್ವಹಣೆಗೆ ಸ್ಥಳೀಯ ಸಂಸ್ಥೆಗಳು ಮತ್ತು ಇಲಾಖೆಗಳನ್ನು ಉತ್ತಮಪಡಿಸಬೇಕು.

* ಸ್ಥಳೀಯ ಪರಿಸರಗಳನ್ನು ಉತ್ತಮವಾಗಿ ನಿರ್ವ ಹಿಸುವುದು ಎಲ್ಲಾ ಸಮುದಾಯಗಳ ಮೂಲ ಉದ್ದೇಶ ವಾಗಿರಬೇಕು.

* ಸಮುದಾಯಗಳ ಪರಿಸರ ನಿರ್ವಹಣಾ ಚಟುವ ಟಿಕೆಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ನೀಡ ಬೇಕು.

ಸರ್ಕಾರದ ಮಟ್ಟದಲ್ಲಿ ಒಂದು ಸ್ಪಷ್ಟ ಪರಿಸರ ನೀತಿ, ಕಾರ್ಯತಂತ್ರ ಮತ್ತು ಕಾರ್ಯಸೂಚಿ ರಾಜ್ಯದಲ್ಲಿ ಅವಶ್ಯಕ. ೨೦೦೬ ನೇ ಇಸವಿಯ ವಿಶ್ವ ಪರಿಸರ ದಿನದ ಶೀರ್ಷಿಕೆ ಮರುಭೂಮಿಗಳು ಸೃಷ್ಟಿಯಾಗುವುದನ್ನು ತಡೆಯುವುದಾಗಿದೆ. ನಮ್ಮ ಜೀವನ ಶೈಲಿಯಲ್ಲಿ ಶಕ್ತಿ ಮತ್ತು ವಸ್ತುಗಳ ಪರಿಸರ ದಿನಕ್ಕೆ ಪೂರಕ. ಕೃಷಿ ಸಮಾಜದಲ್ಲಿ ನೀರನ್ನು ನಿಲ್ಲಿಸಿ ಇಂಗಿಸುವುದು, ಜೀವ ವೈವಿಧ್ಯತೆ ಉಳಿಸಿಕೊಳ್ಳುವುದು, ಕಾರ್ಖಾನೆ ಮತ್ತು ಉದ್ಯಮಗಳಲ್ಲಿ ಮಾಲಿನ್ಯ ನಿವಾರಕ ಪರಿಸರ ಸ್ನೇಹಿ ತಂತ್ರಜ್ಞಾನ ಅನಿವಾರ್ಯ. ಪರಿಸರಕ್ಕೆ ಹಾನಿಕಾರಕವಲ್ಲದ ರೀತಿಯಲ್ಲಿ ಚಟುವಟಿಕೆ ಅಗತ್ಯ. ಕೃಷಿ ಕೈಗಾರಿಕೆ, ಸೇವಾ ಸೌಲಭ್ಯ ಮತ್ತು ನಗರಾಭಿವೃದ್ಧಿಯಲ್ಲಿ ಯಶೋಗಾಥೆಗಳ ಲಯವನ್ನು ಗುರುತಿಸಿ ಇಡೀ ನಾಡಿನಲ್ಲಿ ಪರಿಸರ ಸಂರಕ್ಷಣೆಗೆ ಕಂಕಣಬದ್ಧರಾಗೋಣ.

ಕಳೆದ ೩೦ ವರ್ಷಗಳಿಂದ ಸರಿಸುಮಾರು ೨೦೦೦ ಸ್ಥಳೀಯ ಸಂಸ್ಥೆಗಳು ತಮ್ಮ ಯಶೋಗಾಥೆಗಳನ್ನು ದಾಖಲಿಸಲು ಸಮರ್ಥವಾಗಿವೆ. ಉದಾಹರಣೆಗಳನ್ನು WWW.unchs. org and WWW.iclei.org ವೆಬ್‌ಸೈಟ್‌ಗಳನ್ನು ಗಮನಿಸಿ ವಿವರಗಳನ್ನು ಪಡೆಯಬಹುದಾಗಿದೆ.

ಘನತ್ಯಾಜ್ಯ ನಿರ್ವಹಣೆ ಯಶೋಗಾಥೆಗಳು

ಸರಿಸುಮಾರು ೧೯೭೦ ದಶಕದಿಂದ ಅಪಾರವಾದ ಸಮುದಾಯಮಟ್ಟದ ಕಸ ನಿರ್ವಹಣಾ ವ್ಯವಸ್ಥೆಗಳು ಯಶಸ್ವಿಯಾಗಿವೆ. ಇತ್ತೀಚಿನ "ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ನಿಯಮಗಳು ೨೦೦೦" ಇದಕ್ಕೆ ಕಾನೂನಿನ ಚೌಕಟ್ಟನ್ನು ನೀಡಿದೆ. ಮುಂಬರುವದಿನಗಳಲ್ಲಿ ದೇಶದ ೫೦೦೦ ಸ್ಥಳೀಯ ಸಂಸ್ಥೆಗಳಲ್ಲಿ ಕಸವನ್ನು ಮೂಲದಲ್ಲೆ ಬೇರ್ಪಡಿಸಿ ಗೊಬ್ಬರ ಮತ್ತು ಮರು ಬಳಕೆ ಮಾಡುವುದು ಸಮಯಬದ್ಧವೂ ಕಡ್ಡಾಯವೂ ಆಗಬೇಕಾಗಿದೆ. ಬೇರೆ ದೇಶದವರು ಅಸೂಯೆ ಪಡುವಷ್ಟು ಸೂರ್ಯನ ಶಾಖ ನಮ್ಮಲ್ಲಿದೆ. ಕೇವಲ ಕಸವನ್ನು ಮೂಲದಲ್ಲೆ ಬೇರ್ಪಡಿಸಿದರೆ ೧೦೦ ಕೇಜಿ ಹಸಿಕಸ ಸುಮಾರು ೪೦ ದಿನದೊಳಗೆ ೩೦ ಕೇಜಿ ಗೊಬ್ಬರವಾಗುತ್ತದೆ. ಇದಕ್ಕೆ ಪ್ರತಿ ಕೇಜಿ ಗೊಬ್ಬರ ೪ ರೂಗಳಿಂದ ೧೫ ರೂ ಗಳವರೆಗೆ ಮಾರಾಟವಾಗಬಲ್ಲದು.

ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ದೇಶಗಳಲ್ಲಿ ಚಾಲ್ತಿಯಲ್ಲಿರುವ ಘನತ್ಯಾಜ್ಯ ವಸ್ತುಗಳ ಸಮುದಾಯಮಟ್ಟದ ಯಶಸ್ವಿ ನಿರ್ವಹಣೆ ಯೋಶೋಗಾಥೆಗಳನ್ನು ವೆಬ್‌ಸೈಟು http: WWW.lboro.ac.uk/wedc ಯಲ್ಲಿ ನೋಡಬಹುದಾಗಿದೆ. ಕರ್ನಾಟಕದಲ್ಲಿ ೨೦೦೩ ರಿಂದ ಚಾಲ್ತಿಯಲ್ಲಿರುವ ನಿರ್ಮಲನಗರ ಯೋಜನೆಯಡಿ ೫೮ ಪಟ್ಟಣಗಳಲ್ಲಿ ಕಸವನ್ನು ಸೂಕ್ತವಾಗಿ ಬೇರ್ಪಡಿಸಿ, ಗೊಬ್ಬರ, ಮರುಬಳಕೆ ಮಾಡುವ ಯೋಜನೆಗಳು ಚಾಲ್ತಿಯಲ್ಲಿವೆ. ಅನೇಕ ತೊಡಕುಗಳ ನಡುವೆಯೂ ಇವು ಸಮುದಾಯಮಟ್ಟದಲ್ಲಿ

೫೦೦ ರಿಂದ ೧೦೦೦ ಮನೆಗಳ ಮಿತಿಯ ನಿವಾಸಿ ಸಂಘಗಳ ಮೂಲಕ ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ಕಸವನ್ನು ನಿರ್ವಹಿಸುವ ವ್ಯವಸ್ಥೆಯ ಭಾಗವಾಗಿವೆ. ಈ ವ್ಯವಸ್ಥೆಗಳು ತಮ್ಮ "ಲಯ"ವನ್ನು ಪಡೆದುಕೊಂಡು ಇಡೀ ದೇಶಕ್ಕೆ ಸಮು ದಾಯ ಮಟ್ಟದ ಯಶೋಗಾಥೆಗಳಾಗುವ ಸೂಚನೆಗಳು ಕಾಣುತ್ತಿವೆ.

ಪ್ರಕೃತಿವಿಕೋಪಗಳ ನಿರ್ವಹಣೆಯಲ್ಲಿ ಯಶೋಗಾಥೆಗಳು

ದೇಶದಲ್ಲಿ ಹಲವು ಭಾಗಗಳು ಭೂಕಂಪ, ಪ್ರವಾಹ, ಚಂಡಮಾರುತಗಳಿಂದ ಪ್ರತಿವರ್ಷ ತತ್ತರಿಸುತ್ತಿವೆ. ಇಲ್ಲಿ ಆಧುನಿಕ ತಂತ್ರಜ್ಞಾನದ ಜೊತೆಗೆ ವಿಫಲವಾದ ಕೇಂದ್ರೀಯ ಶಾಲೆಗಳ ೮-೧೦ ತರಗತಿಗಳ ಪಠ್ಯದಲ್ಲಿ ಈಗ ಪ್ರಕೃತಿ ವಿಕೋಪಗಳ ಅಧ್ಯಯನ ಕಡ್ಡಾಯವಾಗಿದೆ. ಹಾಗೆಯೇ, ಗ್ರಾಮೀಣ ಸಂಪನ್ಮೂಲ ಕೇಂದ್ರ, ಇಸ್ರೊ ಸಂಸ್ಥೆಯ ಮೂಲಕ ಸಹ ಈ ನಿಟ್ಟಿನಲ್ಲಿ ಪ್ರಾಯೋಗಿಕೆ ಪ್ರಯತ್ನ ನಡೆದಿದೆ. ಈ ಯೋಜನೆಯಡಿ ಪ್ರತಿ ಗ್ರಾಮದಲ್ಲಿ ದೂರ ಸಂವೇದಿ ಉಪಗ್ರಹ ಮಾಹಿತಿಯೊಟ್ಟಿಗೆ ಜನರ ಸಹ ಭಾಗಿತ್ವದಲ್ಲಿ ಗ್ರಾಮದ ನಿರ್ವಹಣಾ ಸಾಮಾರ್ಥ್ಯವನ್ನು, ಹೆಚ್ಚಿಸುವ ಈ ಪ್ರಯೋಗಗಳು ಈಗ ದಕ್ಷಿಣ ಭಾರತದಲ್ಲಿ ನಡೆಯುತ್ತಿವೆ. ಇಲ್ಲಿ ಗ್ರಾಮದ ಜಲ, ನೆಲ, ಜೀವವೈವಿಧ್ಯತೆ ಹಾಗೂ ಮಾಹಿತಿಗಳು ಸ್ಥಳೀಯವಾಗಿಯೇ ಲಭ್ಯವಾಗುತ್ತಿದೆ. ಅನೇಕ ಉದಾಹರಣೆಗಳನ್ನು www.isro.org ಯಲ್ಲಿ ಗಮನಿಸಿ ಪಡೆಯಬಹುದಾಗಿದೆ.

ಪ್ರತಿ ಜಿಲ್ಲೆಯಲ್ಲಿ ಈಗ ಪ್ರಕೃತಿ ವಿಕೋಪ ನಿರ್ವಹಣೆ ಯೋಜನೆ ಜಾರಿಯಲ್ಲಿದೆ. ಇಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಒಂದು ವಿಶಿಷ್ಟ ಯೋಜನೆ ರೂಪಿಸಿ ಅದನ್ನು ಸಮುದಾಯ ಮಟ್ಟದ ಯಶೋಗಾಥೆಯಾಗಿಸಬಹುದು. ಅದು, ಪ್ರತಿಯೊಂದು ಜಿಲ್ಲೆಯಲ್ಲಿ ವಿವಿಧ ಕೈಗಾರಿಕೆಗಳ ಅಪಘಾತ, ಆಘಾತ ಮತ್ತು ವಿಕೋಪಗಳ ನಿರ್ವಹಣೆ ವಿವರಗಳನ್ನು ಕಲೆಹಾಕಿ ಅವುಗಳನ್ನು ಸ್ಥಳೀಯ ಸಮುದಾಯಗಳ ಸಹಯೋಗದಿಂದ ಒಂದು ವಿಶಿಷ್ಟವಾದ ಸಮುದಾಯ ಕೇಂದ್ರಿತ ವಿಕೋಪ ನಿರ್ವಹಣೆ ವ್ಯವಸ್ಥೆಗಳನ್ನು ರೂಪಿಸಬಹುದಾಗಿದೆ. ಅತೀ ಕಡಿಮೆ ವೆಚ್ಚದ ಈ ಯೋಜನೆಯಲ್ಲಿ ಸಮುದಾಯಗಳಿಗೆ ತಮ್ಮ ಪರಿಸರವನ್ನು ಸಂರಕ್ಷಿಸಲು ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಬಹುದು. ಹಾಗೆಯೆ, ವಿಶಿಷ್ಟವಾದ, ಮೇಲೆ ಸೂಚಿಸಿದ ಸಮುದಾಯದ ನೀತಿ ಸಂಹಿತೆಯನ್ನು ಜಾರಿಗೊಳಿಸಬಹುದಾಗಿದೆ. ಅನುಷ್ಠಾನ ಅಗ್ನಿಶಾಮಕ, ಹೋಂಗಾರ್ಡ್ಸ್ ಸ್ಕೌಟ್ ಮತ್ತು ಗೈಡ್ಸ್, ಎನ್.ಎಸ್.ಎಸ್, ಎನ್.ಸಿ.ಸಿ, ನಿವಾಸಿ ಸಂಘಗಳು, ಸ್ತ್ರೀಶಕ್ತಿ ಗುಂಪುಗಳು ಹಾಗೂ ಪ್ರಕೃತಿ ವಿಕೋಪ ಜಿಲ್ಲಾ ಸಮಿತಿ ಮತ್ತು ಜಿಲ್ಲಾ ಪರಿಸರ ಪ್ರಾಧಿಕಾರದ ಜೊತೆ ಕೈಜೋಡಿಸಿದಲ್ಲಿ ಅತ್ಯಲ್ಪ ಸಮಯ ಮತ್ತು ವೆಚ್ಚದಲ್ಲಿ ವಿಕೋಪಗಳನ್ನು ಯಶಸ್ವಿಯಾಗಿ ನಿರ್ವಹಿಸಬಹುದಾಗಿದೆ.

ಪರಿಸರ ಆಘಾತ ಸಮೂಹ ಚಟುವಟಿಕೆ ಯಶೋಗಾಥೆ

'ಕಸ-ವ' ಯೋಜನೆ ಮಹಾಮಸ್ತಕಾಭಿಷೇಕ ೨೦೦೬ರ ಧಾರ್ಮಿಕ ವಿಧಿಯ ನಡುವೆ ಗಟ್ಟಿಯಾಗಿ ಉಳಿದ ಒಂದು ಸಮೂಹ ಚಟುವಟಿಕೆಯ ಯಶೋಗಾಥೆ. ಕನಿಷ್ಟ ಒಂದು ಗ್ರಾಂ "ಡಿ.ಡಿ.ಟಿ." ಅಥವಾ ಬ್ಲೀಚಿಂಗ್ ಪೌಡರ್ ಬಳಸದೆ ಸುಮಾರು ೩೦ ಲಕ್ಷ ಯಾತ್ರಿಗಳ ಸರಿಸುಮಾರು ೬೦ ಟನ್ ಕಸವನ್ನು ಪರಿಸರ ಪೂರಕವಾಗಿ ನಿರ್ವಹಿಸಿದ ಪರಿಸರ ಸ್ನೇಹಿ ಚಟುವಟಿಕೆ ಜೈನ ಮಠ ಶ್ರವಣಬೆಳಗೊಳ, ಹಿರಿಯ ಸರ್ಕಾರಿ ಅಧಿಕಾರಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಾಳಜಿ, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಕ್ರಿಯಾಶೀಲ ಶ್ರಮದಾನ ಹೀಗೆ ಸುಮಾರು ೬ ಸಾವಿರ ಜನರ ಪ್ರೀತಿಯ ಚಟುವಟಿಕೆಯಾಗಿ ಪರಿಸರ ಗುಣಮಟ್ಟ ಕಾಪಾಡುವಲ್ಲಿ ಯಶಸ್ವಿಯಾಯಿತು.

ಪ್ರಥಮ ಬಾರಿಗೆ ಸಂಶೋಧನಾ ಸಂಸ್ಥೆಗಳಾದ ಇಸ್ರೊ-ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿಗಳು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಜನಪ್ರಿಯ ವಿಜ್ಞಾನ ಚಟುವಟಿಕೆಗಳನ್ನು ಮಹಾಮಸ್ತಕಾಭಿಷೇಕ ಕಸ ನಿರ್ವಹಣೆ ಸಂದರ್ಭಕ್ಕೆ ಆಯ್ಕೆ ಮಾಡಿಕೊಂಡಿದ್ದವು. ತಾಲೂಕು ಪಂಚಾಯಿತಿಗಳಲ್ಲಿ ತಾಂತ್ರಿಕ ವಿಚಾರಗಳ ಸೃಷ್ಟಿ ಕಾರ್ಯಕ್ರಮಗಳು ತುಂಬಿದವು. ಪ್ರಪ್ರಥಮಬಾರಿಗೆ ಘನತ್ಯಾಜ್ಯ ನಿರ್ವಹಣಾ ನಿಯಮಗಳು '೨೦೦೦' ಅನ್ನು ಸಾಮೂಹಿಕ ಚಟುವಟಿಕೆಯಲ್ಲಿ ಜಾರಿಗೆ ತರಲಾಯಿತು.

ಈ ಸಮುದಾಯ ಕೇಂದ್ರಿತ ಕಸ ನಿರ್ವಹಣಾ ಯೋಜನೆಯಲ್ಲಿ ಅನೇಕ ಪ್ರಮುಖ ಅಂಶಗಳೂ ಕಂಡುಬಂದವು. ಅವುಗಳನ್ನು ಈ ಕೆಳಕಂಡ ರೀತಿ ಪಟ್ಟಿ ಮಾಡಬಹುದು.

* ಕಡಿಮೆ ದಿನಗಳಲ್ಲಿ ಅಪಾರವಾದ ಜನ ಸಂಖ್ಯೆ ಉತ್ಪಾದಿಸುವ ಘನತ್ಯಾಜ್ಯ ವಸ್ತುಗಳನ್ನೂ ಕೂಡಾ ವಿಶೇಷ ಯೋಜನಾ ವಿಧಾನಗಳಿಂದ ನಿರ್ವಹಿಸಲು ಸಾಧ್ಯವೆಂದು ಇಸ್ರೊ, ಭಾರತೀಯ ವಿಜ್ಞಾನ ಮಂದಿರ ಮತ್ತು ಸರ್ಕಾರದ ಸ್ಥಳೀಯ ಸಂಸ್ಥೆಗಳಾದ ತಾಲೂಕು ಗ್ರಾಮ ಪಂಚಾಯ್ತಿಗಳು ಸಾಬೀತು ಪಡಿಸಿದವು. ಜೈನಮಠ ಪೂರಕವಾ ಸ್ಪಂದಿಸಿತ್ತು.

* ಕಸವನ್ನು ಮೂಲದಲ್ಲೆ ಬೇರ್ಪಡಿಸುವ ನಿಟ್ಟಿ ಕಾಂಪೋಸ್ಟ ಆಗುವ ವಸ್ತುಗಳನ್ನು ಹಸಿರು ಡಬ್ಬ ಮರುಬಳಕೆಯ ವಸ್ತುಗಳನ್ನು ಬಿಳಿ ಡಬ್ಬದಲ್ಲಿ ಹಾಕ ಅನುಕೂಲವಾಗುವಂತೆ ಸುಮಾರು ೫೦೦ ಸಂಖ್ಯೆಯ ಬಳಸಲಾಯಿತು.

* ಪರಿಸರದ ಅರಿವು ಪ್ರಜ್ಞೆಯಾಗಿ ಯ ಯಾಗಲು ಒಂದು ವಿಶಿಷ್ಟ ಪರಿಸರ ಪ್ರಜ್ಞೆಯ ಶಿಕ್ಷಣವ ವಿನ್ಯಾಸಗೊಳಿಸಿ ದೃಶ್ಯ ಶ್ರವಣ, ಜಾಥ, ಸಂವಾದ ಮತ್ತಿ ತಂತ್ರಗಳ ಮೂಲಕ ವಿನ್ಯಾಸಗೊಳಿಸಿ ಬಳಸಲಾಗಿತ್ತು.

* ಒಬ್ಬ ಪ್ರವಾಸಿಯು ಕನಿಷ್ಟ ಒಂ ರೂಪಾಯಿಗಿಂತಲೂ ಕಡಿಮೆ ಖರ್ಚುಮಾಡಿ ಸ್ವ ಸುಂದರ ಶ್ರವಣಬೆಳಗೊಳದ ತಾತ್ವಿಕ ನಂಬಿಕೆಗೆ ಎ ಲ್ಲರೂ ಭಾಗೀದಾರರಾಗುವಂತೆ ವಿಶ್ವಾಸಕ್ಕೆ ತೆಗೆದುಕೊಂ ವೈಜ್ಞಾನಿಕ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ಅ ಷ್ಠಾನಗೊಳಿಸಲಾಗಿತ್ತು.

* ಜಾತ್ರೆ, ಹಬ್ಬ, ಹರಿದಿನಗಳು ಮತ್ತು ಉ ಗಳಲ್ಲಿ ಪರಿಸರ ಸ್ನೇಹಮಯ ಮೌಲ್ಯಗಳನ್ನು ಪ್ರಜ ಪಡಿಸಲು ಘನತ್ಯಾಜ್ಯ ವಸ್ತುಗಳ ನಿರ್ವಹಣಾ ಕಾ ಯನ್ನು ಯಶಸ್ವಿಯಾಗಿ ಬಳಸಲಾಯಿತು.

* ವ್ಯಕ್ತಿ ಸಮುದಾಯ ಮತ್ತು ಸಾಂಘಿಕ ಪರಿಸ್ಥಿ ಪೂರಕವಾಗುವ ಮಾಹಿತಿ ಜ್ಞಾನವನ್ನು ಬಳಸಿ ಉತ್ತಮ ಪರಿಸರ ಸಂರಕ್ಷಣೆ ಮಾಡಲು ಸಾಧ್ಯ ಹಾ ಈ ಮಾದರಿಯನ್ನು ಇಡೀ ನಾಡಿನಲ್ಲಿ ಯಶಸ್ವಿಯ ಅನುಷ್ಠಾನಗೊಳಿಸಲು ಅರ್ಹವೆಂದು ಮನಗಾಣಲಾಯಿ

* ಪ್ರಸ್ತುತ ಚಾಲ್ತಿಯಲ್ಲಿರುವ ನಿರ್ಮಲನ ಯೋಜನೆಯಿಂದ ಅಪಾರವಾದ ಪರಿಸರ ಶಿಕ್ಷಣ, ನಿ ಲಹಣಾ ಸಾಮರ್ಥ್ಯ ಹಾಗೂ ಸಮುದಾಯ ಕೇಂ ಪರಿಸರ ನಿರ್ವಹಣೆಗೆ ಪೂರಕಯೋಜನೆಗಳನ್ನು ವಿನ ಗೊಳಿಸಿ ಪ್ರಯೋಜನ ಪಡೆಯಲು ಸಹಕಾರಿಯಾಗಿ ಕರ್ನಾಟಕ ಸರ್ಕಾರ ತನ್ನ ಇಲಾಖೆಗಳಲ್ಲಿ ಸಮುಯ ಕಸ ನಿರ್ವಹಣಾ ನಿಯಮ ೨೦೦೦ ಅನುಷ್ಠಾ ಸಂಬಂಧಿಸಿದಂತೆ ವೈಜ್ಞಾನಿಕ ಮಾಹಿತಿಗಳನ್ನು ಬೆಸ ಸಮುದಾಯಮಟ್ಟದಲ್ಲಿ ಅನುಷ್ಠಾನಗೊಳಿಸಲು, ಅಲ್ಪಾ ಹಾಗೂ ದೀರ್ಘಾವಧಿ ಯೋಜನೆಯನ್ನು ವಿನ್ಯಾಸ ಗೊ ಸುವ ಅಗತ್ಯವೂ ಇದೆ.

ಪರಿಸರ ಪ್ರಜ್ಞೆ

ಸಮುದಾಯ ಮಟ್ಟದ ಪರಿಸರ ನಿರ್ವಹ ವ್ಯವಸ್ಥೆಗಳು ಅಪಾರ ಪ್ರಮಾಣದಲ್ಲಿ ಯಶೋಗಾ ಗಳಾಗಿದೆ. ಈ ಲಯವನ್ನು ಪರಿಸರ ಸಂರಕ್ಷಣೆಗೆ ಒ ವಿಶೇಷ ಬೆಳವಣಿಗೆಯೆಂದೇ ಪರಿಗಣಿಸಿ, ಕರ್ನಾಟಕ ರಾ ಮಾಲಿನ್ಯ ನಿಯಂತ್ರಣ ಮಂಡಲಿ ಪರಿಸರ ಸಂರಕ್ಷ ನಾಂದಿಯಾಗುವಂತಹ ಈ ನಿಟ್ಟಿನಲ್ಲಿ ಮುನ್ನಡೆ ಬೇಕಾಗಿದೆ.

ಪರಿಸರ ಸಂರಕ್ಷಣೆಯಲ್ಲಿ ತಿಳಿದುಕೊಳ್ಳುವ ಅರಿವು ಕ್ರಿಯಾಶೀಲವಾಗಿರುವುದು ವಿವಿಧ ಸಮುದಾ ಮಟ್ಟದ ಯಶೋಗಾಥೆಗಳು ಪರಿಸರ ಪ್ರಜ್ಞೆ ಮಾದರಿಯಾಗಿರುವುದು ಬಹುಶಃ ನಮ್ಮ ಪರಿಸರಗ ಮಟ್ಟ, ಜೀವನ ಗುಣಮಟ್ಟ ಕುಸಿತದ ನಡುವೆಯೇ ಆ ಕಿರಣ ಹಾಗೂ ಎಲ್ಲರಿಗೂ ದಾರಿದೀಪವಾಗುವ ವಿ ಉದಾಹರಣೆಗಳಾಗಿವೆ.

ಪಟ್ಟಿ ೧. ಗೃಹ ಬಳಕೆಯ ಪರಿಸರ ಸ್ನೇಹಮಯ ನೀರಿನ ಬಳಕೆ ಉದಾಹರಣೆಗಳು.

ಸಂ	ಚಟುವಟಿಕೆ	ಸಮಯ ಮತ್ತು ಬಳಸುವ ಪ್ರಮಾಣ	ಪರಿಸರ ಸ್ನೇಹಮಯಿ	ಪ್ರಮಾಣ	ಉಳಿತಾಯ
೧.	ಹಲ್ಲುಜ್ಜುವುದು	೫ ನಿಮಿಷ ೪೫ ಲೀಟರು	ಚೆಂಬಿನ ಬಳಕೆ	೦.೫ ಲೀಟರು	೪೪.೫ ಲೀಟರು
೨.	ಕೈತೊಳೆಯುವುದು	೩ ನಿಮಿಷ ೧೮ ಲೀಟರು	ತುಂಬಿದ ಪಾತ್ರೆ	೨.೦ ಲೀಟರು	೧೬ ಲೀಟರು
೩.	ಮುಖಕ್ಷೌರ	೨ ನಿಮಿಷ ೧೮ ಲೀಟರು	ಲೋಟದ ಬಳಕೆ	೦.೨೫ ಲೀಟರು	೧೭.೫ ಲೀಟರು
೪.	ಷವರ್ ಸ್ನಾನ	೧೦ ನಿಮಿಷ ೯೦ ಲೀಟರು	ಬಕೆಟ್ ಬಳಕೆ	೨೦ ಲೀಟರು	೭೦ ಲೀಟರು
೫.	ಕೊಳಚೆ ದಬ್ಬಲು	೧೫.೫ ಲೀಟರು ಸಂಗ್ರಾಹಕ	ಮಗ್ ಬಳಕೆ	೫ ಲೀಟರು	೮.೫ ಲೀಟರು
೬	ಗಿಡಕ್ಕೆ ನೀರು	೫ ನಿಮಿಷ ೧೨೦ ಲೀಟರು	ಸ್ಪ್ರಿಂಕ್ಲರ್	೫ ಲೀಟರು	೧೧೫ ಲೀಟರು
೭.	ನೆಲತೊಳೆಯಲು	೫ ನಿಮಿಷ ೨೦೦ ಲೀಟರು	ಒದ್ದೆಯಾದ ಬಟ್ಟೆ	೧೮ ಲೀಟರು	೧೮೨ ಲೀಟರು
೮.	ಕಾರನ್ನು ತೊಳೆಯಲು	೧೦ ನಿಮಿಷ ೪೦೦ ಲೀಟರು	ಒಟ್ಟು ಬಳಕೆ	೧೮ ಲೀಟರು	೩೮೨ ಲೀಟರು

ದಿಗಂಬರ ದಿಂಬ.

ಕಾವ್ಯ

ಮೆಳ,
ಕಾಡಂಚಿನ ಬೀಳು
ದಿಟ್ಟನೆ ಕೀರಾಡಿತ್ತು
ಅಡ್ಡೆ ದಾಲ
ಅಚ್ಚ 'ಕಾರಾಡು'
ಗೆಜ್ಜೆ ಕರಗ
ಆಸರಿಕೆ ಬ್ಯಾಸರಿಕೆ
ದೂರಿ, ದೂರೀ...... ಹಾಡು

ಅಂಕದ ಕಣ
ಹಾಲುಗಳಿನಿಗೆ ಅಂಬು
'ದೋಣಿ' ಗುಡ್ಡ
ಸುರುಹೊನ್ನೆ ರೈತ
ಕರಿಕಲ್ಲತೊರೆ ಹರಿದು
ಅಕ್ಕೆ ಹಾಸಿಗೆ
ನೆತ್ತಿಸುಳಿ ಕೂದಲು
ಗರಗರನೆ ತಿರುಗಿ

ಕೆಂಗಾಡು,
ಕಾಡುಗಲ್ಲ ಕಮರ
ಬಸವನ ಕಣಿವೆ
ಕಡಿವಾಣ ಕಿತ್ತ 'ಭಲ್ಲ'
ಇಮ್ಮಡಿನರ ನುಡಿದು
ಮೈರಿನೀಗಿ
ಒಡ ಮೂಡಿದ ಲಿಂಗ
ಗಡಗಡನೆ ನಡುಗಿತ್ತು
ಮುತ್ತಿನ ತೂಕದ
ಮೊಗ್ಗಕೊಟ್ಟು.

ಕಿರುಗೆಣ್ಣೆ, ಕೋಲ ದನಿ
ಆ ಕರಿಸಿಬ್ಬ ಗರತಿ ಮಾತಾಡಿ
ಮರದೊಳಗೆ ಮರಹುಟ್ಟಿ
'ಕಾಕೊ'ಡೆದು
ಹಟ್ಟಿ ಬಾಗಿಲಿಗೆ
ಕೊಂಬು ಬೇವಿನ ಸೊಪ್ಪು
ಸೋಲು, ಸೊಪ್ಪಿನ ಕೊನೆ
ದಗದಂಡ.

ಮೇಣುಗೊಪ್ಪೆ ಚೀಲ
ನೂರಾರು ಪದರು
'ಗಾಳಿ, ಗಾಳಿ'ಗೆ ಕೂಡಿ
'ಗಾಳಿಪುರ'ವಾಗಿ
ಮುಚ್ಚಿದ ಕಣ್ಣು
ಮುಗಿದ ಬಾಯಿ
ದಿಗಂಬರ ದಿಂಬ
ಹೊಡೆಗಾಯಿ, ಇಡಿಧೂಪ
'ಅಂದ್ಲ'ದ ಪಲ್ಲಕ್ಕಿಯೊಳಗೆ
'ಸ್ರವ' ಪೂಜೆ.

ಕಳ್ಳು ಬೆನ್ನಿಗೆ
'ಹೆಣೆಂಡೆ' ಕೂಳು
ಹುಳ ಮುಟ್ಟಲಿಲ್ಲ
ಯಾವುದೋ" ಇಡುವು
ಹೆಗಲಿಳಿವಿದ ಕೂಗು
ಮೂರ ದಿನದ ಲೇಸಿಗೆ

○ ಉಜ್ಜಜ್ಜೆ ರಾಜಣ್ಣ

ಮೀಸಲಾತಿ:
ಹೊಸ ಚಿಂತನೆಯ ಅವಶ್ಯಕತೆ

ಡಾ|| ಬಸವರಾಜ ಕಲ್ಲುಗುಡಿ

ಇತರೆ ಹಿಂದುಳಿದ ವರ್ಗಗಳಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಕಲ್ಪಿಸುವ ಕೇಂದ್ರ ಸರ್ಕಾರದ ಕ್ರಿಯೆಗೆ ವೈದ್ಯಕೀಯ ವಿದ್ಯಾರ್ಥಿಗಳು ಬಹುಪಾಲು, ದೆಹಲಿ ಮುಂತಾದ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಮುಷ್ಕರ ಹೂಡಿದ್ದು, ನಂತರ ಸುಪ್ರಿಂಕೋರ್ಟಿನ ಮುಂದೆ ಈ ವಿಚಾರವು ಬಂದು–ಮುಷ್ಕರ ಸ್ಥಗಿತಗೊಂಡಿದ್ದು ಈಗ ಇತಿಹಾಸದ ಭಾಗವಾಗಿದೆ. ಸಂವಿಧಾನದ ಕಲಮು ೧೫(೪) ರ ಅನ್ವಯ ೯೩ನೇ ನಿರ್ಣಯವು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಡುವುದನ್ನು ಸ್ಪಷ್ಟವಾಗಿ ರೂಪಿಸಿದ್ದು ಇದನ್ನು ಜಾರಿಗೊಳಿಸುವುದು ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಯಾವುದೇ ಆಡಳಿತ ಸಂಸ್ಥೆಯ ಕರ್ತವ್ಯ. ಸಂವಿಧಾನ ಬದ್ಧ ಈ ಹಕ್ಕನ್ನು ಪಡೆಯುವುದು ಹಿಂದುಳಿದ ವರ್ಗಗಳ ಹಕ್ಕು. ಇಂಥ ಹಕ್ಕನ್ನು ಜಾರಿ ಮಾಡಬಾರದು ಎನ್ನುವ ಅಭಿಪ್ರಾಯಗಳಾಗಲಿ, ನಿಲುವುಗಳಾಗಲೀ, ಮತ್ತು ಮುಷ್ಕರಗಳಾಗಲೀ ಸಂವಿಧಾನ ವಿರೋಧಿ ಆದ್ದರಿಂದ, ಕಾನೂನಿನ ಉಲ್ಲಂಘನೆಯೂ ಹೌದು.

ಸಂವಿಧಾನದಲ್ಲಿ ಇಂಥ ಹಕ್ಕು ವಿಧೇಯಕಗೊಂಡಾಗ ಶೈಕ್ಷಣಿಕ ಚಿಂತಕರಲ್ಲಾಗಲೀ ವಿದ್ಯಾರ್ಥಿಗಳಲ್ಲಾಗಲೀ ಚರ್ಚೆಯಾಗಲಿಲ್ಲ; ಚಳುವಳಿಗಳಾಗಲಿಲ್ಲ. ಆದರೆ ಅದು ಜಾರಿಗೊಳ್ಳುವ ಈ ಸಂದರ್ಭದಲ್ಲಿ ಮುಷ್ಕರಗಳು ಪ್ರಾರಂಭವಾದವು. ಈ ವಿದ್ಯಾರ್ಥಿಗಳು ಮತ್ತು ಕೆಲವು ಶೈಕ್ಷಣಿಕ ವಲಯರ ಚಿಂತಕರು ಪ್ರತಿಭೆ (Merit) ಊನಗೊಳ್ಳುವುದರ ಬಗ್ಗೆ ಆತಂಕಿತರಾದರು ಮುಷ್ಕರ ಬಿಸಿಯೇರಿದಾಗ ಕೇಂದ್ರ ಸರ್ಕಾರವು ಮೆರಿಟ್ ವಲಯದಲ್ಲಿ ಸೀಟುಗಳನ್ನು ಹೆಚ್ಚಿಸುವುದಾಗಿ ಹೇಳುತ್ತ ಮುಷ್ಕರವನ್ನು ತಣ್ಣಗಾಗಿಸಲು ಪ್ರಯತ್ನಿಸಿತು. ಚುನಾವಣೆಯ ಆಸುಪಾಸಿನಲ್ಲಿ ಮೀಸಲಾತಿಯ ಈ ಜಾ[...] ಗೊಳಿಸುವ ಮಾತನ್ನು ಮಂತ್ರಿಯಾದ ಶ್ರೀ ಅರ್ಜುನ್ ಸಿಂಗ್ ಅ[...] ಮಾಡುತ್ತಿದ್ದಾರೆಂಬ ಆರೋಪವು ಎದ್ದಿತು. ಈ ಎಲ್ಲ ಘಟನಾ[...] ಗಳನ್ನು ಅವಲೋಕಿಸಿದಾಗ ಮೂರು ಮುಖ್ಯ ಪ್ರಶ್ನೆಗಳು ಬಹುಮು[...] ವಾಗಿ ಎದುರು ನಿಲ್ಲುತ್ತವೆ.

(೧) ಮೆರಿಟ್ ಅನ್ನು ನಾವು ಹೇಗೆ ಗುರುತಿಸಿ ವ್ಯಾಖ್ಯಾ[...] ಸುತ್ತಿದ್ದೇವೆ?

(೨) ರಾಜಕಾರಣದಲ್ಲಿ ಜಾತಿಯು ವೋಟು ಗಳಿಕೆಯ ದಾ[...] ಯಾಗಿ ಇರುವುದನ್ನು ತಪ್ಪಿಸಲು ಸಾಧ್ಯವೇ?

(೩) ಅತಿ ಹಿಂದುಳಿದವರನ್ನು ಜಾತಿಯ ಜೊತೆಗೆ ಬೇ[...] ಮಾನ ದಂಡಗಳಿಂದ ಪರಿಣಾಮಕಾರಿಯಾಗಿ ರೂಪಿಸಲು ಸಾಧ್ಯವೇ[...]

ಮೆರಿಟ್‌ನ ಮಿಥ್

ಇಂದಿನ ಶಿಕ್ಷಣ ಪದ್ಧತಿಯಲ್ಲಿ ಪ್ರತಿಭೆಯನ್ನು ಹೇಗೆ ಅಳೆಯ[...] ಗುತ್ತಿದೆ ಎನ್ನುವುದನ್ನು ಕೊಂಚ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಪ್ರ[...] ಭೆಯ ಮಾಪನವು ಎಷ್ಟು ಭ್ರಮಾಧೀನವಾಗಿದೆ ಎನ್ನುವುದು ಗೊ[...] ಗುತ್ತದೆ. ಒಂದು, ಎರಡು ಅಂಕಗಳ ಪ್ರಶ್ನೆಗಳ ಹಾವಳಿಯಿಂದಾ[...] ಪರೀಕ್ಷೆ ಎನ್ನುವುದು ಪ್ರಾಥಮಿಕ ತರಗತಿಯಿಂದಲೇ ವಿಷಯದ 'ತಿ[...] ವಳಿಕೆ'ಯ ಬದಲು, 'ನೆನಪಿನ' ಅಂಗಳವಾಗಿದೆ. ಸಣ್ಣ ಮಕ್ಕಳು ತ[...] ತಲೆಕೂದಲನ್ನು ಜಗ್ಗಿ ಜಗ್ಗಿ ನೆನಪಿಸಿಕೊಳ್ಳಲು ಪ್ರಯತ್ನಿಸುತ್ತ[...] ಉನ್ನತ ವೃತ್ತಿ ಶಿಕ್ಷಣಕ್ಕೆ ಬೀಳುವ ಎಲ್ಲ ಮಕ್ಕಳೂ ಈ ಪಾಡ[...] ಅನುಭವಿಸಬೇಕಾಗಿದೆ. ಇಲ್ಲಿಯೂ ವೃತ್ತಿ ಶಿಕ್ಷಣ ಪ್ರದೇಶದ ರ್‍ಯಾಂಕಿ[...] ಗಳು ಒಂದೇ ಅಂಕಿಯ ಶೇಕಡಾಂಶಗಳ ಮೇಲೆ ನಿರ್ಧಾರವಾಗುತ್ತ[...]

ಇಂದಿನ ಶಿಕ್ಷಣ ಪದ್ಧತಿಯಲ್ಲಿ ಪ್ರತಿಭೆಯನ್ನು ಹೇಗೆ ಅಳೆಯಲಾಗುತ್ತಿದೆ ಎನ್ನುವುದನ್ನು ಕೊಂಚ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಪ್ರತಿಭೆಯ ಮಾಪನವು ಎಷ್ಟು ಭ್ರಮಾಧೀನವಾಗಿದೆ ಎನ್ನುವುದು ಗೊತ್ತಾಗುತ್ತದೆ. ಒಂದು, ಎರಡು ಅಂಕಗಳ ಪ್ರಶ್ನೆಗಳ ಹಾವಳಿಯಿಂದಾಗಿ ಪರೀಕ್ಷೆ ಎನ್ನುವುದು ಪ್ರಾಥಮಿಕ ತರಗತಿಯಿಂದಲೇ 'ತಿಳುವಳಿಕೆ'ಯ ಬದಲು, 'ನೆನಪಿನ' ಅಂಗಳವಾಗಿದೆ. ಸಣ್ಣ ಮಕ್ಕಳು ತಮ್ಮ ತಲೆಕೂದಲನ್ನು ಜಗ್ಗಿ ಜಗ್ಗಿ ನೆನಪಿಸಿಕೊಳ್ಳಲು ಪ್ರಯತ್ನಿಸುತ್ತವೆ. ಉನ್ನತ ವೃತ್ತಿ ಶಿಕ್ಷಣಕ್ಕೆ ಬೀಳುವ ಎಲ್ಲ ಮಕ್ಕಳೂ ಈ ಪಾಡನ್ನು ಅನುಭವಿಸಬೇಕಾಗಿದೆ. ಇಲ್ಲಿಯೂ ವೃತ್ತಿ ಶಿಕ್ಷಣ ಪ್ರದೇಶದ ರ್‍ಯಾಂಕಿಗ್‌ಗಳು ಒಂದೇ ಅಂಕಿಯ ಶೇಕಡಾಂಶಗಳ ಮೇಲೆ ನಿರ್ಧಾರವಾಗುತ್ತವೆ. ೯೮.೨ ಬಂದವನಿಗಿಂತ ೯೮.೩ ಬಂದವನು ಹೇಗೆ ಪ್ರತಿಭಾವಂತ, ಎಂದು ವಿವರಿಸುವ ಮಾನದಂಡಗಳು ನಮ್ಮ ಈ ಶಿಕ್ಷಣ ವ್ಯವಸ್ಥೆಯಲ್ಲಿ ಇಲ್ಲ. ಇದೊಂದು ದೊಡ್ಡ ವಿಪರ್ಯಾಸ.

ಮೀಸಲಾತಿ ಚರ್ಚೆ

ಬಂದವನಿಗಿಂತ ೯೮.೫ ಬಂದವನು ಹೇಗೆ ಪ್ರತಿ ತ. ಎಂದು ವಿವರಿಸುವ ಮಾನದಂಡಗಳು ನಮ್ಮ ಕ್ಷಣ ವ್ಯವಸ್ಥೆಯಲ್ಲಿ ಇಲ್ಲ. ವಿದ್ಯಾರ್ಥಿಯ ಆಸಕ್ತಿಗೆ ಕವಾಗಿ, ಮತ್ತು ಆಸಕ್ತಿಯನ್ನು ಪೂರೈಸುವ, ಬೆಳೆ ಶಿಕ್ಷಣ ಪರಿಸರ ಇಲ್ಲವಾಗಿ ಅಂಕಿ ಅಂಶಗಳ ತಾಂತ್ರಿ ಕ್ಯವರಮ ತೋರುತ್ತಿವೆ. ಇದೊಂದು ದೊಡ್ಡ ವಿಪ ಮತ್ತು ದುರಂತ.

ಅದೃಷ್ಟವಶಾತ್ ಕರ್ನಾಟಕ ರಾಜ್ಯದ ಶಾಲಾ ಶಿಕ್ಷಣ ಯಲ್ಲಿ 'ಪ್ರತಿಭೆ'ಗೆ ಸಂಬಂಧಿಸಿದ ಎಲೈಟ್ ಶಾಲೆಗಳ ಈಗ ಅಷ್ಟಿಲ್ಲ. ಒಂದೆರಡು ದಶಕಗಳ ಹಿಂದೆ ಶಾಲೆಗಳು ಈ ಬಗೆಯ ಗುತ್ತಿಗೆಗೆ ಹೆಸರುವಾಸಿ ದ್ದವು. ಈಗ ಜಿಲ್ಲಾ ತಾಲ್ಲೂಕುಗಳ ಮಟ್ಟದಲ್ಲಿನ ಳಿಂದಲೂ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳು ಸಂಖ್ಯೆಯಲ್ಲಿ ಇದ್ದಾರೆ ಕೇಂದ್ರಿಯ ಶಿಕ್ಷಣ ಪಠ್ಯ ಶಾಲೆಗಳು ಹಣವಂತರ ಶಾಲೆಗಳಾಗಿದ್ದು ವರ್ಗ ವನ್ನು ಹುಟ್ಟಿಸುವಲ್ಲಿ ಹಾಗೂ ಪ್ರಾದೇಶಿಕ ಸಂಸ್ಕೃತಿ ದೂರವಿಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರೂ ಳು ಸಂಖ್ಯೆಯಲ್ಲಿ ಕಡಿಮೆ ಇರುವುದರಿಂದ ಯು ಕೆಂಪು ಗೆರೆಯನ್ನು ಮುಟ್ಟಿಲ್ಲ. ವಾಸ್ತವವಾಗಿ ತವು ಮೈತಳೆದಿರುವುದು, ಪ್ರಾದೇಶಿಕ ಹಾಗೂ ಭಾಷೆಯ ಮಾಧ್ಯಮದಲ್ಲಿ ಬೋಧಿಸುತ್ತಿರವ ಶಾಲೆಗಳಲ್ಲಿ. ಆರ್ಥಿಕವಾಗಿ ಹಾಗೂ ಜಾತಿ ಲೂ ದುರ್ಬಲವಾಗಿರುವ ಸಮುದಾಯಕ್ಕೆ ವಿದ್ಯಾರ್ಥಿಗಳು ಇಲ್ಲಿ ಓದಲು ಬರುತ್ತಾರೆ. ಬಹುಪಾಲು ವಿದ್ಯಾರ್ಥಿಗಳು ಶಾಲಾಶಿಕ್ಷಣ ಸುವುದಿಲ್ಲ! ಪೂರೈಸಿದರೂ ಎರಡು ಸಮಸ್ಯೆಗಳು ಮುಂದೆ ಇರುತ್ತವೆ. ಒಂದು–ಮುಂದಿನ ಶಿಕ್ಷಣಕ್ಕೆ ಹಣದ ಕೊರತೆ. ಎರಡು–ಮಾತೃಭಾಷೆಯಲ್ಲಿ ಯನ ಮಾಡಿದ್ದುದರಿಂದ ಹುಟ್ಟುವ ಕೀಳರಿಮೆಯ ಅನೇಕ ಪ್ರತಿಭೆಗಳು ಕಮರಿಹೋಗುವುದೇ ಇಲ್ಲಿ. ನ ಅವಕಾಶ ಮತ್ತು ಸೌಲಭ್ಯಗಳಿಲ್ಲದ ಶಿಕ್ಷಣದ ಕ್ರಮದಲ್ಲಿ ಪ್ರತಿಭೆಯನ್ನು ಹೇಗೆ ಅಳೆಯುತ್ತೀರಿ?

ಪ್ರತಿಭೆಯನ್ನು ವ್ಯಾಖ್ಯಾನಿಸುತ್ತಿರುವ ವಿಪರ್ಯಾಸದ ಂದು ಮುಖ ಹೀಗಿದೆ: ಉನ್ನತ ಶಿಕ್ಷಣ ಹಾಗೂ ಕ್ಷಣವನ್ನು ಒದಗಿಸುವ ಸರ್ಕಾರಿ, ಅರೆಸರ್ಕಾರಿ ದ ಸಂಸ್ಥೆಗಳು ಬೇಡಿಕೆಯ ಸರಾಸರಿಗೆ ಹೋಲಿಸಿ ಕಡಿಮೆ ಸಂಖ್ಯೆಯಲ್ಲಿದ್ದು, ಖಾಸಗಿ ಹಾಗೂ ೀಜಿತ ಸಂಸ್ಥೆಗಳ ಸಂಖ್ಯೆ ಅಧಿಕವಾಗಿದೆ. ಇದ ಗಿ ಕಡಿಮೆ ಅಂಕ ಗಳಿಸಿಯೂ ಕ್ಯಾಪಿಟೇಶನ್ ಶುಲ್ಕ ಸೇರಿಕೊಳ್ಳುವ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಹಣವೇ ಪ್ರತಿಭೆಯಾಗಿ ಬಿಟ್ಟಿರುವ ಈ ವಾತಾವರಣ ವೈದ್ಯಕೀಯ ವಿದ್ಯಾರ್ಥಿಗಳ ಮುಷ್ಕರವು, ಸಮಸ್ಯೆಯ ತಪ್ಪಿಸುತ್ತಿದೆ. ಮುಷ್ಕರ ನಿರತ ವಿದ್ಯಾರ್ಥಿಗಳು ೀಶನ್ ಹಾವಳಿಯ 'ಪ್ರವೇಶ'ವನ್ನು ಯಾಕೆ ವಿರೋ ಲ್ಲಿ? ಜಾಗತಿಕ ಮಾರುಕಟ್ಟೆಯ ಬೇಡಿಕೆಯಿಂದಾಗಿ, ಕ್ಷಣವನ್ನು ಪಡೆದ ಸಂಖ್ಯೆಯಲ್ಲಿಯೂ ಹೆಚ್ಚಳವಾಗು ಅನಿವಾರ್ಯವಾಗಿರುವುದು ನಿಜ. ಆದರೆ ಈ ಕಟ್ಟೆಯ ಬೇಡಿಕೆಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತಿ ತರನ್ನೇ ಪೂರೈಸುತ್ತಿರುವ ಬಗ್ಗೆ ಅನೇಕ ಬಗೆಯ ಹಗಳು ಮೂಡುತ್ತವೆ.

ಇಂಥ ವಾತಾವರಣದಲ್ಲಿ ಶಿಕ್ಷಣಕ್ಕೆ ಸಂಬಂಧಿ ಬಲವಾದ ಹೊಡೆತ ಬೀಳುತ್ತಿರುವುದು ಆರ್ಥಿಕ ವಾಗಿ ದುರ್ಬಲರಾದ ಪರಿಶಿಷ್ಟ ಜಾತಿ/ವರ್ಗಗಳ ಸಮುದಾಯ, ಹಿಂದುಳಿದ ಜಾತಿಯ ಸಮುದಾಯಗಳು ಹಾಗೂ ಮುಸ್ಲಿಂ ಸಮುಗುದಾಯಗಳ ಮೇಲೆ. ಪ್ರಾಣಾಂತಿಕ ಹೊಡೆತ ಬೀಳುತ್ತಿರುವುದು ಹೆಣ್ಣು ಮಕ್ಕಳ ಮೇಲೆ. ಯಾವ ಜಾತಿ, ವರ್ಗ ಸಮುದಾಯವನ್ನು ತೆಗೆದುಕೊಂಡರೂ ಹೆಣ್ಣು ಬಾಲಕಿಯರ ಸಂಖ್ಯೆ ಅತ್ಯಂತ ಕನಿಷ್ಟ ಮಟ್ಟದ್ದಾಗಿದೆ.

ಹೀಗಾಗಿ ಅಸಮಾನ ಅವಕಾಶಗಳು, ಅಥವಾ ಅವಕಾಶವೇ ಇಲ್ಲದಂಥ ಇಂಥ ಸಂದರ್ಭದಲ್ಲಿ ಪ್ರತಿಭೆಯನ್ನು ಅಳೆಯುವ ಮಾನದಂಡಗಳು ವಿಭಿನ್ನವಾಗಬೇಕು.

ii. ರಾಜಕೀಯ ಮತ್ತು ಜಾತಿ ರಾಜಕಾರಣ

ಕಳೆದ ಎರಡು ದಶಕಗಳಿಂದ ರಾಜಕೀಯವು ಜಾತಿ ರಾಜಕಾರಣವನ್ನು ಚುನಾವಣೆಯಲ್ಲಿ ಒಂದು ಉಪಾಯವನ್ನಾಗಿ ಬಳಸುತ್ತ ಬಂದಿದೆ. ಉತ್ತರ ಭಾರತದಲ್ಲಿಯೂ ಇದು ಬಹುಮುಖ್ಯ ಅಸ್ತ್ರವಾಗಿ ಬಳಕೆಯಾಯಿತು. ಇದರಿಂದಾಗಿ ಇದುವರೆಗೆ ಪ್ರತಿನಿಧಿಗೊಳ್ಳದೇ ಇದ್ದ ದಲಿತ, ಹಿಂದುಳಿದ ವರ್ಗಗಳನ್ನು ಪ್ರತಿನಿಧಿಸುವ ನಾಯಕರುಗಳು ಮುಂದೆ ಬರುವಂತೆ ಆದದ್ದು ಒಂದು ಗಮನಾರ್ಹ ಸಂಗತಿ. ಆದರೆ ಕ್ರಮೇಣ ಇದು ಕೇವಲ ಓಟು ಗಳಿಕೆಯ ತಂತ್ರವಾಗುತ್ತ, ಶಿಕ್ಷಣ ಮತ್ತು ಉದ್ಯೋಯೋಗದ ಸವಲತ್ತುಗಳು ಕೇವಲ ಅಲ್ಪಸಂಖ್ಯಾತ ಮೇಲು ಪದರದ ವರ್ಗಗಳಿಗೆ ಮಾತ್ರ ಸೀಮಿತವಾಗುತ್ತ ಹೋಗಿರುವುದು ಒಂದು ದುರಂತವೇ ಆಗಿದೆ. ಓಟು ರಾಜಕಾರಣವನ್ನೂ ಮೀರಿ, ದಲಿತ ಸಮುದಾಯವನ್ನು ಒಳಗೊಂಡ ಹಾಗೆ ಅತ್ಯಂತ ದುರ್ಬಲರಿಗೆ ಶಿಕ್ಷಣ ಮತ್ತು ಉದ್ಯೋಗದ ಸವಲತ್ತುಗಳು ಸಿಗುವಂಥ ಮೀಸಲಾತಿಯ ವಿಧಾನವನ್ನು ರೂಪುಗೊಳಿಸುವ ಅಗತ್ಯ ಈಗ ತುರ್ತಾಗಿ ಆಗಬೇಕಾಗಿದೆ.

> **ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಲವಾದ ಹೊಡೆತ ಬೀಳುತ್ತಿರುವುದು ಆರ್ಥಿಕವಾಗಿ ದುರ್ಬಲರಾದ ಪರಿಶಿಷ್ಟ ಜಾತಿ/ವರ್ಗಗಳ ಸಮುದಾಯ, ಹಿಂದುಳಿದ ಜಾತಿಯ ಸಮುದಾಯಗಳು ಹಾಗೂ ಮುಸ್ಲಿಂ ಸಮುದಾಯಗಳ ಮೇಲೆ. ಪ್ರಾಣಾಂತಿಕ ಹೊಡೆತ ಬೀಳುತ್ತಿರುವುದು ಹೆಣ್ಣು ಮಕ್ಕಳ ಮೇಲೆ. ಯಾವ ಜಾತಿ, ವರ್ಗ ಸಮುದಾಯವನ್ನು ತೆಗೆದುಕೊಂಡರೂ ಹೆಣ್ಣು ಬಾಲಕಿಯರ ಸಂಖ್ಯೆ ಅತ್ಯಂತ ಕನಿಷ್ಟ ಮಟ್ಟದ್ದಾಗಿದೆ. ಹೀಗಾಗಿ ಅಸಮಾನ ಅವಕಾಶಗಳು, ಅಥವಾ ಅವಕಾಶವೇ ಇಲ್ಲದಂಥ ಇಂಥ ಸಂದರ್ಭದಲ್ಲಿ ಪ್ರತಿಭೆಯನ್ನು ಅಳೆಯುವ ಮಾನದಂಡಗಳು ವಿಭಿನ್ನವಾಗಬೇಕು.**

ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಮೀಸಲಾತಿಯ ಸೌಲಭ್ಯದ ಕಾರಣದಿಂದಾಗಿ ಪರಿಶಿಷ್ಟ ಜಾತಿ/ಪಂಗಡಗಳನ್ನು ಒಳಗೊಂಡಂತೆ ವಿಭಿನ್ನ ಹಿಂದುಳಿದ ಜಾತಿ ಸಮುದಾಯಕ್ಕೆ ಅವಕಾಶಗಳು ಸಾಧ್ಯವಾಗುವಂತೆ ಆಗಿರುವುದು ಇಲ್ಲಿನ ರಾಜಕಾರಣದ ಮುತ್ಸದಿನವ್ನನು ತೋರುತ್ತದೆ. ಪರಿಶಿಷ್ಟ ಜಾತಿ/ಪಂಗಡಗಳನ್ನು ಹೊರತುಪಡಿಸಿ, ಉಳಿದ ಜಾತಿ ಸಮುದಾಯಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಆದಾಯದ ಮಿತಿಯನ್ನು ಆಧರಿಸಿ, ಮೇಲು ವರ್ಗವನ್ನು ಮೀಸಲಾತಿಯಿಂದ ಬೇರ್ಪಡಿಸುವಂತೆ ಮಾಡಿರುವುದೂ ಸೂಕ್ಷ್ಮವಾದ ಚಿಂತನಯ ಪರಿಣಾಮವೇ ಆಗಿದೆ. ಇಷ್ಟೆಲ್ಲಾ ಆದರೂ, ಮೀಸಲಾತಿ ವಲಯದಲ್ಲೇ–ಅತ್ಯಂತ ದುರ್ಬಲರೂ, ಹಿಂದುಳಿದವರು, ಅವಕಾಶರಹಿತರೂ ಆದವರಿಗೆ ಮೀಸಲಾತಿ ಸಲಭ್ಯಗಳು ದೊರೆಯುತ್ತಿಲ್ಲವೆನ್ನುವುದು ವಾಸ್ತವ ಸಂಗತಿಯೇ ಆಗಿದೆ. ಅತ್ಯಂತ ಹಿಂದುಳಿದ ಪ್ರದೇಶದ, ಕೆಳಜಾತಿಗಳ, ಬಡ ಸಮುದಾಯದ ವಿದ್ಯಾರ್ಥಿಯೊಬ್ಬ ಮೀಸಲಾತಿ ಸೌಲಭ್ಯಗಳಿಂದ (ಅನೇಕ ರೀತಿಯ ಅಸಹಾಯಕತೆಗಳೇ ಕಾರಣವಾಗಿ) ವಂಚಿತನಾಗುತ್ತಾನೆ. ಅವಳ(ನ) ಶಿಕ್ಷಣವೇ ಮುರಿದು ಬೀಳುತ್ತದೆ. ಹಿಂದುಳಿದ ಜಾತಿಗಳು ಎಷ್ಟ ವಿಭಿನ್ನ ಮತ್ತು ಸಂಕೀರ್ಣವೆಂದರೆ, ಈ ಸಮುದಾಯಗಳಲ್ಲಿ ಸೌಲಭ್ಯವಂಚಿತ ದುರ್ಬಲ ಜಾತಿಗಳು ಯಾವುವು ಎಂದು ಗುರುತಿಸುವ ಕೆಲಸವು ಅಷ್ಟಿಷ್ಟು ನಡೆದಿದ್ದರೂ ಇನ್ನಷ್ಟು ವ್ಯಾಪಕವಾಗಿ ಆಗಬೇಕಾಗಿದೆ.

ಮೀಸಲಾತಿಯಲ್ಲಿ ಅತ್ಯಂತ ಹಿಂದುಳಿದವರನ್ನು ಗುರುತಿಸುವುದು ಮೀಸಲಾತಿಯನ್ನು ಅರ್ಥಪೂರ್ಣವನ್ನಾಗಿಸುವಲ್ಲಿ ಮಾಡವ ಒಂದು ಮುಖ್ಯ ಕೆಲಸ. ಜಾತಿಯನ್ನು ಒಳಗೊಂಡು–ಆದರೆ ಅದೊಂದೇ ಮುಖ್ಯವಾದ ನಿರ್ಧಾರಿತ ಅಂಶವಾಗದಂತೆ ಹಿಂದುಳೀದಿರುವಿಕೆಯನ್ನು ಗುರುತಿಸಲು ಈ ಕೆಳಗೆ ಗುರುತಿಸಲಾದ ಕೆಲವು ಮುಖ್ಯ ಅಂಶಗಳನ್ನು ಪರಿಗಣಿಸುವುದು ಅವಶ್ಯ ವೆನಿಸುತ್ತದೆ.

(೧) ವಿದ್ಯಾರ್ಥಿಯು ಸರ್ಕಾರಿ ಶಾಲೆಯಲ್ಲಿ ಓದಿದ್ದರೆ–ವಿಶೇಷ ಅಂಕಗಳನ್ನು ಸೇರಿಸುವುದು.

(೨) ವಿದ್ಯಾರ್ಥಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ (ಕರ್ನಾಟಕದಲ್ಲಿ, ಕನ್ನಡ) ಓದಿದ್ದರೆ–ಹೆಚ್ಚುವರಿ ಅಂಕಗಳನ್ನು ಸೇರಿಸುವುದು.

(೩) ವಿದ್ಯಾರ್ಥಿಯ ತಂದೆ/ತಾಯಿಗಳ ಉತ್ಪನ್ನವನ್ನು ಪರಿಗಣಿಸಿ ವಿಶೇಷ–ಅಂಕಗಳನ್ನು ಸೇರಿಸುವುದು. ಅತ್ಯಂತ ಕಡಿಮೆ ಉತ್ಪಾದನೆಯ ಕುಟುಂಬಕ್ಕೆ ಸೇರಿದ್ದರೆ ಹೆಚ್ಚುವರಿ ಅಂಕಗಳನ್ನು ಕೊಡುವುದು. ಉತ್ಪಾದನೆಯ ಆಧಾರದ ಮೇಲೆ ಎರಡು ಅಥವಾ ಮೂರು ವರ್ಗಗಳನ್ನು ಮಾಡಬಹುದಾಗಿದೆ.

(೪) ಹಿಂದುಳಿದ ಜಾತಿ ಸಮುದಾಯಗಳಲ್ಲಿ ಶಿಕ್ಷಣ! ಗಳಿಕೆ, ಕಸುಬು ಇವುಗಳ ಆಧಾರದ ಮೇಲೆ ಅತಿಯಾಗಿ ಹಿಂದುಳಿದಿರುವ ಸಮುದಯವನ್ನು ಗುರುತಿಸಿ ಆ ಸಮುದಾಯದ ವಿದ್ಯಾರ್ಥಿಗೆ ವಿಶೇಷ ಅಂಕಗಳನ್ನು ಸೇರಿಸುವ ವ್ಯವಸ್ಥೆ ಮಾಡುವುದು.

(೫) ಈ ಎಲ್ಲ ಮೇಲಿನ ನಾಲ್ಕು ಅಂಶಗಳ ಪರಿಗಣನೆಯಲ್ಲಿಯೂ ಗಂಡು ಮಗುವಿಗಿಂತ ಹೆಣ್ಣು ಮಗುವಿಗೆ

ಕೆಲವು ವಿಶೇಷ ಅಂಕಗಳ ಸೇರ್ಪಡೆಯಾಗುವಂತೆ ಅನುವು ಮಾಡುವುದು.

ಅತಿ ಹಿಂದುಳಿದ ವ್ಯಕ್ತಿ ಮತ್ತು ವರ್ಗಗಳನ್ನು ಮೀಸಲಾತಿ ಸೌಲಭ್ಯದೊಳಗೆ ತರುವ ಈ ಬಗೆಯ ವಿಚಾರವನ್ನು ಹಿಂದೂ ಪತ್ರಿಕೆಯಲ್ಲಿ (ಮೇ ೨೨-೨೩ ೨೦೦೬) ಪ್ರೊ॥ ಸತೀಶ್ ದೇಶಪಾಂಡೆ ಹಾಗೂ ಯೋಗೇಂದ್ರ ಯಾದವ್ ಅವರು ಎರಡು ಲೇಖನಗಳಲ್ಲಿ ಮಂಡಿಸಿದ್ದಾರೆ. ಉತ್ತರ ಭಾರತದ ಪರಿಸ್ಥಿತಿಗೆ ಅನುಗುಣವಾಗಿ ಮಂಡಿತವಾದ ಈ ಲೇಖನ ತಲೆಯೂ ದಕ್ಷಣ ಭಾರತದ ರಾಜ್ಯಗಳಿಗೂ ಅನ್ವಯವಾಗುವಂತೆ ಕೆಲವು ಅಂಶಗಳನ್ನು ಮಾರ್ಪಡಿಸಿ ಯೋಚನೆ ಮಾಡುವಂತೆ ಮಾಡುತ್ತದೆ.

ದಲಿತರಲ್ಲಿಯೂ ಅತಿ ಹಿಂದುಳಿದ ವರ್ಗವು ಮೀಸಲಾತಿಯ ವಲಯದೊಳಗೆ ಬಂದು ಸೇರಲು ಅನುವು ಮಾಡುವ ದೃಷ್ಟಿಯಿಂದಲೂ ಮೇಲಿನ ಕೆಲವು ಅಂಶಗಳನ್ನು ಮೀಸಲಾತಿಯ ಕಕ್ಷೆಯೊಳಗೆ ತಂದು ಸೇರಿಸಬಹುದಾಗಿದೆ.

ಮೀಸಲಾತಿಯು ಕೊನೆಗೂ ಅವಕಾಶವಿಲ್ಲದವರ, ಸೌಲಭ್ಯವಿಲ್ಲದವರು ಪಡೆಯುವ ಹಕ್ಕಾಬೇಕು ಆದರೆ ಒಂದು ರಾಷ್ಟ್ರವನ್ನು ಆಳುವ ಪ್ರಭುತ್ವದ ತಾತ್ವಿಕ ಚಿಂತನೆಯು ಎಲ್ಲರಿಗೂ ಸಮಾನ ಅವಕಾಶ ಮತ್ತು ಸೌಲಭ್ಯ ಸಿಗುವಂತೆ ಮಾಡಲೇಬೇಕೆನ್ನುವುದರ ಕಡೆಗೆ ಇರಬೇಕಾಗುತ್ತದೆ. ಈ ಐವತ್ತು ವರ್ಷಗಳ ಪ್ರಜಾಪ್ರಭುತ್ವದ ಆಡಳಿತದಲ್ಲಿ ಇಂಥ ವಾತಾವರಣವು ನಿರ್ಮಾಣವಾಗಿಲ್ಲ ಎನ್ನುವುದು ದುರದೃಷ್ಟ ಮಾತ್ರವಲ್ಲ ದುರಂತದ ಸಂಗತಿಯೂ ಆಗಿದೆ.

ಪ್ರಾಥಮಿಕ ನೆಲೆಯಿಂದ ಪ್ರೌಢಶಿಕ್ಷಣದ ವರೆಗೆ ಶಿಕ್ಷಣವು ಎಲ್ಲರಿಗೂ ಮತ್ತು ಸಮಾನವಾಗಿಯೂ ಇರಬೇಕಾಗಿರುವುದು ಪ್ರಜಾಪ್ರಭುತ್ವ ಆಡಳಿತದ ಮೊದಲ ಆದರ್ಶವಾಗಬೇಕು. ಆದರೆ ಬಂಡವಾಳದ ಹಿಡಿತ ಕ್ರಮೇಣ ಕೆಲವು ವರ್ಗಗಳ ಸೊತ್ತಾಗುತ್ತ, ಹಂಚಿಕೆಯಲ್ಲಿ ಇರುವ ಏರುಪೇರಿನಿಂದಾಗಿ ಬಡತನದ ರೇಖೆಯ ಕೆಳಗಿನ ಜನರು ಹೆಚ್ಚಾಗುತ್ತ. ಶಿಕ್ಷಣದಲ್ಲಿ ಸಮಾನತೆಯೂ ಮರೀಚಿಕೆಯಾಗಿದೆ.

ಪ್ರಜಾಪ್ರಭುತ್ವದ ಆಡಳಿತವೆನ್ನುವುದು ವಿಪರ್ಯಾಸವಾಗಿರುವ ಈ ದಿನಮಾನಗಳಲ್ಲಿ ಅದಕ್ಕೊಂದು ಅರ್ಥಪೂರ್ಣತೆ ಬರಬೇಕಾದಂತೆ ಮಾಡುವುದು ಆಳುವವರ ಕರ್ತವ್ಯವಾಗಿದೆ. ಈ ದೃಷ್ಟಿಯಿಂದಲಾದರೂ ಶಿಕ್ಷಣದಲ್ಲಿ ಮಾತೃಭಾಷೆ, ಸಮಾನ ಅವಕಾಶ ಸೌಲಭ್ಯಗಳು ಒದಗುವಂತೆ ಮಾಡಬೇಕಾದುದು ಇವರ ಕರ್ತವ್ಯ. ಆಗ ಮಾತ್ರ ಮೀಸಲಾತಿಯನ್ನು ಇಲ್ಲವಾಗಿಸುವ ಕಡೆಗೆ ಒಂದೊಂದೇ ಹೆಜ್ಜೆಯನ್ನು ಇಡಬಹುದು. ಇದು ಬೇಕಾಗಿರದ ರಾಜಕೀಯ ವಲಯವು ಒಡೆದು ಆಳುವ ನೀತಿಯನ್ನೇ ಸೂಕ್ಷ್ಮವಾಗಿ ಇನ್ನು ಅನಂತ ಕಾಲ ಮುಂದುವರಸಬಹುದು. ದುರ್ಲಾಭ ಪಡೆಯುವವರು ಹಲವು ಮಾರ್ಗಗಳನ್ನು ಹುಡುಕಿ ದುರ್ಬಲರನ್ನು ಯಥಾಸ್ಥಿತಿಯಲ್ಲೇ ಇಡಬಹುದು.

ಅಸಂಖ್ಯಾತ ಜಾತಿ ಸಮುದಾಯದ ವರ್ಗಗಳನ್ನು ಶಿಕ್ಷಣದ ಅಡಿಯಲ್ಲಿ ತರುವ ಮತ್ತು ಅಂಥ ಶಿಕ್ಷಣವನ್ನು ಅರ್ಥಪೂರ್ಣಗಳಿಸುವ ಕಾರ್ಯವನ್ನು ಸರ್ಕಾರಗಳು ಮಾಡಬೇಕಾದ ಜರೂರಿನ ಬಗ್ಗೆ ಶಿಕ್ಷಣ ತಜ್ಞರು ಅತೀವ ಒತ್ತಾಯ ಹೇರಬೇಕಾದ್ದು ಆದ್ಯ ಕರ್ತವ್ಯವಾಗಿದೆ. ಹೀಗೆ ವಿಶಾಲ ಸಮುದಾಯವನ್ನು ಈಗಿನ 'ಶಿಕ್ಷಣಕ್ರಮ'ದಲ್ಲಿ ಆಸಕ್ತಿ ತಳೆಯು ವಂತೆ ಮಾಡುವುದು ಅಸಾಧ್ಯವಾಗಬಲ್ಲುದು ಎಂಬ ಸಂದೇಹ ನನಗಿದೆ. ಏಕೆಂದರೆ ಈ ಶಿಕ್ಷಣಕ್ರಮವು ಪಾಶ್ಚಿಮಾತ್ಯ ಮಾದರಿಯ 'ಅಕ್ಷರಸ್ಥರ'ನ್ನಾಗಿ ಮಾಡುವ ಏಕೈಕ ಉದ್ದೇಶವನ್ನು ಹೊಂದಿರು ವುದು ಕೇವಲ ಅಕ್ಷರಸ್ಥನಾಗುವ ಈ ಯಾಂತ್ರಿಕ ಓದಿನ ಕ್ರಮವು ಅಸಂಖ್ಯಾತರನ್ನು ಅದರೊಳಗಿನ ಪರಕೀಯತೆ'ಯ ಕಾರಣ ದಿಂದಲೇ ದೂರ ಉಳಿಯುವಂತೆ ಮಾಡುತ್ತದೆ. ಅಥವಾ ಶಾಲಾ ಅವಧಿ ಮುಗಿಸಿ ಸ್ನಾತಕ ಪದವಿ ಮುಗಿಸಿದವರಲ್ಲಿ ಬಹುಪಾಲು ಮಂದಿ ತಕ್ಕ ಕೆಲಸವು ಸಿಕ್ಕಿದ ಸ್ಥಿತಿಗೆ ಸಿಲುಕುತ್ತಾರೆ. ವೃತ್ತಿ ಶಿಕ್ಷಣ ಪಡೆಯುವ ಮತ್ತು ಪಡೆದ ಬಹುಪಾಲು ವಿದ್ಯಾರ್ಥಿಗಳ ಗೋಳೂ ಇದೇ ಆಗಿದೆ. ಬದುಕಿನ, ಜೀವನ ಕ್ರಮಕ್ಕೆ ಅಸಂಗತವಾಗುವ ಈ ಶಿಕ್ಷಣ ಕ್ರಮದಲ್ಲಿ ಸೂಕ್ಷ್ಮಸ್ಥರದ, ಮೂಲ ಭೂತ ಸಂಶೋಧನೆಯ ಆಳಕ್ಕೆ ಇಳಿಯುವ ವಿದ್ಯಾರ್ಥಿಗಳು ಒಟ್ಟು ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ನಗಣ್ಯವೆನ್ನಿಸುವಷ್ಟು ಕಡಿಮೆ.

ಹೀಗಾಗಿ ಶಿಕ್ಷಣಕ್ರಮದ ವಿನ್ಯಾಸದಲ್ಲಿಯೇ ಮೂಲಭೂತ ಬದಲಾವಣೆಗಳನ್ನು ತರುವ ಅವಶ್ಯಕತೆಯೂ ಅನಿವಾರ್ಯ. ನಾವು ದುಕುತ್ತಿರುವ ಪರಿಸರ ಸಂಪನ್ಮೂಲಗಳನ್ನು ನಮ್ಮ ಬದುಕಿನ, ಚಟುವಟಿಕೆಯ, ಸಂವೇದನೆಯ ಭಾಗಗಳನ್ನಾಗಿ ಮಾಡಬೇಕಾದ ಜರೂರು ಶಿಕ್ಷಣ ಕ್ರಮಕ್ಕಾಗಬೇಕು. ಭಿನ್ನ ಭಿನ್ನ ಪ್ರಾದೇಶಿಕ ಪರಿಸರಗಳಿಗೆ ಬದುಕಿನ ಜೈವಿಕ ಕ್ರಮವನ್ನು ರೂಢಿಸುವ ಹಲವು ಸಂಕೀರ್ಣ ಮತ್ತು ವಿಭಿನ್ನ ಸೂಕ್ಷ್ಮತೆಗಳಿರುವೆ. ಇದು ಆಯಾ ಪರಿಸರದ ಭೌಗೋಳಿಕ ಪರಿಸರದ ಕಾರಣದಿಂದ ಸಂಕೀರ್ಣ ಸಂಸ್ಕೃತಿಗಳ ಭಾಗವಾಗಿಯೂ, ರೂಪುಗೊಂಡಿರುತ್ತವೆ. ಇಂಥದ್ದು ಆಹಾರ ಪದಾರ್ಥಗಳ ಸ್ವರೂಪದಿಂದ ಹಿಡಿದು, ಬೆಳೆಗಳ ವಿನ್ಯಾಸ ಕರಕುಶಲತೆಯ ಪ್ರಾವಿಣ್ಯತೆ–ಇವುಗಳಲ್ಲೆಲ್ಲ ಹರಡಿಕೊಂಡಿದೆ. ಪರಂಪರಾಗತವಾಗಿ ಬಂದ ಇಂಥ ಪ್ರಾವೀಣ್ಯತೆಯನ್ನೂ ಶಿಕ್ಷಣಕ್ರಮದಲ್ಲಿ ಅಳವಡಿಸಿ ಅಂಥವುಗಳ ಸ್ಥಿರತೆ ಮತ್ತು ಪ್ರಮಾಣ ಬದ್ಧ ತೆಗಳನ್ನು ವೃತ್ತಿಪರ ನೆಲೆಯಲ್ಲಯೇ ಅರಿವಿನ ಸೂಕ್ಷ್ಮತೆಗೆ ತರಬೇಕಾಗಿದೆ. ಇದು ಶಿಕ್ಷಣ ಪಡೆಯುವವನ ಆತ್ಮವಿಶ್ವಾ ಸಕ್ಕೂ, ಬದುಕಿನ ಪ್ರೀತಿಗೂ ಕಾರಣವಾಗುವುದಲ್ಲದೆ ಅವನು/ಳು ಶಿಕ್ಷಣದ ಸಾವ ಯವ ಸಂಬಂಧವನ್ನು ಅರಿಯುತ್ತಾನೆ/ಳೆ. ಇದರ ಇನ್ನೊಂದು ಮಹತ್ವ ಏನಾಗ ಬಹುದೆಂದರೆ, ಜಾಗತೀಕರಣಗೊಳ್ಳುತ್ತಿರುವ ಈ ಅಪಾಯದ ಸಂದರ್ಭದಲ್ಲಿ ಮನುಷ್ಯನೇ ಸರಕಾಗುತ್ತಿರುವ ಅಮಾನುಷ ನೆಲೆಗಳನ್ನು ಇದು ತಪ್ಪಿಸುತ್ತದೆ. ಎಷ್ಟೇ ಸಣ್ಣದಾದರೂ ಮನುಷ್ಯನ ಸ್ವಾತಂತ್ರವನ್ನೂ, ಬಿಡುಗಡೆಯನ್ನು ಇದು ಮಾಡಬಲ್ಲದು. ಅಷ್ಟೇ ಅಲ್ಲದೆ ಇನ್ನೊಂದು ಮುಖ್ಯ ಕಾರ್ಯವನ್ನು ಇಂಥ ಶಿಕ್ಷಣ ಮಾಡಬಲ್ಲದು. ಸಾಂಪ್ರದಾಯಕ ಉತ್ಪಾದನಾ ಚಟುವಟಿಕೆಗಳು, ಜಾತಿ ಶ್ರೇಣೀಕರಣದ ಕಾರಣದಿಂದ ಒಂದು ಬಗೆಯಲ್ಲಿ ಕೀಳರಿಮೆಯನ್ನು ಹುಟ್ಟಿಸುವಂಥ ಚಟುವಟಿಕೆಗಳೆಂಬ ಭಾವವನ್ನು ನಮ್ಮ ಆಧುನಿಕ ವಿದ್ಯಾಭ್ಯಾಸ ಪದ್ಧತಿ ಮೂಡಿಸಿ ಬಿಟ್ಟಿದೆ. ಆದರೆ ಇವುಗಳಿಗೆ ಶಿಕ್ಷಣಕ್ರಮದಲ್ಲಿ ಒಂದು ನಿರ್ದಿಷ್ಟ ಚೌಕಟ್ಟನ್ನು, ವೃತ್ತಿಪರತೆಯ ಸೂಕ್ಷ್ಮತೆಯನ್ನು ಒದಗಿಸಿಕೊಟ್ಟರೆ ಅವುಗಳಿಗೆ ಒದಗುವ ಅತ್ಯುನ್ನತ ನೆಲೆಯೇ ಬಹು ಮುಖ್ಯವಾದ ಪರಿವರ್ತನೆಯನ್ನು ಮನುಷ್ಯನ ಚಿಂತನೆಯಲ್ಲಿಯೇ ಮಾಡಲು ಸಾಧ್ಯ. ವೃತ್ತಿಪರವಾಗಿ ಬದುಕಲು ಹಲವು ನೆಲೆಗಳನ್ನು ಇದು ಆತ್ಮಸ್ಥೈರ್ಯದ ಮೂಲಕ ಕಲಿಸಿ ಕೊಡಬಲ್ಲುದು □



ಲೇಬಲ್ ಬುದ್ಧಿ ಜೀವಿ
ಪರಿಹಾರಕ್ಕೊಂದು ಕರುಳಿಲ್ಲದ
'ಸಂವಿಧಾನ'
'ಹಕ್ಕಿ'ಗಳಲ್ಲ
ಪಕ್ಕಾ' ಆರ್‌ಡಿಎಕ್ಸ್'ಗಳಾದಾಗ
ಭೋದಿ ವೃಕ್ಷದ ಬುಡ
ಉರುಳುತ್ತದೆ
ಬುದ್ಧ ಎದ್ದು ಹೋಗುತ್ತಾನೆ.



ಸಹ್ಯಾದ್ರಿ
ಕಣಿವೆ
ಕಂದರ
'ಇನ್ನೆಲ್ಲಿ ಸುಂದರ?
ಅಲ್ಲಿ
ಇರುವುದೆಲ್ಲಾ
ರಕ್ತದಲಿ
ಸಾರಿಸಿದ ನೆಲ!

○ ಟಿ.ಎಸ್. ರಾಜೇಂದ್ರ ಪ್ರಸಾದ್

ಮೀಸಲಾತಿ ಧಿಕ್ಕರಿಸುವ ಕಾಲ ಬರಲಿ

ಮೀಸಲಾತಿ ಕುರಿತು ಕಳೆದೆರಡು ತಿಂಗಳುಗ
ದೇಶವ್ಯಾಂತ ಬಹಳಷ್ಟು ಚರ್ಚೆ ನಡೆದಿದೆ. ಈ
ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಕುರಿತು ಪರ-
ಧಿ ಚಳುವಳಿಗಳಾದವು. ಸುಮಾರು ಹದಿನಾರು,
ಳ ಹಿಂದೆ ವಿ.ಪಿ. ಸಿಂಗ್ ಸರ್ಕಾರ ಹಿಂದುಳಿದ
ಗೆ ನೌಕರಿಯಲ್ಲಿ ಮೀಸಲಾತಿ ಘೋಷಿಸಿದಾಗ
ಮತ್ತು ಸುತ್ತಮುತ್ತಲಿನ ಪಟ್ಟಣಗಳ ವಿದ್ಯಾರ್ಥಿಗಳು
ದು ಪ್ರತಿಭಟಿಸಿದ್ದರು. ಈ ಬಾರಿ ಅರ್ಜುನ್
ಸರದಿ.

ಮೀಸಲಾತಿ ಸರಿ ಅಥವಾ ತಪ್ಪು ಈ ಕುರಿತು
ವ ಮೊದಲು ಮೀಸಲಾತಿ ಕುರಿತು ಶೇ. ಎಪ್ಪತ್ತ
ನರಲ್ಲಿರುವ ತಪ್ಪು ಕಲ್ಪನೆ ಬಗ್ಗೆ ಆಲೋಚಿಸೋಣ.
ಲಾತಿ" ಎಂಬ ಶಬ್ದ ಕಿವಿಗೆ ಬಿದ್ದೊಡನೆ ಬಹಳಷ್ಟ
ಮುಖ ಸಿಂಡರಿಸಿಕೊಂಡು "ಈ ಹರಿಜನ-ಗಿರಿಜ
ಷ್ಟು ಸೌಲಭ್ಯವಪ್ಪಾ" ಎನ್ನವುದನ್ನು ನಾನು ಕಿವಿ
ಕೇಳಿದ್ದೇನೆ. ಅವಿದ್ಯಾವಂತರ ಬಾಯಿಯಿಂದ ಈ
ಬಂದರೆ ಅಯ್ಯೋಪಾಪ ಎಂದು ಸುಮ್ಮನಿದ್ದು
ದು ವಿದ್ಯಾವಂತರೆನಿಸಿಕೊಂಡವರೂ ತಲೆಬುಡ
ದೆ ಗೋಣಗುವುದನ್ನು ಸಹಿಸಲು ಕಷ್ಟವಾಗುತ್ತದೆ.
ತ ರಾಷ್ಟ್ರವಾದ ನಮ್ಮ ದೇಶದಲ್ಲಿ ಜಾತಿ ಪದ್ಧತಿ
ವಿದೆ. ಇದನ್ನು ಮೇಲ್ಜಾತಿಯವರು ಕೆಳಜಾತಿ
ಎಲ್ಲರೂ ಒಳಗೊಳಗೆ ಒಪ್ಪಿಕೊಳ್ಳುತ್ತಾರೆ. ಜಾತಿ
ಬೇಕು ಎನ್ನುವ ಒಂದು ದೊಡ್ಡವರ್ಗವೇ ಇದೆ.
ಹೆಚ್ಚಿನ ವಿವರಣೆ ಅನಗತ್ಯ.

ದರೆ ಎಸ್ಸಿ.ಎಸ್ಟಿ. ಗಳಲ್ಲದೆ "ಓ.ಬಿ.ಸಿ." ಎಂಬ
ದು ವರ್ಗವಿದೆ. OBC. ಗಳಿಗೆ ಮೀಸಲಾತಿ
ಕುರಿತು ಪರ-ವಿರೋಧಿ ಗಲಾಟೆಗಳಾಗುತ್ತಿವೆ
ನಿಷ್ಠ ಜ್ಞಾನವೂ ಇಲ್ಲದೆ ಮಾತನಾಡುವುದೆಂದರೆ
ಂದೆ ಏನೋ ದುರುದ್ಧೇಶವಿದೆ ಎಂದು ತಿಳಿಯ
ತ್ತದೆ. ಒಬ್ಬರ ಮೇಲೊಬ್ಬರನ್ನು "ಎತ್ತಿ ಕಟ್ಟುವ"
ರ್ಯದಲ್ಲಿ ತೊಡಗಿರುವ ಒಂದು ವರ್ಗ ಅವಕಾಶ
ಈ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿಕೊಂಡು
-ಅನಾಧಿಕಾಲದಿಂದ. ಕೆಟ್ಟ ಅಭಿಪ್ರಾಯವನ್ನು
ಮಾಡಲು ಅವರ ಕೈಯಲ್ಲಿ ಮಾಧ್ಯಮವಿದೆ.
ಮಹಾಜನ್ ಅವರ ಮಗನನ್ನು "ಯುವ
ನನ್ನಾಗಿ ಬಿಂಬಿಸಿದ ಜನ ರಾತ್ರಿ ಬೆಳಗಾಗುವುದ
ಆತನನ್ನು "ಖಳನಾಯಕ"ನನ್ನಾಗಿಸಲಿಲ್ಲವೆ. ತಮ್ಮ
ನೇರಕ್ಕಿದ್ದರೆ ಎಲ್ಲವೂ ಸರಿ ಇಲ್ಲವಾದರೆ ಎಲ್ಲವೂ

ನ್ನು ಮೀಸಲಾತಿ ವಿಚಾರ. ಈ ದೇಶಕ್ಕೆ
ಲಭಿಸಿದ ನಂತರ ಕಾಂಗ್ರೆಸ್ ಸರಕಾರ ಓಟಿನ
ದ "ಮೀಸಲಾತಿ ಪದ್ಧತಿ"ಯನ್ನು ಅನುಷ್ಠಾನ
. ಇದು ಅನೇಕರು ನಂಬಿರುವ ಸಂಗತಿ ಸತ್ಯ
ಏನು? ಹತ್ತೊಂಭತ್ತನೇ ಶತಮಾನದ ಮಧ್ಯಭಾಗ
ಟೀಷರೇ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ
ಒಂದು ಭಾಗ ಮೀಸಲಾತಿ ಜಾರಿಗೊಳಿಸಿದ್ದರು
ಹೇಗೆ ಪ್ರಚುರ ಪಡಿಸಬಹುದು? ಇದು ಸತ್ಯ.
ಆದರೆ ಸತ್ಯ ಎಂದು ಎಷ್ಟ ಜನರಿಗೆ ಹೇಳಬಹುದು.
ಹೇಳುವವರು ಯಾರು? ೧೯೨೧ ರಲ್ಲಿ ಬ್ರಿಟೀಷರು ಜಾರಿ
ಗೊಳಸಿದ "ಮೀಸಲಾತಿ"ಯ ಲಾಭ ಪಡೆದವರು ಬ್ರಾಹ್ಮ
ಣರು ಈಗ ವಿರೋಧಿಸುತ್ತಿರುವವರೂ ಅವರೇ! ಕೆಲವು
ವರ್ಷಗಳ ಹಿಂದೆ ಗುಜಾರಾತಿನಲ್ಲಿ ನಡೆದ ಮೀಸಲಾತಿ
ವಿರೋಧಿ ಚಳವಳಿಗೆ ಕುಮ್ಮಕ್ಕು ನೀಡಿದವರ್ಯಾರು?

> ಮೀಸಲಾತಿ ಸರಿ ಅಥವಾ ತಪ್ಪು ಈ ಕುರಿತು ಚರ್ಚಿಸುವ ಮೊದಲು ಮೀಸಲಾತಿ ಕುರಿತು ಶೇ. ಎಪ್ಪತ್ತರಷ್ಟು ಜನರಲ್ಲಿರುವ ತಪ್ಪು ಕಲ್ಪನೆ ಬಗ್ಗೆ ಆಲೋಚಿಸೋಣ. "ಮೀಸಲಾತಿ" ಎಂಬ ಶಬ್ದ ಕಿವಿಗೆ ಬಿದ್ದೊಡನೆ ಬಹಳಷ್ಟ ಮಂದಿ ಮುಖ ಸಿಂಡರಿಸಿಕೊಂಡು "ಈ ಹರಿಜನ-ಗಿರಿಜನರಿಗೆ ಎಷ್ಟು ಸೌಲಭ್ಯವಪ್ಪಾ" ಎನ್ನವುದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಅವಿದ್ಯಾವಂತರ ಬಾಯಿಯಿಂದ ಈ ಮಾತು ಬಂದರೆ ಅಯ್ಯೋಪಾಪ ಎಂದು ಸುಮ್ಮನಿದ್ದು ಬಿಡಬಹುದು ವಿದ್ಯಾವಂತರೆನಿಸಿಕೊಂಡವರೂ ತಲೆಬುಡ ಗೊತ್ತಿಲ್ಲದೆ ಗೋಣಗುವುದನ್ನು ಸಹಿಸಲು ಕಷ್ಟವಾಗುತ್ತದೆ. ಜಾತ್ಯತೀತ ರಾಷ್ಟ್ರವಾದ ನಮ್ಮ ದೇಶದಲ್ಲಿ ಜಾತಿ ಪದ್ಧತಿ ಜೀವಂತವಿದೆ. ಇದನ್ನು ಮೇಲ್ಜಾತಿಯವರು ಕೆಳಜಾತಿಯವರು ಎಲ್ಲರೂ ಒಳಗೊಳಗೆ ಒಪ್ಪಿಕೊಳ್ಳುತ್ತಾರೆ. ಜಾತಿಪದ್ಧತಿ ಬೇಕು ಎನ್ನುವ ಒಂದು ದೊಡ್ಡವರ್ಗವೇ ಇದೆ.

ದಕ್ಷಿಣ ಭಾರತದಲ್ಲಿ ಪ್ರಮುಖವಾಗಿ ಆಂಧ್ರ, ಕೇರಳ ತಮಿಳು ನಾಡು, ಕರ್ನಾಟಕ ರಾಜ್ಯಗಳಲ್ಲಿ ೧೯೪೭ ಕ್ಕೂ ಮೊದಲೇ ಮೀಸಲಾತಿ ಪದ್ಧತಿ ಜಾರಿಯಲ್ಲಿತ್ತು. ತಮಿಳು ನಾಡಿನಲ್ಲಿ ಶೇ. ೬೯, ಕೇರಳದಲ್ಲಿ ಶೇಕಡಾ ೫೦, ಆಂಧ್ರದಲ್ಲಿ ಶೇ. ೪೯.೫ ರಷ್ಟು ಜಾರಿಯಲ್ಲಿವೆ. ಸಾಮಾಜಿಕ ಸುಧಾರಣೆಗಳ ಕುರಿತಂತೆ ಉತ್ತರ ಭಾರತದ ನಿಲುವು ವಿಚಿತ್ರವೆನಿಸುತ್ತದೆ. ರಾಷ್ಟ್ರ ಜೀವನದ ಮುಖ್ಯವಾಹಿನಿಗೆ ಕೆಳ ವರ್ಗದ ಜನ ಬರಬಾರದೆಂಬ ನಿಲುವು ಇವರದ್ದೇನೋ ಎನಿಸುತ್ತದೆ. ಮಂಡಲ್ ವರದಿಯನ್ನು ಯಥಾವತ್ ಜಾರಿಗೊಳಿಸದಿರುವುದು ಇಂದಿನ ಎಲ್ಲ ಸಮಸ್ಯೆಗಳಿಗೆ ಕಾರಣವಿರಬಹುದೆಂದು ಅನೇಕರು ದೂರುತ್ತಾರೆ. ಇದು ಸತ್ಯವೇನೋ ಎಂಬ ಸಂಶಯ ಉಂಟಾಗತೊಡಗಿದೆ. ಕಾಲಕ್ರಮೇಣ "ದಲಿತ ಇಂಡಿಯಾ-ದಲಿತೇತರ ಇಂಡಿಯಾ" ಎಂದು ದೇಶವನ್ನು ಒಡೆಯುವ ಕುರಿತೂ ಪಟ್ಟಭದ್ರ ಹಿತಾಸಕ್ತಿಗಳು ಯೋಚಿಸಿತೊಡಗಿದರೆ ಆಶ್ಚರ್ಯವಿಲ್ಲ. ಇದಕ್ಕೊಂದು ಶಾಶ್ವತ ಪರಿಹಾರವನ್ನು ಈ ನಾಡಿನ ಪ್ರಜ್ಞಾವಂತ ಜನ ಕಂಡು ಹಿಡಿಯಬೇಕಾಗಿದೆ.

ಉನ್ನತ ಶಿಕ್ಷಣದಲ್ಲಿ ಮೀಸಲಾತಿ ವ್ಯವಸ್ಥೆ ಬೇಡ ಎನ್ನುವ ಕೂಗಿನ ಹಿಂದೆ ಕಾಣದ ಕೈಗಳ ಕೈವಾಡವಿರುವುದರಲ್ಲಿ ಎರಡು ಮಾತಿಲ್ಲ. ಕೆಳವರ್ಗದ ಪ್ರತಿಭಾವಂತರನ್ನು ಈಗಾಗಲೇ ಅಸ್ಪೃಶ್ಯರಂತೆ ಕಾಣಲಾಗುತ್ತಿದೆ. ಉನ್ನತ ಸ್ಥಾನದಲ್ಲಿರುವವರನ್ನು "ಆತ ಯಾವ ಜಾತಿಯವನು" ಎಂದೇ ಪ್ರಶ್ನಿಸಲಾಗುತ್ತಿದೆ-ಗುಟ್ಟಾಗಿ You can not respect a person to see eye to eye with You When you are looking down upon him ಈ ಗಾದೆ ಮಾತು ಎಷ್ಟೊಂದು ಅರ್ಥಪೂರ್ಣ. ಮನುಷ್ಯನನ್ನು ಮನುಷ್ಯನಂತೆ ಕಾಣಲಾಗದ ವ್ಯವಸ್ಥೆ ಇರುವ ನಮ್ಮದು ನಾಗರಿಕ ಸಮಾಜವೆ? ಬಹುಶಃ ಈ ಕಾರಣಕ್ಕಾಗಿಯೇ ದಿ. ಬಸವಲಿಂಗಪ್ಪನವರು ತಮ್ಮನ್ನು ಕಾಣಲು ಬರುತ್ತಿದ್ದ ವಿದ್ಯಾರ್ಥಿಗಳಿಗೆ "I am in no way less tham anybody ಎನ್ನುತ್ತ ಮುನ್ನುಗ್ಗುವ ಪ್ರವೃತ್ತಿಯನ್ನು ಮೈಗೂಡಿಸಿಕೊಳ್ಳಿ ಎನ್ನುತ್ತಿದ್ದರೇನೊ ಎನಿಸುತ್ತದೆ.

ಎಳೆಯ ಪ್ರತಿಭೆಗಳನ್ನು ಗುರುತಿಸಿ ಅವರಲ್ಲಡಗಿರುವ ಸುಪ್ತ ಪ್ರತಿಭೆ ಪ್ರಕಾಶಿಸುವಂತಾಗಲು ಅವರಿಗೆ ಅವಶ್ಯವಿರುವ ಪ್ರೋತ್ಸಾಹವನ್ನು ನೀಡಲು ಸಂಸ್ಥೆಯೊಂದನ್ನು ಸ್ಥಾಪಿಸುವಂತಾಗ ಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಅವರಿಗಿರುವ ಅಡಚಣೆಗಳನ್ನು ನೀಗಿಸಬೇಕು ಉಚಿತ ಊಟ ವಸತಿ ಸೌಲಭ್ಯ ಕಲ್ಪಿಸಿ ಸೂಕ್ತ ತರಬೇತಿ ನೀಡುವಂತಾಗಬೇಕು. ಇದಕ್ಕಾಗಿ ಸರಕಾರದ ನೆರವನ್ನು ನಿರೀಕ್ಷಿಸದೆ ಆರ್ಥಿಕವಾಗಿ ಬಲಿಷ್ಠರಾಗಿರುವವರನ್ನು ಕಂಡು ಅವರ ಸಹಾಯದೊಂದಿಗೆ ಸಂಸ್ಥೆ ಕಾರ್ಯನ್ಮುಖವಾಗಬೇಕು. ಇದಕ್ಕೆ ಶುದ್ಧ ಹಸ್ತದ ಪ್ರಾಮಾಣಿಕ ಜನರು ದೃಢ ಸಂಕಲ್ಪ ಮಾಡಬೇಕು. ಮೀಸಲಾತಿಯ 'ಕೃಪೆ'ಯಿಲ್ಲದೆ ಬದುಕನ್ನು ರೂಪಿಸಿಕೊಳ್ಳಲು ಸೂಕ್ತ ಅವಕಾಶ ಕಲ್ಪಿಸುವಂತಾಗಬೇಕು. ಸರಕಾರಿ ಸೇವೆಯಲ್ಲಿದ್ದು ನಿವೃತ್ತರಾಗುವ ಉನ್ನತ ಅಧಿಕಾರಿಗಳು ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚಿಸಬೇಕು. ಪದವಿಪೂರ್ವ ಶಿಕ್ಷಣ ಮುಗಿಸಿದ ಪ್ರತಿಭಾವಂತ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಗುರುತಿಸಿ ಕೊನೆ ಪಕ್ಷ ಇಬ್ಬರನ್ನು 'ದತ್ತು' ತೆಗೆದುಕೊಂಡು ಪ್ರೋತ್ಸಾಹಿಸಿದರೂ ಪುಣ್ಯಕಟ್ಟಿಕೊಂಡಂತಾಗುತ್ತದೆ.

ಮೀಸಲಾತಿ ಚರ್ಚೆ

❍ ಡಿ.ಎಂ. ಚಿಣ್ಣಪ್ಪ

ಶ್ರೇಷ್ಠತೆ ಒಳಗೆ ಅಪರಿಮಿತ ದ್ವೇಷ

ಜಾತಿ ಜಾತಿಗಳ ಮಧ್ಯೆ ಅಂತರ ಕಾಯ್ದುಕೊಳ್ಳುವ ಪರಂಪರಾಗತ ಜಾತೀಯತೆಯ ಮನೋ ವಿಕಾರವನ್ನೇ ಶ್ರೇಷ್ಠತೆಯೆಂದು ಪರಿಗಣಿಸುವುದು, ಯಾವುದು ದುಷ್ಟತನವೋ, ಕ್ರೌರ್ಯವೋ ಅಂಥಹುಗಳಿಗೆ ಶ್ರೇಷ್ಠತೆಯ ಪಟ್ಟ ಕಟ್ಟುವುದು ಈ ಶ್ರೇಷ್ಠತೆಯ ವ್ಯಸನಿಗಳಿಂದ ನಿರಂತರವಾಗಿ ನೆಡೆದುಕೊಂಡು ಬರುತ್ತಲೇ ಇದೆ. ಇವರ ಶ್ರೇಷ್ಠತೆಯ ಒಳಗೆ ಅಪರಿಮಿತ ದ್ವೇಷ, ಅಸಹನೆ, ಅಸೂಯೆ ಹಾಗೂ ಸ್ವಾರ್ಥಗಳ ಒಟ್ಟು ಮೊತ್ತದ ಮೃಗೀಯತೆ ಇದೆ. ಈ ಮೃತೀಯತೆಯೆ ಇಂದು ಮೀಸಲಾತಿ ವಿರೋಧಿರೂಪದಲ್ಲಿ ಕಾಣಿಸಿಕೊಂಡಿದೆ. ಮಂಡಲ್ ವರದಿಯ ವಿರುದ್ಧ ಕಮಂಡಲದ ಜಾತ್ರೆ ಮಾಡಿ, ದೇಶದಲ್ಲಿ ರಕ್ತದ ಕೋಡಿ ಹರಿಸಿದ ಇವು ಈಗ ಮೀಸಲಾತಿ ಅಳಿಸಿ ದೇಶ ಉಳಿಸಿ ಎಂಬ ಘೋಷಣೆಯ ಮೂಲಕ ತಳಸಮುದಾಯಗಳನ್ನು ಗುಲಾಮಗಿರಿಯ ಕಗ್ಗತ್ತಲಿಗೆ ತಳ್ಳಲು ಹವಣಿಸುತ್ತಿವೆ.

ಸಿ. ಹರೀಶ್ ಕುಮಾರ್

ಈ ದೇಶದ ಮೇಲ್ಜಾತಿಗಳಿಗೆ ಶ್ರೇಷ್ಠತೆಯ ವ್ಯಸನ ಸಾವಿರಾರು ವರ್ಷಗಳಿಂದಲೂ ಅಂಟಿಕೊಂಡಿದೆ; ಇವರ ಶ್ರೇಷ್ಠತೆಯ ವ್ಯಸನಗಳು ನಿಕೃಷ್ಟತೆ ಹಾಗೂ ಹೀನತೆಯಡಿಯಲ್ಲಿ ಅನೇಕ ಜಾತಿಗಳನ್ನು ಸೃಷ್ಟಿಸಿ ಅವುಗಳು ಬಡತನದಿಂದ, ಅಜ್ಞಾನದಿಂದ ಹಾಗೂ ಕೀಳರಿಮೆಯಿಂದ ನರಳುವಂತೆ ಮಾಡಿ, ಒಟ್ಟಾರೆ ಸಮಾಜವನ್ನೇ ರೋಗಗ್ರಸ್ತವನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿವೆ.

ಜಾತಿ ಜಾತಿಗಳ ಮಧ್ಯೆ ಅಂತರ ಕಾಯ್ದುಕೊಳ್ಳುವ ಪರಂಪರಾಗತ ಜಾತಿಯತೆಯ ಮನೋ ವಿಕಾರವನ್ನೇ ಶ್ರೇಷ್ಠತೆಯೆಂದು ಪರಿಗಣಿಸುವುದು, ಯಾವುದು ದುಷ್ಟತನವೋ, ಕ್ರೌರ್ಯವೋ ಅಂಥಹುಗಳಿಗೆ ಶ್ರೇಷ್ಠತೆಯ ಪಟ್ಟಕಟ್ಟುವುದು ಈ ಶ್ರೇಷ್ಠತೆಯ ವ್ಯಸನಿಗಳಿಂದ ನಿರಂತರವಾಗಿ ನೆಡೆದುಕೊಂಡು ಬರುತ್ತಲೇ ಇದೆ. ಇವರ ಶ್ರೇಷ್ಠತೆಯ ಒಳಗೆ ಅಪರಿಮಿತ ದ್ವೇಷ, ಅಸಹನೆ, ಅಸೂಯೆ ಹಾಗೂ ಸ್ವಾರ್ಥಗಳ ಒಟ್ಟು ಮೊತ್ತದ ಮೃಗೀಯತೆ ಇದೆ. ಈ ಮೃತೀಯತೆಯೆ ಇಂದು ಮೀಸಲಾತಿ ವಿರೋಧಿರೂಪದಲ್ಲಿ ಕಾಣಿಸಿಕೊಂಡಿದೆ.

ಶೋಷಿತ ವರ್ಗಗಳ ಪರವಾಗಿ ನಿಂತ ಬುದ್ಧ, ಬಸವ, ಜ್ಯೋತಿ ಬಾಪುಲೆ, ಸಾಹುಮಹಾರಾಜ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮುಂತಾದ ಸುಧಾರಣಾವಾದಿಗಳ ವಿರುದ್ಧ ಹಲ್ಲು ಮಸೆದು ಕೊನೆಗೆ ಈ ಸುದಾರಣಾವಾದಿಗಳು ಕನಸನ್ನು ಧರ್ಮ, ದೇವರು, ಶಾಸ್ತ್ರಗಳಡಿಯಲ್ಲಿ ಹೊಸಕಿ ಹಾಕಿದ ಈ ಮೇಲ್ವರ್ಗಗಳ ಪಟ್ಟಭದ್ರ ಹಿತಾಸಕ್ತಿಗಳು ಶೋಷಿತ, ಹಾಗೂ ಹಿಂದುಳಿದ ವರ್ಗಗಳಿಗೆ ಸಂವಿಧಾನದಲ್ಲಿ ಕೊಡ ಮಾಡಿರುವ ಮೀಸಲಾತಿಯನ್ನು ಇಲ್ಲವಾಗಿಸಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇವೆ. ಮಂಡಲ್ ವರದಿಯ ವಿರುದ್ಧ ಕಮಂಡಲದ ಜಾತ್ರೆ ಮಾಡಿ ಮಂದಿರ–ಮಸೀದಿಗಳ ವಿವಾದದ ಮೂಲಕ ದೇಶದಲ್ಲಿ ರಕ್ತದ ಕೋಡಿ ಹರಿಸಿದ ಇವು ಈಗ ಮೀಸಲಾತಿ ಅಳಿಸಿ ದೇಶ ಉಳಿಸಿ ಎಂಬ ಘೋಷಣೆಯ ಮೂಲಕ ಮತ್ತೊಮ್ಮೆ ಜನಾಂಗೀಯ ದ್ವೇಷದ ರಾಜಕೀಯ ಮಾಡುತ್ತಾ ತಳಸಮುದಾಯಗಳನ್ನು ಗುಲಾಮಗಿರಿಯ ಕಗ್ಗತ್ತಲಿಗೆ ತಳ್ಳಲು ಹವಣಿಸುತ್ತಿವೆ.

ಮೀಸಲಾತಿ ವಿರೋಧಿ ಹೋರಾಟಕ್ಕೆ ಜೀವ ತುಂಬಿದ ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳು ಅಜ್ಞಾನದಿಂದ ಸುಳ್ಳು ವದಂತಿಗಳನ್ನು ನಂಬಿ ಪ್ರತಿಭಟಿಸಿದ ವಿದ್ಯಾರ್ಥಿಗಳ ಸಣ್ಣ ಗುಂಪನ್ನೂ ಕೂಡ ದೊಡ್ಡದಾಗಿ ಬಿಂಬಿಸುವಲ್ಲಿ ಅತ್ಯುತ್ಸಾಹ ತೋರಿದವ. ಆದರೆ ವೈದ್ಯರು ಮತ್ತು ವೈದ್ಯವಿದ್ಯಾರ್ಥಿಗಳ ಪ್ರತಿಭಟನೆಯಿಂದ ರೋಗಿಗಳ ಮತ್ತವರ ಸಂಬಂಧಿಕರು ಅನುಭವಿಸಿದ ಕಷ್ಟ ನಷ್ಟಗಳನ್ನು ಮತ್ತು ಮೀಸಲಾತಿ ವಿರುದ್ಧದ ಹೋರಾಟ ಸಂವಿಧಾನದ ಆಶಯಕ್ಕೆ ಭಂಗ ತರುವಂತಹದ್ದು. ಹಾಗೂ ಸಾಮಾಜಿಕ ನ್ಯಾಯಕ್ಕೆ ವಿರೋಧಿಯಾದದ್ದು ಎಂದು ಮೀಸಲಾತಿ ಪರ ಚಳುವಳಿ ಮಾಡಿದ ಗುಂಪುಗಳನ್ನು ಇವು ಉದ್ದೇಶ ಪೂರ್ವಕವಾಗೇ ನಿರ್ಲಕ್ಷಿಸಿದವು. ಇದಷ್ಟೇ ಅಲ್ಲದೆ ಮೀಸಲಾತಿ ಪರವಿದ್ದ ಗುಂಪುಗಳನ್ನು ಮೀಸಲಾತಿ ವಿರೋಧಿ ಪ್ರತಿಭಟನೆ ಎಂಬಂತೇ ಬಿಂಬಿಸಲಾಯಿತು. ಇದರಿಂದಾಗಿ ಹಿಂದುಳಿದ ವರ್ಗಗಳಿಗೆ ಮಾಧ್ಯಮಗಳ ಪಕ್ಷಪಾತ, ಜಾತಿವಾದಿತನ ಹಾಗೂ ಅವುಗಳ ವರದಿಗಾರರ ಅಪ್ರಬುದ್ಧತನ, ಸ್ಪಷ್ಟವಾಗಿ ತಿಳಿಯುವಂತಾಯ್ತು.

ಮುದ್ರಣ ಮಾಧ್ಯಮಗಳ ಕೆಲ ಅಂಕಣ ಕೋರರ ವಿಕೃತಿಗಳು ಹೇಗಿದ್ದವೆಂದರೆ ಮೀಸಲಾತಿ ಪರವಾಗಿರುವ ರಾಜಕಾರಣಿಗಳ ರಕ್ತ ಹೀರಬೇಕೆನ್ನುವಷ್ಟು ಅವರನ್ನು ಕೊಲ್ಲಬೇಕೆನ್ನುವಷ್ಟು ಸಿಟ್ಟು ಈ ಚಳುವಳಿ ನಡೆಸುತ್ತಿರುವ ವಿದ್ಯಾರ್ಥಿಗಳ ಗುಂಪಿಗೆ ಇದೆ ... ಯುತ್ತಾ ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆಯನ್ನು ಹಿಂ... ಚಾರಕ್ಕೆ ತಿರುಗಿಸಲು ಯತ್ನಿಸಿದ್ದರು. ಆದರೆ ಚಳುವಳಿ ಮತ್ತಷ್ಟು ... ಲಂಬಿಸುವಂತೆ ಮಾಡಿ ಮಂಡಲ್ ವರದಿ ವಿರೋಧಿ ಚಳು... ಯಲ್ಲಾದ ಹಿಂಸೆ, ಜೀವಹಾನಿ ಈ ಹೋರಾಟದಲ್ಲೂ ಆಗಬೇಕೆ... ಇವರ ವಿಕೃತ ಆಸೆಗೆ ಸುಪ್ರೀಂಕೋರ್ಟ್ ತಣ್ಣೀರು ಎರಚಿತು.

ಇಂಥ ಅಂಕಣಕೋರರು ಜಾತಿ ಆಧಾರಿತ ಮೀಸಲಾತಿಯಿಂ... ಸಮಾಜ ಒಡೆಯುತ್ತದೆ ಎಂಬ ಮತ್ತೊಂದು ಕುತರ್ಕವನ್ನು ಮಂ... ಸುತ್ತಾ ಜಾತೀಯತೆಯ ನೀತಿಯಿಂದಲೇ ಈ ಸಮಾಜ ಸಾವಿರಾ... ವರ್ಷಗಳಿಂದ ಛಿದ್ರಗೊಂಡಿರುವ ಸತ್ಯವನ್ನು ಮರೆಮಾಚಲು ... ಗುತ್ತಾರೆ. ಜಾತಿಗಳ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಅಸಮಾ... ಅಂತರಗಳನ್ನು, ತಾರತಮ್ಯಗಳನ್ನು ಸ್ವಲ್ಪವಾದರೂ ನೀಗಿಕೊಂ... ದೇಶವನ್ನು, ಸಮಾಜವನ್ನು ಸದೃಢವಾಗಿ ಕಟ್ಟಬಲ್ಲ ಮೀಸಲಾತಿಯ... ವಿಚಾರವನ್ನು ಅದೊಂದು ಸಮಾಜವನ್ನು ಒಡೆಯುವ ವಿಘಟ... ಚಿಂತನೆ ಎನ್ನುತ್ತಾ ಬಡ ಬಡಿಸುತ್ತಾರೆ. ಇಂಥ ಬಡಬಡಿಕೆಯ ಹಿಂ... ರುವುದು ಸ್ವಹಿತಾಸಕ್ತಿಯೇ ವಿನಃ ಸಮಾಜದ ಹಿತಾಸಕ್ತಿಯಲ್ಲ.

ಜಾಗತೀಕರಣದಿಂದಾಗಿ ಮೀಸಲಾತಿಯಂತಹ ವಿಷ... ಇಂದು ಅಪ್ರಸ್ತುತವಾಗಿದೆ, ಬದಲಾದ ಸನ್ನಿವೇಶದಲ್ಲಿ ಡಿಗ್ನಿಟಿ ಆ... ಲೇಬರ್ ಎಲ್ಲಾ ಕೆಲಸಗಳಿಗೂ ಇದೆ. ಆದ್ದರಿಂದ ಪಾಲಿಗೆ ಬ... ಕೆಲಸದಲ್ಲೇ ತೃಪ್ತಿಕಾಣಬೇಕೆಂದು ಹೇಳುವ ಇವರು ಜಾಡುಮಾಲಿ... ಕೆಲಸವನ್ನಾಗಲೀ, ಕಸಾಯಿಕಾನೆ ಕೆಲಸವನ್ನಾಗಲಿ ಡಿಗ್ನಿಟಿ ಆ... ಲೇಬರ್ ಎಂದು ಒಪ್ಪಿಕೊಂಡು ಅದನ್ನು ಮಾಡಲು ಮೇಲ್ಜಾತಿ... ಎಷ್ಟು ಜನ ಸಿದ್ಧರಿದ್ದಾರೆ ಎಂಬುದರ ಬಗ್ಗೆ ವಿವರಿಸುವುದಿಲ್ಲ. ಸೈಕ... ಶಾಪ್, ಮೆಕಾನಿಕಲ್, ಟೈರ್ ಪಂಕ್ಚರ್ ಇಂಥ ಉದ್ಯೋಗಗಳನ್ನು...

ಷಿತ ಸಮುದಾಯಗಳೇ ಏಕೆ ಹೊಟ್ಟೆ ಪಡಿಗೆ ಆಶ್ರ
ಕೊಂಡಿವೆ? ಮತ್ತು ವೃತ್ತಿಪರ ಜಾತಿ ಹಾಗೂ
ಯ ಶೋಷಣೆ, ಹಿಂಸೆ ಈ ಸಮುದಾಯಗಳನ್ನೇ
ಬಲಿತೆಗೆದುಕೊಳ್ಳುತ್ತವೆ ಎಂಬುದಕ್ಕೂ ಇವರಲ್ಲಿ
ಇಲ್ಲ. ವಾಸ್ತವವಾಗಿ ಡಿಗ್ನಿಟಿ ಆಫ್ ಲೇಬರ್ ಎಂಬ
ರುವುದು ತಳ ಸಮುದಾಯಗಳಿಗೆ ವಿನಃ ಮೇಲ್ಜಾತಿ
ಅದು ಇಲ್ಲವೇ ಇಲ್ಲ. ಅವುಗಳಲ್ಲಿ ಇರುವುದು ಏನಿ
ಡಿಗ್ನಿಟಿ ಆಫ್ ಕ್ಯಾಸ್ಟ್ ಆಂಡ್ ಕಾಸ್ಟ್. ಇನ್ನು ಕೆಲ
ತೀತ ಅಂಕಣಕಾರರು ಮೀಸಲಾತಿ ಬಗ್ಗೆ ಯೋಚಿ
ಇದು ಸಕಾಲ ಮತ್ತು ಇನ್ನು ಮುಂದಾದರೂ
ಲಾತಿಯನ್ನು ವರ್ಷಕ್ಕೆ ಶೇಕಡ ಎರಡರಂತೆ ತಗ್ಗ
ದು ಹಪಹಪಿಸಿದ್ದಾರೆ. ಆದರೆ ಜಾತಿಯ ಕಾರಣಕ್ಕೆ

ಕಲ್ ಶಾಪ್, ಮೆಕಾನಿಕಲ್, ಟೈರ್ ಂಕ್ಚರ್ ಇಂಥ ಉದ್ಯೋಗಗಳನ್ನೆಲ್ಲ ಶೋಷಿತ ಸಮುದಾಯಗಳೇ ಏಕೆ ಹೊಟ್ಟೆ ಪಡಿಗೆ ಆಶ್ರಯಿಸಿಕೊಂಡಿವೆ? ಮತ್ತು ವೃತ್ತಿಪರ ಜಾತಿ ಹಾಗೂ ಜಾತಿಯ ಶೋಷಣೆ, ಹಿಂಸೆ ಈ ಮುದಾಯಗಳನ್ನೇ ಏಕೆ ಬಲಿತೆಗೆದು ಕೊಳ್ಳುತ್ತವೆ ಎಂಬುದಕ್ಕೂ ಇವರಲ್ಲಿ ಉತ್ತರ ವಿಲ್ಲ. ವಾಸ್ತವವಾಗಿ ಡಿಗ್ನಿಟಿ ಆಫ್ ಲೇಬರ್ ಎಂಬ ತತ್ವ ರುವುದು ತಳ ಸಮುದಾಯಗಳಿಗೆ ನಃ ಮೇಲ್ಜಾತಿಗಳಲ್ಲಿ ಅದು ಇಲ್ಲವೇ .ಅವುಗಳಲ್ಲಿ ಇರುವುದು ಏನಿದ್ದರೂ ಗ್ನಿಟಿ ಆಫ್ ಕ್ಯಾಸ್ಟ್ ಆಂಡ್ ಕಾಸ್ಟ್. ನ್ನು ಕೆಲ ಜಾತ್ಯತೀತ ಅಂಕಣಕಾರರು ಮೀಸಲಾತಿ ಬಗ್ಗೆ ಯೋಚಿಸಲು ಇದು ಸಕಾಲ ಮತ್ತು ಇನ್ನು ಮುಂದಾದರೂ ಮೀಸಲಾತಿಯನ್ನು ವರ್ಷಕ್ಕೆ ಶೇಕಡ ಎರಡರಂತೆ ತಗ್ಗಬೇಕೆಂದು ಹಪಹಪಿಸಿದ್ದಾರೆ.

ದು ನೋವು, ಬಡತನ, ಅವಮಾನದಿಂದ ನರಳು
ತಳಸಮುದಾಯಗಳ ಗೋಳು ವರ್ಷಕ್ಕೆ ಎಷ್ಟು
ಟ್ ಕಮ್ಮಿಯಾಗಬೇಕೆಂದು ಹೇಳಿಲ್ಲ!
ಮೀಸಲಾತಿ ಬಗ್ಗೆ ಇಂದು ಅನೇಕರು ಅನೇಕ ಕುಹ
ಮಾತುಗಳನ್ನಾಡುತ್ತಾರೆ. ಆದರೆ ಸಕಲೈಭೋಗವನ್ನು
ವಾಗಿ ಭೋಗಿಸಲು ವರ್ಣ ವ್ಯವಸ್ಥೆ ಎಂಬ
ತಿ ಮೂಲಕ ಭದ್ರ ಬುನಾದಿ ಹಾಕಿಕೊಟ್ಟ ಮನು
ಗ್ಗೆ ಈ ಕುಹಕಿಗಳು ಉಸಿರೆತ್ತುವುದೇ ಇಲ್ಲ. ಕಸಬು
ತ ಜಾತಿ ಮತ್ತು ಜಾತಿಯಾಧಾರಿತ ಅಂತಸ್ತುಗಳು
ನಿರ್ಮಾಣವಾಯಿತೋ, ಅಂದೇ ಮೀಸಲಾತಿ
ಯಿತು. ವರ್ಣ ವ್ಯವಸ್ಥೆಯ ಮೂಲಕ ಅಸ
ಯನ್ನು ತಂದ ಮನುವೇ ಮೀಸಲಾತಿಯ ಮೊಟ್ಟ

ಮೊದಲ ಜನಕ, ಇಂದು ಈ ಸತ್ಯವನ್ನು ಮೀಸಲಾತಿ ವಿರೋಧಿಗಳ ಮುಖಕ್ಕೆ ರಾಚುವಂತೆ ತೋರಿಸಬೇಕಿದೆ.

ಮನು ಶಾಸ್ತ್ರದಡಿಯಲ್ಲಿ ಒಡೆತನದ ರುಚಿಕಂಡ ಮೇಲ್ಜಾತಿಗಳು ಅದಕ್ಕೆ ಚ್ಯುತಿ ಬಾರದಂತೆ ಅನೇಕ ಆಳ್ವಿಕೆದಾರರ ಮೇಲೆ ಸಾವಿರಾರು ವರ್ಷಗಳಿಂದಲೂ ಪ್ರಭಾವ ಬೀರಿವೆ. ಈ ಪ್ರಭಾವಗಳ ನಡುವೆಯೂ ಬುದ್ಧ, ಬಸವ ಮುಂತಾದ ಮಾನವತಾವಾದಿಗಳು ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದರೂ ಅವರ ನಂತರ ಮೇಲ್ಜಾತಿಗಳ ತಂತ್ರಗಳು ಫಲಿಸಿ ಜಾತಿ ವ್ಯವಸ್ಥೆ ಮತ್ತೆ ನೆಲೆ ನಿಲ್ಲುವಂತಾಯ್ತು. ಆದರೆ ತಳ ಸಮುದಾಯಗಳು ಕೊಂಚವಾದರೂ ಮೇಲ್ಜಾತಿಗಳಿಗೆ ಮತ್ತು ಶ್ರೇಣಿಕೃತ ವ್ಯವಸ್ಥೆಯನ್ನು ಪ್ರತಿಪಾದಿಸುವ ವರ್ಣವ್ಯವಸ್ಥೆಗೆ ಸೆಡ್ಡು ಹೊಡೆಯಲು ಸಾಧ್ಯವಾಗಿದ್ದು ಬ್ರಿಟೀಷರ ಕಾಲದಲ್ಲಿ.

ಬ್ರಿಟೀಷರು ತಳಸಮುದಾಯಗಳನ್ನು ಶಿಕ್ಷಣದ ಸಂಪರ್ಕಕ್ಕೆ ತಂದರಲ್ಲದೆ ಅವರಿಗೆ ಸರ್ಕಾರಿ ಸೇವೆಯಲ್ಲಿ ಉದ್ಯೋಗವನ್ನು ಖಾತ್ರಿಗೊಳಿಸಿದ್ದರು. ಸರ್ಕಾರಿ ಸೇವೆಗಳಲ್ಲಿ ಒಂದೇ ಜಾತಿಯ ಜನ ತುಂಬಿಕೊಳ್ಳುವುದೆಂದರೆ ಅಲ್ಲಿ ಅದಕ್ಷತೆ, ಅಪ್ರಾಮಾಣಿಕತೆ ತಾಂಡವವಾಡುತ್ತವೆ ಎನ್ನುವುದು ಅವರ ಖಚಿತ ನಿಲುವಾಗಿತ್ತು. ವಿವಿಧ ಜಾತಿಗಳಿಗೆ ಸರ್ಕಾರಿ ಸೇವೆಯಲ್ಲಿ ಅವಕಾಶ ಕಲ್ಪಿಸಿದರೆ ಸರ್ಕಾರಿ ಯಂತ್ರ ಸುಸೂತ್ರವಾಗಿ ನೆಡೆಯುತ್ತದಲ್ಲದೆ ಅದರಲ್ಲಿ ವೈವಿಧ್ಯತೆಯನ್ನು ತರುವ ಮೂಲಕ ಆಡಳಿತವನ್ನು ಹೆಚ್ಚು ಹೆಚ್ಚು ದಕ್ಷಗೊಳಿಸಬಹುದು ಎಂಬುದು ಅವರ ಯೋಚನೆಯಾಗಿತ್ತು. ಪ್ರಯೋಗ ಶೀಲರಾದ ಅವರು ಅದನ್ನು ಆಡಳಿತದಲ್ಲಿ ಜಾರಿಗೊಳಿಸಿ ಯಶಸ್ವಿಯೂ ಆಗಿದ್ದರು. ಇದರ ಮುಂದುವರಿಕೆಯ ಭಾಗವಾಗೇ ಮಹಾರಾಷ್ಟ್ರದಲ್ಲಿ ಶಾಹು ಮಾಹಾರಾಜರು, ಕರ್ನಾಟಕದಲ್ಲಿ ನಾಲ್ವಡಿ ಕೃಷ್ಣ ರಾಜ ಒಡೆಯರ್‌ರವರು ಮೇಲ್ಜಾತಿಯ ಉಗ್ರ ವಿರೋಧದ ನಡುವೆಯೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಜಾರಿಗೆ ತಂದರು.

ಮೈಸೂರು ಸಂಸ್ಥಾನದಲ್ಲಿ ತುಂಬಿ ಹೋಗಿದ್ದ ಮದ್ರಾಸ್-ಆಂಧ್ರ ಬ್ರಾಹ್ಮಣರಿಂದ ಅಧಿಕಾರ ಕಸಿದುಕೊಳ್ಳಲು ಕರ್ನಾಟಕದ ಬ್ರಾಹ್ಮಣರು 'ಮೈಸೂರು ಮೈಸೂರಿನವರಿಗಾಗಿಯೇ' ಎಂಬ ಘೋಷಣೆಯಡಿಯಲ್ಲಿ ಹೋರಾಟ ಮಾಡಿ ಯಶಸ್ವಿಯಾದರು. ಅನಂತರ ಇವರಿಂದಲೂ ಸ್ವಜನ ಪಕ್ಷಪಾತ ಮುಂದುವರಿದು ಆಡಳಿತದ ಎಲ್ಲಾ ಸ್ತರದಲ್ಲೂ ಬ್ರಾಹ್ಮಣರೇ ತುಂಬಿಕೊಳ್ಳ ತೊಡಗಿದಾಗ ಒಕ್ಕಲಿಗ ಮತ್ತು ಲಿಂಗಾಯಿತ ಸಮುದಾಯಗಳು ಬ್ರಾಹ್ಮಣೇತರರಿಗೆ ದನಿ ಬರಬೇಕಾದರೆ ಆ ಸಮುದಾಯಗಳಿಗೆ ಸ್ಥಳೀಯ ಸಂಘ, ಸಂಸ್ಥೆ ಮತ್ತು ಆಡಳಿತ ಯಂತ್ರದಲ್ಲಿ ಮೀಸಲಾತಿ ಬೇಕೇ ಬೇಕು ಎಂದು ಒತ್ತಾಯಿಸಿದವು. ಆಗ ಇದರ ನೇತೃತ್ವವನ್ನು ವಹಿಸಿದ್ದವರು ಆಗಿನ ಕಾಲದಲ್ಲಿ ಮೈಸೂರು ವಿಶ್ವವಿದ್ಯಾಲಯದ ಸೆನೆಟ್‌ಗೆ ಮಹಾರಾಜರಿಂದಲೇ ನೇಮಕಗೊಂಡಿದ್ದ ಲಿಂಗಾಯಿತ ಸಮುದಾಯದ ಎಂ. ಬಸವಯ್ಯ ಎಂಬುವವರು.

ಮೀಸಲಾತಿ ಚರ್ಚೆ

ಬ್ರಾಹ್ಮಣೇತರರಿಗೆ ಉದ್ಯೋಗದಲ್ಲಿ ಮೀಸಲಾತಿ ಬೇಕೆಂಬ ಒಕ್ಕಲಿಗ ಹಾಗೂ ಲಿಂಗಾಯಿತ ಸಮುದಾಯದ ವಾದವನ್ನು ಒಪ್ಪಿದ ಮಹಾರಾಜರು ಅಂದಿನ ಮೈಸೂರು ಸಂಸ್ಥಾನದ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ವೆಸ್ಲಿ ಮಿಲ್ಲರ್‌ರ ಅಧ್ಯಕ್ಷತೆಯಲ್ಲಿ ದಿನಾಂಕ ೨೩-೦೮-೧೯೧೮ ರಲ್ಲಿ ಏಳು ಜನರ ಆಯೋಗವನ್ನು ರಚಿಸಿದರು. ಅನಂತರ ಈ ವರದಿಯ ಆಧಾರದ ಮೇಲೆ ಮಹಾರಾಜರು ಬ್ರಾಹ್ಮಣೇತರರಿಗೆ ಶೇಕಡ ೭೫% ರಷ್ಟು ಮೀಸಲಾತಿ ಘೋಷಿಸಿದರು. ಇದೊಂದು ಐತಿಹಾಸಿಕ ನಿರ್ಧಾರವಾಗಿ ಆಡಳಿತದಲ್ಲಿ ಸಿಂಹಪಾಲನ್ನು ಪಡೆದಿದ್ದ ಬ್ರಾಹ್ಮಣ ವರ್ಗಕ್ಕೆ ಹಿನ್ನಡೆಯಾಗಿ ಬ್ರಾಹ್ಮಣೇತರ ಅಭ್ಯುದಯಕ್ಕೆ ನಾಂದಿಯಾಯಿತು.

ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ, ನೇಯ್ಗೆ ಹೀಗೆ ನೂರಾರು ಕೆಲಸ ಮಾಡುವ ವೃತ್ತಿ ನೈಪುಣ್ಯತೆಗಳ ಸಮುದಾ ಯಗಳು ತಮ್ಮ ಸ್ವಂತ ಪ್ರತಿಭೆ, ಜ್ಞಾನ ಶ್ರಮದಿಂದಲೇ ಸಾವಿರಾರು ವರ್ಷಗಳಿಂದ ಸಮಾಜವನ್ನು ಕಟ್ಟಿವೆ. ಇವು ಎಂದೂ ಈಗಿನ ಅಂಕ ಪಟ್ಟಿಯ ಪ್ರತಿಭೆಗ ಳಂತೆ ಬೌದ್ಧಿಕ ವಕ್ರತೆಯನ್ನು ತೋರಿಲ್ಲ, ಬದಲಾಗಿ ಅವು ನಿಸ್ವಾರ್ಥ ಹಾಗೂ ಸ್ನೇಹ ಪರತೆಯ ಬದುಕನ್ನು ರೂಢಿಸಿ ಕೊಂಡು ಸಮಾಜದಲ್ಲಿ ಶಾಂತಿ ಸಾಮರಸ್ಯ ನೆಲೆಯುರುವಂತೆ ಮಾಡಿವೆ. ಇವತ್ತು ನಿಜಕ್ಕೂ ಅನ್ಯಾಯ ಆಗುತ್ತಿರು ವುದು ತಮ್ಮ ಒಳಗಿನ ಜ್ಞಾನವನ್ನು ಸಮಾಜಕ್ಕೆ ಧಾರೆಯೆ ರೆಯುತ್ತಿರುವ ಇಂಥ ಪ್ರತಿಭೆಗಳಿಗೇ ವಿನಃ ಎರವಲು ಜ್ಞಾನದ ಗುಲಾಮರಾಗಿ ಸದಾ ಲೋಲು ಪತೆಯ ಜೀವನಕ್ಕೆ ಹಾತೊರೆದು ಹಣಗಳಿಕೆಯನ್ನೇ ಮೆರಿಟ್ ಎನ್ನುತ್ತಿರುವ ಸ್ವಾರ್ಥಿಗಳಿಗಲ್ಲ.

ಇದರಿಂದ ಕುಪಿತಗೊಂಡ ವಿಶ್ವೇಶ್ವರಯ್ಯನವರು ತಮ್ಮ ದಿವಾನ ಗಿರಿಗೆ ರಾಜೀನಾಮೆಯನ್ನು ಕೊಟ್ಟರು. ಹೀಗೆ ಶೇಕಡ ೭೫% ಮೀಸಲಾತಿಯ ಹೆಚ್ಚಿನ ಲಾಭ ಪಡೆದವರು ಬ್ರಾಹ್ಮಣೇತರರಲ್ಲಿ ಪ್ರಬಲರಾಗಿದ್ದ ಲಿಂಗಾಯಿತರು ಮತ್ತು ಒಕ್ಕಲಿಗರು ಸಮಾನತೆಯನ್ನು, ಸಹಭಾಗಿತ್ವವನ್ನು ಕಲ್ಪಿಸುವ ಮೀಸಲಾತಿ ಬಂದಾಗಲೆಲ್ಲ ಸಮಾಜ ಮತ್ತು ಸಮುದಾಯಗಳ ಪ್ರಗತಿ ಸಾಧ್ಯವಾಗಿರುವುದನ್ನು ಚರಿತ್ರೆ ತಿಳಿಸುತ್ತದೆ.

ಗಿಳಿ ಪಾಠ ಓದಿ ಅದನ್ನು ಒಪ್ಪಿಸುವ ನೆನಪಿನ ಶಕ್ತಿಯೇ ಪ್ರತಿಭೆ ಎನ್ನುವುದಾದರೆ ಅಂಥ ನೆನಪಿನ ಅಗಾಧ ಗಣಿಗಳನ್ನು ತುಂಬಿಕೊಂಡಿರುವ ಜನಪದ ಸಂಸ್ಕೃತಿಯನ್ನು, ಅಪಟ ಪತಿಭೆಯೆಂದು ಮೆರಿಟ್‌ನ ಪಭೃತಿಗಳಿಗೆ ತಿಳಿಸಬೇಕಿದೆ. ಅಲಕ್ಷಿತ ಸಮುದಾಯಗಳಿಗೆ ಶಿಕ್ಷಣವೇ

ವಕ್ಕಟಿದ್ದರಿಂದ ಅಂಥ ಮೇಲ್ವರ್ಗದ ಶಿಕ್ಷಣಕ್ಕೆ ಸೆಡ್ಡು ಹೊಡೆದು, ನೆನಪಿನ ಶಕ್ತಿಯಿಂದಲೇ ಕಲಿಕೆಯನ್ನು ರೂಡಿಸಿಕೊಂಡು ಮೌಖಿಕ ಪರಂಪರೆಗೆ ನಾಂದಿ ಹಾಡಿದ ಈ ಸಮುದಾಯಗಳು ತಮ್ಮ ನೆನಪಿನ ಗಣಿಯಲ್ಲಿ ಯಾವುದೇ ಲಿಖಿತ ದಾಖಲೆಗಳಿಗೂ ಸರಿಸಮನಾಗಬಲ್ಲ ಜ್ಞಾನದ ದಾಖಲೆಗಳನ್ನಿಟ್ಟುಕೊಂಡಿದ್ದಾರೆ. ಇಂಥ ಜ್ಞಾನದ ವಾರುಸುದಾರರಿಗೆ ಆರ್ಥಿಕ ಸಬಲತೆ ಹಾಗೂ ಶೈಕ್ಷಣಿಕ ಸಬಲತೆಯ ಮೀಸಲಾತಿ ದೊರೆತರೆ ಈಗಿನ ಸ್ವಯಂ ಘೋಷಿತ ಮೆರಿಟ್‌ಗಳಿಗೆ ಮಣ್ಣು ಮುಕ್ಕಿಸಬಲ್ಲವು.

ಕಮ್ಮಾರಿಕೆ, ಚಮ್ಮಾರಿಕೆ, ಕುಂಬಾರಿಕೆ, ನೇಯ್ಗೆ ಹೀಗೆ ನೂರಾರು ಕೆಲಸ ಮಾಡುವ ವೃತ್ತಿ ನೈಪುಣ್ಯತೆಗಳ ಸಮುದಾಯಗಳು ತಮ್ಮ ಸ್ವಂತ ಪ್ರತಿಭೆ, ಜ್ಞಾನ ಶ್ರಮದಿಂದಲೇ ಸಾವಿರಾರು ವರ್ಷಗಳಿಂದ ಸಮಾಜವನ್ನು ಕಟ್ಟಿವೆ. ಇವು ಎಂದೂ ಈಗಿನ ಅಂಕ ಪಟ್ಟಿಯ ಪ್ರತಿಭೆಗಳಂತೆ ಬೌದ್ಧಿಕ ವಕ್ರತೆಯನ್ನು ತೋರಿಲ್ಲ, ಬದಲಾಗಿ ಅವು ನಿಸ್ವಾರ್ಥ ಹಾಗೂ ಸ್ನೇಹ ಪರತೆಯ ಬದುಕನ್ನು ರೂಡಿಸಿಕೊಂಡು ಸಮಾಜದಲ್ಲಿ ಶಾಂತಿ ಸಾಮರಸ್ಯ ನೆಲೆಯುರುವಂತೆ ಮಾಡಿವೆ. ಇವತ್ತು ನಿಜಕ್ಕೂ ಅನ್ಯಾಯ ಆಗುತ್ತಿರುವುದು ತಮ್ಮ ಒಳಗಿನ ಜ್ಞಾನವನ್ನು ಸಮಾಜಕ್ಕೆ ಧಾರೆಯೆರೆಯುತ್ತಿರುವ ಇಂಥ ಪ್ರತಿಭೆಗಳಿಗೇ ವಿನಃ ಎರವಲು ಜ್ಞಾನದ ಗುಲಾಮರಾಗಿ ಸದಾ ಲೋಲುಪತೆಯ ಜೀವನಕ್ಕೆ ಹಾತೊರೆದು ಹಣಗಳಿಕೆಯನ್ನೇ ಮೆರಿಟ್ ಎನ್ನುತ್ತಿರುವ ಸ್ವಾರ್ಥಿಗಳಿಗಲ್ಲ. ಪ್ರತಿಭೆಯ ಅರ್ಥ ವಿಸ್ತಾರತೆಯನ್ನು ಸಾಕಷ್ಟು ಸಂಕುಚಿತಗೊಳಿಸಿ ಪ್ರತಿಭೆಯನ್ನು ಗಮನಿಸುವ, ಅರ್ಥೈಸುವ ಇತರ ಮಾರ್ಗಗಳನ್ನು ಮುಚ್ಚಿ ತಾವಷ್ಟೇ ಪ್ರತಿಭಾವಂತರು ಎನ್ನುವ ಮನುವಾದಿಗಳಿಗೆ ಪ್ರತಿಭೆಯ ಸತ್ವವನ್ನು, ಅಂತಃಕರಣವನ್ನು ಹಿಂದುಳಿದ ವರ್ಗಗಳು ತೋರಿಸಬೇಕಿದೆ.

ಇಂದು ಅಹಿಂದ ಸಮುದಾಯಗಳ ಜಾಗೃತಿಯಿಂದಾಗಿ ಪ್ರಭುತ್ವಕ್ಕೆ ಸಾಮಾಜಿಕ ನ್ಯಾಯದ ಅರಿವು ಗಾಢವಾಗುತ್ತಿರುವಾಗಲೇ ಮನುವಾದಿಗಳು ಖಾಸಗೀಕರಣದ ಹುಯ್ಲೆಬ್ಬಿಸಿದ್ದಾರೆ. ಸರ್ಕಾರಿ ಆಡಳಿತಯಂತ್ರದಲ್ಲಿ ಎಲ್ಲಾ ಜಾತಿಗಳ ಪಾಲ್ಗೊಳ್ಳುವಿಕೆ ಇವರಲ್ಲಿ ಅಸಹನೆ ಹುಟ್ಟಿಸಿದ್ದು, ತಮ್ಮ ಏಕ ಸ್ವಾಮ್ಯತೆಗೆ ಚ್ಯುತಿ ಬರುತ್ತಿರುವ ಹಿನ್ನಲೆಯಲ್ಲಿಯೇ ಅವು ಸರ್ಕಾರಿ ಕೆಲಸಗಳಲ್ಲಿ ಅದಕ್ಷತೆಯನ್ನು ಬೆಟ್ಟು ಮಾಡಿ ತೋರಿಸುತ್ತಾ ಖಾಸಗೀಕರಣಕ್ಕೆ ಒತ್ತಾಯವನ್ನು ಮಾಡುತ್ತಾ ಅಲ್ಲಿಯೂ ತಾವೇ ವಿಜೃಂಭಿಸುವ ಹುನ್ನಾರವನ್ನು ವ್ಯವಸ್ಥಿತವಾಗೇ ಮಾಡುತ್ತಾ ದಕ್ಷತೆಯ ಹೆಸರಿನಲ್ಲಿ ಪ್ರಭುತ್ವದ ತಲೆ ನೇವರಿಸುತ್ತಿದ್ದಾರೆ.

> **ಉನ್ನತ ಶಿಕ್ಷಣಕ್ಕೆ ಮಾನ್ಯತೆ ಕೊಡುವುದೆಂದರೆ ಅಲಕ್ಷಿತ ಸಮುದಾಯಗಳು ಆ ಶಿಕ್ಷಣದ ಸಮೀಪ ಸುಳಿಯಲೇ ಬಾರ ದೆಂಬ ಕುತ್ಸಿತ ಬುದ್ಧಿಯನ್ನು ಹೊಂದುವು ದಲ್ಲ, ಈ ಸಮುದಾಯ ಗಳಿಗೂ ಉನ್ನತ ಶಿಕ್ಷಣದಲ್ಲಿ ಸಹಭಾ ಗಿತ್ವವನ್ನು ಕಲ್ಪಿಸುವು ದರ ಮೂಲಕ ಆ ಶಿಕ್ಷಣದಲ್ಲಿ ಹೆಚ್ಚು ಹೆಚ್ಚು ವೈವಿಧ್ಯತೆ ಗುಣಾತ್ಮಕತೆ, ಹಾಗೂ ಸೃಜನಾತ್ಮಕ ನೆಲೆಗಟ್ಟನ್ನು ತಂದು ಕೊಂಡು ಅದನ್ನು ವ್ಯಾಪಕಗೊಳಿ ಸುವುದು. ಇಂಥ ಯಶಸ್ವಿ ಅಂಶ ಗಳನ್ನು ಈ ಶಿಕ್ಷಣಕ್ಕೆ ಅಳ ವಡಿಸಿ ಕೊಳ್ಳದೇ ಹೋದರೆ ಅಂಥ ಶಿಕ್ಷಣಕ್ಕೆ ಖಂಡಿತವಾಗಲೂ ಮಾನ ವೀಯ ಮುಖ ಇರದು, ಮಾನವೀಯ ಮುಖ ಹೊಂದಲಾರದ್ದು ಎಂದೂ ಜನ ಪರವಾಗಿರಲಾರದು, ಜನಪರವಾ ಗಿಲ್ಲದ ಯಾವುದೂ ದೇಶ ಕಟ್ಟಲಾ ರದು ಚರಿತ್ರೆ ಈ ಸತ್ಯವನ್ನು ತಿಳಿಸುತ್ತದೆ.**



ಸರ್ಕಾರಿ ಕೆಲಸಗಳಲ್ಲಿ ದಕ್ಷತೆ ಇಲ್ಲ ಎನ್ನುವ ಈ ಜನ, ಜನ ಸಂಖ್ಯೆಯ ಅನುಪಾತಕ್ಕಿಂತಲೂ ಹೆಚ್ಚು ಸರ್ಕಾರಿ ವಲಯಗಳಲ್ಲಿ ಉದ್ಯೋಗ ಪಡೆದಿದ್ದವರು. ಹೀಗಿದ್ದರೂ ಸರ್ಕಾರಿ ಕೆಲಸಗಳಿಗೆ ಕನಿಷ್ಟ ಜಾಡಮಾಲಿಯಲ್ಲಿರುವ ದಕ್ಷತೆಯನ್ನು ಕೂಡ ತಂದು ಕೊಡಲಾಗಲಿಲ್ಲ. ಇವರ ಪ್ರಕಾರ ದಕ್ಷತೆಯ ವ್ಯಾಖ್ಯಾನವೆಂದರೆ ಆರ್ಥಿಕವಾದ ಲಾಭದಾಯಕ ಹುದ್ದೆ ಅಷ್ಟೇ, ದೇಶದ ಗತಿಗಿಂತಲೂ ತಮ್ಮ ಸ್ಥಿತಿಯ ಕಡೆಗೇ ಇವರಿಗೆ ಹೆಚ್ಚಿನ ಕಾಳಜಿ ಇದೆ. ಡಾಲರ್‌ನ ದಾಸರಾದ ಇವರು ಪದೇ ಪದೇ ದೇಶ ಭಕ್ತರ ಸೋಗು ಹಾಕುವುದು ನೀಚತನದ ಪರಮಾವಧಿ ಯಲ್ಲದೇ ಮತ್ತೇನಲ್ಲ. ಉನ್ನತ ಶಿಕ್ಷಣ ಸಂಸ್ಥೆಗಳಾಗಲೀ IT-BT ಗಳ ಒಡೆಯರಾಗಲೀ ತಮ್ಮ ಸಂಸ್ಥೆಗಳಲ್ಲಿ ವ್ಯವಸ್ಥಿತವಾ ಜ್ಞಾನಾಧಾರಿತ ಜಾತಿಯನ್ನು ಸೃಷ್ಟಿಸುವುದು ಅತ್ಯಂತ ಪ್ರಿಯವಾದ ಧ್ಯೇಯ ಎನಿಸಿದೆ. ಇತ ಜಾತಿಗಳಾವುವು ತಮ್ಮ ಬಳಿಗೆ ಸುಳಿಯದಂತೆ ತ ಸಂಸ್ಥೆಯ ಸುತ್ತ ಮೆರಿಟ್ ಎಂಬ ಕಾವಲು ಪಡೆ ಯ ನೇಮಿಸಿವೆ. ಇದು ಮನು ಶಾಸ್ತ್ರದ ಮುಂದುವ ಯಲ್ಲದೆ ಮತ್ತೇನಲ್ಲ. ಮನು ಮತ್ತು ಆತನ ಸಮರ್ಥಕ ಹೇಗೆ ತಳಸಮುದಾಯಗಳಿಗೆ ಶಿಕ್ಷಣವನ್ನು ನಿಷೇ ಅಂತಸ್ತು ಸಂಪತ್ತುಗಳನ್ನು ಕೊಳ್ಳೆ ಹೊಡೆದರೋ ಅ ಅಜೆಂಡಾವನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಊರ್ಜಿ ಗೊಳಿಸಲು ನೋಡುತ್ತಿವೆ.

ಉನ್ನತ ಶಿಕ್ಷಣಕ್ಕೆ ಮಾನ್ಯತೆ ಕೊಡುವುದೆಂದರೆ ಅ ಕ್ಷಿತ ಸಮುದಾಯಗಳು ಆ ಶಿಕ್ಷಣದ ಸಮೀಪ ಸುಳಿಯಲೇ ಬಾರದೆಂಬ ಕುತ್ಸಿತ ಬುದ್ಧಿಯನ್ನು ಹೊಂದುವುದಲ್ಲ, ಈ ಸಮುದಾಯಗಳಿಗೂ ಉನ್ನತ ಶಿಕ್ಷಣದಲ್ಲಿ ಸಹಭಾಗಿ ವನ್ನು ಕಲ್ಪಿಸುವುದರ ಮೂಲಕ ಆ ಶಿಕ್ಷಣದಲ್ಲಿ ಹೆ ಹೆಚ್ಚು ವೈವಿಧ್ಯತೆ ಗುಣಾತ್ಮಕತೆ, ಹಾಗೂ ಸೃಜನಾ ನೆಲೆಗಟ್ಟನ್ನು ತಂದು ಕೊಂಡು ಅದನ್ನು ವ್ಯಾಪಕಗೊ ಸುವುದು. ಇಂಥ ಯಶಸ್ವಿ ಅಂಶಗಳನ್ನು ಈ ಶಿಕ್ಷಣಕ್ಕೆ ಅ ವಡಿಸಿಕೊಳ್ಳದೇ ಹೋದರೆ ಅಂಥ ಶಿಕ್ಷಣಕ್ಕೆ ಖಂಡಿ ವಾಗಲೂ ಮಾನವೀಯ ಮುಖ ಇರದು, ಮಾನವೀ ಮುಖ ಹೊಂದಲಾರದ್ದು ಎಂದೂ ಜನ ಪರವಾಗಿ ಲಾರದು, ಜನಪರವಾಗಿಲ್ಲದ ಯಾವುದೂ ದೇಶ ಕ ಲಾರದು ಚರಿತ್ರೆ ಈ ಸತ್ಯವನ್ನು ತಿಳಿಸುತ್ತದೆ.

ಕಳೆದ ನಾಲ್ಕೈದು ಸಾವಿರ ವರ್ಷಗಳಿಂದಲೂ ಎ ಉನ್ನತ ಸ್ಥಾನಗಳು ಮೇಲ್ಜಾತಿಯ ಪ್ರತಿಭೆಗಳಿಗೆ ಮೀ ಲಾಗಿದ್ದವು, ಆದರೂ ಈ ದೇಶದಲ್ಲಿ ಮೌಢ್ಯ, ಅಜ್ಞಾ ಮತ್ತು ಬಡತನಗಳು ತಾಂಡವಾಡುತ್ತಿದ್ದವು, ದೇಶ ಸ್ವಾತಂತ್ರ್ಯ ಬಂದು ಸಂವಿಧಾನ ರಚನೆಯಾದ ನಂತ ಎಲ್ಲಾ ಸಮುದಾಯಗಳು ದೇಶದ ಮುಖ್ಯ ಪ್ರವಾಹ ಯಲ್ಲಿ ಪಾಲುದಾರರಾಗಿದ್ದರಿಂದಲೇ ಈ ಐವತ್ತು ವಷ ಗಳಲ್ಲಿ ದೇಶ ಮುಂದುವರಿಯಲು ಸಾಧ್ಯವಾಯಿತು. ಇದ ಏನನ್ನು ಸೂಚಿಸುತ್ತದೆ? ಜನ ಪರವಾಗಿರುವ ವಿಷಯ ಗಳಷ್ಟು ದೇಶದ ಪ್ರಗತಿಯನ್ನು, ಭವಿಷ್ಯವನ್ನು ನಿರ್ಧ ರಿಸುತ್ತದೆ ಎಂದಲ್ಲವೆ?

ಈ ವಾಸ್ತವನ್ನು ಮುಂದಿಟ್ಟುಕೊಂಡೇ ಮೀಸಲಾತಿ ವಿಸ್ತೃತ ಚಾಲನೆ ಕೊಡಬೇಕಿದೆ, ಮೀಸಲಾತಿ ಎಂದರೆ ಈ ಅಪಮಾನ ವ್ಯವಸ್ಥೆಯಲ್ಲಿ ಬೌದ್ಧಿಕ ಮತ್ತು ಭೌತಿಕ ಹಕ್ಕು ಗಳನ್ನು ಏಕಕಾಲಕ್ಕೆ ಪಡೆಯುವ ಹೋರಾಟ ಮಾತ್ರವಷ್ಟೇ ಅಲ್ಲ ಒಂದು ದೇಶದ ಜನತೆಗೆ ತಮ್ಮ ದೇಶದ ಭವಿಷ್ಯ ನಿರ್ಧಾರಗಳಲ್ಲಿ ಸಮಾನ ತಳಹದಿಯ ಮೇಲೆ ಸಹಭಾ ಗಳಾಗುವುದು ಆ ಮೂಲಕ ದೇಶವನ್ನು ಪ್ರಗತಿಯ ಕೊಂಡೊಯ್ಯುವುದು ಎಂದರ್ಥ.

ಇದು ಸಾಧ್ಯವಾಗ ಬೇಕಾದರೆ ಅಸಮಾನತೆಯ ಪ್ರಮಾಣವನ್ನು ಸ್ಪಷ್ಟವಾಗಿ ತೋರಿಸುವ ಜಾತಿವಾರು ಜನ ಣತಿಯ ಮೇಲೆ ಮೀಸಲಾತಿಯನ್ನು ಕಲ್ಪಿಸಬೇಕಿದೆ. ಆ ಮನುವಾದಿಗಳ ದಕ್ಷತೆ, ದೇಶ ಭಕ್ತಿಗಳ ಹಿಂದಿರು ತಂತ್ರಗಳು, ಸ್ವಾರ್ಥಗಳು, ಹುನ್ನಾರಗಳು ಈ ಸಮಾಜ ತಿಳಿಯುತ್ತದೆ. ಈ ದಿಕ್ಕಿನಲ್ಲಿ ಪ್ರಭುತ್ವದ ಮೇಲೆ ಶೋಷಿ ಸಮುದಾಯಗಳು ಹಾಗೂ ಪ್ರಜ್ಞಾವಂತ ಜನರು ಒತ್ತ ಹೇರಬೇಕಿದೆ. ಇದು ದೇಶದ ಭವಿಷ್ಯದ ದೃಷಿಯಿಂ ಸಮರ್ಥನೀಯವೂ ಕೂಡ. [

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ...ವದೊಳಗಾಗಿ ತಮಗೆ ತಲುಪುತ್ತದೆ. ...ಗೇನಾದರೂ ಮೊದಲನೆಯ ವಾರದ ...ಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ...ಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ...ಮ್ಮ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ...ಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ...ಯೊಂದನ್ನು ನಮಗೆ ಕಳುಹಿಸಬೇಕಾಗಿ ...ರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ...ದಾದಾರರು ಹೊಸ ವರ್ಷದ ಚಂದಾ ...ವನ್ನು ನೀಡುವ ಮೂಲಕ ನವೀಕರಿಸಿಕೊಳ್ಳ ...ು. ಚಂದಾ ಅವಧಿ ಮುಗಿಯುವ ೨-೩ ...ಗಳ ಮೊದಲೇ ಈ ಕುರಿತು ಚಂದಾದಾರರಿಗೆ ...ಹಿತಿ ನೀಡಲಾಗುವುದು. ಅವಧಿ ಮುಗಿದ ...ತಲೇ ಚಂದಾ ನವೀಕರಣ ಮಾಡಿಕೊಳ್ಳದ ...ಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ...ದರಿಂದ ಚಂದಾ ಅವಧಿ ಮುಗಿದಿರುವ ...ರೂ ಕೂಡಲೇ ನವೀಕರಣ ಮಾಡಿಕೊಳ್ಳಬೇ ...ು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸು ...ಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ...ಮ್ಮ ಚಂದಾ ಅವಧಿಯನ್ನು ನಮೂದಿಸಲಾ ...ತ್ತದೆ. ದಯವಿಟ್ಟು ಗಮನಿಸಿ.

...ತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

"ಬೆಳಕಿನ ತುಂಬುರು ನಾದ"



ಅಲ್ಲೊಂದು ಬಾಗಿಲು
ಮತ್ತಿಲ್ಲೊಂದು ಗಡಿ
ಬಾಗಿಲು ತೆರೆದಿದೆ–ಮತ್ತೆ
ಮನಕ್ಕೆ ಮಾತ್ರ
ಜಡಿದುಕೊಂಡ ಕದ
ಸದಾ ಬೆಂದು ಬಾಗಿ
ಬಳಲಿದಂತಿಹ ದೇಹ
ಒಳಗೊಳಗೆ
ಒಳಹೊರಗೆ
ಅಘೋಷಿತ ಮುಪ್ಪು
ಕತ್ತಲಲಿ ಬೆಳಕು ಹುಡುಕಿ
ದೀಪಕ್ಕೇಕೆ ಕತ್ತು
ಬೆಳಕಲ್ಲೆ ಬಿದ್ದು ಬಿದ್ದು
ಹೊರಗೆ ನಿಂತು ಒಳಗೆ ನೋಡುವ
ಕಾರ್ಯ ವೈಖರಿ
ಒಳಗೆ ನಮ್ಮ ತಡೆವರಿಲ್ಲವೆ?
ಆಕಾಶದ ಹಾರು ಹಕ್ಕಿ
ನಿನಗೆಲ್ಲಿ ಹೆಜ್ಜೆ ಗುರುತು
ಅರಳುವ ಹೂಗೆ
ಸಪ್ಪಳದ ಬಿಂಕವೆ

ನಿತ್ಯ ಗೌಜು ಗದ್ದಲ
ಬದುಕಿನ ಮೂಸೆಯಲ್ಲಿ
ಮೌನವೆಲ್ಲಾ ಮಾತು
ಬೆಳಕಿನೊಳಗಿನ ಮರೆತ ಕತ್ತಲು
ಕತ್ತಲು ಹಡೆದ ಬೆಳ್ಳಿ ಬೆಳಕು
ಎಲ್ಲಾ ಬೆಳಕು
ನಮ್ಮೊಳಗೂ
ನಿಮ್ಮೊಳಗೂ........

○ ಗಜಾನನ ಅಡ್ಕಾರ, ಹಂಪಿ

ಸ್ಥಿತ್ಯಂತರ ರಾಜಕಾರಣದ ಸುತ್ತ...

ಡಿ.ಎಸ್. ನಾಗಭೂಷಣ

ಕೊನೆಗೂ ಸಿದ್ಧರಾಮಯ್ಯ ಕಾಂಗ್ರೆಸ್ ಸೇರಿದ್ದಾರೆ. ಇದನ್ನು ತಮ್ಮ ರಾಜಕೀಯ ಜೀವನದ ಅನಿವಾರ್ಯತೆ ಎಂದು ಬಣ್ಣಿಸಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ತಾವೇನೂ ಸಂನ್ಯಾಸಿಯಲ್ಲವೆಂದು (ಹಾಗೆಂದು ಭಾವಿಸಿದ್ದವರಾದರೂ ಯಾರು?) ಹೇಳಿಕೊಂಡು, ಈ ಅನಿವಾರ್ಯತೆ ಎಂಬುದರ ಅರ್ಥವನ್ನು ಸೂಚ್ಯವಾಗಿ ನಿರೂಪಿಸಿದ್ದಾರೆ. ಆ ಮೂಲಕ ರಾಜ್ಯದ ಮುಖ್ಯಮಂತ್ರಿಯಾಗುವ ತಮ್ಮ ಕನಸನ್ನು ಜೀವಂತವಾಗಿರಿಸಿಕೊಂಡಿರುವ ಸಂದೇಶವನ್ನು ತಮ್ಮ ಅಭಿಮಾನಿ-ಅನುಯಾಯಿಗಳಿಗೆ ರವಾನಿಸಿದ್ದಾರೆ. ಆದರೆ ಈ ಸಂದೇಶದ ಜೊತೆಗೇ ಈ ಸಂದರ್ಭದಲ್ಲಿ ಪತ್ರಿಕೆಗಳ ಮುಖಪುಟಗಳಲ್ಲಿ ಪ್ರಕಟವಾಗಿರುವ ಚಿತ್ರಗಳಲ್ಲಿ ಸಿದ್ಧರಾಮಯ್ಯ ಮಂದಸ್ಮಿತರಾಗಿ ಹೆಗಲ ಮೇಲೆ ಕೈ ಹಾಕಿರುವ ವ್ಯಕ್ತಿಗಳ ಚಹರೆಗಳನ್ನು ಬಲ್ಲ ಕರ್ನಾಟಕದ ಜನತೆಗೆ ಇನ್ನೊಂದು ಸಂದೇಶವೂ ರವಾನೆಯಾಗಿದೆ-ಅಧೋಗತಿಗೆ ಇಳಿದಿರುವ ಕರ್ನಾಟಕದ ರಾಜಕಾರಣಕ್ಕೆ ಸದ್ಯಕ್ಕೆ ಮುಕ್ತಿಯಿಲ್ಲ.

ಸಿದ್ಧರಾಮಯ್ಯ ಈಚಿನ ವರ್ಷಗಳಲ್ಲಿನ ರಾಜ್ಯದ ರಾಜಕಾರಣಗಳ ಪೈಕಿ ಸ್ವಲ್ಪ ವಿಭಿನ್ನವಾಗಿ ಕಂಡವರು. ಗೋಪಾಲಗೌಡರ ನಿಧನಾ ನಂತರ ಕ್ರಮೇಣ ವಿಶ್ವಾಸ ಕಳೆದುಕೊಳ್ಳುತ್ತಾ ಹೋದ ಸಮಾಜವಾದಿ ರಾಜಕಾರಣ, ಜೆ.ಹೆಚ್. ಪಟೇಲರ ಮಂತ್ರಿಗಿರಿ-ಮುಖ್ಯಮಂತ್ರಿಗಿರಿಗಳು ಮುಗಿಯುವ ಹೊತ್ತಿಗೆ ಸಮಾಧಿಯಾಗಿ ಹೋಗಿದ್ದ ಸಂದರ್ಭದಲ್ಲಿ ಜನಸಾಮಾನ್ಯರ ರಾಜಕಾರಣದ ಬಗ್ಗೆ ಮತ್ತೆ ಆಸೆ ಹುಟ್ಟಿಸಿದ್ದವರು ಸಿದ್ಧರಾಮಯ್ಯ. ಅಂತಹ ಪ್ರಖರ ಸಮಾಜವಾದಿ ತಾತ್ವಿಕ ಅಥವಾ ಹೋರಾಟದ ರಾಜಕಾರಣದ ಹಿನ್ನೆಲೆ ಇರದಿದ್ದರೂ ತಮ್ಮ ಪಾರದರ್ಶಕ ವ್ಯಕ್ತಿತ್ವ ಹಾಗೂ ಪ್ರಾಮಾಣಿಕ ನಡವಳಿಕೆಯ ಮೂಲಕ, ದಿನೇ ದಿನೇ ಹೊಲಸಾಗಿ ಅಧ್ವಾನಗೊಳ್ಳುತ್ತಿದ್ದ ರಾಜ್ಯ ರಾಜಕಾರಣದ ಮಧ್ಯೆ ಹೊಸ ಭರವಸೆ ಮೂಡಿಸಿದ್ದರು. ಜೊತೆಗೆ ಅಯೋಧ್ಯಾ ಪ್ರಕರಣದಿಂದಾಗಿ ತೊಂಭತ್ತರ ದಶಕದಿಂದೀಚೆಗೆ ರಾಷ್ಟ್ರ ರಾಜಕಾರಣದಲ್ಲಿ ಚರ್ಚೆಗೆ ಒಳಗಾದ ಜಾತ್ಯತೀತತೆ ಹಾಗೂ ಸಾಮಾಜಿಕ ನ್ಯಾಯಗಳ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅವರ ಸಮಾಜವಾದಿ ಒಲವುಗಳು ಹಾಗೂ ಬದ್ಧತೆ ಅವರನ್ನು ರಾಜ್ಯ ರಾಜಕಾರಣದ ಮುನ್ನೆಲೆಗೆ ತಂದು ನಿಲ್ಲಿಸಿದ್ದವು.

ಮುಖ್ಯಮಂತ್ರಿಯಾಗುವ ಎರಡು ಅವಕಾಶಗಳ ಸಂದರ್ಭಗಳಲ್ಲೂ, ಯಾವ ರಾಜಕೀಯ ಅನುಕೂಲ ಪರಿಸ್ಥಿತಿಯಿಂದಾಗಿ ತಮ್ಮ ರಾಜಕೀಯ ಜೀವನದಲ್ಲಿ ಒಮ್ಮೆಗೇ ಉತ್ಕರ್ಷ ಕಂಡಿದ್ದರೋ ಅಂತಹ ರಾಜಕೀಯ ಅನುಕೂಲ ಪರಿಸ್ಥಿತಿಯ ಲಾಭ ಇನ್ನೊಬ್ಬರ ಪಾಲಾದ ಕಾರಣದಿಂದಾಗಿ ಉಪ ಮುಖ್ಯಮಂತ್ರಿ ಪಟ್ಟವನ್ನಷ್ಟೇ ಪಡೆದು, ಆ ಸ್ಥಾನದಲ್ಲೇ ತಮ್ಮ ದಕ್ಷತೆಯನ್ನು ಮೆರೆದಿದ್ದರು. ಆದರೆ ದೇವೇಗೌಡರೆಂಬ ಹಿರಿಯ ಹಾಗೂ ೨೪ ತಾಸುಗಳ ರಾಜಕಾರಣಿಯನ್ನು ನೆಚ್ಚಿಕೊಂಡು ಕಳೆದ ೨೪ ವರ್ಷಗಳ ಕಾಲ ಕಾಂಗ್ರೆಸ್ ವಿರೋಧಿ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದ ಅವರು ಈಗ (ಅಂದರೆ ಆರು ತಿಂಗಳಿನಿಂದೀಚೆಗೆ) ದಿಢೀರನೆ ದೇವೇಗೌಡರ ವಿರುದ್ಧ ತಿರುಗಿ ಬಿದ್ದು ಕಾಂಗ್ರೆಸ್ ತೆಕ್ಕೆಗೆ ಜಾರಿಕೊಳ್ಳುವ ಮೂಲಕ ತಮ್ಮ ರಾಜಕೀಯ ವ್ಯಕ್ತಿತ್ವದ ದೃಢತೆಯ ಬಗ್ಗೆ ಜನರಿಟ್ಟುಕೊಂಡಿದ್ದ ನಂಬಿಕೆಗೇ ಭಂಗ ತಂದೊಡ್ಡಿಕೊಂಡಿದ್ದಾರೆ. ಸಿದ್ಧರಾಮಯ್ಯನವರಂತಹ ವಿಶಿಷ್ಟ ವ್ಯಕ್ತಿತ್ವದ ರಾಜಕಾರಣಿ, ಎಲ್ಲ ವ್ಯಕ್ತಿತ್ವಗಳೂ ಕಲೆಸಿ ಹೋಗುವಂತಹ ಸಗಟು ರಾಜಕಾರಣ ಮಾಡುವ ಕಾಂಗ್ರೆಸ್ ಪಕ್ಷದಲ್ಲಿ ಎಷ್ಟು ಕಾಲ ಬಾಳಿಕೆಯಲ್ಲಿರಬಲ್ಲರು ಎಂಬ ಪ್ರಶ್ನೆಯ ಹೊರತಾಗಿಯೂ, ಅವರೀಗ ಪ್ರದರ್ಶಿಸುತ್ತಿರುವ ರಾಜಕೀಯದ ಮಾದರಿ, ಸದ್ಯದ ರಾಜಕೀಯ ಸಂದರ್ಭದಲ್ಲಿ ಅನೇಕ ಮುಖ್ಯ ಪ್ರಶ್ನೆಗಳನ್ನು ಎತ್ತುತ್ತದೆ.

ಸಕಲ ರಾಜಕೀಯ ಪಕ್ಷಗಳೂ ಇಂದು ಜಾಗತೀಕರಣ ಪ್ರಕ್ರಿಯೆಗೆ ಪೂರಕವಾದ ನಿಲುವುಗಳನ್ನೇ ಪ್ರದರ್ಶಿಸುತ್ತಿವೆ. ಎರಡು ಕಮ್ಯೂನಿಸ್ಟ್ ಪಕ್ಷಗಳೂ ಇದಕ್ಕೇನೂ ಹೊರತಾಗಿಲ್ಲ.ಅವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ವಿದೇಶಿ ಬಂಡವಾಳದ ಆಹ್ವಾನ, ಸರ್ಕಾರಿ ಉದ್ಯಮಗಳ ಖಾಸಗೀಕರಣ ಮುಂತಾದ 'ಆರ್ಥಿಕ ಸುಧಾರಣೆ'ಗಳನ್ನು ಕೈಗೊಳ್ಳುತ್ತಾ, ಆ ರಾಜ್ಯಗಳ ಹೊರಗಷ್ಟೇ ಒಂದು ತಾತ್ವಿಕ ಚಾಳಿಯೆಂಬಂತೆ ಜಾಗತೀಕರಣ ವಿರೋಧಿ ಪ್ರತಾಪವನ್ನು ತೋರಿಸುತ್ತಿವೆ. ಹೀಗಾಗಿ ನಮ್ಮ ಸದ್ಯದ ರಾಷ್ಟ್ರೀಯ ರಾಜಕೀಯ ಸಂದರ್ಭವೇ ಜಾಗತೀಕರಣದ ಅನಿವಾರ್ಯತೆಯನ್ನು ಇಡಿಯಾಗಿ ಒಪ್ಪಿಕೊಂಡಂತೆ ಕಾಣುತ್ತಿದೆ. ಇದಕ್ಕೆ ಮುಖ್ಯ ಕಾರಣ ಇಂದಿನ ರಾಜಕಾರಣ ಯಾವೊಬ್ಬ ಸೃಜನಶೀಲ ಚಿಂತಕನನ್ನೂ ತಮ್ಮ ನಾಯಕತ್ವದ ಪರಿಧಿಯೊಳಕ್ಕೆ ಬಿಟ್ಟುಕೊಳ್ಳದಷ್ಟು ಜಡಗೊಂಡಿರುವುದೇ ಆಗಿದೆ. ಹಾಗಾಗಿಯೇ ಇಂದಿನ ರಾಜಕಾರಣಕ್ಕೆ ಕಳೆದ ೧೦-೧೫ ವರ್ಷಗಳಲ್ಲಿ ರಾಷ್ಟ್ರಾದ್ಯಂತ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಒಂದು ಲಕ್ಷವನ್ನು ದಾಟಿದ್ದರೂ, ಇದನ್ನು ರಾಷ್ಟ್ರೀಯ ದುರಂತವೆಂದು ಪರಿಗಣಿಸಲು ಹಾಗೂ ಇದರ ಹಿಂದೆ ಜಾಗತಿಕ ರಾಜಕಾರಣದ ಒತ್ತಡಗಳೇನಾದರೂ ಕೆಲಸ ಮಾಡಿವೆಯೋ ಎಂಬುದನ್ನು ಪರಿಶೀಲಿಸಲು ಸಾಧ್ಯವಾಗದೇ ಹೋಗಿದೆ.

ಗ್ರಾಮವೇ ಭಾರತದ ಹೃದಯ, ರೈತನೇ ದೇಶದ ಬೆನ್ನೆಲುಬು ಎಂಬ ನಂಬಿಕೆ-ಘೋಷಣೆಗಳೊಂದಿಗೆ ರಾಷ್ಟ್ರೀಯ ನವೋದಯದ ಸಂದರ್ಭದಲ್ಲಿ ಆರಂಭವಾದ ರಾಷ್ಟ್ರ ನಿರ್ಮಾಣದ ಕೆಲಸ ಈಗ ರೈತರ ಎಡೆಬಿಡದ ಆತ್ಮಹತ್ಯೆಗಳ ಸರಮಾಲೆಯನ್ನು ತನ್ನ ಕೊರಳಿಗೆ ಹಾಕಿಕೊಳ್ಳುವ ಸ್ಥಿತಿ ತಲುಪಿದೆ. ಯಾಕೆ ಹೀಗಾಯಿತು? ರಾಷ್ಟ್ರ ನಿರ್ಮಾಣಕ್ಕಾಗಿ ನಾವು ಆರಿಸಿಕೊಂಡ ಅಭಿವೃದ್ಧಿ ಮಾದರಿಯ ಅಸಮರ್ಪ

ಸಕಲ ರಾಜಕೀಯ ಪಕ್ಷಗಳೂ ಇಂದು ಜಾಗತೀಕರಣ ಪ್ರಕ್ರಿಯೆಗೆ ಪೂರಕವಾದ ನಿಲುವುಗಳನ್ನೇ ಪ್ರದರ್ಶಿಸುತ್ತಿವೆ. ಎರಡು ಕಮ್ಯೂನಿಸ್ಟ್ ಪಕ್ಷಗಳೂ ಇದಕ್ಕೇನೂ ಹೊರತಾಗಿಲ್ಲ.ಅವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ವಿದೇಶಿ ಬಂಡವಾಳದ ಆಹ್ವಾನ, ಸರ್ಕಾರಿ ಉದ್ಯಮಗಳ ಖಾಸಗೀಕರಣ ಮುಂತಾದ 'ಆರ್ಥಿಕ ಸುಧಾರಣೆ'ಗಳನ್ನು ಕೈಗೊಳ್ಳುತ್ತಾ, ಆ ರಾಜ್ಯಗಳ ಹೊರಗಷ್ಟೇ ಒಂದು ತಾತ್ವಿಕ ಚಾಳಿಯೆಂಬಂತೆ ಜಾಗತೀಕರಣ ವಿರೋಧಿ ಪ್ರತಾಪವನ್ನು ತೋರಿಸುತ್ತಿವೆ. ಹೀಗಾಗಿ ನಮ್ಮ ಸದ್ಯದ ರಾಷ್ಟ್ರೀಯ ರಾಜಕೀಯ ಸಂದರ್ಭವೇ ಜಾಗತೀಕರಣದ ಅನಿವಾರ್ಯತೆಯನ್ನು ಇಡಿಯಾಗಿ ಒಪ್ಪಿಕೊಂಡಂತೆ ಕಾಣುತ್ತಿದೆ. ಇದಕ್ಕೆ ಮುಖ್ಯ ಕಾರಣ ಇಂದಿನ ರಾಜಕಾರಣ ಯಾವೊಬ್ಬ ಸೃಜನಶೀಲ ಚಿಂತಕನನ್ನೂ ತಮ್ಮ ನಾಯಕತ್ವದ ಪರಿಧಿಯೊಳಕ್ಕೆ ಬಿಟ್ಟುಕೊಳ್ಳದಷ್ಟು ಜಡಗೊಂಡಿರುವುದೇ ಆಗಿದೆ.

ಗ್ರಾಮವೇ ಭಾರತದ ಹೃದಯ, ರೈತನೇ ದೇಶದ ಬೆನ್ನೆಲುಬು ಎಂಬ ನಂಬಿಕೆ-ಘೋಷಣೆಗಳೊಂದಿಗೆ ರಾಷ್ಟ್ರೀಯ ನವೋದಯದ ಸಂದರ್ಭದಲ್ಲಿ ಆರಂಭವಾದ ರಾಷ್ಟ್ರ ನಿರ್ಮಾಣದ ಕೆಲಸ ಈಗ ರೈತರ ಎಡೆಬಿಡದ ಆತ್ಮಹತ್ಯೆಗಳ ಸರಮಾಲೆಯನ್ನು ತನ್ನ ಕೊರಳಿಗೆ ಹಾಕಿ ಕೊಳ್ಳುವ ಸ್ಥಿತಿ ತಲುಪಿದೆ. ಯಾಕೆ ಹೀಗಾಯಿತು? ರಾಷ್ಟ್ರ ನಿರ್ಮಾಣಕ್ಕಾಗಿ ನಾವು ಆರಿಸಿಕೊಂಡ ಅಭಿವೃದ್ಧಿ ಮಾದರಿಯ ಅಸಮರ್ಪಕತೆಯೇ ಇದಕ್ಕೆ ಕಾರಣವಾಗಿರಬಹುದೇ? ಈ ಮಾದರಿಗೆ ಆಧಾರವಾದ ಆಧುನೀಕರಣದ ಪರಿಕಲ್ಪನೆಯೇ ನಮಗೆ ಕೈಕೊಟ್ಟಿತೇ? ಪಶ್ಚಿಮದ ವೈಜ್ಞಾನಿಕತೆಯನ್ನೇ ತನ್ನ ಪರಮ ಧರ್ಮವನ್ನಾಗಿ ಒಪ್ಪಿಕೊಂಡ ಆಧುನಿಕರಣದ ಪರಿಕಲ್ಪನೆಗೆ ನಮ್ಮ ರೈತ ಕೇಂದ್ರಿತ ಗ್ರಾಮ ಸಮಾಜದ ಎಲ್ಲ ಆಯಾಮಗಳನ್ನು ಒಳಗೊಳ್ಳಲು, ಅರ್ಥ ಮಾಡಿಕೊಳ್ಳಲು ಸಾಧ್ಯವಾಗದೇ ಹೋಯಿತೇ?

ವೇ ಇದಕ್ಕೆ ಕಾರಣವಾಗಿರಬಹುದೇ? ಈ ಮಾದರಿಗೆ ರ ಪಾಪ ಆಧುನೀಕರಣದ ಪರಿಕಲ್ಪನೆಯೇ ನಮಗೆ ಬೇಕೇ? ಪಶ್ಚಿಮದ ವೈಜ್ಞಾನಿಕತೆಯನ್ನೇ ತನ್ನ ಪರಮ ವನ್ನಾಗಿ ಒಪ್ಪಿಕೊಂಡ ಆಧುನೀಕರಣದ ಪರಿಕಲ್ಪನೆಗೆ ರೈತ ಕೇಂದ್ರಿತ ಗ್ರಾಮ ಸಮಾಜದ ಎಲ್ಲ ಆಯಾಮ ನ್ನು ಒಳಗೊಳ್ಳಲು, ಅರ್ಥಮಾಡಿಕೊಳ್ಳಲು ಸಾಧ್ಯ ವೇ ಹೋಯಿತೇ? ಇಂತಹ ಆಧುನೀಕರಣ ಪ್ರಕ್ರಿಯೆ ಗ್ರಾಮ ಹಾಗೂ ರೈತನ 'ಮಾತೃಕೆ'ಗಳೇ ಸೀಳು ವೇ? ಆಧುನೀಕರಣದ ಹೊರ ಆಕರ್ಷಣೆಗೆ (ಹಸಿರು ತಿಯ ತತ್ಕಾಲೀನ ಆರ್ಥಿಕ ಲಾಭಗಳು) ಒಳಗಾದ ತನ್ನ ಒಳಗಿನ ಸ್ಮೃತಿ ಕರೆಗೆ ಓಗೊಡದಾದನೆ? ಆ ಲಕ ತಳಗೆ ಬೇರು ಕೆಳಚಿಕೊಳ್ಳುತ್ತಿರುವ ಅನುಭ ಎರವಾದನೇ? ಅಪ್ಪಟ ಮಣ್ಣಿನ ಮಗನಾಗಿ ಮೂಡಿ ಪ್ರತಿನಿಧಿಯಾಗಿ ರಾಜಕಾರಣ ಮಾಡುತ್ತ ಬಂದ ಗೌಡರೇ ಭೂ-ಪರಿಮಿತಿ ಹಾಗೂ ಭೂ-ಪರಭಾರೆ ದೆಗಳಿಗೆ ತಿದ್ದುಪಡಿ ತರುವಂತಾದುದು ಹೇಗೆ? ಜವಾದಿ ಹಿನ್ನೆಲೆಯ ಪ್ರೊ॥ ನಂಜುಂಡಸ್ವಾಮಿ ಮತ್ತ ಗೆಳೆಯರ ನೇತೃತ್ವದ ರೈತ ಚಳುವಳಿ ರೈತನನ್ನು ದಕ ಮಾತ್ರನನ್ನಾಗಿ ನೋಡಿದುದರ ಹಿಂದಿನ ರ್ಥವೇನು? ದಲಿತರ ಪಾಲಿಗೆ ಹಳ್ಳಿ ನರಕ ಎಂಬ ೕಡ್ಕರ್ ನಿಲುವನ್ನು ಪೂರ್ಣಸತ್ಯವಾಗಿ ಪರಿಗಣಿಸದ ಟಕದ ದಲಿತ ಚಳುವಳಿಯನ್ನು ನಂತರ ಆರಂಭ ಡ ರೈತ ಚಳುವಳಿ ಹಿನ್ನೆಲೆಗೆ ಸರಿಸಿ, ಕ್ರಮೇಣ ಹಿನ್ನೆಲೆಗೆ ಸರಿಯುವಂತಾದುದರ ದುರಂತಕ್ಕೆ ಏನು ? ಇದನ್ನು ನಂಜುಂಡಸ್ವಾಮಿಯವರ 'ಅಮೃತ ' ಎಂಬ ಅಂತಾರಾಷ್ಟ್ರೀಯ ಟ್ರಸ್ಟ್ ಸ್ಥಾಪನೆಯ ಕೆಲಸ ಮಾಡಿದ ಜಾಗತಿಕ (ರೈತ) ರಾಜ ಕಾರಣ ಹುಡುಕೋಣವೇ?

ಆಧುನೀಕರಣವೆಂದರೆ ಒಕ್ಕಣ್ಣಿನ ಅಭಿವೃದ್ಧಿ. ನಗರೀ ವೇ ಅದರ ಪರಮಾರ್ಥ. ನಗರೀಕರಣವೆಂದರೆ ನಡಿಗೆ, ತಣಿಯದ ದಾಹ, (ಅದರ ಆಯಾಸದಲ್ಲಿ) ಹೋಗುವ ಮನುಷ್ಯ. ಹಳ್ಳಿಯ ಲ್ಲಿದ್ದೂ. ಈ ಆಧು ಣಕ್ಕೆ ಒಳಗಾದವರ ಗತಿಯೂ ಅದೇನೇ. ಹಾಗಾ ಆಧುನೀಕರಣ ನಮ್ಮ ಹಳ್ಳಿಗಳನ್ನು ಹಸಿರು ಗೆ ತೆರಬೇಕಾದ ಬೆಲೆ ಎಂಬಂತೆ ಅವುಗಳನ್ನು ಪೆಗಳನ್ನಾಗಿ ಪರಿವರ್ತಿಸಿ, ಅದರಿಂದ ಅನುಕೂಲ ಮತ್ತು ಪಡೆಯದ ಇಬ್ಬರನ್ನೂ ಬೇರೆ ಬೇರೆ ಗಳಿಗಾಗಿ ನಗರಗಳಿಗೆ ದಬ್ಬಿತು: ಜಾತಿ ವ್ಯವಸ್ಥೆಯ ದದಲ್ಲಿ ಒಂದು 'ಸ್ಥಿರತೆ'ಯಲ್ಲಿದ್ದ ಹಳ್ಳಿಗಳನ್ನು ಜಾತಿ ಹಾಗೂ ಅದನ್ನು ಆಧರಿಸಿದ ಗ್ರಾಮಾಡಳಿತ ಯಿಂದ ಬಿಡುಗಡೆಗೊಳಿಸಿ 'ಅಸ್ಥಿರತೆ'ಗೆ ದೂಡಿತಷ್ಟೆ; ಒಂದು ಹೊಸ ಸ್ಥಿರತೆಯನ್ನಾಗಲೀ-ಸಮತೋಲ ಗಲೀ ಒದಗಿಸುವ ಬುದ್ಧಿಯಾಗಲೀ ಹೃದಯ ೕ ಅದಕ್ಕಿರಲಿಲ್ಲ. ಏಕೆಂದರೆ ಅದು ಹಳ್ಳಿಗಳ ಎಲ್ಲ ಕೌಶಲ್ಯಗಳನ್ನು, ಅವುಗಳಿಂದ ಭಟ್ಟಿಯಾಗುತ್ತಿದ್ದ ಪಾಕ ವಿವೇಕವನ್ನು ತನ್ನ ಹೊಸ ವಿಜ್ಞಾನ-ವಿದ್ಯೆಯ ಗೆ ಪಟ್ಟಿ ಮಾಡಿ, ಅವುಗಳನ್ನು ಸಾರಾಸಗಟಾಗಿ ದ ಸಮಾಜವೊಂದರ 'ರೋಗಲಕ್ಷಣ'ಗಳಂತೆ ಸಿದ ಹೊಸ ಅಂತಾರಾಷ್ಟ್ರೀಯ ಔಷಧ ಪದ್ಧತಿ ಲೋಕದ ಸಗಟು ವ್ಯಾಪಾರಿಯಂತೆ ವರ್ತಿಸಿತು. ಅತ್ಮವಿಶ್ವಾಸಕ್ಕೂ ಆಘಾತ ಮಾಡಿತು. ಹಳ್ಳಿಗಳ ಸ್ವಾಯತ್ತತೆಯನ್ನೇ ನಾಶ

ಮಾಡಿ 'ಬಡತನ' ಎಂಬ ಭೀಕರ ರೋಗವೊಂದನ್ನು ಪತ್ತೆ ಹಚ್ಚಿತು. ನಿವಾರಣೆಯಾದಷ್ಟೂ ಹೆಚ್ಚುತ್ತಾ ಹೋಗುವ ಈ ವಿಚಿತ್ರ ರೋಗದ ಭಯ ಹುಟ್ಟಿಸಿತು. ಆಧುನೀಕರಣದ ಮೊದಲ ಹೆಜ್ಜೆಗಳ ಸಪ್ಪಳದಲ್ಲೇ ಅದರ ಈ ಅಘಾತಕಾರಿ ತರಂಗಗಳನ್ನು ಗ್ರಹಿಸುವಷ್ಟು ಸೂಕ್ಷ್ಮರಾಗಿದ್ದ ಗಾಂಧೀಜಿ (ಅವರೂ ವ್ಯಾಪಾರಿಯೇ-ಅದರೆ ನಮ್ಮ ವ್ಯಾಪಾರಿ!) ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಇದರ ವಿರುದ್ಧ ತಮ್ಮ ಮೊದಲ ಮತ್ತು ನಿರ್ಣಾಯಕ 'ಮಾಡು ಇಲ್ಲವೇ ಮಡಿ' ಕಾರ್ಯಕ್ರಮ ವನ್ನು ಘೋಷಿಸಿದ್ದರು. ಅವರ ೧೯೪೨ರ 'ಮಾಡು ಇಲ್ಲವೇ ಮಡಿ' ಘೋಷಣೆ ಏನಿದ್ದರೂ ಮೊದಲಿನದರ ಕ್ಷೀಣ ಪ್ರತಿಧ್ವನಿ ಮಾತ್ರವಾಗಿತ್ತು; ಮೊದಲಿನದರ ಸೋಲನ್ನು ನುಂಗಿಕೊಂಡ ವಿಚಲತೆ ಅದರಲ್ಲಿತ್ತು. ಹಾಗಾಗಿಯೇ ಅದು ಗಾಂಧಿ ಆಶಯ ಮತ್ತು ನಿರೀಕ್ಷೆಗಳಿಗೆ ವಿರುದ್ಧವಾಗಿ ವ್ಯಾಪಕ ಹಿಂಸಾಚಾರಕ್ಕೆ ತಿರುಗಿ ವೈಭವೀಕರಣಗೊಳ್ಳುವ ಮೂಲಕ-ಅದರ ನೇತೃತ್ವ ವಹಿಸಿದ್ದ ಸಮಾಜವಾದಿಗಳಿಗೆ ಸ್ವತಃ ಗಾಂಧೀಜಿ ಹೇಳಿದಂತೆ-ದೇಶವಿಭಜನೆ ಸಂದರ್ಭದ ಕೋಮು ಹಿಂಸಾಚಾರಕ್ಕೆ ವಾತಾವರಣ ನಿರ್ಮಾಣ ಮಾಡಿಕೊಟ್ಟಿತು.

ಅದೇನೇ ಇರಲಿ, ಗಾಂಧೀಜಿ ಈ ಪಾಶ್ಚಿಮಾತ್ಯ ಶೈಲಿಯ ಆಧುನೀಕರಣದಲ್ಲಿ ಹಿಂಸೆ ಕಂಡಿದ್ದರು. ಹಾಗೆ ನೋಡಿದರೆ ಗಾಂಧೀಜಿ ಆ ಕಾಲದ ದೊಡ್ಡ ಆಧುನಿಕರು-ಮಧ್ಯಯುಗೀನ ನಂಬಿಕೆಗಳಲ್ಲೇ ಲಂಗರು ಹಾಕಿದ್ದ ಭಾರತೀಯ ಸಮಾಜವನ್ನು ತಮ್ಮ 'ಸತ್ಯಾಗ್ರಹ'ದ ಪ್ರಯೋಗಗಳ ಮೂಲಕ ಅಂದಿನ ವಾಸ್ತವದ ಸತ್ಯಗಳಿಗೆ ಎಚ್ಚರಿಸಿದವರು; ಯಾವುದೇ ತರತಮವಿಲ್ಲದೆ, ಎಲ್ಲ ಮನುಷ್ಯರ ಘನತೆ ಸಮಾನವಾದುದೆಂದು ತಮ್ಮ ಜನ ಸಂಘಟನೆ ಹಾಗೂ ಹೋರಾಟದ ರೀತಿ ನೀತಿಗಳಿಂದಲೇ ತೋರಿಸಿಕೊಟ್ಟವರು. ಆ ನಂಬಿಕೆ ಮಾತ್ರ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕೆ ಧಾರಣ ಶಕ್ತಿ ನೀಡಬಲ್ಲದೆಂದು ಅವರು ಮನಗಂಡಿದ್ದರು. ಇದೇ ಇಂದು ನಾವು ಅಧ್ವಾನಗೊಳಿಸಿ ವಿಷಮ ಚರ್ಚೆಗೆ ಕಾರಣ ಮಾಡಿರುವ 'ಸಾಮಾಜಿಕ ನ್ಯಾಯ'ದ ಮೂಲ ರೂಪ ಕೂಡಾ. ಹಾಗಾಗಿ ಗಾಂಧೀಜಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ಪಡೆಯಬೇಕಾದ ಮುಕ್ತಿ, ಸಾಮಾಜಿಕ ನ್ಯಾಯ ಸ್ಥಾಪನೆಯ ಮೊದಲ ಕ್ರಮವಾಗಿತ್ತು. ಅಂದರೆ ಗಾಂಧೀಜಿಗೆ ಆಧುನೀಕರಣವೆಂದರೆ ಸಾಮಾಜಿಕ ನ್ಯಾಯವೇ ಆಗಿತ್ತು. ಆದರೆ ಅದರಲ್ಲಿ ಇಂದಿನ ಸಾಮಾಜಿಕ ನ್ಯಾಯದಂತೆ ಆಡಳಿತದಲ್ಲಿ ಪಾಲು ಕೇಳುವುದಷ್ಟೇ ಅಲ್ಲ, ಉತ್ಪಾದನಾ ಪ್ರಕ್ರಿಯೆಯಲ್ಲೂ ಪಾಲು ಉಳಿಸಿಕೊಳ್ಳುವುದು ಕೂಡಾ ಸೇರಿತ್ತು. ಏಕೆಂದರೆ ಆಗ ಮಾತ್ರ ಸಾಮಾಜಿಕ ನ್ಯಾಯ ಸುಸ್ಥಿರವಾಗಬಲ್ಲುದು ಎಂಬ ಮುನ್ನೋಟ ಅದಕ್ಕಿತ್ತು. ಇದು ಸಾಧ್ಯವಾಗುವುದು ಆಧುನೀಕರಣವನ್ನು ಪಶ್ಚಿಮದ ನಗರೀಕರಣದ ಮಾದರಿಗೆ ಬದಲಾಗಿ ಗ್ರಾಮೀಣೀಕರಣದ ಮೂಲಕ ಕೈಗೊಂಡಾಗ ಮಾತ್ರ.

ಗ್ರಾಮೀಣೀಕರಣ ಎಂದರೆ; ಭಾರತದ ಜೀವಸತ್ವ ಅಥವಾ ಸುಪ್ತಮನಸ್ಸು ಹಳ್ಳಿಯೇ ಆಗಿರುವುದರಿಂದ, ಅದರೆಲ್ಲ ವಿಶಿಷ್ಟ ಪ್ರತಿಭೆಯೂ ಅಲ್ಲಿಂದಲೇ ಹೊರ ಹೊಮ್ಮುತ್ತಾದ್ದರಿಂದ, ಹಳ್ಳಿಯನ್ನು ಎಚ್ಚರಿಸುವುದೇ ಆಗಿದೆ. ಎಚ್ಚರಿಸುವುದು ಎಂದರೆ, ಜಡತೆಯಿಂದ ಹೊರತಂದು ಕ್ರಿಯಾಶೀಲಗೊಳಿಸುವುದು; ಕಳೆದು ಹೋಗುತ್ತಿರುವ ಅದರ ಸ್ವಾಯತ್ತತೆಯನ್ನು ಮರಳಿ ಸ್ಥಾಪಿಸುವುದು. *ಅದರ ಸ್ವಾಯತ್ತತೆ ನಾಶವಾಗಿದ್ದೇ, ಅದರ ಉತ್ಪಾದನಾ ಸಾಮರ್ಥ್ಯಕ್ಕೆ ಪೆಟ್ಟು ಬಿದ್ದುದರಿಂದ. ಅದರ ಉತ್ಪಾದನಾ ಸಾಮರ್ಥ್ಯಕ್ಕೆ ಪೆಟ್ಟು ಬಿದ್ದುದೇ, ಅಲ್ಲಿನ ಕಸುಬುದಾರಿಕೆಯು-ಸಾಮ್ರಾಜ್ಯಶಾಹಿ ಶೋಷಣೆಯ ಅಸ್ತ್ರವಾಗಿ ಬಂದ ಬೃಹತ್ ಉತ್ಪಾದನೆಯನ್ನು ಸಾಧ್ಯಗೊಳಿಸಿದ ತಂತ್ರಜ್ಞಾನದ ಹಾಗೂ ಬಳಕೆದಾರಿಕೆಯ-ಆಧುನೀಕರಣದಿಂದಾಗಿ ನಾಶವಾಗತೊಡಗಿದ್ದರಿಂದ.

ಇದನ್ನು, ಗಾಂಧೀಜಿ, ಅನ್ನ ತಿನ್ನಲು ಕೈಗೆ ಬದಲಾಗಿ ಒಂದು ಯಂತ್ರ (ವೈಜ್ಞಾನಿಕ ಸಾಧನ)ವನ್ನು ಬಳಸಿಕೊಳ್ಳು

ವುದಕ್ಕೆ ಹೋಲಿಸುತ್ತಾರೆ: ಇದು, ಅನ್ನದ ಸ್ಪರ್ಶ, ಅಗತ್ಯಕ್ಕೆ ತಕ್ಕಂತೆ ತುತ್ತಿನ ಗಾತ್ರವನ್ನು ನಿರ್ಣಯಿಸುವ ಮನಸ್ಸು ಮತ್ತು ಬೆರಳುಗಳ ಸಹಜ ಹೊಂದಾಣಿಕೆಯ ನೆಮ್ಮದಿ ಹಾಗೂ ಬಾಯಿಗೆ ತಾನೊಂದು ಭಾಗವಾಗಿರುವ ದೇಹದ್ದೇ ಇನ್ನೊಂದು ಭಾಗವಾದ ಕೈ, ತುತ್ತುಣಿಸುವುದರ ಹಿಂದಿನ ಜೀವ ಸ್ವಾಯತ್ತತೆಯ ನಿರಾಳತೆಯನ್ನು ಕಳೆದು ಕೊಳ್ಳುವುದಕ್ಕೆ ಸಮನಾದ ದುರಂತ ಎಂದು ಎಚ್ಚರಿಸುತ್ತಾರೆ. ಇದು ನಿಜವಾಗಿಯೂ ಗ್ರಾಮದ ಆತ್ಮಸಾಕ್ಷಿಯನ್ನು, ಅದರೆಲ್ಲ ಆಳಗಳೊಂದಿಗೆ ಎಚ್ಚರಿಸುವ ಕೆಲಸ; ತಾನು ಸೃಜನಶೀಲವಾಗುಳಿಯದಂತೆ ತಡೆದ ಶಕ್ತಿಗಳನ್ನು ಗುರುತಿಸುವ ಕೆಲಸ ಹಾಗೂ ಅದರಿಂದಾಗಿಯೇ ಹೊರಗಿನ ಸೃಜನಶೀಲತೆ (ಪಾಶ್ಚಿಮಾತ್ಯ ಶೈಲಿಯ ಯಂತ್ರೀಕರಣ)ಗೆ ಪಕ್ಕಾಗಿ ತಮ್ಮ ಉತ್ಪಾದನಾಶೀಲತೆಯನ್ನು ಕಳೆದುಕೊಂಡುದದರ ಪರಿಣಾಮಗಳ ಬಗ್ಗೆ ಆಳವಾಗಿ ಯೋಚಿಸುವ ಕೆಲಸ. ಬ್ರಿಟಿಷ್ ಗಿರಣಿಗಳಿಗೆ ಕೆಲಸ ಕೊಡಲು ಭಾರತದ ನೇಕಾರರ ಬೆರಳುಗಳನ್ನು ಕಡಿದು ಹಾಕಿದ ಸಾಮ್ರಾಜ್ಯಶಾಹಿಯ ಕ್ರೌರ್ಯ, ಆಧುನೀಕರಣದ ಅತಿಶಯದ ಇತಿಹಾಸದಲ್ಲಿ ಕಂಡೂ ಕಾಣದಂತಾಗಿರುವುದರ ಮರ್ಮವಾದರೂ ಏನು ಎಂದು ವಿಚಾರಿಸುವ ಕೆಲಸ.

ಹೀಗೆ ವಿಚಾರಿಸಿದಾಗ ಗೊತ್ತಾಗುವುದು, ಹಳ್ಳಿಯ ಸಾಮಾಜಿಕ ರಚನೆ ಜಾತಿ ವ್ಯವಸ್ಥೆಯಾಗಿ ಸ್ಥಗಿತಗೊಂಡಿದ್ದುದೇ ಅದರ ಒಟ್ಟಾರೆ ಜಡತೆಗೆ, ಅದರ ಸೃಜನ ಹೀನತೆಗೆ, ಅದರ ಕಸುಬುದಾರಿಕೆ ಆಧುನಿಕ ಯಂತ್ರೀಕರಣವನ್ನು ಎದುರಿಸಲಾರದೇ ಹೋದುದಕ್ಕೆ, ಮೂಲಕಾರಣ ಎಂದು. ಜಾತಿ ವ್ಯವಸ್ಥೆಯಲ್ಲಿನ ತರ-ತಮದ ಶ್ರೇಣೀಕರಣ ಹೆಪ್ಪುಗೊಂಡಿದ್ದೇ ಕಸುಬುದಾರಿಕೆ ಕುರಿತಾದ ನಿಷೇಧ-ಮೈಲಿಗೆಗಳ (ಅ)ನೀತಿ ಸಂಹಿತೆಯಿಂದ. ಈ ನೀತಿ ಸಂಹಿತೆ, ಗ್ರಾಮವು ಒಂದು ತೆರೆದುಕೊಂಡ ಸಮಾಜವಾಗಿ ಪ್ರಯೋಗಗಳಲ್ಲಿ ತೊಡಗುವುದನ್ನೇ ಬಂದ್ ಮಾಡಿತು. ಗಾಂಧೀಜಿ ತಿರುಗುವ ಚರಕಾದ ಮೂಲಕ ಹಳ್ಳಿಯನ್ನು ಮತ್ತೆ ಜೀವಂತಗೊಳಿಸಲು ಯತ್ನಿಸಿದರು. ಅದು ಆರಂಭ ಮಾತ್ರವಾಗಿತ್ತು. ಚರಕಾ, ಗಾಂಧಿ ಕಲ್ಪನೆಯ ಆಧುನೀಕರಣದ (ಗ್ರಾಮೀಣೀಕರಣದ) ಮೂಲ ಮಾತೃಕೆ ಇದ್ದಂತೆ. ಹಾಗೇ ಅದು ಸಾಮಾಜಿಕ ನ್ಯಾಯದ ಮೂಲ ಮಾತೃಕೆ ಕೂಡಾ: ಉತ್ಪಾದನೆಯಲ್ಲಿ ಸರ್ವರಿಗೂ ಸಮಾನಾವಕಾಶ ಒದಗಿಸುವಂತಹ ಸೃಜನಶೀಲ ತಾಂತ್ರಿಕತೆ ಮೂಲಕ ಕಟ್ಟುವ ಸಮಾಜದ ಒಡೆತನ ಸಹಜವಾಗಿಯೇ ಸರ್ವರಲ್ಲೂ ಪ್ರಾತಿನಿಧಿಕವಾಗಿ ಹಂಚಿ ಹೋಗುವ ವ್ಯವಸ್ಥೆಯದು. ಆದರೆ ಭಾರತದ ಮುಚ್ಚಿಕೊಂಡ ಜಾತಿಸಮಾಜ, ಅದನ್ನು ಬಿಚ್ಚಲು ಹೊರಟ ಗಾಂಧೀಜಿಯನ್ನು ಕೊಂದು ಹಾಕುವ ಮೂಲಕ ಆ ವ್ಯವಸ್ಥೆಯ ಆಶಯವನ್ನೇ ನುಚ್ಚುನೂರು ಮಾಡಿತು.

ಈ ನುಚ್ಚು ನೂರಾದ ಆಶಯವನ್ನೇ ತಮ್ಮ ಸಣ್ಣ ಘಟಕ ತಂತ್ರಜ್ಞಾನ, ಆಡಳಿತ ವಿಕೇಂದ್ರೀಕರಣ, ಜಾತಿ ವಿನಾಶ ಹಾಗೂ ಭಾರತೀಯ ಭಾಷಾ ಆಂದೋಲನಗಳ ಮೂಲಕ ಪುರ್ನಸಂಘಟಿಸಲು ಯತ್ನಿಸಿದ ಸಮಾಜವಾದಿಗಳು, ಗಾಂಧೀಜಿಯ 'ಅಹಿಂಸೆ'ಯ ತಿರುಳನ್ನೇ ಅರಿಯದೆ, ಕ್ರೋಧಕ್ಕೆ ಬಿದ್ದು ಸ್ವತಃ ತಾವೇ ನುಚ್ಚು ನೂರಾದರು: ಸಮಾಜವಾದಿ ಆಂದೋಲನವು ನೆಹರೂ ಅವರ 'ಆಧುನಿಕತೆ'ಯ ಖಯಾಲಿಯನ್ನಾಧರಿಸಿದ ರಾಜಕಾರಣದಿಂದಾಗಿ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಭಾರಿ ಆಘಾತವನ್ನನುಭವಿಸಿತು. ಅದರ ಪರಿಣಾಮವಾಗಿಯೋ

ಕಾಂಗ್ರೆಸ್ ಮೂಲದ ಸಮಾಜವಾದಿಗಳ ಕಾಲ ಮುಗಿದಿದೆ. ಅವರ ಮಾರ್ಗ ಬಿಟ್ಟು ಅವರ ಗುರಿಯನ್ನು ಅರಸುವ ಹಂಬಲ ಅನೇಕ ರೂಪಗಳಲ್ಲಿ ಇಂದು ವ್ಯಕ್ತವಾಗುತ್ತಿದೆ. ಮೇಧಾಪಾಟ್ಕರ್‌ರ 'ನರ್ಮದಾ ಬಚಾವೋ ಆಂದೋಲನ' ಅದರ ಆಶ ಯದ ದೃಷ್ಟಿಯಿಂದ ಇಂತಹ ರೂಪಗಳ ಒಂದು ದೊಡ್ಡ ಮಾದರಿಯಾಗಿದೆ. ಹಾಗೇ ಅಣ್ಣಾ ಹಜಾರೆ ಅವರ ಮಾದರಿ ಗ್ರಾಮ ಪ್ರಯೋಗವು ಒಂದು ಚಿಕ್ಕ ಮಾದರಿಯಾಗಿದೆ. ಇದರ ಜೊತೆಯಲ್ಲೇ ಭಾರತದಾದ್ಯಂತ ಅನೇಕ ಸಣ್ಣ ಗುಂಪುಗಳು, ನೀರು, ಕಾಡು, ಖನಿಜ, ಬೀಜ, ಕಸುಬುಗಳ ಸಂರಕ್ಷಣೆಗಾಗಿ ಆಂದೋಲನಗಳನ್ನು ನಡೆಸಿವೆ. ಈ ಹಿನ್ನೆಲೆಯಲ್ಲಿ ರೈತರ ನಿಲ್ಲದ ಆತ್ಮಹತ್ಯೆ ಸರಣಿ ಇಂದಿನ ಒಂದು ದೊಡ್ಡ ರಾಷ್ಟ್ರೀಯ ತಳಮಳಕ್ಕೆ ರೂಪಕವಾಗಿ ನಿಲ್ಲುತ್ತದೆ.

ಎಂಬಂತೆ ಅದು ನಂತರ ತನ್ನ ಮಾರ್ಗವನ್ನು ಪಾಶ್ಚಿಮಾತ್ಯಶೈಲಿಯ ಆಧುನೀಕರಣವನ್ನೇ ಮೂಲ ಸ್ಫೂರ್ತಿಯನ್ನಾಗಿಸಿಕೊಂಡ ಮಾರ್ಕ್ಸ್‌ವಾದದಿಂದ ಸಂಪೂರ್ಣವಾಗಿ ಭಿನ್ನವಾಗಿಸಿಕೊಂಡು, ಗಾಂಧೀಜಿಯಿಂದ ಕಲಿತ ಪಾಠಗಳನ್ನಾಧರಿಸಿ ತಮ್ಮದೇ ಹಾದಿ ಹಿಡಿಯುವ ಸಂಕಲ್ಪ ಕೈಗೊಂಡಿತು. ಈ ಸಂಕಲ್ಪಕ್ಕೆ ಹಿನ್ನೆಲೆ ಒದಗಿಸಿದ ಲೋಹಿಯಾ ಅವರ 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು' ಎಂಬ ಭಾಷಣವು (೧೯೫೨) ಪ್ರಸ್ತಾಪಿಸುವ 'ಸಮಾಜವಾದಿ ಆಶ್ರಮ'ಗಳ ಪರಿಕಲ್ಪನೆಯೂ ಇದೇ ಆಶಯವನ್ನು ಹೊಂದಿದೆ. ಆದರೆ ಈ ಸಮಾಜವಾದಿಗಳು ತಾವು ಕಾಂಗ್ರೆಸ್‌ನೊಳಗಿದ್ದು ಅನುಭವಿಸಿದ ನೋವು ಸಂಕಷ್ಟಗಳಿಗೆ ಪ್ರತೀಕಾರವೆಂಬಂತೆ ತಮ್ಮ ಚಳುವಳಿಯನ್ನು ಕಟ್ಟ ತೊಡಗಿದ್ದರಿಂದ, ಗಾಂಧಿಯಿಲ್ಲದ ಅವರ ಆಶ್ರಮದ ಕಲ್ಪನೆ ಕೇವಲ ಕಳೆದುಹೋದ ಕನಸಿನ ಕನವರಿಕೆಯಾಗಿ ಮಾತ್ರ ಉಳಿಯಿತಷ್ಟೆ

ಆದರೆ ಈ ಕನಸು ಇನ್ನೂ ಬತ್ತಿ ಹೋಗಿಲ್ಲ. ಕಾಂಗ್ರೆಸ್ ಮೂಲದ ಸಮಾಜವಾದಿಗಳ ಕಾಲ ಮುಗಿದಿದೆ. ಅವರ ಮಾರ್ಗ ಬಿಟ್ಟು ಅವರ ಗುರಿಯನ್ನು ಅರಸುವ ಹಂಬಲ ಅನೇಕ ರೂಪಗಳಲ್ಲಿ ಇಂದು ವ್ಯಕ್ತವಾಗುತ್ತಿದೆ. ಮೇಧಾಪಾಟ್ಕರ್‌ರ 'ನರ್ಮದಾ ಬಚಾವೋ ಆಂದೋಲನ' ಅದರ ಆಶಯದ ದೃಷ್ಟಿಯಿಂದ ಇಂತಹ ರೂಪಗಳ ಒಂದು ದೊಡ್ಡ ಮಾದರಿಯಾಗಿದೆ.ಹಾಗೇ ಅಣ್ಣಾ ಹಜಾರೆ ಅವರ ಮಾದರಿ ಗ್ರಾಮ ಪ್ರಯೋಗವು ಒಂದು ಚಿಕ್ಕ ಮಾದರಿಯಾಗಿದೆ. ಇದರ ಜೊತೆಯಲ್ಲೇ ಭಾರತದಾದ್ಯಂತ ಅನೇಕ ಸಣ್ಣ ಗುಂಪುಗಳು, ನೀರು, ಕಾಡು, ಖನಿಜ, ಬೀಜ, ಕಸುಬುಗಳ ಸಂರಕ್ಷಣೆಗಾಗಿ ಆಂದೋಲನಗಳನ್ನು ನಡೆಸಿವೆ. ಈ ಹಿನ್ನೆಲೆಯಲ್ಲಿ ರೈತರ ನಿಲ್ಲದ ಆತ್ಮಹತ್ಯೆ ಸರಣಿ ಇಂದಿನ ಒಂದು ದೊಡ್ಡ ರಾಷ್ಟ್ರೀಯ ತಳಮಳಕ್ಕೆ ರೂಪಕವಾಗಿ ನಿಲ್ಲುತ್ತದೆ. ಸಾಮ್ರಾಜ್ಯಶಾಹಿಯ ಹೊಸ (ಹಾಗೂ ಅಂತಿಮ?) ರೂಪವಾದ ಜಾಗತೀಕರಣ, ಸಾಮ್ರಾಜ್ಯಶಾಹಿಯಂತೆ ಕಸುಬುದಾರರ ಕೈಬೆರಳುಗಳನ್ನು ಕಡಿದು ಹಾಕುವಷ್ಟು ರೂಕ್ಷವಾಗುಳಿದಿಲ್ಲ. ಈಗಾಗಲೇ ಅನೇಕ 'ಮ್ಯಾನೇಜ್‌ಮೆಂಟ್' ಕೋರ್ಸುಗಳನ್ನು ಆವಿಷ್ಕರಿಸಿರುವ ಅದು ಸಹಜವಾಗಿಯೇ ಕಾಣದಂತೆ ಕೊಲ್ಲುವ ಕಲೆಯನ್ನು ಸಿದ್ಧಿಸಿಕೊಂಡಿದೆ. ಭಾರತದ ಮಟ್ಟಿಗೆ ಜಾಗತೀಕರಣವೆಂದರೆ ಕೃತಕ ಉಸಿರಾಟದ ಮೇಲೆ ನಡೆಯುತ್ತಿರುವ ಆಧುನೀಕರಣದ ಮುಂದುವರಿಕೆ.

ನೆಹರೂ ಖಯಾಲಿಯ ಆಧುನೀಕರಣ ಸ್ವಂತ ಉಸಿರಿನ ಮೇಲೆ ಆರಂಭವಾಗಿ, ಅವರ (ತತ್ವ ಶಾಲೆಯ) ಶಿಷ್ಯ ಚಂದ್ರಶೇಖರರ ಪ್ರಧಾನಮಂತ್ರಿತ್ವದ ಅವಧಿಯ ಹೊತ್ತಿಗೆ ದೇಶದ ಕಾಪು ಚಿನ್ನವನ್ನೆಲ್ಲ ವಿಶ್ವಬ್ಯಾಂಕ್‌ನ ಬಳಿ ಅಡವಿಡುವ ದಾರಿದ್ರ್ಯಕ್ಕೆ ದೇಶವನ್ನು ದೂಡಿದ್ದರೊಂದಿಗೆ ಕೊನೆಯುಸಿರೆಳೆಯಿತು. ಹೀಗಾಗಿ ಈಗ ವಿಶ್ವಬ್ಯಾಂಕೆಂಬ ಅಂತಾರಾಷ್ಟ್ರೀಯ ಚಿಕಿತ್ಸಾ ಘಟಕದ ಕೃತಕ ಉಸಿರಾಟದ ಉಪಕರಣದ ಅಳವಡಿಕೆಯೊಂದಿಗೆ- ಐ.ಟಿ. ಮತ್ತು ಬಿ.ಟಿ. ಇದರ ಉಸಿರಾಟದ ಎರಡು ನಳಿಕೆಗಳು- ಆಧುನೀಕರಣ ಜಾಗತೀಕರಣವಾಗಿ ಮಾರ್ಪಟ್ಟು ಮುನ್ನಡೆಯುತ್ತಿದೆ. ಜಾಗತಿಕ ವ್ಯಾಪಾರ ಹಾಗೂ ಪರಿಸರ ಸಂರಕ್ಷಣೆಯ ಅಸಮ ಒಪ್ಪಂದಗಳಿಗೆ ನೀಡಲಾದ ಒಪ್ಪಿಗೆಯೇ ಇದಕ್ಕೆ ಭಾರತದ ತೆರಬೇಕಾದ 'ಚಿಕಿತ್ಸಾ ಶುಲ್ಕ'ವಾಗಿದೆ. ಆದರೆ ಈ ವ್ಯವಸ್ಥೆ ಬಹಳ ಕಾಲ ನಡೆಯಲಾರದೆಂಬ ಮೊದಲ ಮತ್ತು ಮುಖ್ಯ ಸೂಚನೆಯೇ ನಿಲ್ಲದ ರೈತರ ಆತ್ಮಹತ್ಯೆ ಸರಣಿ. ಇದರ ಹಿಂದಿರುವುದು ಕೇವಲ ಸಾಲ-ಸೋಲಗಳ ಆರ್ಥಿಕ ಪ್ರಶ್ನೆಯಲ್ಲ. ಇದು ಭಾರತದ ರೈತನ, ಅವನು ಪ್ರತಿನಿಧಿಸುವ ಗ್ರಾಮ ಸಮಾಜದ ಸಮಗ್ರ 'ವ್ಯಕ್ತಿತ್ವ'ದ-ಅದರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮಗಳೂ ಸೇರಿದಂತೆ-ಸುಸ್ಥಿರತೆಯ/ನಾಶದ ಪ್ರಶ್ನೆ. ಜಾಗತೀಕರಣ ಭಾರತದ ಬೇರುಗಳಿರುವ-ಆಧುನೀಕರಣದ ಪರಿಣಾಮವಾಗಿ ಕೊಂಪೆಗಳಾಗಿರುವ-ಹಳ್ಳಿಗಳನ್ನು ಈಗ ಸ್ಮಶಾನ ಮಾಡ ಹೊರಟಿದೆ; ನಗರಗಳನ್ನು 'ಪರಿಹಾರವಾಗದ ಬಡತನ'ವೆಂಬ ಭೀಕರ ರೋಗಕ್ಕೆ ತುತ್ತಾಗಿಸಿ ನರಕಗಳನ್ನಾಗಿಸತೊಡಗಿದೆ.

ಹೀಗಾಗಿ ಜಾಗತೀರಕಣವೆಂದರೆ ಮತ್ತೇನೂ ಆಗಿರದೆ, ಗಾಂಧೀಜಿ ಮುನ್ನೋಡಿದ್ದ ಪಶ್ಚಿಮದ ಆಧುನಿಕ ನಾಗರೀಕತೆಯ ಅನಾಹುತದ ಅಂತಿಮ ರೂಪವೆ ಆಗಿದೆ. ಈ ಆಧುನೀಕರಣ ನಮ್ಮ ಗ್ರಾಮಗಳನ್ನು ಜಡತೆಯೆಂಬ ಸ್ಥಿರತೆಗೆ ದೂಡಿದ್ದ ಜಾತಿ ವ್ಯವಸ್ಥೆಯನ್ನೇನೂ ಮುಖಾಮುಖಿಗೊಳಿಸಿಕೊಳ್ಳಲಿಲ್ಲ; ಬದಲಾಗಿ ಅದರೊಂದಿಗೆ 'ನನ್ನ ತಂಟೆಗೆ ನೀನು ಬರಬೇಡ, ನಿನ್ನ ತಂಟೆಗೆ ನಾನು ಬರುವುದಿಲ್ಲ' ಎಂಬ ಒಳ ಒಪ್ಪಂದದೊಂದಿಗೆ ಮುನ್ನಡೆಯಿತು. ಜಾಗತಿಕವಾಗಿ ರಾಷ್ಟ್ರಗಳನ್ನು, ಸಮಾಜಗಳನ್ನು, ಮನುಷ್ಯರನ್ನು ಒಡೆದು ನಿಲ್ಲಿಸಿರುವ ಈ ಆಧುನೀಕರಣ ಈಗ ಜಾಗತೀಕರಣದ ರೂಪದಲ್ಲಿ-ಅದರೆಲ್ಲ ವಿಶ್ವಾತ್ಮಕತೆಯ ಆದರ್ಶದ ಬೆಡಗು ಬಿನ್ನಾಣಗಳೊಂದಿಗೆ-ನಮ್ಮೆಲ್ಲರ ಮನಸ್ಸಿನ ಗರ್ಭಗುಡಿಯನ್ನು ಪ್ರವೇಶಿಸಲು ಹೊಂಚುಹಾಕುತ್ತಿದೆ; ಒಂದು 'ಪಾವಿತ್ರ್ಯ'ವಾಗಿ ಸ್ಥಾಪಿತಗೊಳ್ಳಲು ಹವಣಿಸುತ್ತಿದೆ.

ಸ್ಫೋಸಿಸ್'ನ ನಾರಾಯಣಮೂರ್ತಿಯವರನ್ನು ನಮ್ಮ ಂದಿನ ರಾಷ್ಟ್ರಪತಿ ಮಾಡಲು ಸಿದ್ಧತೆಗಳು ನಡೆದಿವೆ!) ಿ ಮುನ್ಸೂಚಿಸುತ್ತಿರುವ 'ಇತಿಹಾಸದ ಸಾವು' ಅಥವಾ ನ್ನು ಮುಂದೆ ಇತಿಹಾಸವಿಲ್ಲ' ಎಂಬುದರ ಅರ್ಥವಾ ೂ ಇದೇನೇ: ಭಾರತದಂತಹ ಸಮಾಜ ಹೀಗಿರು ತ್ತಿಯೇ ಸಮೃದ್ಧಿ-ದಾರಿದ್ರ್ಯಗಳ ದ್ವಂದ್ವದಲ್ಲಿ ಶಾಶ್ವತವಾಗಿ ಸಲಾಡುತ್ತಿರಬೇಕಾಗುತ್ತದೆ-ಜಾಗತೀಕರಣ ನಿರೂಪಿಸಿ ಕಸುಬು-ಕೌಶಲ್ಯಗಳನ್ನು ಪವಿತ್ರೀಕರಿಸಿಕೊಳ್ಳದೇ ೀದರೆ.

ಇದು ಇಂದು ನಮ್ಮೆದುರಿಗಿರುವ ಅಂತಿಮ ಲು. ಈಗಾಗಲೇ ವಿವರಿಸಿರುವಂತೆ ಇದು ಬಹು ಯಾಮಗಳುಳ್ಳ ಸವಾಲು. ಇದನ್ನು ಸಮಗ್ರವಾಗಿ ಎದುರಿ ರಾಜಕಾರಣದಿಂದ ಮಾತ್ರ ಸಾಧ್ಯ. ಏಕೆಂದರೆ ಈ ಲು ಸೃಷ್ಟಿಯಾಗಿರುವುದೇ ರಾಜಕಾರಣದಿಂದ- ದರೆ ಇದನ್ನು ಎದುರಿಸಲು ರಾಜಕಾರಣವನ್ನು ಪುನ ಿಸುವ ತುರ್ತು ಅಗತ್ಯವಿದೆ. ತನ್ನ ದೃಷ್ಟಿಕೇಂದ್ರವನ್ನೇ ುಕೊಂಡಿರುವ ನಮ್ಮ ರಾಜಕಾರಣವೀಗ ಈ ವಾಲು ಸೂಚಿಸಿದಂತೆ-ಅದರ ರೈತ ಮುಖವೂ ಸೇರಿ ೆ-ಗೊತ್ತಿದ್ದೋ ಗೊತ್ತಿಲ್ಲದೆಯೋ ಜಾಗತೀಕರಣದ ಸೇವಕನಾಗಿ ಪರಿವರ್ತಿತವಾಗಿದೆ.

ಇಂತಹ ಪರಿಸ್ಥಿತಿಯಲ್ಲಿ-ಮುಳುಗುವಾಗ ಒಂದು ುಲಕಡ್ಡಿ ಸಿಕ್ಕರೂ ಸಾಕೆನ್ನಿಸುವ ಈ ಪರಿಸ್ಥಿತಿಯಲ್ಲಿ-ಈ ವಾಲು ತಿಳಿಸಿದ ಕಾರಣಗಳಿಂದಾಗಿ ಕರ್ನಾಟಕದ ಮಟ್ಟಿ ರೂ ಪರ್ಯಾಯ ರಾಜಕಾರಣದ ನಾಯಕತ್ವ ಸಿಕೊಳ್ಳುವ ಸಾಧ್ಯತೆ ಇರುವವರಾಗಿ ಕಂಡವರು ರಾಮಯ್ಯ. ಇಂದಿನ ರಾಜಕಾರಣಿಗಳ ಮಧ್ಯೆ ಅಪ ವವೆಂಬಂತೆ ಜನ ಮನ್ನಣೆ-ಮರ್ಯಾದೆಗಳೆರಡನ್ನೂ ಸಿಕೊಂಡಿದ್ದ ಅವರು ಹೊಸ ಆಲೋಚನೆಗಳಿಗೆ ುಕೊಳ್ಳುವವರಂತೆ ಕಂಡವರು; ಸದ್ಯದ ಕರ್ನಾಟಕದ ಕಾರಣ- (ಈಗ ಕರ್ನಾಟಕವನ್ನು ದಕ್ಷಿಣದ ಬಿಹಾರ ೂ ಕರೆಯಲಾಗುತ್ತಿದೆಯಂತೆ!) ಮುಟ್ಟಿರುವ ಅಧೋ ು ಸಂಕೇತದಂತಿರುವ ಮತ್ತು ಆಧುನೀಕರಣದ ರೂಪದಂತಿರುವ ದೇವೇಗೌಡರ ರಾಜಕಾರಣದ ದ್ಧ ಕೊನೆಗೂ ಸೆಟೆದು ನಿಂತವರು; ಅಷ್ಟೇನೂ ಆಧು ರಣಕ್ಕೆ ಒಳಗಾಗದಂತೆ ತೋರುವ ಅವರು ತಾವು ವಾಗಿ ಹಂಬಲಿಸುತ್ತಿರುವ ಸಾಮಾಜಿಕ ನ್ಯಾಯದ ಲ ಬೇರು ಗ್ರಾಮೀಣೀಕರಣದಲ್ಲಿದೆ ಎಂಬ ಗಾಂಧಿ ಕಹನ್ನು ಕ್ರಮೇಣವಾಗಿಯಾದರೂ ಕಾಣ ಬಲ್ಲರೆಂಬ ಸವನ್ನು ತಮ್ಮ ನಡೆ-ನುಡಿಗಳ ಮೂಲಕ ಮೂಡಿ ರು.

ಇವಕ್ಕೆಲ್ಲ ಹಿನ್ನೆಲೆಯಾಗಿ ವರ್ಷಾನುಗಟ್ಟಲೆ ಮಲ ನಮ್ಮ ದೇವನೂರು ಮಹಾದೇವ ಇದ್ದಕ್ಕಿಂತೆ ಎಚ್ಚರ ದಂತೆ ತಮ್ಮ ಕೆಲವು ದಲಿತ-ರೈತ ಚಳುವಳಿಗಳ ಗೆಳೆ ೊಂದಿಗೆ ಘೋಷಿಸಿದ 'ಸರ್ವೋದಯ ಕರ್ನಾಟಕ' ಆಶಯಗಳು ಚಿಗುರಿಸಿದ ಹೊಸ ಕರ್ನಾಟಕದ ಸೇರಿ ಕೆಲಸ ಮಾಡಿ, ಸಿದ್ಧರಾಮಯ್ಯನವರ ಾಯ'ವೇ ಒಂದು ನೆಪವಾಗಿ ಕರ್ನಾಟಕದ ಮಟ್ಟಿ ೂ ಹೊಸ ರಾಜಕಾರಣ ಆರಂಭವಾಗುವ ಆಸೆ ತ್ತು. ಆದರೀಗ ಕಣದಲ್ಲಿ ಸಿದ್ಧರಾಮಯ್ಯನವರೂ 'ಸರ್ವೋದಯ ಕರ್ನಾಟಕವೂ' ಇಲ್ಲ! ಸಿದ್ಧ ಯ್ಯ ಕಾಂಗ್ರೆಸ್ ಸೇರಿ ಯುದ್ಧ ಆರಂಭಿಸದೆಯೇ ವರಂತೆ ಕಾಣಿಸತೊಡಗಿದ್ದಾರೆ. 'ಸರ್ವೋದಯ ಕರ್ನಾಟಕ' ಸ್ಥಾಪನೆಯ ದಿಢೀರ್ ಘೋಷಣೆಯ ತುರ್ತನ್ನೇ ಅನುಮಾನಾಸ್ಪದಗೊಳಿಸುವ ರೀತಿಯಲ್ಲಿ, ಅದರ ನಾಯಕರು ಕಣ್ಮರೆಯಾಗಿದ್ದಾರೆ!

ಸಿದ್ಧರಾಮಯ್ಯನವರ ಸದ್ಯದ ರಾಜಕಾರಣ ಹೀಗಾಗಲು, ಅವರು ನಾನು ಈ ಹಿಂದೆ 'ಅಹಿಂದ' ಚಳುವಳಿ ಕುರಿತ ಲೇಖನದಲ್ಲಿ ಹೇಳಿದಂತೆ (ನೋಡಿ: ಸಂವಾದ: ಮಾರ್ಚ್-೨೦೦೬) ಅಧ್ಯಾತ್ಮಿಕತೆಗೆ-ನಾನು ರಾಜಕಾರಣ ಮಾಡುತ್ತಿರುವುದಾದರೂ ಏತಕ್ಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗೆ- ಅವಕಾಶವೇ ಇರದ ಆಧುನಿಕತೆಯ ಎರಕದಿಂದ ಸಂಪೂರ್ಣವಾಗಿ ಹೊರಬರುವಷ್ಟು ಅವರ ರಾಜಕೀಯ ವ್ಯಕ್ತಿತ್ವ ಮಾಗದಿರುವುದೇ ಕಾರಣವಾಗಿದೆ. ಅವರ ಪ್ರಕಾರ ಅವರು ಕಾಂಗ್ರೆಸ್ಸಿಗೆ ಸೇರಿದ್ದು ಮೂರು ಕಾರಣಗಳಿಗಾಗಿ-ಒಂದು, ಕರ್ನಾಟಕದಲ್ಲಿ ಪ್ರದೇಶಿಕ ಪಕ್ಷದ ರಚನೆಯ ಹಲವು ಪ್ರಯತ್ನಗಳು ವಿಫಲವಾಗಿರುವುದರಿಂದ; ಎರಡು, ಹೊಸ ಪಕ್ಷ ಕಟ್ಟುವಷ್ಟು ದುಡ್ಡಿಲ್ಲದಿರುವುದರಿಂದ; ಮೂರು, ಕೋಮುವಾದಿ ಶಕ್ತಿಗಳನ್ನು ಕರ್ನಾಟಕದಲ್ಲಿ ಹಿಮ್ಮೆಟ್ಟಿಸುವ ತುರ್ತು ಅಗತ್ಯವಿರುವುದರಿಂದ.

ಆದರೆ ಈ ಮೂರೂ ಕಾರಣಗಳು ಸಿದ್ಧರಾಮಯ್ಯ ಹುಟ್ಟಿಸಿದ್ದ ನಿರೀಕ್ಷೆಗಳ ಹಿನ್ನೆಲೆಯಲ್ಲಿ ಅಸಂಬದ್ಧವಾಗಿ ಕಾಣುತ್ತವೆ. ಕರ್ನಾಟಕದಲ್ಲಿ ಹೊಸ ರಾಜಕಾರಣ ಮಾಡುವ ಬದ್ಧತೆ ಯಿಂದ ಪ್ರಾದೇಶಿಕ ಪಕ್ಷದ ರಚನೆಯ ಸಾಮೂಹಿಕ (ಆಂದೋಲನ ರೂಪಿಯಾದ) ಗಂಭೀರ ಪ್ರಯತ್ನವಾ ದರೂ ಯಾವಾಗ ನಡೆದಿದೆ? ದುಡ್ಡಿನಿಂದಲೇ ನಡೆಯುವ ರಾಜಕಾರಣ ಮಾಡುವುದಾದರೆ ಸಿದ್ಧರಾಮಯ್ಯ ಮಾಡ ಬಹುದಾದ ರಾಜಕಾರಣದಿಂದ ನಾವೇನು ನಿರೀಕ್ಷಿಸ ಬಹುದು? ಸಿದ್ಧರಾಮಯ್ಯನವರು ಈಗ ಸೇರಿರುವ ಪಕ್ಷದ ಅಧಿಕಾರಾವಧಿಯಲ್ಲೇ ಅಲ್ಲವೇ 'ಕೋಮವಾದಿ ಶಕ್ತಿಗಳು' ಬೆಳೆದು ಈಗ ಅಧಿಕಾರಕ್ಕೆ ಬರುವಂತಾಗಿ ರುವುದು ಎಂಬುದು ಅವರಿಗೆ ಗೊತ್ತಿಲ್ಲದ ವಿಷಯವೇ? ಸಿದ್ಧರಾಮಯ್ಯ ನೇರ ನಡೆ ನುಡಿಗೆ ಹೆಸರಾದವರು. ಹಾಗಾಗಿ ಅವರು ಕಾಂಗ್ರೆಸ್ ಸೇರಲು ಇರುವ ಮೂಲ ಪ್ರೇರಣೆ ಏನೆಂಬುದನ್ನು ಬಾಯಿಬಿಟ್ಟು ಹೇಳಲು ಏಕೆ ಹಿಂಜರಿಯುತ್ತಿದ್ದಾರೋ ತಿಳಿಯದು. ತಾವೇನೂ ಸಂನ್ಯಾಸಿಯಲ್ಲ ಎಂದು ಹೇಳುವ ಮೂಲಕ ಹಾಗೂ ಇತ್ತೀಚಿನ ದಿನಗಳಲ್ಲಿ 'ನಾನ್ಯಾಕೆ ಮುಖ್ಯ ಮಂತ್ರಿಯಾಗ ಬಾರದು?' ಎಂಬ ಪ್ರಶ್ನೆಯನ್ನು ಪದೇ ಪದೇ ಕೇಳಿಕೊಳ್ಳುವ ಮೂಲಕ ಸಿದ್ಧರಾಮಯ್ಯ ಈಗಾಗಲೇ ತಮ್ಮ ಗುಟ್ಟು ಬಿಟ್ಟುಕೊಟ್ಟಿದ್ದಾರೆ. ಆದರೆ ಅದು ಸ್ವಲ್ಪ ಆಘಾತಕಾರಿ ಗುಟ್ಟೇ ಆಗಿದೆ...

> **ಸಿದ್ಧರಾಮಯ್ಯ ಮುಖ್ಯಮಂತ್ರಿಯಾಗ ಬೇಕೆಂಬುದೇ ಅವರಲ್ಲಿ ವಿಶ್ವಾಸವಿಟ್ಟಿರುವ ಎಲ್ಲರ ಆಸೆ. ಆದರೆ ಅವರು ಅದಕ್ಕಾಗಿ ಮಾಡುವ ರಾಜಕಾರಣ ಎಂತಹುದು ಎಂಬುದರ ಬಗ್ಗೆಯೂ ಹಾಗೆ ಆಸೆ ಪಟ್ಟ ಎಲ್ಲರ ಕುತೂಹಲ-ಕಾಳಜಿಗಳಿವೆ. ಜಾಗತೀಕರಣದ ಆಘಾತಗಳನ್ನು ಎದುರಿಸುವಂತಹ ರಾಜಕಾರಣ ಮಾಡುವ ಮೂಲಕ ಅವರು ಮುಖ್ಯಮಂತ್ರಿಯಾಗುವುದಾದರೆ ಮಾತ್ರ ಅವರು ತಮ್ಮ ಕೇಂದ್ರ ಕಾಳಜಿಯನ್ನಾಗಿ ಮಾಡಿಕೊಂಡಿರುವ ಹಾಗೂ ಯಾವುದರ ಆಧಾರದ ಮೇಲೆ ಅವರು ಹೊಸ ರಾಜಕಾರಣದ ಆಸೆ ಹುಟ್ಟಿಸಿದ್ದರೋ ಆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇಡಿಯಾಗಿ ಎದುರಿಸಬಲ್ಲರು ಎಂಬುದು ಅಂತಹವರ ನಂಬಿಕೆ. ಇದು ಕಾಂಗ್ರೆಸ್‌ನಲ್ಲಿ ಸಾಧ್ಯವೇ? ಸಾಧ್ಯವಾಗದಿದ್ದರೆ ಸದ್ಯದ ರಾಜಕಾರಣಕ್ಕೆ ಇರುವ ಅರ್ಥವಾದರೂ ಏನು?**

ಸಿದ್ಧರಾಮಯ್ಯ ಮುಖ್ಯಮಂತ್ರಿಯಾಗಬೇಕೆಂಬುದೇ ಅವರಲ್ಲಿ ವಿಶ್ವಾಸವಿಟ್ಟಿರುವ ಎಲ್ಲರ ಆಸೆ. ಆದರೆ ಅವರು ಅದಕ್ಕಾಗಿ ಮಾಡುವ ರಾಜಕಾರಣ ಎಂತಹುದು ಎಂಬುದರ ಬಗ್ಗೆಯೂ ಹಾಗೆ ಆಸೆ ಪಟ್ಟ ಎಲ್ಲರ ಆತಂಕ-ಕುತೂಹಲ-ಕಾಳಜಿಗಳಿವೆ. ಜಾಗತೀಕರಣದ ಆಘಾತಗಳನ್ನು ಎದುರಿಸುವಂತಹ ರಾಜಕಾರಣ ಮಾಡುವ ಮೂಲಕ ಅವರು ಮುಖ್ಯಮಂತ್ರಿಯಾಗುವುದಾದರೆ ಮಾತ್ರ ಅವರು ತಮ್ಮ ಕೇಂದ್ರ ಕಾಳಜಿಯನ್ನಾಗಿ ಮಾಡಿಕೊಂಡಿರುವ ಹಾಗೂ ಯಾವುದರ ಆಧಾರದ ಮೇಲೆ ಅವರು ಹೊಸ ರಾಜಕಾರಣದ ಆಸೆ ಹುಟ್ಟಿಸಿದ್ದರೋ ಆ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇಡಿಯಾಗಿ ಎದುರಿಸಬಲ್ಲರು ಎಂಬುದು ಅಂತಹವರ ಪ್ರಾಮಾಣಿಕ ನಂಬಿಕೆ. ಇದು ಕಾಂಗ್ರೆಸ್‌ನಲ್ಲಿ ಸಾಧ್ಯವೇ? ಅಸಾಧ್ಯವೆನಿಸುವುದಾದರೆ, ಸಿದ್ಧರಾಮಯ್ಯನವರ ಸದ್ಯದ ರಾಜಕಾರಣಕ್ಕೆ ಇರುವ ಅರ್ಥವಾದರೂ ಏನು? ಕುರುಬನೊಬ್ಬ ಮುಖ್ಯಮಂತ್ರಿಯಾಗಿ ಕುರುಬ ಜನಾಂಗದ ವರನ್ನು ಸಂತೋಷಪಡಿಸುವುದಷ್ಟೇ ಅವರ ಈ ಸಾಮಾ ಜಿಕ ನ್ಯಾಯ ರಾಜಕಾರಣದ ಉದ್ದೇಶವಾದರೆ, ಅಂತಹ ಮುಖ್ಯಮಂತ್ರಿತ್ವವನ್ನು ಉಳಿಸಿಕೊಳ್ಳುವುದೇ ಕಾಂಗ್ರೆಸ್‌ನಲ್ಲಿ ಸಿದ್ಧರಾಮಯ್ಯನವರಿಗೆ ದೊಡ್ಡ ಹಾಗೂ ಏಕೈಕ ಉದ್ಯೋಗವಾದೀತು. ಅದು ಸಿದ್ಧರಾಮಯ್ಯನವರಂತಹ ಸ್ವಾಭಿಮಾನಿ ಹಾಗೂ ಮರ್ಯಾದಸ್ಥ ರಾಜಕಾರಣಿಗೆ ನರಕವೇ ಸರಿ, ಅವರು ಆವರೆಗೆ ಸ್ವಾಭಿಮಾನ ಹಾಗೂ ಮರ್ಯಾದಸ್ತಿಕೆ ಉಳಿಸಿಕೊಂಡಿದ್ದರೆ!

ಒಂದು ಸಂಗತಿಯಂತೂ ನಿಜ: ಜಾಗತೀಕರಣವೆಂಬ ಮಾಯಾಜಾಲವನ್ನು ಸೃಷ್ಟಿಸಿರುವ ಆಧುನೀಕರಣದ ರಾಜಕಾರಣದಿಂದಾಗಿ ಕಂಗಾಲಾಗಿರುವ ಹಾಗೂ ಆಯಾಸಗೊಂಡಿರುವ ಬೃಹತ್ ಜನಸ್ತೋಮವೊಂದು ಸರಳ, ನೆಮ್ಮದಿಯ ಹೊಸ ರಾಜಕಾರಣದ ಹುಡುಕಾಟ ದಲ್ಲಿದೆ. ಒಮ್ಮೆ ಹಿಂದಿರುಗಿ ನೋಡಲು ಹಿಂಜರಿಯದ, ಆಧುನೀಕರಣದ ಮೂಲಾರ್ಥವನ್ನು ಪುನರ್‌ಶೋಧಿಸುವ ಧೈರ್ಯ ವಹಿಸಬಲ್ಲ ನಾಯಕತ್ವಕ್ಕಾಗಿ ಅದು ಕಾಯುತ್ತಿದೆ. ಇದನ್ನರಿಯದೇ ಹೋದ ಸಿದ್ಧರಾಮಯ್ಯ ಸುಲಭ ರಾಜಕಾರಣದ ಹಾದಿ ಹಿಡಿದಿದ್ದಾರೆ. ಆದರೆ 'ಸರ್ವೋದಯ ಕರ್ನಾಟಕ' ಏನು ಮಾಡುತ್ತಿದೆ? ಅದಕ್ಕಾದರೂ ಈ ಅರಿವು ಬೇಡವೇ?

* ಈ ಬಗ್ಗೆ ವಿವರಗಳಿಗಾಗಿ ಗಾಂಧೀಜಿಯವರ 'ನನ್ನ ಆದರ್ಶ ಗ್ರಾಮ' ಕಿರು ಪುಸ್ತಿಕೆಯನ್ನು ನೋಡಿ (ಸಂಕಲನ ಹಾಗೂ ಅನುವಾದ: ಕೆ.ಎಸ್ ನಾರಾಯಣ ಸ್ವಾಮಿ) ☐

ಕುವೆಂಪು: ಕೈಮರ ಕಾಯಕದ ದಿಗ್ದರ್ಶನ

ಕುವೆಂಪು ಅವರ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಚಿಂತನೆಗಳನ್ನು ವಿಶ್ಲೇಷಿಸುತ್ತಾ ಜಿ.ಎಸ್. ಶಿವರುದ್ರಪ್ಪನವರು ಹೇಳಿರುವ ಮೇಲಿನ ಮಾತುಗಳನ್ನು ಸ್ವತ: ಅವರೇ ಬರೆದಿರುವ 'ಕುವೆಂಪು: ಪುನರಾಲೋಕನ'. ಕೃತಿಗೆ ಯಥಾವತ್ತಾಗಿ ಅನ್ವಯಿಸಬಹುದು. ಕನ್ನಡ ನವೋದಯ ಸಂದರ್ಭದಲ್ಲಿ ಕುವೆಂಪು ನಿರ್ವಹಿಸಿದ ಕೈಮರ ಕಾಯಕವನ್ನು ಈ ಹೊತ್ತಿನ ಸಂದರ್ಭದಲ್ಲಿ ಜಿಎಸ್ಎಸ್ ಯಶಸ್ವಿಯಾಗಿ ನಿರ್ವಹಿಸಿದ್ದಾರೆನ್ನುವುದು ಗಮನರ್ಹವಾದ ಸಂಗತಿಯಾಗಿದೆ. ಸಾಹಿತ್ಯ ಕೃತಿಯ ಅಧ್ಯಯನವೆಂದರೆ ವಸ್ತು ವಿಷಯಗಳ ಚಲನಶೀಲತೆಯ ವಿಶ್ಲೇಷಣೆಯೆಂದೇ ಅರ್ಥ. ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಕವಿಯೊಬ್ಬ ನಿರೂಪಿಸುವ ಬಗೆಬಗೆಯ ಚಲನೆಗಳನ್ನು ಪರಾಮರ್ಶೆಗೊಳಪಡಿಸುವ ವಿಮರ್ಶಕನು ಆ ಚಲನೆಗಳ ಸ್ವರೂಪ ದರ್ಶನ ಮತ್ತು ವೈವಿಧ್ಯಮಯ ನೆಲೆಗಳನ್ನು ಅನಾವರಣಗೊಳಿಸುತ್ತಾನೆ.

ವಿ. ಚಂದ್ರಶೇಖರ ನಂಗಲಿ

"ಪಶ್ಚಿಮದ ಸಾಹಿತ್ಯದ ಪ್ರಭಾವಕ್ಕೆ ಮಾತ್ರವಲ್ಲ, ವಿಜ್ಞಾನದ ಪ್ರಭಾವಕ್ಕೆ ಒಳಗಾಗಿ ತನ್ನ ಮುಗ್ಧತೆಯನ್ನು ಶ್ರದ್ಧೆಯನ್ನು ಕಳೆದುಕೊಂಡು ಕಲ್ಪನೆ, ಪುರಾಣ ಹಾಗೂ ಅತೀಂದ್ರಿಯವಾದ ಸಂಗತಿಗಳೆಲ್ಲವನ್ನು ಶಂಕಿಸುತ್ತ, ಕಾವ್ಯಸತ್ಯ ಮತ್ತು ಕವಿಕೃತಿಗಳೊಳಗಣ ಸತ್ಯಾಂಶಗಳನ್ನು ಸರಿಯಾಗಿ ಗ್ರಹಿಸದೆ ತಪ್ಪುದಾರಿ ಹಿಡಿಯುತ್ತಿರುವ ಹೊಸಕಾಲದ ಓದುಗರನ್ನು ವಿಮರ್ಶಕರನ್ನು ಸರಿಯಾದ ಗ್ರಹಿಕೆಯ ಹಾಗೂ ವಿವೇಚನೆಯ ನೆಲೆಯಲ್ಲಿ ನಿಲ್ಲಿಸುವ ಸಾಂಸ್ಕೃತಿಕ ಜವಾಬ್ದಾರಿಯೂ ಆಗಿದೆ"... (ಪು ೧೯೧) ಕುವೆಂಪು ಅವರ ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಚಿಂತನೆಗಳನ್ನು ವಿಶ್ಲೇಷಿಸುತ್ತಾ ಜಿ.ಎಸ್. ಶಿವರುದ್ರಪ್ಪನವರು ಹೇಳಿರುವ ಮೇಲಿನ ಮಾತುಗಳನ್ನು ಸ್ವತ: ಅವರೇ ಬರೆದಿರುವ 'ಕುವೆಂಪು: ಪುನರಾಲೋಕನ'. ಕೃತಿಗೆ ಯಥಾವತ್ತಾಗಿ ಅನ್ವಯಿಸಬಹುದು. ಕನ್ನಡ ನವೋದಯ ಸಂದರ್ಭದಲ್ಲಿ ಕುವೆಂಪು ನಿರ್ವಹಿಸಿದ ಕೈಮರ ಕಾಯಕವನ್ನು ಈ ಹೊತ್ತಿನ ಸಂದರ್ಭದಲ್ಲಿ ಜಿಎಸ್ಎಸ್ ಯಶಸ್ವಿಯಾಗಿ ನಿರ್ವಹಿಸಿದ್ದಾರೆನ್ನುವುದು ಗಮನರ್ಹವಾದ ಸಂಗತಿಯಾಗಿದೆ.

ಸಾಹಿತ್ಯಕೃತಿಯ ಅಧ್ಯಯನವೆಂದರೆ ವಸ್ತು ವಿಷಯಗಳ ಚಲನಶೀಲತೆಯ ವಿಶ್ಲೇಷಣೆಯೆಂದೇ ಅರ್ಥ. ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ಕವಿಯೊಬ್ಬ ನಿರೂಪಿಸುವ ಬಗೆಬಗೆಯ ಚಲನೆಗಳನ್ನು ಪರಾಮರ್ಶೆಗೊಳಪಡಿಸುವ ವಿಮರ್ಶಕನು ಆ ಚಲನೆಗಳ ಸ್ವರೂಪ ದರ್ಶನ ಮತ್ತು ವೈವಿಧ್ಯಮಯ ನೆಲೆಗಳನ್ನು ಅನಾವರಣಗೊಳಿಸುತ್ತಾನೆ. ಜಿಎಸ್ಎಸ್ ಕುವೆಂಪು ಸಾಹಿತ್ಯದಲ್ಲಿ ಮನಗಂಡಿರುವ ಚಲನೆಗಳನ್ನು ಕೆಳಕಂಡಂತೆ ವಿವರಿಸಬಹುದು.

ಸಂದರ್ಭನಿಷ್ಠೆ<>ಸಂದರ್ಭೋತ್ತರ ಸಂದರ್ಭನಿಷ್ಠೆಯ ಚಲನೆಗಳೆಂದರೆ, ಸಾಹಿತ್ಯಕೃತಿಯೊಂದನ್ನು ನಿರ್ದಿಷ್ಟವಾದ ಚಾರಿತ್ರಿಕ/ಸಾಮಾಜಿಕ ಸಂದರ್ಭ ನಿಷ್ಠೆಗೊಳಪಡಿಸಿ ಅಧ್ಯಯನ ಮಾಡುವುದು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ, ವಸಾಹತುಶಾಹಿ, ಇಪ್ಪತ್ತನೆ ಶತಮಾನ, ಐವತ್ತರ ದಶಕ ಅಥವಾ ಎಪ್ಪತ್ತರ ದಶಕ ಮುಂತಾದ ಪರಿಭಾಷೆಗಳೆಲ್ಲವೂ ಸಂದರ್ಭಮೂಲ ಅಧ್ಯಯನದ ಗ್ರಹಿಕೆಗಳಾಗಿವೆ. ಜಿಎಸ್ಎಸ್ ವಿರಚಿತ 'ಕುವೆಂಪು: ಪುನರಾಲೋಕನ' ಕೃತಿಯಲ್ಲಿ ಸಂದರ್ಭನಿಷ್ಠೆಯ ಚಲನೆಗಳು ಸಮೃದ್ಧವಾಗಿವೆ. ಸಾಹಿತ್ಯ ಕೃತಿ ಮತ್ತು ಅದು ಮೂಡಿಬಂದ ಸಂದರ್ಭಗಳನ್ನು ಜನ್ಯ-ಜನಕ ಸಂಬಂಧದಲ್ಲಿ ನೋಡುವ ಈ ಪರಿಶ್ರಮವನ್ನು 'ಸಮಾನಂತರ ಚಲನೆಗಳು' ಎಂದು ಕರೆಯಬಹುದು. ಇದರಲ್ಲಿ ಎರಡು ಬಗೆಗಳಿವೆ:

೧. ಚಾರಿತ್ರಿಕ ಸಂದರ್ಭಮೂಲ ಅಧ್ಯಯನ (STUDY OF HISTORICAL GENESIS)

೨. ಸಾಮಾಜಿಕ ಸಂದರ್ಭಮೂಲ ಅಧ್ಯಯನ (STUDY OF SOCIAL GENESIS)

ಜಿಎಸ್ಎಸ್ ಅವರ ವಿಮರ್ಶೆಯಲ್ಲಿ ಸಂದರ್ಭಮೂಲ ದೃಷ್ಟಿಕೋನ ಪ್ರಧಾನವಾಗಿರುವುದರಿಂದಲೇ "....ಕುವೆಂಪು ಅವರ ಇಡೀ ಸಾಹಿತ್ಯ ಈ ದೇಶದ ಸ್ವಾತಂತ್ರ್ಯಪೂರ್ವದ ಆಶೋತ್ತರಗಳ ಪ್ರತಿನಿಧಿಯೂ ಸ್ವಾತಂತ್ರ್ಯೋತ್ತರ ಭಾರತದ ವಿಮರ್ಶೆಯೂ ಆಗಿದೆ".... (ಪು. ೨೪) ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಸಾಹಿತ್ಯ ಕೃತಿಯನ್ನು ಹೀಗೆ ನಿರ್ದಿಷ್ಟವಾದ ಸಂದರ್ಭಕ್ಕೆ ಶಾಶ್ವತವಾಗಿ ಸಮರ್ಪಿಸಿ ಬಿಡುವ ಇಂಥ ಅಧ್ಯಯನಗಳ ಮಿತಿ ಸ್ವಯಂವೇದ್ಯವಾಗಿದೆ. ಈ ಮಿತಿಯನ್ನು ಮೀರುವ ತುಡಿತವುಳ್ಳ ಜಿಎಸ್ಎಸ್ ಸಹಜವಾಗಿಯೇ ಸಂದರ್ಭೋತ್ತರ ಚಲನೆಗಳನ್ನು ಕುವೆಂಪು ಸಾಹಿತ್ಯದಲ್ಲಿ ಅನಾವರಣಗೊಳಿಸಿದ್ದಾರೆ: 'ಸಂದರ್ಭೋತ್ತರ'ವೆಂದರೆ 'ಸಂದರ್ಭವನ್ನು ಸಮರ್ಪಕವಾಗಿ ಉತ್ತರಿಸಿದ' ಎಂದು ತಿಳಿಯಬೇಕೇ ಹೊರತು 'ಸಂದರ್ಭಾತೀತ' ಎಂದಲ್ಲ! ಸಾಹಿತ್ಯ ಕೃತಿ ಮತ್ತು ಅದು ಮೂಡಿ ಬಂದ ಸಂದರ್ಭವನ್ನು ವ್ಯಂಗ್ಯ-ವ್ಯಂಜಕ ಸಂಬಂಧದಲ್ಲಿ ಪರಿಭಾವಿಸುವುದು ಇಲ್ಲಿ ಮುಖ್ಯವಾಗುತ್ತದೆ. ಇದನ್ನು 'ಮುಂಗಾಣ್ಕೆಯ ಚಲನೆಗಳು' ಎಂದು ಗುರುತಿಸಬಹುದು. ಇದರಲ್ಲಿ ಎರಡು ಬಗೆಗಳಿವೆ.

೧. ಸಂದರ್ಭ ನಿಷ್ಠೆಯಲ್ಲೆ ಸಂದರ್ಭೋತ್ತರವನ್ನು ಮನಗಾಣುವುದು.

೨. ಸಂದರ್ಭೋತ್ತರದಲ್ಲಿ ಪ್ರಸ್ತುತವನ್ನು ಮನಗಾಣುವುದು ಇವುಗಳಲ್ಲಿ ಮೊದಲ ಬಗೆಯನ್ನು ಜಿಎಸ್ಎಸ್ ವಿಮರ್ಶೆಯಲ್ಲಿ ವಿಶೇಷವಾಗಿ ಗಮನಿಸಬಹುದು; ಆಯ್ದ ಉದಾಹರಣೆಗಳನ್ನು ಗಮನಿಸಿ: "....೧೯೩೦ ರಲ್ಲಿ ಪ್ರಕಟವಾದ 'ಕೊಳಲು'... ಮುಂದೆ ಅವರ ಕಾವ್ಯದ ಉದ್ದಕ್ಕೂ ಸ್ಥಾಯಿಯಾಗಿ ಕಾಣಿಸುವ ಅನೇಕ ಆಶಯಗಳನ್ನು ಬೀಜ ರೂಪವನ್ನಾಗಿ ಉಳ್ಳ ಕವನ ಸಂಕಲನ ಇದಾಗಿದೆ... (ಪು.೧೩) ...."ಕುವೆಂಪು ಅವರ ನಲವತ್ತರ ದಶಕದ ಅನೇಕ ಸಮಾಜವಾದೀ ಕವಿತೆಗಳಲ್ಲಿ ಕಾಣಿಸಿಕೊಳ್ಳುವ ಕ್ರಾಂತಿಕಾರೀ ವೈಚಾರಿಕತೆಯಲ್ಲಿ ಎಪ್ಪತ್ತರ ದಶಕದ ಕನ್ನಡದ ಸಂದರ್ಭದಲ್ಲಿ ಸ್ಫೋಟಗೊಂಡ ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಮೂಲ ಪ್ರೇರಣೆಗಳಿವೆ"... (ಪು.೨೧) ...."೧೯೩೦ ರಲ್ಲಿ ಪ್ರಕಟವಾದ 'ಕೊಳಲು' ಕವನ ಸಂಕಲನದಲ್ಲಿ 'ಜಯಹೇ ಕರ್ನಾಟಕ ಮಾತೆ'.... ಸೇರಿದೆ. ಗಮನಿಸಬೇಕಾದ ಸಂಗತಿ ಎಂದರೆ ಮುಂದೆ ಅರ್ಧ ಶತಮಾನದ ನಂತರ ಈ ನಾಡು ಏಕೀಕೃತವಾಗಿ 'ಕರ್ನಾಟಕ' ಎಂದು ಹೆಸರಾಗುತ್ತದೆ ಎಂದಾಗಲಿ, ಆಗ ಅದಕ್ಕೊಂದು ನಾಡಗೀತೆ ಬೇಕಾಗುತ್ತದೆ ಎಂದಾಗಲಿ, ಯಾವ ಕಲ್ಪನೆಯೂ ಇಲ್ಲದ ಕಾಲದಲ್ಲಿ ಕುವೆಂಪು ಇದನ್ನು ಬರೆದದ್ದು ಆಶ್ಚರ್ಯವಾಗಿ ಕಾಣುತ್ತದೆ".... (ಪು. ೧೪೮) ಇವು ಕುವೆಂಪು ಸಾಹಿತ್ಯದಲ್ಲಿ ಜಿಎಸ್ಎಸ್ ಮನಗಂಡಿರುವ ಮುಂಗಾಣ್ಕೆಯ ಚಲನೆಗಳಾಗಿವೆ. ಈ ಮುಂಗಾಣ್ಕೆಯಲ್ಲೆ ವಿಶಿಷ್ಟವಾದದ್ದೆಂದರೆ ಸಂದರ್ಭೋತ್ತರದಲ್ಲಿ ಪ್ರಸ್ತುತವನ್ನು ಮನಗಾಣುವುದು. ಇದಕ್ಕೆ ಪೂರಕವಾದ ನಿದರ್ಶನಗಳು, ವಿಶ್ಲೇಷಣಾಕ್ರಮಗಳು ಈ ಕೃತಿಯಲ್ಲಿ



ಕುವೆಂಪು ಪುನರಾಲೋಕನ
ಲೇ: ಜಿ. ಎಸ್. ಶಿವರುದ್ರಪ್ಪ
ಬೆಲೆ: ರೂ. ೧೫೦/-
ಪ್ರಕಾಶಕರು: ಅಂಕಿತ ಪುಸ್ತಕ, ಗಾಂಧಿ ಬಜಾರ್, ಬೆಂಗಳೂರು.

. ಕುವೆಂಪು ಸಾಹಿತ್ಯದ ವಸ್ತುವಿಷಯಗಳನ್ನು ರ್ಭನಿಷ್ಠೆಯಿಂದ ಹೊರತು ಪಡಿಸಿ, ಲೇಖಕನಾದವನ ು ಉದ್ದೇಶದಾಚೆಗೂ ಚಲಿಸಬಲ್ಲ ರೀತಿಗಳನ್ನು ಧಿಸುತ್ತಾ, ಪ್ರಸ್ತುತವನ್ನು ಮನಗಾಣುವುದೊಂದು ಲಿನ ಸಂಗತಿಯಾಗಿದ್ದು ಇದನ್ನು ಮುಂಬರುವ ತಲೆ ಮುಗಳು ಹೇಗೆ ನಿರ್ವಹಿಸುತ್ತವೆಂಬುದನ್ನು ಕಾದು ಡಬೇಕು. ಆದರೆ ಈ ಕೃತಿಗೆ ಬರೆದಿರುವ ಮುನ್ನುಡಿ ಜಿಎಸ್‌ಎಸ್ ಹಿಂಸೆಯ ನಾನಾ ಮುಖಗಳನ್ನು ತಯಿಸುತ್ತಾ ಇಂಥವುಗಳನ್ನು ಸಮರ್ಪಕವಾಗಿ ಉತ್ತರಿ ಕುವೆಂಪು ಸಾಹಿತ್ಯ ಎಷ್ಟೊಂದು ಪ್ರಸ್ತುತವಾಗಿದೆ ಬುದನ್ನು ಸ್ಪಷ್ಟಪಡಿಸಿದ್ದಾರೆ. ಇದನ್ನು ಆನ್ವಯಿಕ ನೆಲೆ ದ ಪರಿಶೀಲಿಸಿ, ಕುವೆಂಪು ಸಾಹಿತ್ಯವನ್ನು ನಿರಂತರ ಾಲೋಕನಕ್ಕೆ ಒಳಪಡಿಸುತ್ತಿರಬೇಕಷ್ಟೆ!

ಸಾಹಿತ್ಯಕೃತಿಯ ಕ್ರಿಯೆ ಮತ್ತು ಸನ್ನಿವೇಶಗಳನ್ನು ರನ ಸ್ವೀಯ ಉದ್ದೇಶದಾಚೆಗಿಟ್ಟು ನೋಡಲು ಸ್ವತಃ ್‌ಎಸ್ ಅವರ ವಿಮರ್ಶಾವಿವೇಕ ಹೇಗೆ ದಾರಿದೀಪ ಬಲ್ಲುದೆಂಬುದಕ್ಕೆ 'ಮೊದೆಯ ಹಕ್ಕಿ, ಎದೆಯ ಹಕ್ಕಿ' ಲೇಖನ ಉತ್ತಮ ನಿದರ್ಶನ. ಇದು ದ್ವೈತ ಶೀರ್ಷಿ ಲ್ಲಿ ನಡೆಸಿರುವ ಅದ್ವೈತ ದೃಷ್ಟಿಯ ಚಿಂತನೆ. ಮನು ಅಂತಃ ಪ್ರಕೃತಿಗೂ ಬಹಿಃ ಪ್ರಕೃತಿಗೂ ಇರುವ ಅವಿ ವ ಸಂಬಂಧವನ್ನು ಕುವೆಂಪು ಅವರ ಸ್ವೀಯ ೇಶಕ್ಕೆ ಅನುಗುಣವಾಗಿ ವಿಶ್ಲೇಷಿಸುವ ಜಿಎಸ್‌ಎಸ್ ನದ ಕೊನೆಗೆ ನಾಯಿಗುತ್ತಿ, ಹೂವಯ್ಯನನ್ನು ಉಲ್ಲೇ ತ್ತಾ ಮನುಕುಲದ ಮಹಾಯಾನದ ಪ್ರತಿಮೆಗಳಂತೆ ನ್ನೂ ವಿವರಿಸಿದ್ದಾರೆ. ಮನು ಕುಲವು ನಿಸರ್ಗ ದಿಗೆ ಸ್ಥಾಪಿಸಿಕೊಳ್ಳುವ ಸಂಬಂಧದ ಎರಡು ಮಾದ ಂತೆ ನಾಯಿಗುತ್ತಿ ಮತ್ತು ಹೂವಯ್ಯನನ್ನು ನೋಡಿ ಜಿಎಸ್‌ಎಸ್ ಚಿಂತನೆ ಲೇಖಕನ ಸ್ವೀಯ ಉದ್ದೇಶ ಮೀರಿದ ಮುಂಗಾಣ್ಕೆಯ ಚಲನೆಯಾಗಿದೆ. ನಿಸ ಒಂದು ಅಂಗವೆಂಬಂತೆ ಬದುಕುತ್ತಿರುವ ನಾಯಿ ಯು ಮನುಷ್ಯನ ನಾಗರಿಕತೆಯ ಪ್ರಾಕೃತ ಸ್ಥಿತಿಗೆ ಯಾಗಿದ್ದರೆ, ಹೂವಯ್ಯನು ನಿಸರ್ಗದೊಂದಿಗೆ ಹೋದ ಸಂಬಂಧವನ್ನು ಪುನರ್ ಸ್ಥಾಪಿಸಿಕೊ ಆಧುನಿಕ ಪ್ರಜ್ಞಾ ವಿಶೇಷದ ಪ್ರತಿಮೆಯಂತೆ ತೋರು (ಪು ೧೧೪) ಎಂಬ ವಿಶ್ಲೇಷಣೆಯಲ್ಲಿ ನಾಯಿಗುತ್ತಿ ಹೂವಯ್ಯ ಕಾದಂಬರಿಯ ಎರಡು ಪಾತ್ರ ವಿಶೇಷ ದೃಷ್ಟಿಯು ಹಿಂದೆ ಸರಿದು ಅವರಿಬ್ಬರು ಮನು ಮಹಾಯಾನದ ಎರಡು 'ಕಾವ್ಯ ಪ್ರತಿಮೆ'ಗಳಾಗಿ ು ಜಿಎಸ್‌ಎಸ್ ಕೈ ಚಳಕವಾಗಿದೆ. ಇದನ್ನೇ ದುವರೆಸುತ್ತಾ ಹೇಳುವುದಾದರೆ ತುಂಬು ಗರ್ಭಿಣಿ ಯೊಂದಿಗೆ ನಡೆದುಕೊಳ್ಳುವ ಪಾನಮತ್ತ ಚೀಂಕ್ರನು ಮಾರಿಯಾದ ಮಾನವನ ವಿಕೃತ ಪ್ರಜ್ಞಾ ದ ಪ್ರತಿಮೆಯಾಗಿ ತೋರುತ್ತಾನೆ. ಒಟ್ಟಿನಲ್ಲಿ, ಎಸ್ ನಿರೂಪಿಸಿದ ನಿಸರ್ಗಜನ್ಯ ನಾಯಿಗುತ್ತಿ ಮತ್ತು ಸ್ನೇಹಿ ಹೂವಯ್ಯನ ಜೊತೆಗೆ ನಿಸರ್ಗಮಾರಿ ನನ್ನು ಸೇರಿಸುತ್ತಾ ಈ ಮೂವರು ಮನುಕುಲದ ಯಾನದ ತ್ರಿವಳಿ ಪ್ರತಿಮೆಗಳೆಂದು ಸಂದರ್ಭೋಚಿತ್ತರ ಮಾಡಿಕೊಳ್ಳಬಹುದು.

'ಶ್ರೀ ರಾಮಾಯಣ ದರ್ಶನಂ-ಒಂದು ನೋಟ' ಲೇಖನದಲ್ಲಿ ಜಿಎಸ್‌ಎಸ್ ಪುನರ್ಭವ ಕಾವ್ಯಮೀ ಸೆ ಕುರಿತು ವಿಸ್ತಾರವಾಗಿ ವಿವೇಚಿಸಿದ್ದಾರೆ, -ಪಶ್ಚಿಮಗಳ ಲಿಖಿತ ಕಾವ್ಯಮೀಮಾಂಸೆ ಮತ್ತು

ಪುಸ್ತಕ ಅವಲೋಕನ

'ಶ್ರೀ ರಾಮಾಯಣ ದರ್ಶನಂ-ಒಂದು ನೋಟ' ಎಂಬ ಲೇಖನದಲ್ಲಿ ಜಿಎಸ್‌ಎಸ್ ಪುನರ್ಭವ ಕಾವ್ಯಮೀಮಾಂಸೆ ಕುರಿತು ವಿಸ್ತಾರವಾಗಿ ವಿವೇಚಿಸಿದ್ದಾರೆ, ಪೂರ್ವ-ಪಶ್ಚಿಮಗಳ ಲಿಖಿತ ಕಾವ್ಯಮೀಮಾಂಸೆ ಮತ್ತು ದೇಶೀಯವಾದ ಮೌಖಿಕ ಕಾವ್ಯಮೀಮಾಂಸೆಗಿಂತಲೂ ಬೇರೆಯಾದ ಈ 'ಪುನರ್ಭವ ಕಾವ್ಯಮೀಮಾಂಸೆ' ಯನ್ನು ಕುವೆಂಪು ರಾಮಾಯಣಕ್ಕೆ ಸಮಗ್ರವಾಗಿ ಅನ್ವಯಿಸಿ ರಾಮಾಯಣ ದಂಥ ಹಳೆಯ ವಸ್ತು ಕನ್ನಡ ಸಂಸ್ಕೃತಿಯ ಆಧುನಿಕತೆಯಲ್ಲಿ ಮರು ಹುಟ್ಟು ಪಡೆದು 'ವಿನೂತನ ಕಥನ'ವಾಗಿ ಪರಿವರ್ತಿತ ಗೊಂಡಿರುವುದನ್ನು ಜಿಎಸ್‌ಎಸ್ ನಿಃಶಬ್ದ ವಾಗಿ ನಿರೂಪಿಸಿದ್ದಾರೆ. 'ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಸಂಬಂಧ ಪಟ್ಟಂತೆ ಶಿಖರ ಪ್ರಾಯವಾದ ಈ ಲೇಖನ ಪ್ರತಿ ನೂರು ವರ್ಷಗಳಿಗೊಮ್ಮೆ ಮೂಡಿ ಬರುವ ವಿಮರ್ಶಕನ ನಿಜೋದಯಕ್ಕೆ ನಿದರ್ಶನವಾಗಿದೆ.

ದೇಶೀಯವಾದ ಮೌಖಿಕ ಕಾವ್ಯಮೀಮಾಂಸೆಗಿಂತಲೂ ಬೇರೆಯಾದ ಈ 'ಪುನರ್ಭವ ಕಾವ್ಯಮೀಮಾಂಸೆ'ಯನ್ನು ಕುವೆಂಪು ರಾಮಾಯಣಕ್ಕೆ ಸಮಗ್ರವಾಗಿ ಅನ್ವಯಿಸಿ ರಾಮಾಯಣದಂಥ ಹಳೆಯ ವಸ್ತು ಕನ್ನಡ ಸಂಸ್ಕೃತಿಯ ಆಧುನಿಕತೆಯಲ್ಲಿ ಮರುಹುಟ್ಟು ಪಡೆದು 'ವಿನೂತನ ಕಥನ'ವಾಗಿ ಪರಿವರ್ತಿತಗೊಂಡಿರುವುದನ್ನು ಜಿಎಸ್‌ಎಸ್ ನಿಃಶಬ್ದವಾಗಿ ನಿರೂಪಿಸಿದ್ದಾರೆ. 'ರಾಮಾಯಣದರ್ಶನಂ' ಮಹಾಕಾವ್ಯಕ್ಕೆ ಸಂಬಂಧ ಪಟ್ಟಂತೆ ಶಿಖರ ಪ್ರಾಯವಾದ ಈ ಲೇಖನ ಪ್ರತಿ ನೂರು ವರ್ಷಗಳಿಗೊಮ್ಮೆ ಮೂಡಿ ಬರುವ ವಿಮರ್ಶಕನ ನಿಜೋದಯಕ್ಕೆ ನಿದರ್ಶನವಾಗಿದೆ. ಮಂಥರೆಯಿಂದ ಹಿಡಿದು ರಾವಣನವರೆಗೆ ಪರಿವರ್ತನೆಯ ಮಹಾಚಲನೆಗಳನ್ನು ಕುವೆಂಪು ರಾಮಾಯಣದ ತಿರುಳೆಂದು ನಿರೂಪಿಸಿರುವುದು ಸರಿಯಾಗಿದೆ. ಸ್ವತಃ ಸೀತೆ-ರಾಮ-ಲಕ್ಷ್ಮಣರ ಪಾಲಿಗೂ ವನವಾಸದ ಅವಧಿ ಅಥವಾ ನಿಸರ್ಗಸನ್ನಿಧಿಯು ಸ್ವ-ಸ್ವರೂಪದರ್ಶನದ ಪ್ರತೀಕವಾಗಿದೆಯೆಂದು ವಿವರಿಸುವುದರ ಮೂಲಕ ದೇವಲೋಕದಿಂದ ಭೂಲೋಕಕ್ಕೆ ಇಳಿದು ಬರುವ 'ಸ್ಥಾವರ' ದೃಷ್ಟಿಯ ಅವತಾರ ತತ್ವವನ್ನು ಮೀರಿದ, 'ಜಂಗಮ'ವೆನ್ನಬಹುದಾದ ಸಿದ್ಧಿಯೊಂದನ್ನು ಭೂಲೋಕದಲ್ಲೆ ಸಾಕ್ಷಾತ್ಕರಿಸಿಕೊಳ್ಳುವ ಪ್ರಕ್ರಿಯೆಯನ್ನು ಜಿಎಸ್‌ಎಸ್ ಸಮರ್ಥವಾಗಿ ವ್ಯಾಖ್ಯಾನಿಸಿದ್ದಾರೆ. 'ರಾಮಾಯಣದರ್ಶನಂ' ಮಹಾಕಾವ್ಯವನ್ನು ಉದಾಹರಣೆಯನ್ನಾಗಿಟ್ಟುಕೊಂಡು ಕವಿಯೊಬ್ಬನ ಹಸ್ತಪ್ರತಿಯ ಭಾವುಕ ಸಂಬಂಧಗಳು ಕಳಚಿಬಿದ್ದಿರುವುದನ್ನು, ಅತ್ಯಾಧುನಿಕ ಮಾಹಿತಿ ತಂತ್ರಜ್ಞಾನದ ನೆರವಿನಲ್ಲಿ ಕವಿಯ ಹಸ್ತಪ್ರತಿಗಳು ಪಡೆದುಕೊಳ್ಳುತ್ತಿರುವ ಸ್ಥಿತ್ಯಂತರಗಳನ್ನು ನಿರ್ಮಮತೆಯಿಂದ ವಿಶ್ಲೇಷಿಸುತ್ತಾ ಈ ಕುರಿತು ಪ್ರಕಟಗೊಂಡ ಅನಗತ್ಯವಿವಾದಗಳಿಗೆ ಮುಕ್ತಾಯದ ತೆರೆ ಎಳೆದಿದ್ದಾರೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಕುವೆಂಪು ಸಮಗ್ರಕಾವ್ಯ ಸಂಪುಟಕ್ಕೆ ಬರೆದ ಪ್ರಸ್ತಾವನೆಯೂ ಇಲ್ಲಿದೆ. ವೈವಿಧ್ಯಮಯ ನೆಲೆಗಳಿಂದ ಕುವೆಂಪು ಕಾವ್ಯವನ್ನು ಪ್ರವೇಶಿಸುವ ಬಗೆಗಳನ್ನು ಪರಿಶೀಲಿಸಬಹುದು: ೧. ಸೌಂದರ್ಯಾನುಭವದ ನೆಲೆ, ೨. ಆಧ್ಯಾತ್ಮಿಕವಾದ ನೆಲೆ, ೩. ವೈಚಾರಿಕತೆಯ ನೆಲೆ, ೪. ಬಗೆಬಗೆಯ ವಿಜ್ಞಾನ ಮತ್ತು ದರ್ಶನಗಳ ನೆಲೆಯಿಂದ ಕುವೆಂಪು ಕಾವ್ಯದ ಒಳಹೊಕ್ಕು ನೋಡುವ ಅಖಂಡ ದೃಷ್ಟಿಯ ಚಿಂತನ-ಮಂಥನಗಳು ಜಿಎಸ್‌ಎಸ್ ಅವರಲ್ಲಿದೆ. ಖಗೋಳ ವಿಜ್ಞಾನ, ಯಂತ್ರ ವಿಜ್ಞಾನ, ಜೀವ ವಿಜ್ಞಾನ, ಮನೋ ವಿಜ್ಞಾನ, ಯೋಗ ವಿಜ್ಞಾನ (ಪು.೨೦) ಮತ್ತು ತತ್ವಜ್ಞಾನ, ವೇದಾಂತ ವಿಜ್ಞಾನಗಳ (ಪು.೮೫) ಹಿನ್ನೆಲೆಯಲ್ಲಿ ಕುವೆಂಪು ಕಾವ್ಯ ಪ್ರವೇಶಕ್ಕೆ ಹೃದಯ ರಂಗವನ್ನು ಅಣಿಗೊಳಿಸುವ ಜಿಎಸ್‌ಎಸ್ ಅವರು, ವಿಜ್ಞಾನಾದಿ ಶಾಸ್ತ್ರಗಳು ಏನೇನೂ ವಿಕಾಸಗೊಳ್ಳದ ಕನ್ನಡದಂಥ ಭಾಷೆಯಲ್ಲಿ ಕವಿಯೊಬ್ಬ ಪ್ರತಿಪಾದಿಸುವ ಕೃತ್ಯಂತರ್ಗತ ವಿಜ್ಞಾನ ಮತ್ತು ದರ್ಶನಗಳ ನೆಲೆಯನ್ನು ಪ್ರಸ್ತಾಪಿಸಿಲ್ಲ. ಸೌಂದರ್ಯಾನುಭವ, ಆಧ್ಯಾತ್ಮಿಕತೆ, ವಿಚಾರವಾದ ಮತ್ತು ಬಗೆ ಬಗೆಯ ಜ್ಞಾನ ಶಿಸ್ತುಗಳ ನೆಲೆಯಿಂದ ಮಾತ್ರವಲ್ಲದೆ ಕುವೆಂಪು ಕಾವ್ಯವನ್ನು ಕೃತ್ಯಂತರ್ಗತ ವಿಜ್ಞಾನ ಮತ್ತು ದರ್ಶನಗಳ ದೃಷ್ಟಿಯಿಂದಲೂ ವಿವೇಚಿಸಬೇಕಾದ ಅನಿವಾರ್ಯತೆ ನಮ್ಮ ಎದುರಿನಲ್ಲಿದೆ. ಮಲೆನಾಡಿನ ಸಸ್ಯ ಪರಿಸರ, ಪ್ರಾಣಿ ಪರಿಸರ, ಮನುಷ್ಯ ಪರಿಸರಗಳನ್ನು ಕುರಿತು ನಡೆಸಬಹುದಾದ ಬಗೆಬಗೆಯ ಪ್ರಾಕೃತಿಕ ಮತ್ತು ಮಾನವಿಕ ಅಧ್ಯಯನಗಳ ಸಾಧ್ಯತೆಗಳು ಕುವೆಂಪು ಅವರ ಪದ್ಯ-ಗದ್ಯ-ನಾಟಕ-ಮುಕ್ತ ಛಂದಸ್ಸಿನ ಕೃತಿ ಸಮಸ್ತದಲ್ಲಿ ನಾವಿಂದು ಮನಗಾಣಬೇಕಿದೆ.

'ಕುವೆಂಪು ಮತ್ತು ಕನ್ನಡ ಸಾಹಿತ್ಯ ಪರಂಪರೆ' ಹಾಗೂ 'ಕುವೆಂಪು: ವೈಚಾರಿಕ ಮುಖ'- ಎಂಬ ಲೇಖನಗಳು ಒಂದಕ್ಕೊಂದು ಪೂರಕವಾಗಿದೆ. ಪರಂಪರೆಯೊಂದಿಗೆ ಕವಿಯೊಬ್ಬ ನಡೆಸುವ ಅನುಸಂಧಾನ ಹಾಗೂ ಇಂಥ ಅನುಸಂಧಾನ ನಡೆಸುವಾಗ ಕಂಡುಕೊಳ್ಳಬೇಕಾದ ವೈಚಾರಿಕ ಜಾಗೃತಿಯನ್ನು ಕುರಿತು ಕುವೆಂಪು ಅವರಲ್ಲಿ ದೃಢ ಸಂಕಲ್ಪ ಮತ್ತು ಬದಲಾಗದ ತತ್ವ ನಿಷ್ಠೆಯನ್ನು ಮನಗಾಣಬಹುದು. ೧೯೨೮ ರಲ್ಲಿ ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಕುವೆಂಪು ಮಾಡಿದ ಭಾಷಣ ಮತ್ತು ೧೯೬೮ ರಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಾಗ ಕುವೆಂಪು ಮಾಡಿದ ಭಾಷಣ-ಎರಡನ್ನು ಒಟ್ಟಿಗೆ ಪ್ರಸ್ತಾಪಿಸುವ ಜಿಎಸ್‌ಎಸ್ ತನ್ಮೂಲಕ ಪರಂಪರೆಯ ಪ್ರಜ್ಞೆಗೆ ಸಂಬಂಧ ಪಟ್ಟಂತೆ ಕುವೆಂಪು ಅವರಿಗಿದ್ದ ದೃಢ ಸಂಕಲ್ಪ ಮತ್ತು ಬದಲಾಗದ ತತ್ವ ನಿಷ್ಠೆಯನ್ನು ಗುರುತಿಸಿದ್ದಾರೆ. ಅಂತೆಯೇ, ಅಸ್ಪೃಶ್ಯರು ಮತ್ತು ದೇವಾಲಯ ಪ್ರವೇಶ ವಿಚಾರದಲ್ಲಿ ಕುವೆಂಪು ಅವರು ಗಾಂಧೀಜಿಗಿಂತಲೂ ಭಿನ್ನವಾದ ನಿಲುವು (ಪು. ೧೨೫) ತಳೆಯುತ್ತಾ, ಅನಿಕೇತನ ಪ್ರಜ್ಞೆಯನ್ನು ಪ್ರತಿಪಾದಿಸಿದ್ದಾರೆಂದು ಜಿಎಸ್‌ಎಸ್ ನಿರೂಪಿಸಿ

ರುವುದು ಯಥೋಚಿತವಾಗಿದೆ. ಜೊತೆಗೆ, ಕರ್ನಾಟಕ–ಸರ್ವೋದಯ–ವಿಶ್ವಮಾನವ ಎಂಬ ಕುವೆಂಪು ಪ್ರಯೋಗಗಳು ಮೂಲತಃ ಸ್ವತಂತ್ರ ವಿಚಾರಗಳಾಗಿದ್ದು ಕ್ರಮೇಣ ಕನ್ನಡ ಸಂಸ್ಕೃತಿಯ ಚಲನೆಯಲ್ಲಿ ವಿಶಿಷ್ಟ ಪರಿಭಾಷೆಗಳಾಗಿ ಸಾಕಾರಗೊಂಡವೆಂಬುದನ್ನು ಜಿಎಸ್‌ಎಸ್ ಗುರುತಿಸಿರುವುದು ಗಮನಾರ್ಹ.

“ತೌಲನಿಕ ವಿಮರ್ಶೆಯನ್ನು ಅನೇಕ ಆಯಾಮಗಳಲ್ಲಿ ವಿಸ್ತರಿಸಿದವರು ಕುವೆಂಪು” (ಪು ೧೮೦) ಎನ್ನುವ ಜಿಎಸ್‌ಎಸ್ ಇದಕ್ಕೆ ಸಂಬಂಧ ಪಟ್ಟಂತೆ ‘ಸರೋವರದ ಸಿರಿಗನ್ನಡಿಯಲ್ಲಿ’ ಮತ್ತು ‘ದ್ರೌಪದಿಯ ಶ್ರೀಮುಡಿ’ ಲೇಖನಗಳನ್ನು ವಿಶೇಷವಾಗಿ ಗಮನಿಸಿದ್ದಾರೆ. ತೌಲನಿಕ ವಿಮರ್ಶೆಯಲ್ಲಿ ೧. ವಿಶ್ವಾತ್ಮಕ ನೆಲೆ ಮತ್ತು ೨. ಸ್ಥಳೀಯ ನೆಲೆಗಳನ್ನು ಗುರುತಿಸಬಹುದು. ಬಿಎಂಶ್ರೀ ಮತ್ತು ಎಸ್.ವಿ. ರಂಗಣ್ಣನವರು ಕೈಗೊಂಡ ತೌಲನಿಕ ವಿಮರ್ಶೆಯಲ್ಲಿ ವಿಶ್ವಾತ್ಮಕ ನೆಲೆಯಿದೆ. ಆದ್ದರಿಂದಲೇ ದುರಂತ ಪ್ರಜ್ಞೆಯ ವಿವೇಚನೆ, ಶಕುಂತಲೆಮಿರಾಂಡ–ಡೆಸ್ಡಿಮೋನ ಕುರಿತ ಪರಿಶೀಲನೆಗಳೂ ತಲೆಹಾಕಿವೆ. ಮನುಷ್ಯ ಜಾತಿಗೆ ಸಂಬಂಧಿಸಿ ವಿಶ್ವಮಾನವ ಪ್ರಜ್ಞೆಯನ್ನು ಪ್ರತಿಪಾದಿಸಿದ ಕುವೆಂಪು ಸಾಹಿತ್ಯ ಜಾತಿಯ ತೌಲನಿಕ ವಿಮರ್ಶೆಯಲ್ಲಿ ವಿಶ್ವಾತ್ಮಕ ನೆಲೆಗಿಂತಲೂ ಸ್ಥಳೀಯ ನೆಲೆಯೇ ಸರಿಯಾದುದೆಂದು ತಿಳಿದಿದ್ದಾರೆ. ಸರೋವರದ ಸಿರಿಗನ್ನಡಿಯಲ್ಲಿ ಪಂಪ–ನಾಗವರ್ಮ–ರನ್ನ–ಕುಮಾರವ್ಯಾಸರನ್ನಿಟ್ಟು ‘ಆಂತರಿಕ’ವೆನ್ನಬಹುದಾದ ತೌಲನಿಕ ವಿಮರ್ಶೆ ಮಾಡಿರುವುದು ನ್ಯಾಯಬದ್ಧವಾಗಿದೆ. ‘ದ್ರೌಪದಿಯ ಶ್ರೀಮುಡಿ’ಯೂ ಇದೇ ಬಗೆಯಲ್ಲಿ ಮೂಡಿ ಬಂದಿದೆ. ಅದೇ ರೀತಿ, ಕುವೆಂಪು ಸಾಹಿತ್ಯಕ್ಕೆ ಸಂಬಂಧ ಪಟ್ಟಂತೆ ಕನ್ನಡ ವಿಮರ್ಶೆಯಲ್ಲಿ ರೂಢಿಯಾಗಿದ್ದ ‘ಸಂಸ್ಕೃತ ಭೂಯಿಷ್ಠವಾದ ಭಾಷೆ’ ಮತ್ತು ‘ಎರಡು ಕಾದಂಬರಿಗಳೇ ನಿಜವಾದ ಮಹಾಕಾವ್ಯ’ ಮುಂತಾದ ಮೇಲು ನೋಟದ ಗ್ರಹಿಕೆಯನ್ನು ನಿರಾಕರಿಸುತ್ತಾ, ಪುನರಾಲೋಕನ ಮಾಡಿದ್ದಾರೆ. ‘ಮಹಾಕಾವ್ಯದ ಮೃತ್ಯು ಪತ್ರ’ ಹೊರಡಿಸಿದ ಪಶ್ಚಿಮದ ಚಿಂತನೆ ಮತ್ತು ಇದನ್ನು ಅನುಮೋದಿಸಿದ ರವೀಂದ್ರನಾಥ ಟ್ಯಾಗೂರ್ ಅವರ ವಿಚಾರದ ಪುನರಾಲೋಕನ ಮಾಡುತ್ತಾ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೂಡಿಬಂದ ಮಹಾಕಾವ್ಯಗಳ ಸರಣಿಯಲ್ಲಿ ‘ಶ್ರೀ ರಾಮಾಯಣ ದರ್ಶನಂ’ ಮತ್ತು ‘ಶ್ರೀ ಹರಿಚರಿತ್ರೆ’ಯ ಔಚಿತ್ಯ ಮತ್ತು ಯಶಸ್ಸನ್ನು ಜಿಎಸ್‌ಎಸ್ ಖಚಿತವಾಗಿ ನಿರೂಪಿಸಿದ್ದಾರೆ. ಇಂಥದೊಂದು ಕೃತಿಯನ್ನು ಕಟ್ಟಿಕೊಡುವಾಗ ಶಿವರುದ್ರಪ್ಪನವರು ತೇಜಸ್ವಿ (ಪು.೪೦), ಹರಿಹರಪ್ರಿಯ (ಪು.೪೭), ನರಹಳ್ಳಿ (ಪು.೬೭), ತಾರಾನಾಥ (ಪು.೯೯) ಮುಂತಾದವರ ವಿಚಾರಗಳನ್ನು ಬಳಸಿಕೊಂಡಿರುವುದು ಅವರು ಗಮನಿಸುತ್ತಾ ಬಂದಿರುವ ಕುವೆಂಪು ಕುರಿತು ಸಾಹಿತ್ಯ ವಿಮರ್ಶೆಯ ಸಾಕ್ಷಗಳೂ ಆಗಿದೆ.

ಕುವೆಂಪು ನಿರ್ವಹಿಸಿದ ಸಾಹಿತ್ಯ ವಿಮರ್ಶೆಗೆ ಸ್ಥಳೀಯವಾದ ಆಯಾಮವಿರುವಂತೆ, ವಿಶ್ವಾತ್ಮಕವಾದ ನೆಲೆ–ಬೆಲೆಗಳೂ ಇವೆಯೆಂಬುದನ್ನು ಜಿಎಸ್‌ಎಸ್ ಘನವಾಗಿ ತೋರಿಸಿಕೊಟ್ಟಿದ್ದಾರೆ. “ಭೂಮಾನುಭೂತಿಯ ಅಭಿವ್ಯಕ್ತಿ ವಸ್ತುಕಾವ್ಯದಲ್ಲಿ ಮಾತ್ರವಲ್ಲದೆ ಭಾವಕಾವ್ಯದಲ್ಲಿ ಸಾಧ್ಯವಿಲ್ಲವೆ? (ಪು.೨೦೧)–” ಎಂದು ಸ್ವತಃ ಪ್ರಶ್ನಿಸಿಕೊಳ್ಳುವ ಕುವೆಂಪು ಇದು ಸಾಧ್ಯವೆಂದು ಹೇಳುತ್ತಾ ವರ್ಡ್ಸ್‌ವರ್ತ್ ಉದಾಹರಣೆ ಕೊಟ್ಟಿದ್ದಾರೆ. ಇದನ್ನು ಪೂರ್ವದ ಹಾಗೂ ಪಶ್ಚಿಮದ ಕಾವ್ಯಮೀಮಾಂಸೆಯಲ್ಲಿ ಕಾಣದ ಒಂದು ಒಳನೋಟವೆಂದು ವ್ಯಾಖ್ಯಾನಿಸುವ ಜಿಎಸ್‌ಎಸ್ ಸುವಿಖ್ಯಾತ ವಿಮರ್ಶಕನಾದ ಎ.ಸಿ. ಬ್ರಾಡ್ಲೆಗೆ ತೋಚದ ವಿಮರ್ಶಾ ವಿವೇಕ ಕುವೆಂಪು ಅವರಲ್ಲಿದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದು ಪರೋಕ್ಷವಾಗಿ ಕನ್ನಡ ವಿಮರ್ಶೆ ತಲುಪಿದ ಅತ್ಯುನ್ನತ ಸ್ಥಾಯಿಗೂ ನಿದರ್ಶನವಾಗಿದೆ.

ಕುವೆಂಪು ಅವರ ಕಿಂದರಿ ಜೋಗಿ: ಒಂದು ದುರಂತ ಕತೆಯೆಂಬ ಲೇಖನದಲ್ಲಿ ಜಿಎಸ್‌ಎಸ್ ಅವರು ಬ್ರೌನಿಂಗ್ ಕವಿಯ ‘ಪೈಡ್ ಪೈಪರ್’ ಕವಿತೆಯ ಪ್ರಭಾವ ಎಷ್ಟರ ಮಟ್ಟಿಗಿದೆಯೆಂಬುದನ್ನು ಪುನರಾಲೋಕನ ಮಾಡುತ್ತಾ ಇದರೊಳಗೆ ದುರಂತ ವಸ್ತು ವಿನ್ಯಾಸ ಹಾಗೂ ಅಪರಾಧ ಮತ್ತು ಶಿಕ್ಷೆಯ ಆಶಯವಿದೆ ಎನ್ನುತ್ತಾರೆ. ಈ ವಿಷಯದಲ್ಲಿ ಜಿಎಸ್‌ಎಸ್ ಅವರ ವಾಸ್ತವವಾದಿ ನಿಲುವಿನ ಪರಿಶೀಲನೆ ಸರಿಯೆನಿಸುವುದಿಲ್ಲ. ಫ್ಯಾಂಟಸಿಯನ್ನು ಫ್ಯಾಂಟಾಸ್ಟಿಕ್ ಎಂಬಂತೆ ಸ್ವೀಕರಿಸಬೇಕು. ಬೆಟ್ಟದ ಹೊಟ್ಟೆಯೊಳಗೆ ಮಕ್ಕಳು ಅಡಗುವ ಚಿತ್ರಣವನ್ನು ಬಹು ಹಿಂದುಳಿದ ಕುಂಟನೊಬ್ಬನು ‘ನಾಕ’ವೆಂದು ಕರೆಯುವುದು ಗಮನಾರ್ಹ, ಸೀತೆ ಮತ್ತು ರಾಮನ ಅಗ್ನಿ ಪ್ರವೇಶವನ್ನು ಫ್ಯಾಂಟಾಸ್ಟಿಕ್ ಆಗಿ ಚಿತ್ರಿಸಿದ ಕುವೆಂಪು ಮಕ್ಕಳ ಪರ್ವತ ಗರ್ಭ ಪ್ರವೇಶವನ್ನು ಫ್ಯಾಂಟಾಸ್ಟಿಕ್ ಆಗಿಯೇ ಚಿತ್ರಿಸಿದ್ದಾರೆ. ಇದನ್ನು ನಿಸರ್ಗ ಸನ್ನಿಧಿಯ ಸ್ವರ್ಗವೆಂಬಂತೆ ಸ್ವೀಕರಿಸಬಹುದು, ಇದನ್ನು ಶಿಕ್ಷೆಯೆಂದೋ ಅಥವಾ ದುರಂತವೆಂದೋ ಕರೆಯುವುದು ದೂರಾನ್ವಯವೆನಿಸುತ್ತದೆ.

ಕುವೆಂಪು ಅವರ ಆಂಗ್ಲ ಕವಿತೆಯಲ್ಲಿರುವ This bard unknown ಎಂಬುದನ್ನು ಜಿಎಸ್‌ಎಸ್ ‘ಈ ಅಜ್ಞಾತ ಕವಿ’ ಎಂದು ಅನುವಾದಿಸಿದ್ದಾರೆ. bard ಎಂದರೆ ಕವಿ ಮಾತ್ರವಲ್ಲ; ಸಂಚಾರಿ ಗಾಯಕರು ಕೂಡ. ಆದ್ದರಿಂದ, ‘ಈ ಅಜ್ಞಾನ ಚಾರಣ ಕವಿ’–ಎಂಬುದೇ ಸಮರ್ಪಕ ಅನುವಾದ, ‘ಚಾರಣ ಕವಿ’ ಎಂಬ ಪ್ರಯೋಗವನ್ನು ಸ್ವತಃ ಜಿಎಸ್‌ಎಸ್ ಅವರೇ ಸರ್ವಜ್ಞನಿಗೆ ಸಂಬಂಧ ಪಟ್ಟಂತೆ ಬಳಸಿದ್ದಾರೆ. ಮಲೆನಾಡಿನ ಪರ್ವತಾರಣ್ಯಗಳಲ್ಲಿ ಅಲೆದಾಡುತ್ತಾ ನಿಸರ್ಗದ ನೇರವಾದ ಅನುಭವಗಳನ್ನು ಸಮೃದ್ಧವಾಗಿ ಗಳಿಸಿದ ಕುವೆಂಪು ಅವರನ್ನು ‘ಚಾರಣ ಕವಿ’ ಎಂದು ಕರೆಯುವುದರಲ್ಲಿ ಸತ್ಯಾಂಶವಿದೆ. ಕುವೆಂಪು ಸಾಹಿತ್ಯದ ವೈಶಿಷ್ಟ್ಯಗಳನ್ನು ಜಿಎಸ್‌ಎಸ್ ವಿವರಿಸುತ್ತಾ ....“ಬಯಲು ನಾಡಿನವರೆಂದೂ ಕಾಣದ ಹಾಗೂ ಕೇಳದ ಮೃಗಯಾವಿನೋದ ಸಾಹಸ ಕಥನಗಳನ್ನು, ನಗರ ನಾಗರಿಕತೆಗೆ ಅರಣ್ಯ ಸಂಸ್ಕೃತಿ ಮುಖಾಮುಖಿಯಾಗುವ ಸಂದರ್ಭಗಳನ್ನು”..... (ಪು.೧೫) ಕುವೆಂಪು ಮಲೆನಡಿನ ಅರಣ್ಯ ಮತ್ತು ಬದುಕಿನ ಹಿನ್ನೆಲೆಯಲ್ಲಿ ಅನಾವರಣ ಗೊಳಿಸಿದ್ದಾರೆಂದು ಹೇಳಿದ್ದಾರೆ. ಕೆನೆತ್ ಆಂಡರ್ಸನ್ ಅವರ ಪೆದ್ದ ಚೆರುವಿನ ರಾಕ್ಷಸ, ಜಾಲಹಳ್ಳಿಯ ಕುರ್ಕ, ವೈನಾಡಿನ ನರಭಕ್ಷಕ ಕೃತಿಗಳು ಬಯಲು ನಾಡಿನ ಮೃಗ ಯಾವಿನೋದದ ಕಥನಗಳಾಗಿವೆ. ನಗರ ನಾಗರಿಕತೆ ಮತ್ತು ಅರಣ್ಯ ಸಂಸ್ಕೃತಿಗಳ ಪ್ರಥಮ ಚುಂಬನದ ವಿವರ ಗಳನ್ನು ಜಿ. ವೆಂಕಟಯ್ಯನವರ ಕಥನಗಳಲ್ಲಿ ನೋಡ ಬಹುದು.

ಕುವೆಂಪು ಸಾಹಿತ್ಯಕ್ಕೆ ಸಂಬಂಧ ಪಟ್ಟಂತೆ ಕನ್ನಡದಲ್ಲಿ ಮೂಡಿ ಬಂದಿರುವ ‘ಜೈ ವಿಮರ್ಶೆ’ ಮತ್ತು ‘ಬೈ ವಿಮರ್ಶೆ’ಗಳನ್ನು (=ಕೆ.ಎಸ್. ನಿಸಾರ್ ಅಹಮದ್ ಪ್ರಯೋಗ) ಮೀರುವಂತೆ ಜಿ.ಎಸ್. ಶಿವರುದ್ರಪ್ಪನವರು ಸಿದ್ಧ ಪಡಿಸಿರುವ ‘ಕುವೆಂಪು ಪುನರಾಲೋಕನ’ವೆಂಬ ಈ ಪುಸ್ತಕವು ಸಾಹಿತ್ಯಾಭ್ಯಾಸಿಗಳ ಪಾಲಿಗೆ ಕೈಮರ ಕಾಯಕದ ದಿಗ್ದರ್ಶನವಾಗಿದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು ‘ಸಂವಾದ’ ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು–೫೬೦ ೦೯
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ತಾಯಿ (ಕಾದಂಬರಿ)
ಲೇ: ಮಕ್ಸೀಂ ಗೋರ್ಕಿ,
ಅನುವಾದ: ನಿರಂಜನ
ಬೆಲೆ: ರೂ. ೧೦೦/-

ವಿಶ್ವ ಸಾಹಿತ್ಯದ ಇತಿಹಾಸದಲ್ಲಿ ಲಕ್ಷಾಂತರ ಓದುಗರ ಮೇಲೆ ಪ್ರಭಾವ ಬೀರಿದ ಅಮೂಲ್ಯ ಕೃತಿ ತಾಯಿ ೧೯೦೫–೧೯೦೭ ರಲ್ಲಿ ನಡೆದ ರಷ್ಯ ಕ್ರಾಂತಿಯ ಸಮಯದಲ್ಲಿ ರಚಿತವಾದ ಈ ಕಾದಂಬರಿ, ಭಾರತದ ಹಲವು ಭಾಷೆಗಳೂ ಸೇರಿದಂತೆ ಜಗತ್ತಿನ ೧೨೭ಕ್ಕೂ ಹೆಚ್ಚು ಭಾಷೆಗಳಲ್ಲಿ ಅನುವಾದಗೊಂಡು ಪ್ರಕಟವಾಗಿದೆ. ನಾಟಕ ರೂಪದಲ್ಲಿ, ಸಿನಿಮಾ ರೂಪದಲ್ಲಿ ಹಾಗೂ ಕಾವ್ಯ ರೂಪದಲ್ಲಿ ಪ್ರಕಟವಾಗಿ ಜಾಗತಿಕ ಸಾಹಿತ್ಯದಲ್ಲಿ ಶಾಶ್ವತ ಸ್ಥಾನ ಗಳಿಸಿದೆ. ನೂರು ವರ್ಷಗಳು ತುಂಬಿದ 'ತಾಯಿ'ಯ ಕನ್ನಡ ಅನುವಾದದ ಮೂರನೇ ಮುದ್ರಣ ಇದು.

ಹೊಸ ಪುಸ್ತಕ

ಅರ್ನೆಸ್ಟೊ ಚೆ ಗುವಾರ
ಲೇ: ಐ. ಲಾವ್ರೆತ್ಸ್ಕಿ
ಬೆಲೆ: ರೂ. ೧೦೦/-

ಲ್ಯಾಟಿನ್ ಅಮೆರಿಕಾ ದೇಶಗಳ ರಾಜಕೀಯ ಮತ್ತು ಸಾಮಾಜಿಕ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದ ಕ್ರಾಂತಿಕಾರಿ ಹೋರಾಟಗಾರ ಚೆ ಗುವಾರ ಬದುಕಿನ ಕಥೆ ಇದು ಚೆ ಅವರ ಬದುಕಿನೊಂದಿಗೆ ಇಡೀ ಲ್ಯಾಟಿನ್ ಅಮೆರಿಕಾ ದೇಶಗಳ ಬದುಕೂ ಬೆರೆತು ಹೋಗಿರುವುದು ಇಲ್ಲಿನ ವೈಶಿಷ್ಟ ಚೆ ಗುವಾರರಂಥ ಕ್ರಾಂತಿಕಾರಿ ಹೋರಾಟಗಾರ ಆಯ್ದುಕೊಂಡ ಅತ್ಯಂತ ಕಷ್ಟದ ಆಯ್ಕೆಯನ್ನು, ಅದನ್ನು ನೆರವೇರಿಸುವ ಪ್ರಯತ್ನದಲ್ಲಿ ಒಮ್ಮೆಯೂ ಶತ್ರುವಿನೊಂದಿಗೆ ರಾಜಿಮಾಡಿಕೊಳ್ಳುವ ಭಾವನೆ ಅವರ ತಲೆಯಲ್ಲಿ ಸುಳಿಯಲಿಲ್ಲ ಎಂಬುದನ್ನು ಚಿತ್ರಿಸುವ ಕೃತಿ ಇದು. ಚೆ ಅವರ ಬದುಕಿನ, ಅದೇ ವೇಳೆ ಲ್ಯಾಟಿನ್ ಅಮೆರಿಕಾದ ದೇಶಗಳ ಬದುಕಿನ ಮೇಲೆ ಬೆಳಕು ಚೆಲ್ಲುವ ಅದ್ಭುತ ಕೃತಿ.

ಮೇಲಿನ ಎರಡೂ ಪುಸ್ತಕಗಳ ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೬೦೦೦೧

ಮಾಲಯದ ನರಭಕ್ಷಕಗಳು ೧, ೨, ೩
ಲ್ಲಾ ದೇಶದ ನರಭಕ್ಷ ಮತ್ತು ಇತರ ಕತೆಗಳು
ಕ್ತೇಸರದ ನರಭಕ್ಷಕ ಮತ್ತು ಇತರ ಕತೆಗಳು
ಪಾವತದ ನರಭಕ್ಷಕ ಮತ್ತು ಇತರ ಕತೆಗಳು
ಮ್ ಕಾರ್ಬೆಟ್ ಅನುಭವಗಳ ಕನ್ನಡ ರೂಪ)
ನುವಾದ: ಟಿ.ಎಸ್. ವಿವೇಕಾನಂದ
: ತಲಾ ರೂ. ೮೦/-

ಕನ್ನಡ ಸಾಹಿತ್ಯದಲ್ಲಿ ಅತಿ ವಿರಳವಾಗಿರುವ ಶಿಕಾರಿ ತ್ಯದ ಅಪರೂಪದ ಕೃತಿಗಳು ಇವು. ಜಿಮ್ ರ್ಬೆಟ್ ಎಂಬ ಅಪರೂಪದ ಬೇಟೆಗಾರನ ಬೇಟೆ ಅನು ಗಳು ಇವಾದರೂ, ಬೇಟೆಯ ರೋಮಾಂಚನಗಳಲ್ಲಿ ನವೀಯ ಸ್ಪರ್ಶ ಇರುವುದರಿಂದ ಈ ಕಥನಗಳಿಗೆ ಷ ಸಾಹಿತ್ಯಕ ಮೌಲ್ಯ ಒದಗಿಬಂದಿದೆ.

ಜಿಮ್ ಕಾರ್ಬೆಟ್ ಮೂಲತಃ ಒಬ್ಬ ಬೇಟೆಗಾರ. ಟೆಯನ್ನು ಒಂದು ಆಧ್ಯಾತ್ಮಿಕ ಎತ್ತರಕ್ಕೆ ತೆಗೆದುಕೊಂಡು ದ ಸಾಧಕ. ಕಾರ್ಬೆಟ್ ಕಾಡನ್ನು ಪ್ರವೇಶಮಾಡುವ -ಕಾಡನ್ನು ನೋಡುವ ಕ್ರಮ-ಇವತ್ತಿನ ಸರ ಸಂರಕ್ಷಣೆಯ ಮಾತಾಡುವ ವೃತ್ತಿನಿರತ ಸರ ವಾದಿಗಳಿಗೆ ಒಂದು ಪಾಠದಂತಿದೆ. ಸರ ವಾದವನ್ನು ಬೌದ್ಧಿಕ ಚಟುವಟಿಕೆ ಹಾಗೂ ದನೆಯ ಮೂಲ ಮಾಡಿ ಕೊಂಡಿರುವ ಸರವಾಸಿಗಳಲ್ಲದ ಪ್ರಾಯೋಜಕರು ಡಿಸುವ ಪರಿಸರ ವಿನ್ಯಾಸ ಕ್ರಮಗಳು ಕ್ಕಾಗಿ ಕಾಣುವುದು ಕಾರ್ಬೆಟ್ ಕಂಡಿರಿಸಿದ ಯಲ್ಲಿ ಕಂಡಾಗ ಮಾತ್ರ. ಇಲ್ಲದೆ ದಲ್ಲಿ ಈ ನಡುವಿನ ವ್ಯತ್ಯಾಸ ಅರಿವಾಗದೇ ಗಬಹುದು. ಕಾರ್ಬೆಟ್ ಉತ್ತರ ಭಾರತದ ಕಾಡುಗಳಲ್ಲಿ ಸುಮಾರು ನಲವತ್ತು ವರ್ಷಗಳ ನಡೆಸಿದ ಕಾಲ್ನಡಿಗೆ ಚಾರಣ..., ಗ್ರತೆಯಿಂದ ಕಾಡಿನ ಮೂಲಗಳನ್ನು ಮಾಡಿಕೊಳ್ಳಲು ನಿರಂತರವಾಗಿ ಪಟ್ಟ ಪ್ರಯತ್ನ..., ಸಿಡಿದು ನಿಸರ್ಗ ಶಕ್ತಿಗೆ ಸವಾಲೊಡ್ಡಲು ಸಿದ್ಧ ವಾಗಿದ್ದ ಬಂದೂಕಿನ ಟ್ರಿಗರ್ ಮೇಲೆ ಬೆರಳಿಟ್ಟು ತೋರುವ ನಿರಂಕಾರಗಳು.... ಕಾರ್ಬೆಟ್ ಕಥನಗಳನ್ನು ಜಗತ್ತಿನ ಶ್ರೇಷ್ಠ ಪರಿಸರ ಕಥನಕಗಳಾಗಿ ರೂಪಿಸಿವೆ.

ಕಾರ್ಬೆಟ್‌ನ ಪ್ರತಿಯೊಂದು ಶಿಕಾರಿಯೂ ಕಾಡಿನ ವಿಶಿಷ್ಟ ಗುಣ ಲಕ್ಷಣಗಳನ್ನು ಶೋಧಿಸುವ ಅನ್ವೇಷಣೆ ಯಾಗಿ ಕಾರ್ಬೆಟ್ ಪರಿಭಾವಿಸುವುದರಿಂದ ಈ ಕಥನ ಗಳಲೂ ಅನೂಹ್ಯವಾದ ಲೋಕ ಧುತ್ತನೆ ನಮ್ಮೆದುರಿಗೆ ತೆರೆದು ತೋರುತ್ತವೆ. ಕರ್ಬೆಟ್‌ನ ಕಾಡುಗಳು ಕೇವಲ ಪದಾರ್ಥ ಪ್ರಪಂಚದ ಪ್ರತಿನಿಧೀಕರಣದಂತೆ ದಾಖಲಾ ಗುವುದಿಲ್ಲ. ಕಾಡೇ ಜೀವಗೊಂಡಂತೆ ಮಾನವೀಕರಣ ಗೊಳ್ಳುವ, ಸಂವೇದಿಸುವ ಅನುಭೂತಿಗೆ ಒಳಗಾಗುವ ಜಾದು ಈ ಕಥನ ಕೇವಲ ಭೌತಿಕ ವಿವರಗಳ ದಾಖಲಾತಿ ಯಾಗಿ ಬಿಡುವ ಅಪಾಯಗಳಿಂದ ಪಾರುಮಾಡಿವೆ ಎನಿಸುತ್ತದೆ.

ಕಾರ್ಬೆಟ್ಟರ ಕಥನಗಳನ್ನು ಇಂಗ್ಲಿಷ್‌ನಲ್ಲಿ ಓದಿಲ್ಲದ ವರಿಗೆ ಈ ಕಥನಗಳು ಅನುವಾದ ಎಂಬಂತೆ ಕಾಣುವುದೇ ಇಲ್ಲ. ಆದರೆ 'ವಿವೇಕಾನಂದರ ಕನ್ನಡೀಕರಣವು ಅನು ವಾದ ಎಂಬುದಕ್ಕಿಂತ ಪುನಃಸೃಷ್ಟಿಗೊಂಡಂತೆ ಸಂಭ ವಿಸಿವೆ'. ಆ ಕಾರಣಕ್ಕೆ ಈ ಕಥನಗಳು ಎಂದಿಗೂ ಕಾಡುವ ಗುಣವನ್ನು ಪಡೆದುಕೊಂಡಿವೆ. ನಿಜವಾದ ಕತೆ-ಬರಹ ಬದುಕಿನಲ್ಲಿ ಬೆಳೆಯುತ್ತವೆ, ಓದುಗನನ್ನು ಬೆಳೆಸುತ್ತವೆ ಎಂದು ಬಲ್ಲವರು ಹೇಳುವುದುಂಟು. ಖಂಡಿತವಾಗಿಯೂ ಈ ಕಥನಗಳೂ ಇಂಥಾ ಗುಣ ಸ್ಪರ್ಶಗಳ ಮಾಂತ್ರಿಕತೆ ಯನ್ನು ಪಡೆದುಕೊಂಡಿದೆ ಎಂಬುದನ್ನು ಪ್ರತಿ ಓದುಗನೂ ಕಂಡುಕೊಳ್ಳಬಹುದು. ಈ ಕಥನಗಳು ಕಾಡು-ನಿಸರ್ಗ ಬದುಕನ್ನು ಪ್ರೀತಿಸುವ ಸಂವೇದನೆಯನ್ನು ಓದುಗರಲ್ಲಿ ಉದ್ದೀಪನ ಗೊಳಿಸುತ್ತವೆ.

ಇಂಥಾ ಕಥನಗಳೊಂದಿಗೆ ಸಂವಾದಿಸುವ ಅವ ಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ವಿವೇಕಾನಂದ ಅಭಿನಂದನಾ ರ್ಹರು.

ಈ ಮೂರೂ ಪುಸ್ತಕಗಳ ಪ್ರಕಾಶಕರು:
ಇಂದ್ರಪ್ರಸ್ಥ ಪ್ರಕಾಶನ, ಗವೀಪುರಂ,
ಬೆಂಗಳೂರು.





ನೀರಿನ ಖಾಸಗೀಕರಣ–ಅಗ್ನಿ ಮುಖದಲ್ಲಿ ಕರ್ನಾಟಕ

ಆತಂಕದ ಹೆಜ್ಜೆ; ಎಡವಿದರೆ ಎಲ್ಲಾ ಮಾಯ

ಜಾಗತೀಕರಣದ ನಿಜವಾದ ಬೇಟೆ ಈಗ ಕರ್ನಾಟಕಲ್ಲಿ ಆರಂಭ ವಾಗಿದೆ. ಜನರ ಜೀವನಾಧಾರವಾದ ನೀರಿನ ವಿತರಣೆಯನ್ನು ಸರ್ಕಾರ ಖಾಸಗಿಯವರಿಗೆ ವಹಿಸುವ ತರಾತುರಿ ಯಲ್ಲಿದೆ. ಏನೂ ಅರಿಯದ ಜನ, ರಾಜಕಾರಣಿಗಳ ಲಾಭಕೋರತನ ತಿಳಿಯುವ ಮುನ್ನವೇ ಬೀದಿಪಾಲಾಗುವ ಸಂಭವವೇ ಈಗ ಹೆಚ್ಚಾಗಿದೆ. ಬೆಂಗಳೂರಿನ ಕುಡಿಯುವ ನೀರು ಸರಬರಾಜು ಇನ್ನೇನು ಪರರ ಪಾಲಾಗಲಿದೆ. ಬದುಕಿನ ಕನಿಷ್ಟ ಅಗತ್ಯವಾದ ನೀರನ್ನೂ ಪೂರೈಸಲಾರದ ಸರ್ಕಾರ ಜನ ಹಿತವನ್ನು ಕಾಯುವುದೇ? ನೀರಿನ ಖಾಸಗೀಕರಣ ಕುರಿತಾದ ಲೇಖನಮಾಲೆಯ ಕೊನೆಯ ಕಂತು ಇದು.

ಟಿ.ಎಸ್. ವಿವೇಕಾನಂದ

ನೀರಿನ ಖಾಸಗೀಕರಣ ಪ್ರಕ್ರಿಯೆ ರಾಜ್ಯದಲ್ಲಿ ಕೊನೆಯ ಘಟ್ಟ ತಲುಪಿದೆ. ಈಗಾಗಲೇ ಸರ್ಕಾರ ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ ಹಾಗೂ ಬೆಳಗಾವಿಗಳನ್ನು ಖಾಸಗಿಯವರ ಹಿಡಿತಕ್ಕೆ ಕೊಟ್ಟಾಗಿದೆ. ಈ ಹಿಡಿತ ಸಧ್ಯಕ್ಕೆ "ಪ್ರಾಯೋಗಿಕ"ವೆಂದು ಹೇಳಲಾಗುತ್ತಿದೆ. ಅವರ ಪರಿಭಾಷೆಯ ಪ್ರಕಾರ ಇದಕ್ಕೆ "ಡೆಮಾನ್‌ಸ್ಟ್ರೇಷನ್ ಝೋನ್" ಎಂದು ಕರೆಯಲಾಗುತ್ತಿದೆ. ಅಂದರೆ ಈ ಮೇಲಿನ ನಗರಗಳ ತಲಾ ಹತ್ತು ವಾರ್ಡ್‌ಗಳನ್ನು ಫ್ರಾನ್ಸ್ ಮೂಲದ 'ಫಿಚ್‌ನರ್' ಎಂಬ ಮಧ್ಯವರ್ತಿ ಕಂಪನಿಯೊಂದಕ್ಕೆ ವಹಿಸಿಕೊಡಲಾಗಿದೆ. ಇದರ ಮಾತೃ ಸಂಸ್ಥೆ ನೀರನ್ನು ಮಾರುವ ಪರಿಕಲ್ಪನೆಯನ್ನು ಜಗತ್ತಿನ ಮುಂದಿಟ್ಟ ಮೊದಲ ಖಾಸಗೀ ನೀರು ಸರಬರಾಜು ಕಂಪನಿಗಳಲ್ಲಿ ಒಂದಾದ ಸೂಜ್ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಅದನ್ನು ಒಪ್ಪಂದದಲ್ಲಿ ಸ್ಪಷ್ಟಪಡಿಸಲಾಗಿಲ್ಲ.

ಇದೆಲ್ಲಾ ಸಂಭವಿಸಿದ್ದು ಹೇಗೆಂದರೆ...., ಮೊದಲಿಗೆ ಇಂಥಾ ಬೆಂಗಳೂರಿನಿಂದ ದೂರವಿರುವ ನಗರ ಪ್ರದೇಶಗಳಿಗೆ ನೀರು ಸರಬರಾಜನ್ನು ವ್ಯವಸ್ಥಿತವಾಗಿ ಅಸ್ತವ್ಯಸ್ತ ಗೊಳಿಸಲಾಯಿತು. ನೀರು ಸರಬರಾಜನ್ನು ಅನಿಶ್ಚಿತ ಗೊಳಿಸಲಾಯಿತು. ಆರಂಭದಲ್ಲಿ ವಾರಕ್ಕೆ ೫–೬ ದಿನ ಬರುತ್ತಿದ್ದ ನೀರು ವಾರಕ್ಕೆ ಮೂರು ದಿನಕ್ಕೆ ಇಳಿಯಿತು, ನಂತರ ವಾರಕ್ಕೊಂದು ದಿನಕ್ಕೆ ಬಂತು. ಅದೂ ಅನಿಶ್ಚಿತ. ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಜನ ನೀರಿಗಾಗಿ ಕಾಯುವಂತೆ, ಕೊನೆಗೆ ಹಂಬಲಿಸುವಂತೆ ಮಾಡಲಾಯಿತು. ಕೊನೆಗೆ ರೋಸಿಹೋಗಿ 'ಯಾವನೋ ಒಬ್ಬ ನೀರು ಕೊಟ್ಟರೆ ಸಾಕು. ನಮಗೆ ನೀರು ಸಿಕ್ಕಿದರೆ ಸಾಕು!!' ಎಂಬ ತೀರ್ಮಾನಕ್ಕೆ ಜನರು ಬರುವಂತೆ ಮಾಡಲಾಯಿತು. ಈ ನಡುವೆ ಎಲ್ಲಾ ಸಾರ್ವಜನಿಕ ನಲ್ಲಿಗಳನ್ನು ಕಿತ್ತುಹಾಕಲಾಯಿತು. ಈ ಬಗ್ಗೆ ಮೇಲಿನ ನಗರ ಸಭೆಗಳು ಅಧಿಕೃತವಾಗಿ ನೋಟೀಸನ್ನೇ ಹೊರಡಿಸಿದವು. ಕ್ರಮೇಣ ಸಾರ್ವಜನಿಕ ನಲ್ಲಿಗಳು ಬಂದಾದವು. ಬಡಜನರು ಮತ್ತಷ್ಟು ಕಂಗಾಲಾದರು.

ಸರ್ಕಾರಕ್ಕೆ ಬೇಕಾಗಿದ್ದೂ ಇಂಥದೇ ಸಂದರ್ಭ. ಈ ನಡುವೆ ಸಣ್ಣದಾಗಿ ಒಂದು ಪ್ರಸ್ತಾಪವನ್ನಿಟ್ಟರು. ನೋಡಿ ನಿಮಗೆ ಸಕಾಲದಲ್ಲಿ, ಸಮರ್ಪಕವಾಗಿ ನೀರು ಬರುತ್ತಿಲ್ಲ. ಆದ್ದರಿಂದ ನಾವು ಹೀಗೆ ಮಾಡಲು ಹೋರಟಿದ್ದೇವೆ...., ನಿಮಗೆ ದಿನದ ಇಪ್ಪತ್ನಾಲ್ಕುಗಂಟೆ, ಮುನ್ನೂರರವತ್ತೈದು ದಿನವೂ ನೀರು ಸರಬರಾಜು ಮಾಡುತ್ತೇವೆ. ಇದಕ್ಕಾಗಿ "ಕರ್ನಾಟಕ ಅರ್ಬನ್ ವಾಟರ್ ಅಂಡ್ ಸೀವೇಜ್ ಇಂಪ್ರೂವ್‌ಮೆಂಟ್ ಪಾಜೆಕ್ಟ್" ಎಂಬ ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಇದರ ಮೂಲಕ ನಿಮ್ಮ ನೀರು ಮತ್ತು ಚರಂಡಿಯ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಹೇಳಿದರು. ೨೦೦೩ರಲ್ಲಿ ಇದನ್ನು ಆರಂಭಿಸಿ ೨೦೦೬ರ ಹೊತ್ತಿಗೆ ಆದನ್ನು ಜಾರಿಗೆತಂದರು. ಇದರ ಪ್ರಯತ್ನಗಳು ಸದ್ಯಕ್ಕೆ ಭರದಿಂದ ಸಾಗುತ್ತಿವೆ. ಇದೇ ಸೆಪ್ಟೆಂಬರ್‌ನಿಂದ ಖಾಸಗೀ ಕಂಪನಿಯ ನೀರು ಮೇಲಿನ ನಗರಗಳ ಆಯ್ದ ಬಡಾವಣೆಗಳಲ್ಲಿ ನಮ್ಮ ಜನರ ದಾಹವನ್ನು ತೀರಿಸಲಿವೆ.

ಮುಂದೇನಾಗುತ್ತದೆ ಎಂದರೆ..., ಈ ಬಡಾವಣೆಗಲ್ಲಿ ನೀರನ್ನು ಸಕಾಲದಲ್ಲಿ ೨೪ ಗಂಟೆ ಮುನ್ನೂರರವತ್ತೈದು ದಿನವೂ ಪೂರೈಸಲಾಗುತ್ತದೆ. ಇದು ನಡೆಯುವುದು ಹೆಚ್ಚೆಂದರೆ ಆರು ತಿಂಗಳು ಅಥ[...] ನಗರದ ಉಳಿದ ಜನ ಈ ಬಡಾವಣೆಗಳ ಜನರ ಭಾಗ್ಯವನ್ನು ನೋ[...] ಕರುಬಿ, ಹೊಟ್ಟೆ ಉರಿಸಿಕೊಂಡು ನಮಗೂ ಇಂಥಾ ಭಾಗ್ಯವ[...] ಕಲ್ಪಿಸಿ ಎಂದು ಕೇಳುವವರೆಗೆ. ಅಥವಾ ನಗರದ ಉಳಿದ ಜನ[...] "ನೋಡಿ, ನಿಮ್ಮ ಸರ್ಕಾರಗಳು ಮಾಡಲಾಗದನ್ನು ನಾವು ಹೇ[...] ಮಾಡುತ್ತಿದ್ದೇವೆ. ಮೊದಲು ಆ ಬಡಾವಣೆಗಳಲ್ಲಿ ನೀರಿನ ಸರಬರಾ[...] ಹೇಗಿತ್ತು ಹೇಳಿ? ಈಗ ಹೇಗಿದೆ ನೋಡಿ!!" ಎಂದು ಜನರ ಮುಂ[...] ಪ್ರಾಯೋಗಿಕವಾಗಿ ಮಂಡಿಸಿ..., ಭಿನ್ನವಿಸಿ..., ಎಲ್ಲರೂ ಇದನ್ನು ಒ[...] ಕೊಂಡು ಇವರಿಂದ ನೀರಿನ ಸಂಪರ್ಕ ಪಡೆಯುವವರೆಗೆ. ಅಥ[...] ಹೀಗಲ್ಲದಿದ್ದರೂ ನಗರ ಸಭೆ ನೀರಿನ ಸರಬರಾಜನ್ನು ಇನ್ನಷ್ಟು ಅ[...] ನಮಾಡಿ ಉಳಿದ ಜನ ಮತ್ತಷ್ಟು ರೋಸಿಹೋಗುವಂತೆ ಮಾಡಲಾ[...]ತ್ತದೆ. ಈ ನಡುವೆ ಒಂದು ದಿನ ಅಧಿಕೃತವಾಗಿ "ಇಡೀ ನಗ[...] ನೀರು ಸರಬರಾಜು ಮಾಡುವ ಹೊಣೆಯನ್ನು ಇಂಥಾ ಕಂಪ[...] ವಹಿಸಿಕೊಡಲಾಗಿದೆ, ಅದ್ದರಿಂದ ಇರುವ ಸಂಪರ್ಕಗಳೂ ಅ[...] ಹೆಸರಿಗೆ ಹೋಗುತ್ತವೆ. ಉಳಿದವರು ಇನ್ನುಮುಂದೆ ಅವರಿಂದ[...] ನೀರಿನ ಸಂಪರ್ಕ ಪಡೆಯತಕ್ಕದ್ದು" ಎಂದು ಆಯಾ ನಗರ ಸಭೆ[...] ಘೋಷಿಸುತ್ತವೆ. ಅಲ್ಲಿಂದ ಮುಂದಕ್ಕೆ ಇಡೀ ನಗರ ಅಧಿಕೃತವ[...] ಖಾಸಗಿಯವರ ಕೈಸೇರುತ್ತದೆ.

ಆನಂತರದಲ್ಲಿ ಆರಂಭವಾಗುತ್ತದೆ...., ನಕ್ಷತ್ರಿಕರ ಕಾಟ. ನೀ[...] ಕಡ್ಡಾಯವಾಗಿ ಪ್ರತ್ಯೇಕ ಸಂಪರ್ಕಗಳನ್ನು ಪಡೆಯಲೇಬೇಕೆಂ[...] ಖಾಸಗೀ ಒಡೆತನ ತಾಕೀತು ಮಾಡುತ್ತದೆ. ಇದನ್ನು ಬಿಟ್ಟು ಜ[...] ಮುಂದೆ ಪರ್ಯಾಯವೂ ಇರುವುದಿಲ್ಲ. ಇಷ್ಟು ಹೊತ್ತಿಗಾಗ[...] ಎಲ್ಲಾ ಸಾರ್ವಜನಿಕ ನಲ್ಲಿಗಳೂ ಮಾಯವಾಗಿರುತ್ತವೆ. ಇದು ಖಾಸ[...] ಕಂಪನಿಗಳು ಒಪ್ಪಂದದಲ್ಲಿ ಹಾಕುವ ಮೊದಲ ಷರತ್ತು. ಎರಡ[...] ಷರತ್ತೆಂದರೆ ನೀರಿನ ದರ ಹಾಗೂ ಸರಬರಾಜು ಮೊತ್ತವನ್ನು ಆ[...] ಕಂಪನಿಗಳ ನಿರ್ಧಾರಕ್ಕೇ ಬಿಟ್ಟಿದ್ದಾಗಿರುತ್ತದೆ. ಇದರಲ್ಲಿ ಸರ್ಕಾರಗಳ[...] ಸ್ಥಳೀಯ ಆಡಳಿತಗಳು ಮೂಗುತೂರಿಸುವಂತಿಲ್ಲ. ಹಾಗೊಂದು [...] ಮಾಡಿದರೆ ಅದು ಒಪ್ಪಂದದ ಉಲ್ಲಂಘನೆಯಾಗುತ್ತದೆ. ಇದಕ್ಕೆ ನ[...] ಸರ್ಕಾರಗಳು ಅಪಾರ ಬೆಲೆತೆರಬೇಕಾಗುತ್ತದೆ.

ಮುಂದುವರಿದ ಅಧ್ಯಾಯದಲ್ಲಿ ಈಗಿರುವ ನೀರಿನ ಬೆಲೆಯ[...] ಮೊದಲ ಕಂತಾಗಿ ಕನಿಷ್ಟ ನೂರು ಪಟ್ಟು ಹೆಚ್ಚಿಸಲಾಗುತ್ತದೆ. ಇದಾ[...] ಒಂದೆರಡು ತಿಂಗಳಿನಲ್ಲಿ ಮತ್ತೆ ಆಡಳಿತಾತ್ಮಕ, ಹಾಗೂ ಸಬರಾ[...] ವೆಚ್ಚದಲ್ಲಿ ತೀವ್ರ ಹೆಚ್ಚಳವಾಗಿರುವ ಕಾರಣ ನೀಡಿ ಮತ್ತೆ ನೂರೈವ[...] ಪಟ್ಟು ಹೆಚ್ಚಿಸಲಾಗುತ್ತದೆ. ಇದಾದ ಎರಡು ಮೂರು ತಿಂಗಳಿನೊಳ[...] ನೀರಿನ ಸರಬರಾಜಿನಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ. ೨೪ ಗಂಟೆ ಬ[...]ತ್ತಿದ್ದ ನೀರು ೧೨ ಗಂಟೆಗಳಿಗೆ ಸೀಮಿತವಾಗುತ್ತದೆ. ನಂತರ ದಿ[...] ಬರುತ್ತಿದ್ದ ನೀರು ಎರಡು ದಿನಗಳಿಗೊಮ್ಮೆ ಹನಿಯಲು ಆರಂಭಿ[...]ತ್ತದೆ. ಜನರ ಗೋಣಗಾಟ ಆರಂಭವಾಗುತ್ತದೆ. ಆಗ ಕಂಪನಿ ವಿದ್ಯು[...] ದರದಲ್ಲಿ ಆಗಿರುವ ಹೆಚ್ಚಳದ ಕಾರಣದಿಂದ ಕಂಪನಿಗೆ ನಷ್ಟವಾಗು[...] ಹೀಗಾಗಿ ಮಾನ್ಯ ಗ್ರಾಹಕರಿಗೆ ಸರಿಯಾಗಿ ನೀರು ಸರಬರಾಜು ಮಾ[...] ಲಾಗುತ್ತಿಲ್ಲ. ಹಾಗಾಗಿ ನಿಮಗೆ ಅತ್ಯುತ್ತಮ ಸೇವೆಯನ್ನು ಒದಗಿಸ[...]

ವು ನಿರಂತರವಾಗಿ ಪ್ರಯತ್ನಿಸುತ್ತಿದ್ದೇವೆ. ಆದರೆ ದ್ಯುತ್ ಮತ್ತು ಸಿಬ್ಬಂದಿ ವೆಚ್ಚ ನಮ್ಮ ಕೈ ಕಟ್ಟಿಹಾಕಿದೆ. ದ್ದರಿಂದ ಅನಿವಾರ್ಯವಾಗಿ ನೀರಿನ ಬೆಲೆಯನ್ನು ಹೆಚ್ಚಿಸ ಬೇಕಾಗಿದೆ, ಮಾನ್ಯ ಗ್ರಾಹಕರು ಸಹಕರಿಸಬೇಕೆಂದು ಹೇಳಿ ತ್ತಿ ೧೫೦ ಪಟ್ಟು ಹೆಚ್ಚಿಸಲಾಗುತ್ತದೆ. ಒಟ್ಟಾರೆ ಒಂದ ದ ಒಂದೂವರೆ ವರ್ಷದ ಒಳಗೆ ಈಗಿರುವ ನೀರಿನ ಅದರ ಕನಿಷ್ಟ ನಾಲ್ಕು ನೂರು ಪಟ್ಟು ಹೆಚ್ಚಾಗುತ್ತದೆ.

ಇದನ್ನು ನಾವು ಭರಿಸಲೇಬೇಕು. ಮೊದಲ ಹಂತ ನೀರಿನ ಸರಬರಾಜನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಲಾ ಗುತ್ತದೆ. ಈಗ ಕೆ.ಇ.ಬಿ.ಯವರು ಮಾಡಿದಂತೆ ಅಥವಾ ಮೊಬೈಲ್ ಫೋನ್ ಕಂಪನಿಯವರು ಮಾಡಿದಂತೆ. ಆಗ ಏನು ಮಾಡುತ್ತಾರೆ ಜನ? ನಿಮ್ಮ ಮುಂದೆ ಆಗ ಯಾವ ಪರ್ಯಾಯಗಳೂ ಇರುವುದಿಲ್ಲ. ಏಕೆಂದರೆ ಖಾಸಗೀ ಕರಣ ಎಂದರೆ ಒಂದೇ ಊರಿನಲ್ಲಿ ೧೦-೧೫ ಖಾಸಗೀ ಕಂಪೆನಿಗಳಿರುವಂತೆ ಇಲ್ಲಿ ೭-೮ ನೀರು ಸರಬರಾಜು ಕಂಪನಿಗಳೇನೂ ಇರುವುದಿಲ್ಲ. ಇರುವುದು ಒಂದೇ ಕಂಪನಿ. ಇಡೀ ನಗರ ಅವರ ಮನಾಪಲಿ. ಯಾವನೂ ಉಸುಕ್ ತುಸುಕ್ ಎನ್ನುವಂತಿಲ್ಲ. ಈ ನಡುವೆ ನೀವು ನಿಮ್ಮ ನೀರೇ ಬೇಡ ಹೋಗ್ರೀ ಎಂದು ಬಾವಿ, ಬೋರ್‌ವೆಲ್ ಆಶ್ರಯಿಸುವುದಾದರೆ ಅದಕ್ಕೆ ಈ ನೀರಿನ ಬೆಲೆಕ್ಕಿಂತಲೂ ಹೆಚ್ಚಿನ ವಿಶೇಷ ತೆರಿಗೆಯನ್ನು ವಿಧಿಸಲಾ ಗುತ್ತದೆ. ಈಗಾಗಲೇ ಅದು ಬೆಂಗಳೂರಿನಲ್ಲಿ ನಮ್ಮದೇ ಜಲಮಂಡಲಿಯಿಂದ ಚಾಲ್ತಿಯಲ್ಲಿದೆ. ಅಷ್ಟೇಕೆ ನಮ್ಮ ಕಟು ಇಲಾಖೆ ಯಾವುದೇ ಕಾರ್ಖಾನೆ ಅಥವಾ ಉದ್ಯಮ ಅಥವಾ ಅಂಗಡಿಗಳು ತುರ್ತುಕಾಲಕ್ಕೆಂದು ಜನ ರೇಟರ್ ಇಟ್ಟುಕೊಂಡಿದ್ದರೆ ಅದು ಎಷ್ಟು ಕೇವಿ ಎಂಬುದರ ಮೇಲೆ ಅದಕ್ಕೆ ಪ್ರತ್ಯೇಕ ತೆರಿಗೆ ವಿಧಿಸುತ್ತಾರೆ. ಅಲ್ಲದೆ ಪ್ರತಿ ಒಂದು ಖಾಸಗೀ ನೀರು ಸರಬರಾಜು ಕಂಪನಿಯೂ ಒಪ್ಪಂದದಲ್ಲಿ ಇದನ್ನು ಒಂದು ಪ್ರಮುಖ ಷರತ್ತಾಗಿ ಸಿರುತ್ತದೆ. ಹೀಗಾಗಿ ಕಾನೂನು ಬದ್ಧವಾಗಿಯೇ ಅದು ನಿಮ್ಮ ಮೇಲೆ ದಾಳಿ ಮಾಡುತ್ತಾರೆ. ನೀವು ಇನ್ನೂ ನಿರಾಗಿ ಹಣ ಕೊಡಲಿಲ್ಲ ಎಂದಿಟ್ಟುಕೊಳ್ಳಿ..., ಆಗೇನು ಮಾಡುತ್ತಾರೆ ಗೊತ್ತೇನು? ನಿಮ್ಮ ಬಳಿ ಯಾವುದೇ ಬ್ಯಾಂಕಿನ ಅದರಲ್ಲೂ ವಿದೇಶೀ ಬ್ಯಾಂಕಿನ ಕ್ರೆಡಿಟ್‌ಕಾರ್ಡ್ ಇದೆ ನಿಮಗೆ ಇದರ ಅನುಭವವಾಗಿರುತ್ತದೆ. ಅವರ ಬಳಿ ವಸೂಲಿಯ ಅಸಂಖ್ಯಾತ ತಂತ್ರಗಳಿವೆ. ಮತ್ತು ನೀವು ಅನಿವಾರ್ಯವಾಗಿ ಮತ್ತೆ ಅವರ ಕಂಪನಿಯ ಸಂಪರ್ಕವನ್ನೇ ಪಡೆಯುವಂತೆ ಮಾಡುವ ಕುತಂತ್ರಗಳೂ ಇವೆ. ಇದರಲ್ಲಿ ದಂಡ ಹೇರುವುದು, ಸಾರ್ವಜನಿಕವಾಗಿ ಅಪಮಾನ ಮಾಡುವುದು, ಇದೇ ನೆಪವಾಗಿಟ್ಟುಕೊಂಡು ವಿದ್ಯುತ್ ಸಂಪರ್ಕವನ್ನೂ ತಪ್ಪಿಸುವುದು, ಇದಕ್ಕೂ ಮಣಿಯದಿದ್ದರೆ ಚರಂಡಿಯ ಸಂಪರ್ಕವನ್ನು ಮುಚ್ಚಿಹಾಕುವುದು, ಇಲ್ಲದರ ಜೊತೆಗೆ ಕಾನೂನಿನ ಮೂಲಕ ಸಹ ಹಿಂಸಿಸಲಾಗುತ್ತದೆ. ಅವರ ಒಪ್ಪಂದಗಳಲ್ಲಿ ಇವೆಲ್ಲಕ್ಕೂ ಅವಕಾಶ ಮಾಡಿಕೊಂಡಿರುತ್ತಾರೆ. ಇದೆಲ್ಲಾ ಬಿಡಿ ನೀವು ನೀರಿಲ್ಲದೆ ಬದುಕುವುದು ಹೇಗೆ? ಹಾಗೂ ನೀರಿನ ಕಾರಣದಿಂದ ಸ್ವತ್ವವನ್ನೂ ಕಳೆದುಕೊಳ್ಳುವುದು ಹೇಗೆ?

ಅರಂಭದಲ್ಲಿ ಈ ೨೪ ಗಂಟೆ, ೩೬೫ ದಿನ ಎಲ್ಲಾ ಮೋಹಕವಾಗಿಯೇ ಇರುತ್ತವೆ. ವರ್ಷ ಕಳೆಯು ವುದರೊಳಗೆ ಇದೊಂದು ಶಾಪದಂತೆ ಜನರನ್ನು ಕಾಡಲು ಆರಂಭಿಸುತ್ತದೆ. ಹಾಗೆಯೇ ಈ ಮೇಲಿನ ಯಾವ ಅಂಶಗಳೂ ಕೇವಲ ಊಹೆಯಾಗಲೀ, ಕಲ್ಪನೆಯಾಗಲೀ

ನೀರಿಗಾಗಿ ಮೈಲಿಗಟ್ಟಲೆ ಅಲೆಯುವ ಸ್ಥಿತಿ ಗ್ರಾಮೀಣ ಪ್ರದೇಶಗಳಲ್ಲಿ ಇಂದೂ ಇದೆ

ಅಥವಾ ಕತೆಯಾಗಲೀ ಅಲ್ಲ. ಇವೆಲ್ಲವೂ ಈ ಕಂಪನಿಗಳು ಯಾವಯಾವ ದೇಶ ಊರುಗಳಲ್ಲಿ ನೀರು ಸರಬರಾಜು ಮಾಡಲು ಹೋಗಿವೆಯೋ ಅಲ್ಲೆಲ್ಲಾ ನಡೆದ ಘಟನೆಗಳ ವಾಸ್ತವಚಿತ್ರ ಇದು. ಇಂಥದಕ್ಕೆ ಈವರೆಗೂ ಕನಿಷ್ಟ ೩೮-೪೦ ದೇಶಗಳ ೧೪೦-೧೫೦ ನಗರ ಗಳ ೫೦-೫೫ ಕೋಟಿ ಜನ ಪಟ್ಟಪಾಡು ಇದಾಗಿದೆ.

ಇಲ್ಲಿ ಶ್ರೀಮಂತರಾದವರು, ಸಂಬಳದಾರರು ನೀರಿನ ಬಿಲ್ಲನ್ನು ಕಟ್ಟಲು ಆರಂಭದಲ್ಲಿ ಸಂತೋಷವಾಗಿಯೇ ಒಪ್ಪಿಕೊಳ್ಳಬಹುದು. ಆದರೆ ಇಲ್ಲಿ ಯೋಚಿಸಬೇಕಾದ್ದೆಂದರೆ ನಾಳಿನ ಕತೆಯನ್ನು ಹಾಗೂ ಯಾವುದೋ ಒಂದು ಮೂಲದಿಂದ ಹಣ ಬರುತ್ತದೆ ಒಂದ ಮಾತ್ರಕ್ಕೆ ಆ ಹಣವನ್ನು ಕೊಟ್ಟು ನಿಮ್ಮ ಮೂಲ ಭೂತ ಹಕ್ಕನ್ನು ನೀವೇ ಮಾರಿಕೊಳ್ಳಲು ಸಿದ್ಧರಿದ್ದೀರಾ? ಹೀಗಿ ನೀವೊಬ್ಬರು ಅಥವಾ ನಿಮ್ಮಂಥ ಕೆಲವು ಜನ ಮಾಡುವುದರಿಂದ ಉಳಿದ ಇಂಥಾ ನಿಶ್ಚಿತ ಆರ್ಥಿಕ ಮೂಲಗಳಿಲ್ಲದ ಜನರ ಬಗ್ಗೆ ನಾವು ಹೇಗೆ ಯೋಚಿಸುತ್ತೇವೆ. ಅಲ್ಲದೆ ನಮ್ಮ ಸಾರ್ವಭೌಮತ್ವವನ್ನು ನಾವಾಗಿಯೇ ಕಳೆದುಕೊಳ್ಳುವುದು ವಿವೇಕದ ವರ್ತನೆಯೇ? ಇಷ್ಟೆಲ್ಲಾ ಪ್ರಶ್ನೆಗಳು ನಮ್ಮ ಮುಂದಿವೆ....,

ಇದನ್ನು ಗಂಭೀರವಾಗಿ ಸ್ವೀಕರಿಸು ವುದಾದರೆ ಇದಕ್ಕೆ ಪರಿಹಾರವೂ ಇದೆ. ಜನಾಂದೋಲನವೊಂದೇ ಇದಕ್ಕೆ ದಾರಿ. ನಮ್ಮ ಆಂದೋಲನಗಳು ಎರಡು ಮಾರ್ಗದಲ್ಲಿ ಏಕಕಾಲದಲ್ಲಿ ಯೋಚಿಸಬೇಕು. ಮೊದಲನೆಯದಾಗಿ ಈಗಿರುವ ಎಲ್ಲಾ ಸಾರ್ವಜನಿಕ/ಸರ್ಕಾರಿ ನೀರು ಸರಬರಾಜು ವ್ಯವಸ್ಥೆಗಳನ್ನು ಕೂಡಲೇ ಸರಿಪಡಿಸಿ, ಆಮೂಲಕವೇ ಜನರಿಗೆ ನೀರು ಸರಬರಾಜಾ ಗುವಂತೆ ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರಗಳ ಮೇಲೆ ಒತ್ತಡ ಹೇರಬೇಕು. ಇದರ ಜೊತೆಜೊತೆಗೇ ಈ ಖಾಸಗೀಕರಣ ಪ್ರಕ್ರಿಯೆಯನ್ನು ನಿರಾಕರಿಸಬೇಕು. ಆಗಿರುವಲ್ಲಿ ಕಿತ್ತುಹಾಕಬೇಕು. ಆಗದಿರುವಲ್ಲಿ ಸಾರ್ವಜನಿಕರು ಆಗದಂತೆ ಎಚ್ಚರವಹಿಸಬೇಕು. ಖಾಸಗೀ ಕಂಪನಿಗಳ ಸಂಪರ್ಕ ಗಳನ್ನು ಪಡೆಯಬಾರದು. ಪಡೆಯುವರನ್ನು ಪ್ರಜಾಪ್ರಭು ತ್ವದ ಹಂತಕರು ಎಂಬಂತೆ ಬಿಂಬಿಸುವ ಕಾರ್ಯ ನೆಡೆಯಬೇಕು. ಆಯಾ ಊರು/ನಗರಗಳ ಆಡ ಳಿತಗಳು ನಿರಂತರವಾಗಿ ನೀರು ಸರಬರಾಜು ಮಾಡು ವಂತೆ ಅವುಗಳನ್ನು ರಿಪೇರಿ ಮಾಡಬೇಕು. ಇಂಥದಕ್ಕೆ ಸ್ಪಂದಿಸದ ನಾಯಕರನ್ನು ಚುನಾವಣೆಗಳಲ್ಲಿ ಮಗ್ಗ ಮಲಗಿಸಬೇಕು. ಹೀಗಿ ನಮ್ಮ ಮುಂದೆ ಅಸಂಖ್ಯ ದಾರಿಗಳಿವೆ. ನಾವು ಸೂಕ್ತವಾದದ್ದನ್ನು ಕಂಡುಕೊಳ್ಳಬೇಕು. ಈ ನಡುವೆ ನಾವು ಚಿಂತಿಸಬೇಕು...,' ನಾವು ಈ ದೇಶದ ಪ್ರಜೆಗಳೋ ಇಲ್ಲಾ ಗ್ರಾಹಕರೋ, ನೀರು ಈ ನಾಡಿನ ಸಂಸ್ಕೃತಿಯಲ್ಲಿ ಜೀವಜಲವೋ ಇಲ್ಲಾ...., ಟೀವಿ, ಕಾಂಡೋಮ್‌ಗಳಂತೆ

ಎಲ್ಲಾ ಸಾರ್ವಜನಿಕ/ಸರ್ಕಾರಿ ನೀರು ಸರಬರಾಜು ವ್ಯವಸ್ಥೆಗಳನ್ನು ಕೂಡಲೇ ಸರಿಪಡಿಸಿ, ಆಮೂಲಕವೇ ಜನರಿಗೆ ನೀರು ಸರಬರಾಜಾಗುವಂತೆ ಸ್ಥಳೀಯ ಸಂಸ್ಥೆಗಳು ಹಾಗೂ ಸರ್ಕಾರಗಳ ಮೇಲೆ ಒತ್ತಡ ಹೇರಬೇಕು. ಇದರ ಜೊತೆಜೊತೆಗೇ ಈ ಖಾಸಗೀಕರಣ ಪ್ರಕ್ರಿಯೆಯನ್ನು ನಿರಾಕರಿಸಬೇಕು. ಆಗಿರುವಲ್ಲಿ ಕಿತ್ತು ಹಾಕಬೇಕು. ಆಗದಿರುವಲ್ಲಿ ಸಾರ್ವಜನಿಕರು ಆಗದಂತೆ ಎಚ್ಚರವಹಿಸಬೇಕು. ಖಾಸಗೀ ಕಂಪನಿಗಳ ಸಂಪರ್ಕಗಳನ್ನು ಪಡೆಯಬಾರದು. ಪಡೆಯುವರನ್ನು ಪ್ರಜಾಪ್ರಭುತ್ವದ ಹಂತಕರು ಎಂಬಂತೆ ಬಿಂಬಿಸುವ ಕಾರ್ಯ ನಡೆಯಬೇಕು. ಆಯಾ ಊರು/ನಗರಗಳ ಆಡಳಿತಗಳು ನಿರಂತರವಾಗಿ ನೀರು ಸರಬರಾಜು ಮಾಡುವಂತೆ ಅವುಗಳನ್ನು ರಿಪೇರಿ ಮಾಡಬೇಕು.

ಮಾರಾಟದ ವಸ್ತುವೋ ಎಂದು.

ಈ ದಾರಿಯಲ್ಲಿ ನೀವು ಸಾಗುವುದಿದ್ದರೆ ಇಗೋ...., ಇಲ್ಲೊಂದು ಮಾದರಿ ಇದೆ.

ಬೆಂಗಳೂರಿನ ಸುತ್ತಮುತ್ತಲಿನ ಎಂಟು ನಗರ ಸಭೆಗಳನ್ನು ಖಾಸಗೀಕರಣಕ್ಕೆ ಬಲಿಕೊಡಲು ಸರ್ಕಾರ ತೀರ್ಮಾನಿಸಿಯಾಗಿತ್ತು. ಇದು ಬಹಿರಂಗವಾದಕೂಡಲೇ ಬೆಂಗಳೂರಿನ ಅನೇಕ ಸಂಘಟನೆಗಳು, ಸಂಘ ಸಂಸ್ಥೆಗಳು ಇದರ ವಿರುದ್ಧ ಒಂದು ಜನಾಂದೋಲನವನ್ನು ಸಂಘಟಿಸಿದವು. ಇದರಲ್ಲಿ ಪಿಯುಸಿಎಲ್-ಕರ್ನಾಟಕ, ದಲಿತ ಸಂಘರ್ಷ ಸಮಿತಿ(ಅಂ.ವಾ), ಸಮತಾ ಸೈನಿಕದಳ, ಕರ್ನಾಟಕ ಜನಾಂದೋಲನ ಸಂಘಟನೆ, ಜನವಾದಿ ಮಹಿಳಾ ಸಂಘಟನೆ, ಡಿ.ವೈ.ಎಫ್.ಐ, ಕರ್ನಾಟಕ ವಿಮೋಚನಾ ರಂಗ, ಕರ್ನಾಟಕ ರಾಜ್ಯ ರೈತ ಸಂಘ, ಜಾತಿ ವಿನಾಶ ವೇದಿಕೆ, ಮಾದಿಗ ಮೀಸಲಾತಿ ಹೋರಾಟ ಸಮಿತಿ, ಪ್ರಜಾವಿಮೋಚನಾ ಚಳುವಳಿ(ಸಮತಾವಾದ), ಬೆಂಗಳೂರು ಸ್ಲಂ ಜನರ ಒಕ್ಕೂಟ, ಎ.ಐ.ವೈ.ಎಫ್., ಸಾಧನ ಮಹಿಳಾ ಸಂಘ ಗಳಂತಹ ಸಾರ್ವಜನಿಕ ಸಂಘಟನೆಗಳು ಹಾಗೂ ಸ್ವರಾಜ್, ಸಿವಿಕ್-ಬೆಂಗಳೂರು, ಅಪ್ಸ, ಜನಸಹಯೋಗ, ಪೀಪಲ್ ಟ್ರೀ ಮುಂತಾದ ಸಂಘ ಸಂಸ್ಥೆಗಳು ಒಟ್ಟಾಗಿ ಸೇರಿದವು. ಇವೆಲ್ಲವೂ ಸೇರಿ "ನೀರಿನ ಖಾಸಗೀಕರಣ ವಿರೋಧಿ ಜನಾಂದೋಲನ-ಕರ್ನಾಟಕ" ಎಂಬ ಸಾಮಾನ್ಯ ವೇದಿಕೆಯನ್ನು ಸಿದ್ಧಪಡಿಸಿಕೊಂಡವು. ಇದರ ಮೂಲಕ ಹೋರಾಟ ಆರಂಭವಾಯಿತು. ವಿವಿಧ ಘಟ್ಟಗಳಲ್ಲಿ ಹೋರಾಟ ಮುಂದುವರೆಯಿತು. ಇದಕ್ಕೆ ನಗರದ ಬಡಜನರು ಹಾಗೂ ಸ್ಲಂ ನಿವಾಸಿಗಳಿಂದ ಅತ್ಯುತ್ತಮ ಬೆಂಬಲ ದೊರೆಯಿತು. ಇದರ ಅಂಗವಾಗಿ ಸಾರ್ವಜನಿಕ ಅಭಿಪ್ರಾಯ ರೂಪಿಸಲು ಹಾಗೂ ಸರ್ಕಾರ ಮತ್ತು ಖಾಸಗೀ ಕಂಪನಿಗಳಿಗೆ "ನೀವು ನೀರನ್ನು ಮಾರಲು ಸಿದ್ಧರಿರಬಹುದು, ಆದರೆ ನಾವು ನೀರನ್ನು ಕೊಳ್ಳಲು ಸಿದ್ಧರಿಲ್ಲ-ಅಷ್ಟೇಕೆ ನಿಮಗೆ ಮಾರಲೂ ಬಿಡುವುದಿಲ್ಲ" ಎಂಬ ಎಚ್ಚರಿಕೆ ನೀಡುವ ಸಲುವಾಗಿ ರಾಜ್ಯದ ಐವತ್ತಮೂರು ಜನ ಸಾಂಸ್ಕೃತಿಕ, ಸಾರ್ವಜನಿಕ ಸಂಘಟನೆ ಹಾಗೂ ರಾಜಕೀಯ ನಾಯಕರ ನೀರಿನ ಖಾಸಗೀಕರಣವನ್ನು ವಿರೋಧಿಸುವ ಅಭಿಪ್ರಾಯಗಳನ್ನು ಸಂಗ್ರಹಿಸಿ "ನೀರು ನಮ್ಮ ತಾಯಿಯಂತೆ-ಮಾರುವುದು ಹೇಗೆ" ಎಂಬ ಕೃತಿಯೊಂದನ್ನು ಪ್ರಕಟಿಸಲಾಯಿತು. ಇದನ್ನು ಸರ್ಕಾರದೊಂದಿದೆ ಥೇಮ್ಸ್ ವಾಟರ್ ಎಂಬ ಫ್ರಾನ್ಸ್ ದೇಶದ ಕಂಪನಿಯೊಂದಿಗೆ ಸರ್ಕಾರ ಮಾಡಿಕೊಂಡಿದ್ದ ಒಪ್ಪಂದವನ್ನು ಮೈಸೂರು ಬ್ಯಾಂಕ್ ವೃತ್ತದಲ್ಲಿ ಸಾರ್ವಜನಿಕರ ಸಮ್ಮುಖದಲ್ಲಿ ಸುಡುವ ಕಾರ್ಯಕ್ರಮವೊಂದು ಬಿಡುಗಡೆ ಮಾಡಲಾಯಿತು.

ಹೀಗೆ ಇಂಥಾ ಅನೇಕ ತರಬೇತಿ ಶಿಬಿರಗಳು, ಜಾಗೃತಿ ಜಾಥಾಗಳು, ಪ್ರತಿಭಟನೆಗಳು ನಡೆದವು. ಕೊನೆಯದಾಗಿ ದಿನಾಂಕ-೧೦-೦೭-೨೦೦೬ ರಿಂದ ೧೫-೦೭-೨೦೦೬ರ ವರೆಗೆ ಎಂಟೂ ನಗರ ಸಭೆಗಳ ವ್ಯಾಪ್ತಿಯಲ್ಲಿ ವ್ಯಾಪಕವಾದ ಪ್ರಚಾರಾಂದೋಲನ ಹಾಗೂ ಬೃಹತ್ ಜಾಥಾ ಸಂಘಟಿಸಲಾಯಿತು. ಈ ಜಾಥಾ ಮಹದೇವಪುರ ನಗರ ಸಭೆ ವ್ಯಾಪ್ತಿಯ ಮಾರತ್‌ಹಳ್ಳಿಯಿಂದ ಆರಂಭವಾಗಿ ಮಹದೇವಪುರ, ಕೆ.ಆರ್.ಪುರಂ, ಯಲಹಂಕ, ಬ್ಯಾಟರಾಯನಪುರ, ದಾಸರಹಳ್ಳಿ, ಕೆಂಗೇರಿ, ರಾಜರಾಜೇಶ್ವರಿನಗರ(ಪಟ್ಟಣಗೆರೆ), ಬೊಮ್ಮನಹಳ್ಳಿ ಮೂಲಕ ಹಾಯ್ದು ಮುಖ್ಯಮಂತ್ರಿಗಳ ಮನೆಯಮುಂದೆ ಅಂತಿಮವಾಗಿ ಜಮಾವಣೆಯಾಯಿತು. ಇಲ್ಲಿ ಸಾವಿರಾರು ಜನ ಸೇರಿದ್ದರು. ಇವರೆಲ್ಲರ ಸಮ್ಮುಖದಲ್ಲಿ ಮುಖ್ಯಮಂತ್ರಿಗಳ ಪರವಾಗಿ ಸಮಾಜ ಕಲ್ಯಾಣ ಸಚಿವ ಬಾಲಚಂದ್ರ ಜಾರಕೀಹೊಳಿ ಮನವಿಯನ್ನು ಸ್ವೀಕರಿಸಿದರು. ಮನವಿಗೆ ಪ್ರತಿಕ್ರಿಯಿಸುತ್ತಾ ಸಚಿವರು "ಇಲ್ಲಾ ನಾವು ಈ ಖಾಸಗೀಕರಣವನ್ನು ಹಿಂತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ, ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ನೆಡೆದಿದೆ, ನಾವು ಇಲ್ಲಿ ಖಾಸಗೀಕರಣ ವನ್ನು ಮಾಡುವುದಿಲ್ಲ, ನಮ್ಮ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಸಹ ಇದಕ್ಕೆ ವಿರೋಧವಾಗಿ ದ್ದಾರೆ" ಎಂದು ಹೇಳಿದರು.

ಸದ್ಯಕ್ಕಂತೂ ಬೆಂಗಳೂರಿನ ಸುತ್ತಮುತ್ತಲಿದ್ದ ಪೀಡೆ ತೊಲಗಿದೆ. ಅದು ರಾಜ್ಯದ ಉಳಿದ ಭಾಗಗಳಿಗೆ ಅಮರಿಕೊಳ್ಳದಂತೆ ಜಾಗ್ರತೆ ವಹಿಸುವ ಹೊಣೆ ಎಲ್ಲರದ್ದೂ ಹೌದು. ಇಲ್ಲದಿದ್ದರೆ ಈಗಾಗಲೇ ನಮ್ಮ ಕೈತಪ್ಪಿರುವ ಅನೇಕ ಹಕ್ಕುಗಳೊಂದಿಗೆ ನೀರೂ ಮಾಯವಾಗುವ ದಿನ ದೂರವಿಲ್ಲ.

(ಮುಗಿಯಿತು)

ಶತಾಯಗತಾಯ ತಡೆಗಟ್ಟಬೇಕು



ಶ್ರೀ ಜಿ.ಎನ್ ನಾಗರಾಜ್
ಕಾರ್ಯದರ್ಶಿ, ಸಿ.ಪಿ.ಐ (ಎಂ)



ಶ್ರೀ ಕೆ.ಎಸ್. ಪುಟ್ಟಣ್ಣಯ್ಯ
ಅಧ್ಯಕ್ಷರು, ರೈತಸಂಘ

ಬೆಂಗಳೂರು ಬೆಳೀತಿರೋದೇ ಈ ಎಂಟು ನಗರಸಭೆಗಳಲ್ಲಿ. ಇಲ್ಲಿ ಬದುಕ್ತಿರೋ ಅಂಥಾ ಜನ ಎಲ್ಲಾ ಬೆಂಗಳೂರಲ್ಲಿ ಬದುಕಕ್ಕೆ ಆಗ್ದೇ ಇರೋರು. ಇಲ್ಲಿ ಯಾವ ಖಾಸಗೀ ನೀರಿನ ಮೂಲಗಳೂ ಇಲ್ಲ. ತಂದ್ರೆ..., ಕಾವೇರಿ ಯಿಂದ ತಂದು ಕೊಡಬೇಕು. ಇದರಲ್ಲಿ ಖಾಸಗೀ ಅನ್ನೋ ಮಾತೆಲ್ಲಿ ಬರುತ್ತೆ? ಮಾಡೋದಿದ್ರೆ ಒಂದು ಮಾಡಬೌದು, ಸರ್ಕಾರನೇ ಸಪ್ಲೈ ಮಾಡಿ, ವಸೂಲಿ ಮಾಡೋಕೆ ಖಾಸಗಿಯೋರ್ಗೆ ವಹಿಸಬೌದಪ್ಪಾ..., ಮಾರ್ವಾಡಿ..., ಪಠಾಣರ ಥರಾ. ಇಲ್ಲಂತೂ ಹಂಚಿಕೆಯ ಖಾಸಗೀಕರಣ ಮಾತ್ರ ಸರ್ಕಾರದ ಉದ್ದೇಶ ಆಗಿರೋ ದ್ರಿಂದ ಇದೊಂದು ಅರ್ಥಹೀನವಾದ ವಿಷಯ. ಆದ್ದ ರಿಂದ ಸರ್ಕಾರವೇ ಇದರ ಜವಾಬ್ದಾರಿ ವಹಿಸ್ಕೋಬೇಕು. ಈ ವರ್ಡ್‌ಬ್ಯಾಂಕಿನೋರ ಮಾತು ಕೇಳ್ಕಂಡು ಎಲ್ಲೆಲ್ಲಿ ನೀರಿನ ಖಾಸಗೀಕರಣ ಆಗಿದೆ ಆ ದೇಶಗಳಲ್ಲೆಲ್ಲಾ ಜನ ದಂಗೆ ಏಳೋ ಪರಿಸ್ಥಿತಿ ಬಂದಿದೆ. ಇಂಥ ದಂಗೇ ಏಳೋ ಪರಿಸ್ಥಿತಿಯನ್ನು ನಮ್ಮಲ್ಲೂ ಸೃಷ್ಟಿಸಲಿಕ್ಕೆ ಸರ್ಕಾರ ಬಯಸುತ್ತದೆಯೇ?

ಬೆಂಗಳೂರಿನಲ್ಲಿ ಸಾರ್ವಜನಿಕ ವಲಯವಾಗಿ ಜಲ ಮಂಡಲಿ ಯಶಸ್ವಿಯಾಗಿ ಕೆಲಸಮಾಡ್ತಾ ಇದೆ. ಅದರಲ್ಲಿರೋ ಭ್ರಷ್ಟಾಚಾರ ತೆಗೆದು, ಆಡಳಿತದ ಪ್ರಜಾಪ್ರಭುತ್ವೀಕರಣ ಮಾಡಿ, ಇನ್ನೊಂದಿಷ್ಟು ಆರ್ಥಿಕ ಬೆಂಬಲ ಕೊಟ್ಟರೆ ಅಷ್ಟೇ ಸಾಕು. ಖಾಸಗೀಕರಣ ನಮಗೆ ಬೇಕಾಗಿಲ್ಲ.

ಖಾಸಗೀಕರಣ ಆಗೋದನ್ನ ಶತಾಯಗತಾಯ ತಡೆಗಟ್ಟಬೇಕು.

ಬೇರೆ ದೇಶ್ಗಳಲ್ಲಿ ಖಾಸಗೀಕರಣ ಯಾಕ್ ನಡೆಯುತ್ತೆ ಅಂದ್ರೆ, ಅಲ್ಲಿ ಸಮಾನ ಆರ್ಥಿಕ ನೀತಿ ಇದೆ. ಆದ್ರೆ ಇಲ್ಲಿ ತೊಂಭತ್ತು ಪರ್ಸೆಂಟ್ ಜನ ಬಡಜನ, ಮಧ್ಯಮವರ್ಗದೋರು, ಅತೀ ಕಡುಬಡತನದಲ್ಲಿರೋ ಅಂಥ ಜನ ಇರೋದು. ಆದ್ರಿಂದ ಇಲ್ಲಿ ಇಂಥಾ ವಿಷಯದಲ್ಲಿ ಖಾಸಗೀಕರಣ ಸಾಧ್ಯ ಇಲ್ಲ. ಇರಬೇಕಾದ್ದು ಸರ್ಕಾರೀಕರಣ. ಆಮೇಲೆ..., ಇವರಲ್ಲಿ ಅಪ್ರಮಾಣಿಕತೆ ಜಾಸ್ತಿ ಇರೋದ್ರಿಂದ ಇವರು ಖಾಸಗೀಕರಣಕ್ಕೆ ಹೊಗ್ತಾ ಇರೋದು. ಇವ್ರ ಅಪ್ರಮಾಣಿಕತೆಗೋಸ್ಕರ ಇಡೀ ಜನರನ್ನ ಬಲಿ ಮಾಡ್ತಾರೆ ಇವರು. ಈ ಕೆಲಸ ನಿಲ್ಲಿಸಬೇಕು. ನೀರನ್ನ ಕಡಿಮೆ ದುಡ್ನಲ್ಲಿ ಕೊಡದೇ ಇರೋ ಸರ್ಕಾರ ಸರ್ಕಾ ರಾನೇ ಅಲ್ಲ. ನೂರೆಂಟು ಕೋಟಿ ಜನಸಂಖ್ಯೆ ಇರೋ ದೇಶದಲ್ಲಿ, ಎಂಭತ್ತು ಭಾಗ ಕಡುಬಡವರ್ನ ಸೃಷ್ಟಿ ಮಾಡಿ, ನೀರ್ನ ಖಾಸಗೀಕರಣ ಮಾಡಿದ್ರೆ..., ದರ ಕಟ್ಟೋಕೆ ಸಾಮರ್ಥ್ಯ ಇಲ್ಲದಿದ್ದರೆ ಏನ್ ಮಾಡ್ತಿರಿ? ದರ ಕಟ್‌ದಿದ್ರೆ ಈ ಖಾಸಗೀಯೋರು ಕುಡಿಯೋ ನೀರ್ನೇ ಬಂದ್ ಮಾಡ್ತಾರೆ!! ತಡಕಳಕ್ಕಾಗುತ್ತಾ?

ಅಲ್ಲಾ..., ಜನ ಕುಡಿಯೋ ನೀರಿಲ್ದೆ ಸತ್ರು ಅನೋ ಸುದ್ದಿ ಕೇಳಬೇಕು ಅಂತಾ ಆಸೆ ಇರಬೇಕು ಸರ್ಕಾರಕ್ಕೆ?! ಆದ್ದರಿಂದ ನಾನು ರೈತಸಂಘ, ದಲಿತ ಸಂಘರ್ಷ ಸಮಿತಿ ಹಾಗೂ ಕಡುಬಡವರ ಪ್ರತಿನಿಧಿಯಾಗಿ ಹೇಳ್ತಾ ಇದ್ದೀನಿ..., ಇವನ್ನೆಲ್ಲಾ ಬಿಟ್ಟು ಸರ್ಕಾರದ ಮೂಲಕಾನೇ ಸರಳ ದರ ದಲ್ಲಿ ಕುಡಿಯೋ ನೀರನ್ನ ಜನಕ್ಕ ಕೊಡಬೇಕು ಅನ್ನೋದು ನಮ್ಮ ಒತ್ತಾಯ.

ವ್ಯವಸ್ಥೆಯನ್ನು ಒರೆಗಲ್ಲಿಗೆ ಹಚ್ಚಿದ ಪೋಳ

ನ್ನಡ ಸಾಹಿತ್ಯದ ಧುನಿಕ ಸಂದರ್ಭದಲ್ಲಿ ಜಾಪುರ ಜಿಲ್ಲೆಯ ಡುಗೆ ಅಪಾರ. ವೋದಯ ಮುಖರಾದ ಮಧುರ ನ್ನರು ಹಾಗೂ ಅವರ ಳೆಯರ ಬಳಗದವರಾದ . ಧೂಲಾಸಾಹೇಬ, ೇವಪ್ಪ ಕಾಪಸೆ, ಂಪಿ ಲಿಂಗಣ್ಣ ಈ ಮುಂತಾದವರು ಮಾಡಿದ ಾಹಿತ್ಯಕ ಸಾಧನೆ ಪಾರವಾದುದು. ಲಸಂಗಿ ಗೆಳೆಯರು ಂಗ್ರಹಿಸಿದ 'ಗರತಿಯರ ಾಡು' ತ್ರಿಪದಿ ಹಾಡಿನ ಂಗ್ರಹವು ಈ ಲ್ಲೆಯಿಂದಲೇ ಹೊರ ಂದದ್ದು. ಹೀಗೆ ಜಾಪುರ ಜಿಲ್ಲೆಯ ಾಧನೆಗಳ ಶ್ರೇಷ್ಠತೆಯ ಟ್ಟಿ ಮಾಡುತ್ತಾ ೋಗುವ ಸಂದರ್ಭದಲ್ಲಿ ಾಹಿತ್ಯ ಕ್ಷೇತ್ರದಲ್ಲಿ ದರಲ್ಲೂ ವೈಚಾರಿಕ ೇತ್ರ, ಆಧುನಿಕ ಚನಗಳಲ್ಲಿ ಹೆಸರು ಾಡಿದ ಮೊದಲ ಲೆಮಾರಿನ ದಲಿತ ೇಖಕ ಕುಮಾರ ಕ್ಕಯ್ಯ ಪೋಳ ಿ.ಎಸ್.ಪೋಳ) ವರದು ವಿಶಿಷ್ಟ ವ್ಯಕ್ತಿತ್ವ.

ಾ॥ ಎಚ್.ಟಿ. ಪೋತೆ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯಕ್ಕೆ ಮಾನವೀಯ ನೆಲೆಯೊದಗಿಸಿದ ಬರಹ ಬಹಳ ಕಡಿಮೆ. ಅಂತಹದರಲ್ಲಿ ಶರಣ ದಾಸರಲ್ಲದೆ ಆಧುನಿಕ ಸಂದರ್ಭದ ದಲಿತ ಬಂಡಾಯದವರು ಮನುಸಂಸ್ಕೃತಿಯನ್ನು ವಿರೋಧಿಸಿ ಮನುಷ್ಯಪರ ನಿಂತ ಅನನ್ಯ. ಎಪ್ಪತ್ತರ ದಶಕದ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳ ಉಳುವಿಗಾಗಿ ದುಡಿದವರನ್ನು ನೋಡುತ್ತಾ ಅವರ ಬರಹವನ್ನು ಓದುವುದೇ ಒಂದು ರೋಮಾಂಚನ. ಆ ಕಾಲ ಸಂದರ್ಭದ ಸಮಾಜೋಧಾರ್ಮಿಕ ಸ್ಥಿತಿಯು ಶೋಷಿತರನ್ನು ಬಳಸಿಕೊಳ್ಳುವುದರ ಮೂಲಕ ತನ್ನನ್ನು ತಾನು ಮೈಕೊಡವಿಕೊಂಡು ಎದ್ದು ನಿಂತ ಕಾಲ. ದನಿ ಕಳೆದುಕೊಂಡವರು, ಅವಮಾನಿತರು, ಮಹಿಳೆಯರ ಸ್ವತಃ ಪ್ರತಿಭಟಿಸಿದ ಕಾಲ, ಆ ಕಾಲದ ಪ್ರತಿಭಟನೆಗೆ, ನ್ಯಾಯದ ಕೂಗಿಗೆ ಸ್ಫೂರ್ತಿಯಾಗಿ ನಿಂತ, ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಚಿಂತನೆಗಳು ಪ್ರೇರಕಶಕ್ತಿಯಾದರೆ, ಕಾರ್ಲ್ ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ, ಫುಲೆ, ಪೆರಿಯಾರ್ ಈ ಮುಂತಾದವರ ವಾದಗಳು ಈ ಸಂಚಲನೆಗೆ ಜೀವದ್ರವ್ಯವಾದ ವಿಚಾರಗಳ ನೆಲೆಯಿಂದಲೇ ಅನೇಕ ಚಿಂತಕರನ್ನು ನಾಡು ಪಡೆದಿದೆ.

ಭಕ್ತಿಪಂಥಗಳು ವಿಶೇಷವಾಗಿ ಯಶಸ್ವಿಯಾದದ್ದು ಕನ್ನಡದ ನೆಲದಲ್ಲಿ ಎನ್ನುವುದು ಗಮನಾರ್ಹ. ಕನ್ನಡ ನಾಡಿನ ಜಿಲ್ಲೆಗಳು ಚಿಂತಕರನ್ನು, ಸಾಹಿತಿಗಳನ್ನು, ವಿಚಾರವಾದಿಗಳನ್ನು ಸಮರ್ಪಿಸುವುದರ ಮೂಲಕ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆದಿವೆ. ಈ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ವಿಶ್ವಪ್ರಸಿದ್ಧಿಯ 'ಗೋಳಗುಮ್ಮಟ' ಬಿಜಾಪುರದಲ್ಲಿದೆ. ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ ಹಾಗೂ ದೋಣಿ ಹೀಗೆ ಐದು ನದಿಗಳನ್ನು ಹೊಂದಿರುವುದನ್ನು ತಿಳಿದವರೆಲ್ಲರಿಂದ ಕರ್ನಾಟಕದ ಪಂಜಾಬ್ ಎಂದು ಕರೆಯಿಸಿಕೊಂಡಿದೆ. ಆದಿಲ್ ಶಾಹಿ ಔರಂಗಜೇಬ ಅಲ್ಲದೆ ಮನುವಾದಿಗಳಾದ ಪೇಶ್ವೆಗಳ ಕೈಯಲ್ಲಿ ಸಿಕ್ಕು ಹೆಚ್ಚು ತತ್ತರಿಸಿ ಹೋದ ಜಿಲ್ಲೆ. ಹಾಗೆಯೇ ಪೌರಾಣಿಕ, ಐತಿಹಾಸಿಕ ಖ್ಯಾತಿಯನ್ನೂ ಹೊಂದಿದೆ.

'ಇಂಡಿ ತಾಲೂಕಿನ ಸಾಲೋಟಗಿಯಲ್ಲಿ (ಪಾವಟ್ಟಿಗೆ) ಎಂಟನೆಯ ಶತಮಾನದಷ್ಟು ಹಿಂದೆಯೇ ವಿದ್ಯಾರ್ಥಿಗಳು ವಾಸವಾಗಿರುವಂತಹ ಒಂದು ಬೃಹತ್ ಮಹಾವಿದ್ಯಾಲಯವನ್ನು ರಾಷ್ಟ್ರಕೂಟರ ಮಂತ್ರಿಯೊಬ್ಬನು ಕಟ್ಟಿಸಿದ್ದನೆನ್ನುವುದು ಐತಿಹಾಸಿಕ ಸತ್ಯ ಸಂಗತಿ. ಬಿ.ಎಂ. ಶ್ರೀಯವರು ಫ.ಗು. ಹಳಕಟ್ಟಿಯವರನ್ನು ಅವರೊಂದು ವಚನ ಗುಮ್ಮಟ ಎಂದು ಕರೆದು ಗೌರವಿಸಿದ್ದಾರೆ. ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ ಎಂದು ಹೇಳಿ ಉಚ್ಚ ಕುಲದವರ ಬಡಿವಾರಕ್ಕೆ ತಕ್ಕ ಉತ್ತರ ನೀಡಿ ವಿಶ್ವಪಥವನ್ನರುಹಿದ ಬಸವಣ್ಣನ ಜನ್ಮಸ್ಥಳ ಬಿಜಾಪುರ. ಮೋಹರೆ ಹನುಮಂತರಾಯರು, ಹರ್ಡೇಕರ ಮಂಜಪ್ಪನವರು, ಕಂಠಿಯವರು, ತತ್ವಜ್ಞಾನಿ ಗುರುದೇವ ರಾನಡೆಯವರು, ಬಿ.ಡಿ. ಜತ್ತಿಯವರು, ಬಂಥನಾಳ ಶಿವಯೋಗಿಗಳು, ನೇತ್ರದಾನಿ ಮೋದಿಯವರು ಕೂಡ ಇಲ್ಲಿಯವರೆ.[೧] ಇದಲ್ಲದೆ ಕಲೆ, ಸಾಹಿತ್ಯ, ಸಂಸ್ಕೃತಿ, ಭಾಷೆ ದೃಷ್ಟಿಯಿಂದ ಕನ್ನಡಿಗರ ಗಂಡು ಮೆಟ್ಟಿನ ನೆಲವೆಂದೇ ಖ್ಯಾತಿ ಪಡೆದ ಜಿಲ್ಲೆ ಇದಾಗಿದೆ.

ಕನ್ನಡ ಸಾಹಿತ್ಯದ ಆಧುನಿಕ ಸಂದರ್ಭದ ನವೋದಯ ಪ್ರಮುಖರಾದ ಮಧುರ ಚೆನ್ನರು ಹಾಗೂ ಅವರ ಗೆಳೆಯರ ಬಳಗದವರಾದ ಪಿ.ಧೂಲಾಸಾಹೇಬ, ರೇವಪ್ಪ ಕಾಪಸೆ, ಸಿಂಪಿ ಲಿಂಗಣ್ಣ ಈ ಮುಂತಾದವರು ಮಾಡಿದ ಸಾಹಿತ್ಯಕ ಸಾಧನೆ ಅಪಾರವಾದುದು.

ಕುಮಾರ ಕಕ್ಕಯ್ಯ ಪೋಳ

ಹಲಸಂಗಿ ಗೆಳೆಯರು ಸಂಗ್ರಹಿಸಿದ 'ಗರತಿಯರ ಹಾಡು' ತ್ರಿಪದಿ ಹಾಡಿನ ಸಂಗ್ರಹವು; ಈ ಜಿಲ್ಲೆಯಿಂದಲೇ ಹೊರ ಬಂದದ್ದು. ಹೀಗೆ ಬಿಜಾಪುರ ಜಿಲ್ಲೆಯ ಸಾಧನೆಗಳ ಶ್ರೇಷ್ಠತೆಯ ಪಟ್ಟಿ ಮಾಡುತ್ತಾ ಹೋಗುವ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅದರಲ್ಲೂ ವೈಚಾರಿಕ ಕ್ಷೇತ್ರ, ಆಧುನಿಕ ವಚನಗಳಲ್ಲಿ ಹೆಸರು ಮಾಡಿದ ಮೊದಲ ತಲೆಮಾರಿನ ದಲಿತ ಲೇಖಕ ಕುಮಾರ ಕಕ್ಕಯ್ಯ ಪೋಳ (ಬಿ.ಎಸ್.ಪೋಳ) ಅವರದು ವಿಶಿಷ್ಟ ವ್ಯಕ್ತಿತ್ವ.

ಎಪ್ಪತ್ತರ ದಶಕದ ಭೂಸಾ ಪ್ರಕರಣ, ದಲಿತ-ಬಂಡಾಯದ ಗಾಳಿ ಬೀಸುವ ಮೊದಲೇ ಶೋಷಿತಪರ ಚಿಂತನೆಯ ನೆಲೆಯಲ್ಲಿ ಅಂಬೇಡ್ಕರ್ ಅವರ ವಿಚಾರ ಧಾರೆಗಳಿಗೆ ಪ್ರಭಾವಿತರಾಗಿ ಸಾಹಿತ್ಯ ಕೃಷಿಗೆ ತೊಡಗಿದವರು. ವೃತ್ತಿಯಿಂದ ಅಧಿಕಾರಿಯಾಗಿ ಪ್ರವೃತ್ತಿಯಿಂದ ಸಾಹಿತಿಯಾಗಿ ವಿಚಾರವಾದಿಗಳಾಗಿ ಮನುಷ್ಯಪರವಾದ ಚಿಂತನೆಗೈದರು. ಪಂಚಮರ, ಮಹಿಳೆಯರ ಶೋಷಣೆಗೆ ಕಾರಣಗಳನ್ನು ಹುಡುಕುತ್ತ ವ್ಯವಸ್ಥೆಯ ತಳಬುಡವನ್ನು, ಟೊಳ್ಳು ಸಂಸ್ಕೃತಿಯನ್ನು ತಮ್ಮ ಚಿಂತನೆಗಳ ಮೂಲಕ ಒರೆಗಲ್ಲಿಗೆ ಹಚ್ಚಿದರು.

ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ಚಾಂದಕವಟೆಯಲ್ಲಿ ಅಸ್ಪೃಶ್ಯ ವರ್ಗದ ಡೋಹರ್ ಸಾಯಬಣ್ಣ-ರಾಮವ್ವ ದಂಪತಿಗಳಿಗೆ ದಿನಾಂಕ ೨೮-೦೭-೧೯೨೯ ರಂದು ಭೀಮರಾವ್ ಏಕೈಕ ಗಂಡು ಮಗುವಾಗಿ ಜನಿಸಿದರು. ಹಸುಗೂಸು ಇರುವಾಗಲೇ ತಂದೆಯನ್ನು ಕಳೆದುಕೊಂಡ ಭೀಮರಾವ್ ತಾಯಿ, ಅಜ್ಜ-ಅಜ್ಜಿ ಸೋದರಮಾವ ಶಂಕರ ಇವರ ಲಾಲನೆಪಾಲನೆಯಲ್ಲಿ ಬೆಳೆದರು.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪಂಚಮರೆನಿಸಿಕೊಂಡ ಹೊಲೆಯ, ಮಾದಿಗ, ಸಮಗಾರ ಡೋಹಾರ ಮಚಗಾರ ಇವರು ಊರ ಹೊರಗೆ ವಾಸಿಸಬೇಕು. ಮೇಲಿನ ವರ್ಗದವರನ್ನು ರಕ್ಷಿಸುವುದಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧವಾಗಿರಬೇಕು. ಅವರು ಕಾಲಿನಿಂದ ತೋರಿ

ಸಿದ್ದನ್ನು ಶಿರಬಾಗಿ ಮಾಡಿ, ಕೃಪೆಗೆ ಪಾತ್ರರಾದಾಗ ಮಾತ್ರ ಹಳಸಿದ ಅನ್ನ ನಾಟೀಕಾರ ರೊಟ್ಟಿ ತಂಗಳ ತುಕಡಿಗಳು ಸಿಗುತ್ತಿದ್ದವು. ಕೂಲಿ, ಚಪ್ಪಲಿ ಹೊಲೆಯುವುದು ಗೋರಿ ಹಡ್ಡವುದು ಹೆಣದ ಮೇಲಿನ ಬಟ್ಟೆ ತೊಡುವುದು ಇಲ್ಲವೇ ಜೀತ ಪದ್ಧತಿಯೇ ಅವರ ಕಾಯಕವೆಂದು ನಿರ್ದೇಶಿತರಾಗಿದ್ದರು. ಭೀಮರಾವ್ ಅವರ ಪೋಳ ಅಜ್ಜ ತುಳಜಾರಾಮ ತನ್ನ ಕುಲಕಸುಬಿನಿಂದ ಊರ ರೈತರ ವ್ಯವಸಾಯಿಕ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದ.

ಊರಲ್ಲಿ ಶಾಲೆಗೆ ಸ್ವತಂತ್ರ ಕಟ್ಟಡವಿರಲಿಲ್ಲ, ಬಸವಣ್ಣ ದೇವರ ಗುಡಿಯಲ್ಲಿ ಶಾಲೆ ನಡೆಯುತ್ತಿತ್ತು. ಕುಲಜರ ಮಕ್ಕಳು ಗುಡಿಯ ಕಟ್ಟಡದ ಪಡಶಾಲೆಯಲ್ಲಿ ಕುಳಿತು ಓದುತ್ತಿದ್ದರೆ, ಗುಡಿಯ ಹೊರ ವಲಯದ ಧೂಳು ಮಣ್ಣಿನಲ್ಲಿ ನಾನು ನನ್ನಗೆಳೆಯ ಹೊಲೆಯರ ಪಂಢರಿ ಇಬ್ಬರೇ ಕುಳಿತುಕೊಳ್ಳುತ್ತಿದ್ದೇವು ಎಂದು ಅನೇಕ ಬರಿ ಪೋಳ ಅವರು ಸ್ವತಃ ನಮ್ಮೊಂದಿಗೆ ನೋವನ್ನು ಹಂಚಿಕೊಂಡಿದ್ದಾರೆ. ಮಳೆಗಾಲದಲ್ಲಿ ಕೆಸರಾದ ನೆಲದಲ್ಲಿಯೇ ಕೂತು ಪಾಠ ಕಲಿಯಬೇಕು. ವಿದ್ಯಾರ್ಥಿಗಳು ಆಡುವ ಮೈದಾನಕ್ಕೂ ಅಸ್ಪೃಶ್ಯ ಮಕ್ಕಳು ಪ್ರವೇಶ ಮಾಡುವಂತಿರಲಿಲ್ಲ. ಜಾತಿ ರಹಿತ ಸಮಾಜ ನಿರ್ಮಾಣ ಮಾಡಲು ಹೋರಾಡಿದ ಬಸವಣ್ಣನ ಗುಡಿಯಲ್ಲಿ ಹಿರಿಯಮಾಹೇಶ್ವರರಿಗೆ ಪ್ರವೇಶವಿರಲಿಲ್ಲವೆನ್ನುವುದು ವಿಪರ್ಯಾಸವೇ ಸರಿ. ಬಿಜಾಪುರ ಅನೇಕ ಹಿರಿಮೆ ಗರಿಮೆಗಳಿಗೆ ಹೆಸರಾದ ಜಿಲ್ಲೆಯಾಗಿದ್ದರೂ ಅಸ್ಪೃಶ್ಯತೆ ಆಚರಣೆಯಂತಹ ಪದ್ಧತಿಗಳ ಅನುಷ್ಠಾನದಿಂದಾಗಿ ಎಂತಹ ಕೀರ್ತಿ, ಖ್ಯಾತಿಗಳಿದ್ದರೂ ಶೋಭಿಸಲಾರದು. ಎಲ್ಲ ಅವಮಾನಗಳನ್ನು ಸಹಿಸಿಕೊಂಡು ಚಾಂದಕವಟೆ ಮತ್ತು ಸಿಂಧಗಿಯಲ್ಲಿ ಶಿಕ್ಷಣ ಪಡೆದು ಸರಕಾರಿ ಸೇವೆಗೆ ಸೇರಿದರು.

ಗುಲ್ಬರ್ಗಾ ಹಾಗೂ ಇಂಡಿಯಲ್ಲಿ ತಹಶೀಲ್ದಾರರಾಗಿ ಕಾರ್ಯನಿರ್ವಸಿದರು. ನಂತರ ಸ್ವಯಂ ನಿವೃತ್ತಿ ಪಡೆದು ರಾಜಕೀಯ ಪ್ರವೇಶ ಮಾಡಲು ಚಿಂತಿಸಿದ್ದರು. ಆದರೆ ಅದು ಕೈಗೂಡಲಿಲ್ಲ. ದೇಶದಲ್ಲಿ ಸ್ವಾತಂತ್ರ್ಯ ಸಾಗಿತ್ತು. ಪೋಲೀಸರ ಅಣತಿಯಂತೆ ಪೋಳ ಅವರ ಮಾವ ಚಂದಕವಟೆಯ ಸವರ್ಣೀಯರ ಬಾವಿಯಲ್ಲಿ ನೀರು ತುಂಬಿದ್ದಕ್ಕಾಗಿ ಶಂಕ್ರಪ್ಪನನ್ನು ಥಳಿಸಿ ದಂಡ ಕಟ್ಟಿದ ಘಟನೆ, ಪೋಳ ಅವರ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಸರಕಾರಿ ಕೆಲಸ ಸಿಕ್ಕಿತೆಂದು ಸುಮ್ಮನಿರದೆ ತನ್ನವರಿಗಾಗಿ ಚಿಂತಿಸುತ್ತ ಸಾಹಿತ್ಯ ರಚನೆಗೆ ತೊಡಗಿದರು.

೧೯೬೫ ರಲ್ಲಿ 'ಧರ್ಮಕ್ರಾಂತಿ' ಕೃತಿಯ ಮೂಲಕ ಪೋಳ ಅವರು ಧಾರ್ಮಿಕ ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಿದರು. ವೈರುಧ್ಯಗಳ ನಡುವೆಯೇ ಸಾಮಾಜಿಕ ಸಮಾನತೆ, ಆರ್ಥಿಕ ಸಮಾನತೆ ಧಾರ್ಮಿಕ ದಾಳಿಗಳಿಂದಾಗುವ ಅಮಾನವೀಯ ಕೃತ್ಯಗಳ ಮೂಲಕ ನಡೆಯುವ ಶೋಷಣೆಯನ್ನು ನಿಲ್ಲಿಸುವುದಕ್ಕಾಗಿ ದಬ್ಬಾಳಿಕೆಯನ್ನು ದಮನ ಮಾಡುವುದಕ್ಕಾಗಿ ಪ್ರಯತ್ನಿಸಿದರು. 'ಇದು ನನ್ನ ಸಮಾಜ' ಎಂಬ ನಾಟಕವು ಈ ಹಿನ್ನೆಲೆಯಲ್ಲಿಯೇ ಮೂಡಿಬಂದಿತು. ಸಮಾಜದ ತೊಡರಿಗೆ ಧರ್ಮದ ಕಗ್ಗಂಟು ಕಥಾಸಂಕಲನವು ೧೯೬೬ರಲ್ಲಿ ಪ್ರಕಟವಾಯಿತು. 'ನಿಯತಿ ಶಾಸನ', 'ಗೀಜಗನಗೂಡು' ಕ್ರಮವಾಗಿ ೧೯೭೩, ೧೯೭೫ ರಲ್ಲಿ ಕಾದಂಬರಿಗಳನ್ನು ಪ್ರಕಟಿಸಿದರು. ೧೯೭೯ ರಲ್ಲಿ ಮೂಕನ ಭಾಷಣ, ಕುಮಾರ ಕಕ್ಕಯ್ಯನವರ ವಚನಗಳು, ೧೯೮೨ ರಲ್ಲಿ 'ಬಸವಧರ್ಮ ಯಾರ ಸೊತ್ತು', 'ಚಾತುರ್ವರ್ಣ ಧರ್ಮದರ್ಶನ' 'ಧರ್ಮಗುರುಗಳ

ಇಹದಲ್ಲಿಯೇ ಎಲ್ಲವನ್ನು ಕಾಣುವುದು ಮುಖ್ಯ. ಪಾಪ, ಪುಣ್ಯ, ಸ್ವರ್ಗ, ನರಕಗಳೆಲ್ಲವು ದಯೆ, ಸತ್ಯ, ಶುದ್ಧ ಕಾಯಕದಲ್ಲಿ ಅಡಗಿವೆ ಎಂದು ಪೋಳ ಅವರು ಸ್ಪಷ್ಟಪಡಿಸುತ್ತಾರೆ.

ಅವಾಂತರ' ಹೀಗೆ ಒಟ್ಟು ಹತ್ತಕ್ಕೂ ಮೇಲ್ಪಟ್ಟು ವೈಚಾರಿಕ ಚಿಂತನೆಯುಳ್ಳ ಕೃತಿಗಳನ್ನು ರಚಿಸಿದ್ದಾರೆ. ಕುಮಾರ ಕಕ್ಕಯ್ಯ ಪೋಳ ಅವರನ್ನು ಹೆಚ್ಚು ಜನಪ್ರಿಯಗೊಳಿಸಿದ ಮತ್ತು ವಿಚಾರವಾದಿಯೆಂಬ ಹೆಸರು ತಂದುಕೊಟ್ಟ ಕೃತಿ 'ಚಾತುರ್ವರ್ಣ ಧರ್ಮದರ್ಶನ'.[3] ಪ್ರಸ್ತುತ ಕೃತಿಯಲ್ಲಿ ಚಾತರ್ವರ್ಣ್ಯಕ್ಕೆ ಕಾರಣವಾದ ಮನುಚಿಂತನೆಯ ಪ್ರತಿರೂಪದಂತಿದ್ದ ರಾಮಾಯಣ, ಮಹಾಭಾರತದಲ್ಲಿಯ ಅವಾಂತರಗಳಿಗೆ ಸಾಣೆ ಹಿಡಿಯುವ ಕೆಲಸ ಪೋಳ ಅವರು ಮಾಡಿದ್ದಾರೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕಂದಾಚಾರ, ಪಾಪ ಪುಣ್ಯಗಳ ಕಲ್ಪನೆ, ದೇವರು ಸ್ವರ್ಗ ನರಕ, ಧರ್ಮಗುರುಗಳ ಕರ್ಮಕಾಂಡ ಈ ಎಲ್ಲವುಗಳ ಹಿನ್ನೆಲೆಯಲ್ಲಿ ಅಸ್ಪೃಶ್ಯರ ಮೇಲಾಗುವ ಅತ್ಯಾಚಾರಗಳ ವಿರುದ್ಧ ಗುಡುಗಿ ಸನಾತನೀಯರ ಎಲ್ಲ ಪೊಳ್ಳು ಆಲೋಚನೆಗಳಿಗೆ ಸಕಾರಣ ನೀಡುವುದರ ಮೂಲಕ; ಅವುಗಳನ್ನು

ಅಂಬೇಡ್ಕರ್ ವಿಚಾರ ಧಾರೆಗಳಲ್ಲಿ ಅಚಲವಾದ ನಂಬಿಕೆಯಿಟ್ಟು ಮೂಕನ ಭಾಷಣ ಎನ್ನುವ ಕೃತಿಯನ್ನು ಹೊರತಂದರು. ಅಂಬೇಡ್ಕರ್‌ರಂತೆ ಬೌದ್ಧರಾಗಲು ಹೋಗಿ ಅಲ್ಲಿಯ ತೊಡಕುಗಳನ್ನು ಅರಗಿಸಿಕೊಳ್ಳಲಾರದೆ ವೀರಶೈವದೆಡೆಗೆ ಮುಖಮಾಡಿ ತಮ್ಮ ಜೀವಿತದ ಕೊನೆಯವರೆಗೆ ಬಸವ ಕಕ್ಕಯ್ಯರಾದಿ ಶರಣರ ಅನುಯಾಯಿಗಳಾಗಿ ವಚನ ರಚನೆಯೊಂದಿಗೆ ಶರಣ ಸಂಸ್ಕೃತಿ ಚಿಂತನೆಗೆ ಮಹತ್ವ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ 'ಬಸವಧರ್ಮ ಯಾರ ಸೊತ್ತು' ಎನ್ನುವ ಕೃತಿಯನ್ನು ರಚಿಸಿದ್ದಾರೆ. ಧಾರ್ಮಿಕ ತತ್ವಗಳನ್ನು ಮತ-ಸಿದ್ಧಾಂತಗಳನ್ನು ಆಚಾರ ವಿಚಾರ ಗೊಡ್ಡು ಸಂಪ್ರದಾಯಗಳಿಂದ ದೂರ ಉಳಿದು ಚಿಂತಿಸಿದ್ದಾರೆ. ಮೋಕ್ಷ ಸ್ವರ್ಗ ನರಕಗಳ ಕಲ್ಪನೆಗಳು ಸುಳ್ಳು ಎಂದು ಖಂಡಿಸಿದ್ದಾರೆ.

ತಿರಸ್ಕರಿಸಿದ್ದಾರೆ. ವೈಚಾರಿಕ ಚಿಂತನೆಯ ಜೊತೆಗೆ 'ಕುಮಾರ ಕಕ್ಕಯ್ಯ' ಅಂಕಿತವನ್ನಿಟ್ಟುಕೊಂಡು ವಚನಗಳನ್ನು ಬರೆದಿದ್ದಾರೆ.

'ಬೆಕ್ಕಿನ ಕೈಯಲ್ಲಿ ಸಿಕ್ಕ ಇಲಿ, ತನ್ನ ಪ್ರಾಣ ರಕ್ಷಣೆಗಾಗಿ ಹೋರಾಡುತ್ತಿದೆಯೇ ಹೊರತು, ಆ ಬೆಕ್ಕಿನ ಮನಸ್ಸು ನೋಯಿಸುವ ಅಥವಾ ಆ ಬೆಕ್ಕಿಗೆ ದ್ರೋಹ ಬಗೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅದೇ ಪ್ರಕಾರ ಚಾತುರ್ವರ್ಣವೆಂಬ ಬ್ರಹ್ಮರಾಕ್ಷಸನ ಕೈಯಲ್ಲಿ ಸಿಕ್ಕ ಅಸ್ಪೃಶ್ಯರ ವಿಮೋಚನೆಯ ಪ್ರಯತ್ನವನ್ನು ಆಕ್ಷೇಪಣೆ ಮಾಡುವ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಇದು ಬೆಂದ ಮತ್ತು ನೊಂದ ಹೃದಯದಿಂದ ಬಂದದ್ದು ಹೊರತು, ಪಾಂಡಿತ್ಯದಿಂದ ಹೊರಹೊಮ್ಮಿದ್ದಲ್ಲ', ಈ ಹಿನ್ನೆಲೆಯಲ್ಲಿ ಅವರ ವಚನವೊಂದು ಹೀಗೆ ಮೂಡಿ ಬಂದಿದೆ:

ಇಲಿ ಹೌಹಾರಿ ಹೋರಾಡುವುದು
ಬೆಕ್ಕಿಗೆ ದ್ರೋಹ ಬಗೆಯಲಿಕ್ಕೆಂದಲ್ಲ
ತನ್ನ ಪ್ರಾಣ ಉಳಿಸಿಕೊಳ್ಳಲಿಕ್ಕೆ
ಅಂತ್ಯಜ ಗೋಗರೆದು ಹೋರಾಡುವುದು
ಕುಲಜನಿಗೆ ದ್ರೋಹ ಬಗೆಯುಲಿಕ್ಕೆಂದಲ್ಲ
ತನ್ನ ಜೀವ ಉಳಿಸಿಕೊಳ್ಳಲಿಕ್ಕೆಂದ
ಕುಮಾರ ಕಕ್ಕಯ್ಯ

ಅವರ ಒಟ್ಟು ಗದ್ಯ ಸಾಹಿತ್ಯದಲ್ಲಿ ಮುಖ್ಯವಾಗಿ ಕಂಡುಬರುವುದೇನೆಂದರೆ, ಸಾಮಾಜಿಕ ಕಂದಾಚಾರದ ಮುಖ್ಯ ಕೇಂದ್ರಗಳಾದ ಮಠ, ಮೌಢ್ಯತೆ, ಅಧರ್ಮ, ಅನೀತಿ, ಅಸ್ಪೃಶ್ಯತೆ ಈ ಎಲ್ಲ ನೆಲೆಗಳಲ್ಲಿ ನಡೆಯುವ ಅಸ್ಪೃಶ್ಯರ ಶೋಷಣೆಗೆ ತಡೆಗೋಡೆಯಾಗಿ ನಿಲ್ಲುವಂತಃ ಚಿಂತನೆಗಳು ಮತ್ತು ಆ ನಿಟ್ಟಿನಲ್ಲಿ ಸಕಾರಣಗಳನ್ನು ಕಟ್ಟಿಕೊಡುವ ಮಾನವಪರ ವಿಚಾರಗಳು ಮೂಡಿಬಂದಿವೆ. ದಲಿತ ಕವಿ ಸಿದ್ದಲಿಂಗಯ್ಯನವರು ಹೇಳುವ ಹಾಗೆ 'ದಲಿತ ಬರಹಗಾರನಿಗೆ ರಸಾನಂದ ಅಪ್ರಸ್ತುತವಾಗುತ್ತದೆ. ಇವನ ಗುರಿ ಮಾನವೀಕರಣ. ಸಮಾಜದ ಅಸಹ್ಯ ಸ್ಥಿತಿ, ಮೇಲು ಕೀಳು, ಶ್ರೇಷ್ಠ ಕನಿಷ್ಠ ಇವುಗಳ ಶಾಶ್ವತ ನಾಶಕ್ಕಾಗಿ ದಲಿತನ ಬರವಣಿಗೆ ಹುಟ್ಟುತ್ತದೆ. ಇಂಥ ಬರವಣಿಗೆಯಿಂದ ಮಾತ್ರ ದಲಿತರನ್ನು ಬಿಡುಗಡೆಯ ದಾರಿಯಲ್ಲಿ ಮಾನಸಿಕವಾಗಿ ಚಲನಶೀಲರನ್ನಾಗಿ ಮಾಡಬಲ್ಲುದು'. ಈ ಹಿನ್ನೆಯಲ್ಲಿ ಕುಮಾರ ಕಕ್ಕಯ್ಯ ಪೋಳ ಅವರು ಅಮಾನವೀಯವಾದ ಇಲ್ಲಿಯ ವ್ಯವಸ್ಥೆಯನ್ನು ಮಾನವೀಕರಣಗೊಳಿಸುವದಾಗಿತ್ತು ಎಂದೆನಿಸುತ್ತದೆ.

ಅಂಬೇಡ್ಕರ್ ವಿಚಾರ ಧಾರೆಗಳಲ್ಲಿ ಅಚಲವಾದ ನಂಬಿಕೆಯಿಟ್ಟು ಮೂಕನ ಭಾಷಣ ಎನ್ನುವ ಕೃತಿಯನ್ನು ಹೊರತಂದರು. ಅಂಬೇಡ್ಕರ್‌ರಂತೆ ಬೌದ್ಧರಾಗಲು ಹೋಗಿ ಅಲ್ಲಿಯ ತೊಡಕುಗಳನ್ನು ಅರಗಿಸಿಕೊಳ್ಳಲಾರದೆ ವೀರಶೈವದೆಡೆಗೆ ಮುಖಮಾಡಿ ತಮ್ಮ ಜೀವಿತದ ಕೊನೆಯವರೆಗೆ ಬಸವ ಕಕ್ಕಯ್ಯರಾದಿ ಶರಣರ ಅನುಯಾಯಿಗಳಾಗಿ ವಚನ ರಚನೆಯೊಂದಿಗೆ ಶರಣ ಸಂಸ್ಕೃತಿ ಚಿಂತನೆಗೆ ಮಹತ್ವ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ 'ಬಸವ ಧರ್ಮ ಯಾರ ಸೊತ್ತು' ಎನ್ನುವ ಕೃತಿಯನ್ನು ರಚಿಸಿದ್ದಾರೆ. ಧಾರ್ಮಿಕ ತತ್ವಗಳನ್ನು ಮತ-ಸಿದ್ಧಾಂತಗಳನ್ನು ಆಚಾರ ವಿಚಾರ ಗೊಡ್ಡು ಸಂಪ್ರದಾಯಗಳಿಂದ ದೂರ ಉಳಿದು ಚಿಂತಿಸಿದ್ದಾರೆ. ಮೋಕ್ಷ ಸ್ವರ್ಗ ನರಕಗಳ ಕಲ್ಪನೆಗಳು ಸುಳ್ಳು ಎಂದು ಖಂಡಿಸಿದ್ದಾರೆ.

ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವ ಕುಲಜರ

ರು ಎಂದು ಹೇಳಿದವರು ಶರಣರು. ಆದರೆ ಸಕಲ ತ್ಮರನ್ನು ತಿಂದು ತೇಗುವ ವರ್ಗಧ ಸಾಮಾಜಿಕ ಕುರಿತು ವಚನಗಳಲ್ಲಿ ಕುಮಾರ ಕಕ್ಕಯ್ಯನವರು ಡುವುದು ಮಾನವೀಯತೆಗೆ ಹಿಡಿದ ಕನ್ನಡಿ ದೆ.

ಪಶು ಪಕ್ಷಿಗಳ ಬೇಟೆಯಾಡುವ ಜಗದಲ್ಲಿ ಪಾಪ ಪುಣ್ಯ ಶಾಸ್ತ್ರದ ಬದನೆಕಾಯಿಗಳೆಂದ ರ ಕಕ್ಕಯ್ಯ.

ಬದುಕಿಗೆ ಆಸರೆಯಾಗಿರುವ ಪ್ರಾಣಿಯನ್ನು ದುಡಿಸಿ ಡು ಅದು ನಿತ್ರಾಣವಾದಾಗ ಕಟುಕನಿಗೆ ಮಾರುವವ ಕಂಡು ಯಾವುದು ಪುಣ್ಯವೆಂದು ಚಿಂತಿಸಿದ್ದಾರೆ.

'ದಯವೇ ಧರ್ಮದ ಮೂಲ' ಎನ್ನುವಂತೆ ದಯೆ ಪ್ರತಿಪಾದಿಸದೆ ಕಾಣದ ಯಾವುದೋ ಲೋಕದ ಗೆ ಹೆಣಗುವುದು ಸರಿಯಾದ ಕ್ರಮವಲ್ಲ.

ಸತ್ತ ಬಳಿಕ ನರಕ ಮೋಕ್ಷ,
ಪುನರ್ಜನ್ಮಗಳೆಂಬ
ತರತಮ ಶಬ್ದಗಳ ಶಾಸ್ತ್ರ ಜಾಲವೆಂದ
ಕುಮಾರ ಕಕ್ಕಯ್ಯ

ಇಹದಲ್ಲಿಯೇ ಎಲ್ಲವನ್ನು ಕಾಣುವುದು ಮುಖ್ಯ. ಪುಣ್ಯ, ಸ್ವರ್ಗ, ನರಕಗಳೆಲ್ಲವು ದಯೆ, ಸತ್ಯ, ಶುದ್ಧ ಕದಲ್ಲಿ ಅಡಗಿವೆ ಎಂದು ಪೋಳ ಅವರು ಡಿಸುತ್ತಾರೆ.

ಅಹಂಕಾರಿಗಳಲ್ಲು ಅರಿವಿಲ್ಲದವರನ್ನು ನಾನು ತಾನು ಂದು ಹೇಳುವವರನ್ನು ಮಣ್ಣಿಗಿಂತ ಮಡಿಕೆ ಘನ ಸೃಷ್ಟಿಗಿಂತ ಶಾಸ್ತ್ರ ಹಿರಿದಲ್ಲವೆಂದು ಕಕ್ಕಯ್ಯನವರು ್ರಿಯ ಪಟ್ಟಿರುವುದು ಕಾಣುತ್ತೇವೆ. ಒಟ್ಟಾರೆಯಾಗಿ ಕೃತಿಗಳ ಮೂಲಕ ಆಧುನಿಕರಲ್ಲಿ ಮೌಢ್ಯತೆಗೆ ಕಾರ ನ ಅನೇಕ ವಿಷಯಗಳ ಮೇಲೆ ವೈಚಾರಿಕ ವೈಜ್ಞಾನಿಕ ಚೆಲ್ಲುವ ಪ್ರಯತ್ನ ಪೋಳ ಅವರದಾಗಿದೆ. ಸೌಜನ್ಯ ಅರಿವನ್ನು ತಮ್ಮ ವಚನಗಳ ಮೂಲಕ ಅರುಹಿ ವಿಶ್ವಧರ್ಮವಾಗಬೇಕಿದ್ದ ಬಸವ ಧರ್ಮದ ಅವನ ರಣರಾದವರ ಬಗ್ಗೆ ಕಕ್ಕಯ್ಯನವರಿಗೆ ನೋವಿದೆ.

ಬುದ್ಧ, ಬಸವ, ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಕಾಳಜಿ ಇಟ್ಟುಕೊಂಡು ಆ ಹಿನ್ನೆಲೆಯಲ್ಲಿ ದುಡಿದ ವಾದಿ ಪೋಳ ಅವರು ವೀರಶೈವರಾದರೂ ಟ್ಟಿನ ಗೌರವಗಳು ದೊರೆಯದೆ ಹೋಯಿತು. ಅಸ್ಪೃ ಯೇ ಉಳಿಯಬೇಕಾಯಿತು. ಕನ್ನಡ ಸಾಹಿತ್ಯದ ಾವ್ಯ, ವಚನ, ಕಾದಂಬರಿ, ವಿಚಾರ ಸಾಹಿತ್ಯದಲ್ಲಿ ದ ಪೋಳ ಅವರಿಗೆ ಸಿಕ್ಕ ಪ್ರಚಾರ ಬಹಳ ಕಡಿಮೆ. ಅವರನ್ನು ತೀರ ಹತ್ತಿರದಿಂದ ಕಂಡು ಅವ ಗಿನ ನನ್ನ ನಾಲ್ಕಾರು ವರ್ಷಗಳ ಒಡನಾಟ ಗಿ ನನಗೆ ಅವರಲ್ಲಿ ಹೆಚ್ಚಿನ ಗೌರವ; ಸಹಜ ಸರಳ ವಿಚಾರದಲ್ಲಿ ನಿಷ್ಠೂರವಾದಿಗಳು ಜಾತಿವ್ಯವಸ್ಥೆ, ತೆ ಜೊತೆಗೆ ಎಂದು ರಾಜಿ ಮಾಡಿಕೊಂಡವರಲ್ಲ. ಂತೆ ಬದುಕಿದವರು. ಸಾಯುವತನಕ ಬಸವ ಪಥ ನಡೆದವರು. ಜೀವನದ ಕೊನೆಯ ಕ್ಷಣದಲ್ಲಿ ಅವರು ಬಸವನ ಮನೆಗೆ ಹೋಗುವೆ, ಬಸವನ ಲ್ಲಿ ಎಲ್ಲರೂ ಹೂಲಸು ತುಂಬಿಸಿದ್ದಾರೆ. ಅದನ್ನು ೂಳಿಸಲು ಹೋಗಬೇಕು ಎಂದು ಮಕ್ಕಳೆದುರಿಗೆ ಬಿ.ಎಸ್. ಪೋಳ ಅವರು ೧೫.೦೨.೯೬ ಧನರಾದರು □

ಮಾರಿಯ ಗುಡಿ ಮುಂದೆ



ಅನಿಮಿಷ ಕತ್ತಲ ರಾತ್ರಿ ನೀರವತೆ
ಹೂಲಗೇರಿಯ ಗಲ್ಲಿಯಲ್ಲಿ,
–ಕೂಗಾಡುತ್ತಿವೆ ತಮಟೆಗಳ ಸದ್ದು,
ಕಾಗೆ, ಗೂಬೆಗಳಿಗೆಲ್ಲಾ ಜೋಗುಳ ಹಾಡಿದಂತೆ

ಈ ರಾತ್ರಿ ಕತ್ತಲಿಗೆ ರುಜು ಮಾಡಿವೆ
ನಗುವ ನಕ್ಷತ್ರಗಳ ದೀಪಗಳು
ಗಲ್ಲಿಯುದ್ದಕ್ಕೂ ಬಿದ್ದುಕೊಂಡಿದೆ
ತಣ್ಣಗಿನ ಹೆಣದಂತೆ.

ಕೇಳುವುದೆ ದೇವರಿಗೆ
ಈ ಮೌನ ದನಿಗಳು.......
ಕತ್ತಿಗಳು ಎದ್ದು ನಿಂತಿವೆ
ಕೆಂಪು ನೆತ್ತರಲಿ ಮೀಯಲು

ಈ ಹಿಂದೆ ಕಾಗೆ, ಗೂಗೆಗಳಿಗೆಲ್ಲಾ
ಅರೆಪಾಡಿನ ನಿದ್ದೆ,
ಈ ರಾತ್ರಿಗೆ ಮಾತ್ರ ಜಾಗರಣೆ
ಮಾರಿಯ ಗುಡಿಮುಂದೆ ನಡೆಯತ್ತಿದೆ
ಕೋಣನ ಮೆರವಣಿಗೆ.

ತಲೆಯೊಡ್ಡಿ ನಿಂತಿದೆ
ಹರಕೆಯ ತಲೆಯೊಂದು

ಕೊಡಲಿಲ್ಲಾ ಇನ್ನವರ
ಅದಕ್ಕೆಲ್ಲಾ ಇನ್ನಿಲ್ಲದ ಗದ್ದಲ,,,,,,,,,,,,

ಕಾಯುತ್ತಿವೆ ತೆರೆದ ಕಣ್ಣುಗಳು
ಹಸಿದ ಹಟ್ಟಿಯ ಹೊಟ್ಟೆಗಳೊತ್ತು
ತೊಡಿಸೋಣ ಅದಕ್ಕೆಲ್ಲ ನಕ್ಷತ್ರಗಳ ರುಮಾಲು
ಮುಗಿಬೀಳುತ್ತಿವೆ ನೂರಾರು ದನಿಗಳು.......
ಕೊಡುವುದೇ,ವರ ಕಲ್ಲುದೇವರು.

○ ಗಂಗಪ್ಪ ತಳವಾರ

ಪಂಪ ಭಾರತ: ಪುರುಷ ವ್ಯಾಖ್ಯಾನಗಳ ರೂಪಕವಾಗಿ

'ಪಂಪಭಾರತ' ನಾಟಕವನ್ನು ನೀವು ನೋಡಬೇಕೆಂದು ರಂಗಮಂದಿರವನ್ನು ಪ್ರವೇಶಿಸಿದಾಗ ತಟ್ಟನೆ ಆರಂಭಗೊಳ್ಳುವ ಹಾಡು ಮತ್ತು ನೃತ್ಯ ವೀಕ್ಷಕರಿಗೆ ಬಹುರೂಪಿ ಪ್ರವೇಶಿಕೆಯನ್ನು ನೀಡುತ್ತದೆ. ಇದು ಹೇಗಿದೆಯೆಂದರೆ, ಪ್ರಥಮ ತರಗತಿಯಲ್ಲಿ ಇಡೀ ಸಾಹಿತ್ಯ ಸಂದರ್ಭವನ್ನು ಸಾಹಿತ್ಯ ವಿದ್ಯಾರ್ಥಿಗಳಿಗೆ ನಿರೂಪಿಸಿಕೊಡುವ ಮಾಸ್ತರರಂತೆ ಈ ಹಾಡು ಮತ್ತು ನೃತ್ಯ ಮಾಡುತ್ತದೆ. ಆದರೆ ಈ ಹಾಡು ಮತ್ತು ನೃತ್ಯದ ಸಂಗೀತ ಏನೋ 'ಅಪರಿಚಿತ' ಎಂಬಂಥ 'ಡಿಸ್ಕೋ' ಮಾದರಿಯನ್ನು ಅನುಸರಿಸಿದ್ದು, ಆಧುನಿಕೋತ್ತರ ಜಗತ್ತಿನ ಕ್ಷಣಿಕತೆಯನ್ನು ಕ್ಷಣ ಹಿಡಿದು ನಿಲ್ಲಿಸಿದಂತೆ ಭಾಸವಾಗುತ್ತದೆ. ಅಂದರೆ ಪ್ರೇಕ್ಷಕ ತನ್ನೆಲ್ಲಾ ಗಮನವನ್ನು ಕ್ರೋಢೀಕರಿಸಿಕೊಂಡು 'ಪಂಪ ಭಾರತ' ಜಗತ್ತನ್ನು ಪ್ರವೇಶಿಸಲು ಮೇಲಿನ ಮಾದರಿ ಭೂಮಿಕೆಯೊಂದನ್ನು ಸಿದ್ಧಿಸಿಕೊಡುತ್ತದೆ ವಿಶಿಷ್ಟವಾದ ಸಂಕಥನ ವೊಂದನ್ನು ಸಂಘಟಿಸುತ್ತದೆ.

ರಾಬರ್ಟ್ ಜೋಸ್ ಮತ್ತು ಡೊಮಿನಿಕ್ ಡಿ

ಇತ್ತೀಚಿನ ದಿನಗಳಲ್ಲಿ ಅನೇಕ ಪ್ರದರ್ಶನಗಳನ್ನು ಕಂಡಿರುವ ಡಾ|| ಕೆ.ವೈ.ನಾರಾಯಣಸ್ವಾಮಿಯವರ ನಾಟಕ ಪಂಪಭಾರತವನ್ನು ಮೆಚ್ಚಿಕೊಂಡವರಲ್ಲಿ ನಾವೂ ಸೇರಿದ್ದೇವೆ. ಕಾರಣ ನಾಟಕವು ಪ್ರಸ್ತುತ ವಿದ್ಯಮಾನಗಳಲ್ಲಿ ಮೌನವಾಗಿರುವ ಅನೇಕ ಸೂಕ್ಷ್ಮಗಳನ್ನು ಭೂತ-ವರ್ತಮಾನ-ಭವಿಷ್ಯತ್ ಎಂಬ ಕಾಲ ಪರದೆಯ ಮೇಲೆ ಎಳೆದು ತಂದು ಪ್ರೇಕ್ಷಕರನ್ನು ಯೋಚಿಸಲು ಹಚ್ಚುತ್ತದೆ. ಅಂಥ ಸೂಕ್ಷ್ಮಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಇವತ್ತಿಗೂ ಮೌನವಾಗಿರುವ **'ಪುರುಷ'** ವ್ಯಾಖ್ಯಾನಗಳನ್ನು ನಾಟಕ ಮರು ಶೋಧಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಲಿಂಗೀಯ ನ್ಯಾಯವನ್ನು ಕೇವಲ ಮಹಿಳೆಗೆ ಮಾತ್ರ ಸಂಬಂಧಿಸಿದಂತೆ ವ್ಯಾಖ್ಯಾನಿಸಿರುವುದು ಅದಕ್ಕೆ ಕಾರಣವಾಗಿರಬಹುದು. ಆದರೆ ಮಹಿಳಾ ಚಳುವಳಿಯ ನಂತರದಲ್ಲಿ ಪುರುಷ ವ್ಯಾಖ್ಯಾನಗಳಲ್ಲಿ ಕಂಡುಬಂದಿರುವ ಬದಲಾವಣೆಗಳ ಬಗ್ಗೆ ಅಂಥ ವಿಶೇಷವಾದ ಚರ್ಚೆ ನಡೆದಿಲ್ಲ. ಈ ಮಿತಿಯನ್ನು ನಾಟಕ ಸೃಜನಾತ್ಮಕವಾಗಿ ನಿಭಾಯಿಸುತ್ತದೆ. ಈ ಅಂಶವನ್ನು ಪ್ರಸ್ತುತ ಲೇಖನ ಚರ್ಚಿಸುತ್ತದೆ.

'ಪಂಪಭಾರತ' ನಾಟಕವನ್ನು ನೀವು ನೋಡಬೇಕೆಂದು ರಂಗಮಂದಿರವನ್ನು ಪ್ರವೇಶಿಸಿದಾಗ ತಟ್ಟನೆ ಆರಂಭಗೊಳ್ಳುವ ಹಾಡು ಮತ್ತು ನೃತ್ಯ ವೀಕ್ಷಕರಿಗೆ ಬಹುರೂಪಿ ಪ್ರವೇಶಿಕೆಯನ್ನು ನೀಡುತ್ತದೆ. ಇದು ಹೇಗಿದೆಯೆಂದರೆ, ಪ್ರಥಮ ತರಗತಿಯಲ್ಲಿ ಇಡೀ ಸಾಹಿತ್ಯ ಸಂದರ್ಭವನ್ನು ಸಾಹಿತ್ಯ ವಿದ್ಯಾರ್ಥಿಗಳಿಗೆ ನಿರೂಪಿಸಿಕೊಡುವ ಮಾಸ್ತರರಂತೆ ಈ ಹಾಡು ಮತ್ತು ನೃತ್ಯ ಮಾಡುತ್ತದೆ. ಆದರೆ ಈ ಹಾಡು ಮತ್ತು ನೃತ್ಯದ ಸಂಗೀತ ಏನೋ **'ಅಪರಿಚಿತ'** ಎಂಬಂಥ **'ಡಿಸ್ಕೋ'** ಮಾದರಿಯನ್ನು ಅನುಸರಿಸಿದ್ದು, ಆಧುನಿಕೋತ್ತರ ಜಗತ್ತಿನ ಕ್ಷಣಿಕತೆಯನ್ನು ಕ್ಷಣ ಹಿಡಿದು ನಿಲ್ಲಿಸಿದಂತೆ ಭಾಸವಾಗುತ್ತದೆ. ಅಂದರೆ ಪ್ರೇಕ್ಷಕ ತನ್ನೆಲ್ಲಾ ಗಮನವನ್ನು ಕ್ರೋಢೀಕರಿಸಿಕೊಂಡು **'ಪಂಪಭಾರತ'** ಜಗತ್ತನ್ನು ಪ್ರವೇಶಿಸಲು ಮೇಲಿನ ಮಾದರಿ ಭೂಮಿಕೆಯೊಂದನ್ನು ಸಿದ್ಧಿಸಿಕೊಡುತ್ತದೆ – "ವೆಲ್‌ಕಮ್ ಟು ಲ್ಯಾಂಡ್ ಆಫ್ ಸ್ಯಾಂಡಲ್‌ವುಡ್... ಗೋಲ್ಡ್ ಫೀಲ್ಡ್ ಆಂಡ್ ಮೀಟಿಂಗ್ ರಿವರ್ಸ್" ಎಂಬುದರ ಮೂಲಕ ಪ್ರಸ್ತುತ ಕನ್ನಡ ಅನುಭವ ಲೋಕಕ್ಕೆ ಒಂದು ವಿಶಿಷ್ಟವಾದ ಸಂಕಥನವೊಂದನ್ನು ಸಂಘಟಿಸುತ್ತದೆ. ಇದು ವಾಸ್ತವದಲ್ಲಿ ಅಪರಿಚಿತವೆಂದು ಪರಿಗಣಿಸಿರುವ ಕನ್ನಡಲೋಕದ ಭೌಗೋಳಿಕ-ಚಾರಿತ್ರಿಕ ಮತ್ತು ಸಾಂಸ್ಕೃತಿಕವಾದ ಅನುಭವ ತಾಣಗಳನ್ನು ಮತ್ತೊಮ್ಮೆ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತದೆ. ಅಂದರೆ ಪ್ರಸ್ತುತ 'ಮೆಟ್ರೋ' ರಿಯಾಲಿಟಿಗಳಾದ ಐಟಿ-ಬಿಟಿ, ಬುಲ್ಲೆಟ್ ಸೌಂಡ್‌ಗಳ ಪ್ರತಿಧ್ವನಿಗಳು ಮೊಳಗುತ್ತಾ ತೀರ ಪರಿಚಿತವಾದುವುಗಳು ಅಪರಿಚಿತವೆಂಬಂತಾಗುವ ಕ್ಷಣಗಳಲ್ಲಿ ಪ್ರೇಕ್ಷಕರನ್ನು ಜಾಗೃತರನ್ನಾಗಿಸುವ ಜವಾಬ್ದಾರಿಯನ್ನು ನಾಟಕದ ಆರಂಭಿಕ ದೃಶ್ಯ ವಹಿಸಿಕೊಳ್ಳುತ್ತದೆ. ಆ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರಲ್ಲಿ ನಾಟಕದ ಯಶಸ್ಸು ಅಡಗಿದೆ.

ಈ ಮೂಲಕವೇ ನಾಟಕದ ವಸ್ತು ಸಹ ತನ್ನ ಸಂಕೀರ್ಣತೆಯಿಂ
ಅನಾವರಣಗೊಳ್ಳಲು ತೊಡಗುತ್ತದೆ. ಕನ್ನಡದ ಸಾಂಸ್ಕೃತಿಕ ಅನನ್ಯತೆ
ಪಂಪನ ಕೊಡುಗೆ ಏನೆಂದು ವಿವರಿಸಬೇಕಿಲ್ಲ. ಆದರೆ ಬೆಂಗಳೂರಿನಂ
ಜಾಗಗಳು ಇಂದು ತೀವ್ರಗತಿಯ ನಗರೀಕರಣವನ್ನು ಅನುಭವಿಸುತ್ತಿರುವಾ
ಅದರ ಕಾಸ್ಮೊಪಾಲಿಟನ್ ಸಂಸ್ಕೃತಿ ನೆನಪುಗಳನ್ನು ತಮ್ಮ ಹಳೇಜಾಡಿನಿಂ
ಒಕ್ಕಲೆಬ್ಬಿಸುತ್ತಿರುತ್ತದೆ. ಅಂಥ ಸಂದಿಗ್ಧತೆಯಲ್ಲೇ ಎತ್ನಿಕ್ ಆದ ಅಭಿರುಚಿಗಳನ್
ಕಟ್ಟಿಕೊಳ್ಳುವ ಪ್ರಯತ್ನಗಳು ಕಾಣತೊಡಗುತ್ತವೆ. ಅಂದರೆ ಒಂದು ಮಿಥಿ
ಆದ ಭೂತಕ್ಕೆ ಹೋಗಿ ಹುಡುಕಾಟ ನಡೆಸುವಂಥದ್ದು, ಅದೂ ಸ
ಸರಳ ರೇಖಾತ್ಮಕ ಕಾಲದೊಳಗೆ ಹಿಂದಕ್ಕೆ ... ಹಿಂದಕ್ಕೆ... ಪಂಪ
ಕಾಲಕ್ಕೆ ಹೋಗುವಂಥದ್ದು, ಹಾಗೆ ಸಾಗುತ್ತಾ ಪ್ರಸ್ತುತ ಕನ್ನಡ ನಾಡಿ
ಪರಿಕಲ್ಪಿತ ಸತ್ಯಗಳಾದ ಗೋದಾವರಿ – ಕಾವೇರಿ, ಬನವಾಸಿ ಮ
ಕುರ್ಕ್ಯಾಲ ಶಾಸನ ... ಇವುಗಳ ಮೂಲಕ ಗಡಿಗಳನ್ನು ವಿಸ್ತೃತವಾ
ನಿರೂಪಿಸಿಕೊಳ್ಳುವ, ಅಂಥ ನಿರೂಪಣೆಯ ಮೈಲುಗಲ್ಲುಗಳಾದ ಅಲ್ಲಮ
ತೀರ್ಥಾಂಕರ, ಬುದ್ಧ, ಜೀಸಸ್... ಇವುಗಳ ಕಥೆ ವ್ಯಥೆಗಳನ್ನು ಮರೆ
ಹೋಗುವ ಮುನ್ನ ನೆನಪಿಸುವ ಕೆಲಸ ನಾಟಕಕ್ಕೆ ನಿಜವಾಗಿಯೂ ಸವಾ
ನದ್ದಾಗುತ್ತದೆ. ಅದಕ್ಕೆ ಪೂರಕವಾಗಿ ನಾಟಕದ ರಂಗ ಸಜ್ಜಿಕೆ ಮ
ವೇಷ-ಭೂಷಣಗಳು ಒಂದು ಎತ್ನಿಕ್ ಶೈಲಿಯನ್ನು ಬಳಸಿಕೊಂಡಿರುವುದ
ಸಾಂಕೇತಿಕವೇ ಸರಿ.

ಈ ಪ್ರಕ್ರಿಯೆಯಲ್ಲಿ 'ಪಂಪಭಾರತ' ಅನಾವರಣಗೊಳ್ಳುತ್ತಾ ಏಕರೂ
ಮತ್ತು ಸರಳರೇಖಾತ್ಮಕವಾಗಿ ಸಂಘಟಿಸಿರುವ ಕಾಲ ಮತ್ತು ಆ ಕಾಲದೊ
ಅಡಗಿರುವ ರ್‍ಯಾಷನ್ಯಾಲಿಟಿಯನ್ನು ಸಮಸ್ಯೀಕರಿಸುತ್ತಾ ಮುಂದುವರೆಯುತ್ತ
ಆದ್ದರಿಂದಲೇ ಪಾತ್ರಗಳು ಪ್ರಸ್ತುತ ಕನ್ನಡ ಸಂಶೋಧನಾ ಮಾರ್ಗಗಳನ
ಪ್ರಶ್ನಿಸುತ್ತಲೇ ಪೌರಾಣಿಕ ನೆಲೆಗೆ ಸಾಗಿಬಿಡುತ್ತವೆ. ಅದೇ ಸಂದರ್ಭದ
ಆ ಪಾತ್ರಗಳು ಚಾರಿತ್ರಿಕ ಪ್ರಜ್ಞೆಗಳಾಗಿ ವ್ಯಕ್ತಿತ್ವದ ಭಿನ್ನ ಭಿನ್ನ ಆಯಾಮಗಳನ
ವಿವೇಚಿಸಿಕೊಳ್ಳುವುದು ಮತ್ತೊಂದು ಪಾತ್ರದೊಳಗೆ ಕೂಡಿಕೊಂಡು. ಅಂದ
ಪಾತ್ರಗಳ ಸಾವಯವ ಕೇಂದ್ರ ಛಿದ್ರಗೊಳ್ಳುತ್ತಿರುತ್ತವೆ. ಛಿದ್ರಗೊಂಡವೇನೋ
ಎನ್ನುವಾಗ ಇನ್ನೊಂದರ ಮೂಲಕ ಕೂಡಿಕೊಳ್ಳುತ್ತವೆ. ಈ ಮೂಲ
ಪ್ರೇಕ್ಷಕ ಚಾರಿತ್ರಿಕ ಪ್ರಜ್ಞೆಯ ಮೂಲಕ ಪಂಪನ ಜೀವಿತ ಕಾಲಕ್ಕೆ ತೆರ

ಪನ ಅಂತ್ಯ ಹೇಗಾಯಿತು, ಅದರ ಸುತ್ತಲೂ ಇದ್ದಂಥ ಸಂಸ್ಕೃತಿಕ ರಾಜಕಾರಣ, ಇದರೊಡನೆ ತಳುಹಾಕಿಕೊಂಡಿರುವ ವರ್ತಮಾನದ ವಿದ್ಯಮಾನಗಳ ಪ್ರಶ್ನಿಸಲು ನಾಟಕ ಬೆಳಕುಚೆಲ್ಲುತ್ತದೆ.

ಈ ಸಂದರ್ಭದಲ್ಲಿ ಕೆಲವು ತಿಂಗಳ ಹಿಂದೆ ರ್ಜನಗೊಂಡ ಜಯಪ್ರಕಾಶ್ ಮಾವಿನಕುಳಿಯವರ ನಾಟಕ ಂಗಾಂತರ'ವನ್ನು ಇಲ್ಲಿ ನೆನಪಿಸಿಕೊಳ್ಳಲೇಬೇಕು. ನಾಟಕದ ಗೌತಮೆ ಸಿದ್ಧಾರ್ಥನ ದಾಂಪತ್ಯದ ನೈಜತೆಯನ್ನು ೇಷಿಸು ವಂಥದ್ದು. ಆ ನಾಟಕದಲ್ಲಿ ಪಾತ್ರಧಾರಿಗಳಾದವರು ರ್ಕಕ್ಕೆ ಶಿಕ್ಷಣ ನಿಲ್ಲಿಸಿ, ತಮ್ಮ ಅಸ್ತಿತ್ವದ ಹುಡುಕಾಟದಲ್ಲಿರುವ ೀಣ ಯುವತಿಯರು. ಅವರ ಅಸ್ತಿತ್ವದ ಹುಡುಕಾಟವೇ ತಮನ ದಾಂಪತ್ಯದ ಭಿನ್ನ ಮಜಲುಗಳನ್ನು ಶೋಧಿಸುವ ಯೆಯಾ ಗುತ್ತದೆ. ಅಂದರೆ ಈ ನಾಟಕದಲ್ಲಿ ಪಾತ್ರಗಳು ೆ ಗೌತಮೆಯ ದೇಹವಾಗಿ ಸಿದ್ಧಾರ್ಥನ ವ್ಯಕ್ತಿತ್ವವನ್ನು ೇಷಿಸುತ್ತವೋ ಹಾಗೆಯೇ ಪಂಪಭಾರತದ ಪಾತ್ರಗಳೂ ಮತ್ತೊಂದಾಗಿ, ತಮ್ಮನ್ನೇ ಆತ್ಮ ವಿಶ್ಲೇಷಣೆಗೆ ಪಡಿಸುತ್ತವೆ. ಅದರಲ್ಲೂ 'ಕರ್ಣ' ನಮ್ಮ 'ಸೂತ' ಪ್ರಜ್ಞೆಯ ಪಕವಾಗಿ ಮಾರ್ಪಡುತ್ತಾನೆ. ಇಷ್ಟಕ್ಕೆ ಆ ಪ್ರಶ್ನೆ ನಿಲ್ಲವುದಿಲ್ಲ. ು ಮುಂದೆ ಸಾಗಿ ದ್ರೌಪದಿಯ ಮೂಲಕ 'ಸಂಗಾತಿ' ಂಧವನ್ನು ಹುಡುಕುತ್ತದೆ. ಇದು ವರ್ತಮಾನದ ಅಸಂಗತ ಯನ್ನು ಮೀರುವ ಪ್ರಯತ್ನ ವಾಗಿಯೂ ಕಾಣುತ್ತದೆ.

ಇದಿಷ್ಟೆ ಪಂಪಭಾರತ ನಾಟಕ ಎಂದುಬಿಟ್ಟರೆ ಒಂದು ುಖ ಸಂಗತಿಯನ್ನು ಬದಿಗೆ ಸರಿಸಿ ಬಿಟ್ಟಂತಾಗುತ್ತದೆ. ಟಕದ ರೋಚಕ ತಿರುವುಗಳಿರುವುದು ಪಾತ್ರಗಳು ಮಿಥಿಕ್ ಆದಿಮ ಪ್ರಜ್ಞೆಗಳಾಗಿ ಪುರುಷ-ಪುರುಷ ಸಂಬಂಧಗಳನ್ನು ೇಷಿಸುವುದರಲ್ಲಿ. ಕಳೆದೆರಡು ದಶಕಗಳಿಂದೀಚೆಗೆ ಮಹಿಳಾ ವಳಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಒಂದು ಪರಿಕಲ್ಪನಾ ಗಿ ತಂದು ನಿಲ್ಲಿಸಿ, ಅದರ ವಿರುದ್ಧ ತೀವ್ರವಾದ ದಾಳಿ ನಡೆ ವು ಮತ್ತು ನಡೆಸುತ್ತಿವೆ. ಹೀಗಿರುವಲ್ಲಿ ಪುರುಷ ಪ್ರಧಾನ ಸ್ಥೆಯೂ ಸಹ ಏಕರೂಪಿಯಾದುದ್ದಲ್ಲ. ಅದರೊಳಗೂ ನಾಟ ನಿರಂತರವಾಗಿ ಇದ್ದದ್ದೆ. ಈ ಅಂಶದ ಸೂಕ್ಷ್ಮವನ್ನು

ಪಂಪ ಭಾರತ (ನಾಟಕ)

ರಚನೆ: ಡಾ॥ ಕೆ.ವೈ. ನಾರಾಯಣ ಸ್ವಾಮಿ

ನಿರ್ದೇಶನ: ಪ್ರಮೋದ್ ಶಿಗ್ಗಾಂವ್

ನಾಟಕ ಅವಲೋಕನ

ಪುರುಷ ಜೋಡಿ/ಸ್ನೇಹ ಪಾತ್ರಗಳ ಮೂಲಕ ನಾಟಕ ಚರ್ಚಿಸುತ್ತದೆ. ಕರ್ಣ-ದುರ್ಯೋಧನ, ದುರ್ಯೋಧನ-ಅರಿ ಕೇಸರಿ, ಕರ್ಣ-ಪಂಪ, ... ಮುಂತಾದ ಪಾತ್ರಗಳು ತಮ್ಮ ಸಂಬಂಧಗಳ ನೈಜತೆಯನ್ನು ಪರೀಕ್ಷಿಸಿಕೊಳ್ಳುತ್ತವೆ. ಹೀಗೆ ಈ ಪುರುಷ-ಪುರುಷ ಸಂಬಂಧಗಳೇ ಮರು ವ್ಯಾಖ್ಯಾನಕ್ಕೊಳ ಗಾಗಿ ಈಗಾಗಲೇ ಆ ಪಾತ್ರಗಳ ಬಗ್ಗೆ ಇದ್ದ ಸಿದ್ಧ ಮಾದರಿಗಳನ್ನು ಛಿದ್ರೀಕರಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಅವೇ ವಿಜೃಂಭಿಸಿದಂತೆ ಕಾಣತೊಡಗುತ್ತವೆ. ಈ ಸಮಸ್ಯೆಯನ್ನು ಮೀರಲೆಂಬಂತೆ ಹೆಣ್ಣು-ಗಂಡು ಸಂಬಂಧಗಳ ವಿವೇಚನೆಯನ್ನು ಕರ್ಣ-ದ್ರೌಪದಿ, ಭಾನುಮತಿ-ಕರ್ಣ ಪಾತ್ರಗಳು ಮಾಡುತ್ತವಾದರೂ ಇಡೀ ನಾಟಕದಲ್ಲಿ ಆ ಪಾತ್ರಗಳು ಪರದೆಯ ಹಿಂದಕ್ಕೆ ಸರಿದು, ಪುರುಷ ಪಾತ್ರಗಳೇ ಪ್ರಧಾನವಾಗಿ ಬಿಡುತ್ತವೆ. ಈ ಪ್ರಾಧ್ಯಾನ್ಯತೆ ಯನ್ನು ಹತ್ತಿಕ್ಕಲೆಂಬಂತೆ ೭ ನೇ ದೃಶ್ಯದಲ್ಲಿ ದ್ರೌಪದಿಯ ಪಾತ್ರ ಬಹಳ ಶಕ್ತಿಯುತವಾಗಿ ಬಂದು, ಅದ್ಭುತ ತಿರುವನ್ನು ಪಡೆದು ಮಾಯವಾಗಿ ಬಿಡುತ್ತದೆ. ಈ ಪಾತ್ರ ಕರ್ಣನ ಆಹುತಿ ಯನ್ನು ಪಡೆಯುವ ಮೂಲಕ, ಹಿಂದೆ 'ಸ್ವಯಂವರ' ಸಂದರ್ಭ ದಲ್ಲಾದ ಸಂಗಾತಿ ನಿರಾಶೆಯನ್ನು ನೀಗಿಸಿಕೊಳ್ಳುತ್ತದೆಯೇನೋ ಎನ್ನುವ ಭಾವನೆ ನಮ್ಮಲ್ಲಿ ಮೂಡಿಸುತ್ತದೆ. ಇದೊಂದು ದ್ರೌಪದಿಪಾತ್ರವನ್ನು ವಿವರಿಸುವ ಹೊಸ ವ್ಯಾಖ್ಯಾನವೂ ಹೌದು. ಆದರೆ ಚಾರಿತ್ರಿಕವಾಗಿ ಚಿತ್ರಿತವಾಗಿರುವ ಕರ್ಣನ ಪಾತ್ರ ಬಹಳಷ್ಟು ಸುಳಿಗಳಲ್ಲಿ ಸಿಕ್ಕು ಸಿಕ್ಕಾಗಿ ಹೋಗುವಂತೆ, ಈ ನಾಟಕದಲ್ಲೂ ಹೆಣ್ಣಿನ ಪಾತ್ರದ ಮೂಲಕ ಪುನಃ 'ಬಲಿಪಶುತನ'ವನ್ನು ಕರ್ಣನ ಪಾತ್ರ ಅನುಭವಿಸುತ್ತದೆ.

ಆದರೆ, ದ್ರೌಪದಿಯ ಪಾತ್ರ ಮತ್ತೊಂದು ಪ್ರಶ್ನೆಯನ್ನು ಪ್ರೇಕ್ಷಕರೆದುರು ತೆರೆದಿಡುತ್ತದೆ: ನಾಟಕ ದ್ರೌಪದಿಯ ಪಾತ್ರವನ್ನು ವಿಭಿನ್ನವಾಗಿ ಚಿತ್ರಿಸುತ್ತದೆಯಾದರೂ ಅಂತಿಮವಾಗಿ ಆ ಪಾತ್ರ ಪುರುಷ ವ್ಯಾಖ್ಯಾನದಲ್ಲೇ ಪೂರ್ಣತೆಯನ್ನು ಪಡೆದುಕೊಳ್ಳುತ್ತದೆಯೇ? ಬಹುಷಃ ಹೌದು. ಏಕೆಂದರೆ ಈ ಪಾತ್ರ ಒಮ್ಮೆ ಯುದ್ಧ ದೇವತೆಯಾಗಿ ಬಿಂಬಿತವಾದರೆ, ಮತ್ತೊಂದು ಗಳಿಗೆಯಲ್ಲಿ ವರ್ತಮಾನದ ಹೆಣ್ಣಾಗಿ ತನ್ನ ಲೈಂಗಿಕ ಅಸ್ತಿತ್ವವನ್ನು ಎತ್ತಿ ಹಿಡಿಯುವಂತೆ ಕಂಡುಬರುತ್ತದೆ. ಈ ಸಂಗತಿಗೆ ನ್ಯಾಯ ಸಿಗದಾದಾಗ, ಕರ್ಣನ ಆಹುತಿಯನ್ನು ಪಡೆಯುವುದರಲ್ಲಿ ಪಾತ್ರ ಲೀನವಾಗಿಬಿಡುತ್ತದೆ.

ಇದಕ್ಕೆ ಪೂರಕವಾಗಿ ಆ ಪಾತ್ರವೇ ಹೇಳುವ ಈ ಮಾತುಗಳನ್ನು ಗಮನಿಸಿ, "... ಅದರಿಂದಲಾದರೂ ನನ್ನೊಳಗಿನ ಚಿತೆ ಆರುವಂತಾಗಲಿ. ನನ್ನ ಮನದ ಕ್ಷೋಭೆ ಶಮನವಾಗಲಿ. ಮಣ್ಣನ್ನ-ಹೆಣ್ಣನ್ನ ಯಾವ ಗಂಡನೂ ಅರ್ಥ ಮಾಡಿಕೊಳ್ಳಲೇ ಇಲ್ಲ". ಇಲ್ಲಿ ಹೆಣ್ಣಿನ ದೇಹ ಆಧುನಿಕ ರಾಜಕಾ ರಣದ ತಾಣವಾಗಿರುವುದನ್ನು ಛೇಡಿಸುತ್ತದೆ. ಅಂದರೆ ಲಿಂಗೀಯ ನ್ಯಾಯ ಎನ್ನುವುದು ಪ್ರಸ್ತುತ ಮಾರುಕಟ್ಟೆಯ ಸಂದರ್ಭದಲ್ಲಿ ಪುನಃ ಸ್ಥಿರೀಕರಣಕ್ಕೊಳಗಾಗುತ್ತದೆ. ಇದು ನಾಟಕದ ಒಂದು ಆಯಾಮವಾದರೆ, ಅದರ ಮತ್ತೊಂದು ಆಯಾಮ ಐಡೆಂಟಿಟಿ ರಾಜಕಾರಣದತ್ತ ವಾಲುತ್ತದೆ.

ಆದ್ದರಿಂದಲೇ ನಾಟಕವು ಹೆಣ್ಣು-ಗಂಡು ಸಂಬಂಧಗಳ ಸಂಕೀರ್ಣತೆ, ಕರ್ಣ-ದುರ್ಯೋಧನ ಮತ್ತು ಪಂಪ-ಅರಿಕೇಸರಿಯ ಸ್ನೇಹಾಧಿಕಾರ ಸಂಬಂಧಗಳು, ಕೃಷ್ಣ-ಅರ್ಜುನರ ತಂತ್ರಗಾರಿಕೆ ...ಮುಂತಾದುವುಗಳನ್ನು ವಿಶ್ಲೇಷಣೆ ನಡೆಸುತ್ತಾ ಬಹುರೂಪಿ ಆಯಾಮಗಳನ್ನು ಪ್ರೇಕ್ಷಕರೆದುರು ಪರಿಗಣನೆಗೆ ನಿಲ್ಲಿಸುತ್ತದೆ.

ಅಂಥ ಸಂಗತಿಗಳಲ್ಲಿ ಕನ್ನಡ ಸಾಹಿತ್ಯ ಐಡೆಂಟಿಟಿಯ ಭಾಗವಾಗಿರುವ ಪಂಪನನ್ನು ಇಂದಿನ ಮತೀಯ ರಾಜಕಾರಣದ ಹಿನ್ನೆಲೆಯಲ್ಲಿ ಚಿತ್ರಿಸಿರುವುದು ನಾಟಕದ ಪ್ರಮುಖ ಅಂಶವಾಗಿದೆ. ಪಂಪನ ಅಸ್ತಿತ್ವದ ಮೂಲವಾಗಿರುವ ಕುರ್ಕ್ಯಾಲ ಶಾಸನ ಸಾಂಕೇತಿಕ ರೂಪವನ್ನು ನಾಟಕದಲ್ಲಿ ಪಡೆದುಕೊಳ್ಳುತ್ತದೆ. ವರ್ತಮಾನದ ಬಹುರೂಪಿ ಅಸ್ತಿತ್ವಗಳನ್ನು ಏಕೀಕರಿಸುವ, ಅನನ್ಯತೆಗಳನ್ನು ಸ್ತಬ್ಧಗೊಳಿಸುವಂಥ ಮತೀಯ ರಾಜಕಾರಣವನ್ನು ಪಂಪನ ಮೂಲಕ ಪ್ರಶ್ನೆಗೊಳಪಡಿಸುತ್ತದೆ. ಅಂದರೆ ಅದು ಪ್ರಸ್ತುತ ಭಾರತೀಯ 'ಹಿಂದೂ ರಾಷ್ಟ್ರೀಯತೆ'ಯ ಸಾಂಸ್ಕೃತಿಕ ಟೊಳ್ಳುತ್ತನವನ್ನು ಬಯಲಿಗೆಳೆಯುತ್ತದೆಯಲ್ಲದೆ ಅದನ್ನು ಪಂಪನ ಸಂದರ್ಭಕ್ಕೆ ಬಯ್ನರಿಯನ್ನಾಗಿ ನಿಲ್ಲಿಸುತ್ತದೆ. ಈ ಸಂಗತಿ ನಾಟಕದ ತಾತ್ವಿಕ ನಿಲುವಾಗಿಯೇ ಪ್ರೇಕ್ಷರೆದುರು ಸ್ಥಾಪಿತವಾಗುತ್ತದೆ.

ನಾಟಕದ ನಿರೂಪಣಾ ತಂತ್ರವು ಕಾದಂಬರಿಯ ಚೌಕಟ್ಟನ್ನು ಅನುಸರಿಸುತ್ತಾ ಸಾಗುತ್ತದೆ. ಇದು ಅದರ ಸಕಾರಾತ್ಮಕ ಗುಣವಾಗಿ ಭಾಷೆಯನ್ನು ಅದ್ಭುತವಾಗಿ ದುಡಿಸಿಕೊಳ್ಳುತ್ತದೆ. ಆದರಿದು ನಾಟಕೀಯತೆಗೆ ಸವಾಲಾಗಿಯೂ ನಿಂತುಬಿಡುತ್ತದೆ. ಅಂದರೆ ಆಂಗಿಕ ಅಭಿನಯಕ್ಕಿಂತ ಶಾಬ್ದಿಕ ನಿರೂಪಣೆ ಪ್ರೇಕ್ಷಕರ ಕಿವಿಗಳನ್ನು ಎಚ್ಚರದಿಂದಿರುವಂತೆ ಮಾಡುತ್ತದೆ.

ಒಟ್ಟಾರೆಯಾಗಿ, ಆಧುನಿಕೋತ್ತರ ವಿದ್ಯಮಾನಗಳಿಂದ ತಲ್ಲಣಗೊಂಡಂತಹ ಬದುಕು ನಾಟಕದಲ್ಲಿ ಸಮರ್ಥ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಇದನ್ನು ಸಾಂಕೇತಿಸುವಂತೆ ಭೂತದಿಂದ ಹೊರಬರುವ ಮುದುಕ ಪಾತ್ರವು ಮಿಥಿಕ್ ಸ್ಥಿತಿಯಾಗಿ, ಅರೆ ಹುಚ್ಚನಂತೆ ಇಡೀ ವಿದ್ಯಮಾನಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಅಂದರೆ ನಾಟಕವನ್ನು ಮತ್ತೊಮ್ಮೆ ನೋಡಲೇ ಬೇಕೆನ್ನುವ ಭಾವನೆ ಪ್ರೇಕ್ಷಕರಲ್ಲಿ ಮೂಡುತ್ತದೆ. □

ಮೆರಿಟ್ ಮ್ಯಾಜಿಕ್

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ



ಮೆರಿಟ್‌ನ್ನು ಮ್ಯಾಜಿಕ್‌ನಂತೆಯೂ ಉತ್ಪಾದಿಸಬಹುದಲ್ಲವೇ? ಅಥವಾ ನಿರಾಯಾಸವಾಗಿ ಮೆರಿಟ್‌ನ್ನು ಪಡೆದುಕೊಳ್ಳಬಹುದಲ್ಲವೇ? ಭಾರತದಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಗೆ ಭೂನಾದಿಯನ್ನು ಹಾಕಿದಂಥ ಋಗ್ವೇದದಷ್ಟೇ ಹಳತಾದುದು ಈ ಮೆರಿಟ್ ಎನ್ನುವ ಭಾರತೀಯ ಡಿಸ್‌ಕೋರ್ಸ್.

ಸಕಾರಾತ್ಮಕ ಕ್ರಿಯೆ/ಖಾಸಗಿ ವಲಯದಲ್ಲಿ ವೈವಿಧ್ಯತೆ ಎಂಬುದು ದಲಿತರ ಹಕ್ಕು. ಆದರೆ ಇದನ್ನು ಮರೆಮಾಚಿ, ಭಾರತೀಯ ಬಂಡವಾಳ ಪ್ರಜಾಪ್ರಭುತ್ವವನ್ನು ಮೆರಿಟ್ ಹೆಸರಿನಲ್ಲಿ ಭಾರತೀಯ ಕೈಗಾರಿಕೋದ್ಯಮಿಗಳು ಅಪಹರಿಸುತ್ತಿದ್ದಾರೆ.

ಜಾಗತೀಕರಣದ ಈ ಯುಗದಲ್ಲಿ ನಾವು ಮೆರಿಟ್‌ನ್ನು ತಾರ್ಕಿಕವಾಗಿ ಮತ್ತು ಅದರ ನಿಜ ಏನು ಎಂಬುದನ್ನು ಅರಿಯಲೇ ಬೇಕಾದ ಅಗತ್ಯವಿದೆ. ಮೆರಿಟ್ ಎಂದರೆ ಸ್ಪರ್ಧಾತ್ಮಕತೆ ಅಷ್ಟೆ. ಯಾವುದು ಅತ್ಯುತ್ತಮವೋ ಅದು ಬ್ಯುಸಿನೆಸ್‌ನಲ್ಲಿ ಸಾರ್ವಭೌಮವಾಗಿರುತ್ತದೆ. ಇದು ವಾಣಿಜ್ಯದಲ್ಲಾಗಲೀ ಅಥವಾ ಉದ್ಯೋಗದಲ್ಲಾಗಲಿ ನಿಜವಾದುದು. ಆದ್ದರಿಂದ ಈ ಸ್ಪರ್ಧಾತ್ಮಕತೆಯು ಮೆರಿಟ್‌ನ ಬಹು ಮುಖ್ಯ ವಿಚಾರ.

ಹೀಗಿರುವಲ್ಲಿ, ಭಾರತದಲ್ಲಿನ ೫೦೦ ಉನ್ನತ ಕಂಪನಿಗಳ ಚರಿತ್ರೆಯನ್ನು ಮೌಲ್ಯೀಕರಿಸಿ, ಮೆರಿಟ್‌ನ ಸುತ್ತಲಿರುವ ಗೌಪ್ಯವನ್ನು ನಾವೇಕೆ ಅನಾವರಣಗೊಳಿಸಬಾರದು? ಈ ಕಂಪನಿಗಳ ಸಿಇಓಗಳು/ಮಾಲೀಕರು ಸ್ಪರ್ಧೆಯ ಮೂಲಕ ತಮ್ಮ ಸ್ಥಾನಗಳನ್ನು ಪಡೆದುಕೊಂಡರೆ ಅಥವಾ ಪಿತ್ರಾರ್ಜಿತವಾಗಿ ಬಂದುದೇ? ವಿರಳವೆಂಬಂತೆ ಅವರಲ್ಲಿ ಕೆಲವು ಮಂದಿ ತಮ್ಮ ಸಾಮರ್ಥ್ಯದಿಂದಲೇ ಸಾಮ್ರಾಜ್ಯಗಳನ್ನು ಕಟ್ಟಿರಬಹುದಷ್ಟೆ.

ಹಾಗಾದರೆ ಆ ೫೦೦ ಕಂಪನಿಗಳ ಸಿಇಓಗಳ ಪೂರ್ವಜರು ಎಂಥ ಕಸುಬುಗಳನ್ನು ಹೊಂದಿದ್ದರೆಂದು ನಾವು ಪರಿಶೀಲಿಸಿ ನೋಡಬೇಕಲ್ಲವೇ? ಅವರಲ್ಲಿ ಯಾರಾದರೂ ಸತ್ತ ಪ್ರಾಣಿಗಳ ಚರ್ಮ ಸುಲಿದು ಸಮಗಾರ ಅಥವಾ ಚರ್ಮ ವೃತ್ತಿಯಲ್ಲಿ ಇದ್ದರೇ? ತಮ್ಮ ಜೀವನೋಪಾಯಕ್ಕಾಗಿ ಅವರಲ್ಲಿ ಯಾರಾದರೂ ಹಂದಿಗಳನ್ನು ಸಾಕಿದ್ದರೆ? ಅವರಲ್ಲಿ ಯಾರಾದರೂ ಕೃಷಿಯಾಳುಗಳಾಗಿದ್ದು ಜಮೀನ್ದಾರರಿಗೆ ಬಂಧಿತರಾಗಿದ್ದರೇ? ಅಥವಾ ತಮ್ಮ ಜೀವನೋಪಾಯಕ್ಕಾಗಿ ಸಫಾಯಿಕರ್ಮಿಗಳಾಗಿ ಹೇಲನ್ನು ತಲೆಯ ಮೇಲೆ ಹೊತ್ತರೇ? ಅಥವಾ ಅವರಲ್ಲಿ ಯಾರಾದರೂ ಇಲಿ ಹಿಡಿಯುವವರಾಗಿದ್ದರೇ?

ಈ ಪ್ರಶ್ನೆಗಳಿಗೆ ಉತ್ತರ ನಕಾರಾತ್ಮಕವಾಗಿದ್ದಲ್ಲಿ, ಮೆರಿಟ್‌ನ ವಿಚಾರವೂ ಸಹ ನಕಾರಾತ್ಮಕವಾದುದೆ. ವಸ್ತು-ಸಂಗತಿಗಳು ಹೊರಬೀಳುವಂತೆ, ನಮ್ಮ ಅತ್ಯುತ್ತಮ ೧೦೦ ಮಂದಿ ಸಿಇಓಗಳು ತಮ್ಮ ಪಿತ್ರಾರ್ಜಿತ ಕಾರಣದಿಂದಾಗಿ ಆ ಸ್ಥಾನಗಳಲ್ಲಿ ಇದ್ದಾರೆಯೇ ಹೊರತು ಯಾವುದೇ ಸ್ಪರ್ಧೆಯಿಂದಲ್ಲ.

ಅಮೆರಿಕಾ ಎನ್ನುವುದು ಬಿಲಿಯನರ್‌ಗಳ ನಾಡು. ಅಲ್ಲದೆ ಅಮೆರಿಕಾವು ಹೂಡಿಕೆ ದಾರರ ಮತ್ತು ವಿಜ್ಞಾನಿಗಳ ನಾಡಾಗಿದೆ. ಅಮೆರಿಕಾ ಎಂದಾ ಕ್ಷಣ ಅದು ಶಿಕ್ಷಣತಜ್ಞರು ಮತ್ತು ಕಲಾವಿದರ ನೆಲೆಯಾಗಿದೆ. ಹೀಗಿರುವಲ್ಲಿ ಅಲ್ಲಿನ ಅತ್ಯುತ್ತಮ ೫೦೦ ಕಂಪನಿಗಳ ಸಿಇಓಗಳ ಹಿನ್ನೆಲೆಯ... ಗಮನಿಸಿದಲ್ಲಿ, ಅವರಲ್ಲಿ ಹಲ ವಾರು ಮಂದಿ ಚರ್ಮಕೆಲ... ಸಫಾಯಿಕರ್ಮಿ, ಹಂದಿಸಾಕಾಣಿಕೆ ಮತ್ತು ಭೂರಹಿ... ಕೃಷಿಕರಾಗಿದ್ದವರು.

ಈ ಹೊಸನಾಡಿಗೆ ವಲಸೆಗೊಂಡ ಅನೇಕ ಯೂರೋ...ಯನ್ನರು ತಮ್ಮ ಸಮಾಜಗಳಲ್ಲಿ ಉನ್ನತ ಸ್ಥಾನಗಳಿಂದ ಬಂದ...ರೇನೂ ಆಗಿರಲಿಲ್ಲ. ಅವರಲ್ಲಿ ಬಹುಮಂದಿ ಸೇವಕ ವರ್ಗದವ...ಗಿದ್ದು, ಕೆಲವರು ದಿನಗೂಲಿಗಳಾಗಿ, ಅಪರಾಧಿಗಳೆಂದು ಕರೆಯಲ್ಪಟ್ಟ...ರಾಗಿ, ಭಿಕ್ಷುಕರಾಗಿದ್ದವರು.

ಈ ಕೆಳವರ್ಗಗಳಿಗೆ ಸೇರಿದ ಬಹುಸಂಖ್ಯಾತರಿಂದಲೇ ದೊಡ್ಡ... ಬಿಲಿಯನರ್‌ಗಳು, ಶ್ರೇಷ್ಠ ವಿಜ್ಞಾನಿಗಳು, ವಿದ್ವಾಂಸರು, ಕಲಾವಿದರು ಮತ್ತು ಮಹಾತ್ಮರು ಉದಯಿಸಿದ್ದು. ಅವರೆಲ್ಲಾ ಇಂದು ಪ್ರಜ್ಞಾಪೂರ್ವಕವಾಗಿ ಕಪ್ಪು ಜನರನ್ನು ಅಪ್ಪಿಕೊಂಡು ಇಡೀ ಸಮಾಜವನ್ನೇ ಘಾಸಿಗೊಳಿಸುತ್ತಿದ್ದಾರೆ.

ಆದರೆ ಭಾರತದಲ್ಲಿ ಮಾತ್ರ ಅಂಥದ್ದೇನೂ ನಡೆಯದು... ಮೇಲಿನ ೫೦೦ ಮಂದಿ ಸಿಇಓಗಳು ಅನೂಕೂಲಗಳನ್ನು ಹುಟ್ಟಿನಿಂದಲೇ ಪಡೆದವರಾಗಿದ್ದು ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಸೇರಿದವ...ರಾಗಿದ್ದಾರೆ. ಈ ಮೇಲಿನ ೫೦೦ ಮಂದಿ ಸಿಇಓಗಳು ಜಾತಿ ವ್ಯವಸ್ಥೆಯ ಕೂಸುಗಳಾಗಿದ್ದು, ಯಾವುದೇ ರೀತಿಯ ಸ್ಪರ್ಧೆಯನ್ನು ವಿರೋಧಿಸುವವರಾಗಿದ್ದಾರೆ.

ಈ ಎಲ್ಲಾ ಸತ್ಯಗಳ ನಡುವೆಯೂ ಭಾರತೀಯ ಕೈಗಾರಿ...ಕೋದ್ಯಮಿಗಳು ಇನ್ನು ಮೆರಿಟ್ ಬಗ್ಗೆ ಅರಚಿಕೊಳ್ಳುತ್ತಾ, ತಾವು ಮಾತ್ರ ಮೆರಿಟ್‌ಗೆ ಸೇರಿದವರೆಂದು ಭಾವಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಅವರೆಲ್ಲಾ ತಮ್ಮ ಮೆರಿಟ್‌ನೊಡನೆ ಅಪಹಾಸ್ಯಕ್ಕೊಳಗಾಗುತ್ತಿದ್ದಾರೆ. ಪೂನಾ ವಿಶ್ವವಿದ್ಯಾಲಯದಿಂದ ಯಂತ್ರ ವಿಭಾಗದಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ವಿಜಯ್‌ಗಾಯಕ್‌ವಾಡ್, ಇಂದು ಇಂಜಿನಿಯರಿಂಗ್ ಕಂಪನಿಯೊಂದರಲ್ಲಿ ಹಿರಿಯ ಸ್ಥಾನವನ್ನು ಅಲಂಕರಿಸಿದ್ದಾನೆ. ಮೊನ್ನೆ ಆತ ನನಗೆ ಹೀಗೊಂದು ಕಥೆಯನ್ನು ಕಳುಹಿಸಿಕೊಟ್ಟ.

ಈತ ದಲಿತ್ ಡೈರಿಯ ಪ್ರಜ್ಞಾವಂತ ಓದುಗನಾಗಿದ್ದು, ಮುಂಬೈಯಿಲ್ಲಿ ಜೀವಿಸುತ್ತಿದ್ದಾನೆ. ಆತ ಈ ಕೆಳಗಿನ ಕಥೆಯನ್ನು ಇಂಟರ್‌ನೆಟ್‌ನಲ್ಲಿ ನೋಡಿದ್ದು ಅದರಲ್ಲಿ ತನ್ನನ್ನೇ ಕಂಡುಕೊಂಡೆನ್ನೆಂದು ನಮ್ರವಾಗಿ ಒಪ್ಪಿಕೊಳ್ಳುತ್ತಾನೆ.

ಅದು ಹೀಗಿದೆ:

ಜಾಕ್ ಒಬ್ಬ ಜಾಣ ಬ್ಯುಸಿನೆಸ್‌ವ್ಯಕ್ತಿಯಾಗಿದ್ದು, ತನ್ನ ಮಗನೊಂದಿಗೆ ಹೀಗೆ ಮಾತನಾಡುತ್ತಾನೆ:

ಜಾಕ್: ನೀನು ನಾನು ಸೂಚಿಸಿದ ಹುಡುಗಿಯನ್ನು ಮದುವೆಯಾಗಬೇಕು.

ಮಗ: ನನಗೆ ಬೇಕಾದ ಕನ್ಯೆಯನ್ನು ನಾನೇ ಆರಿಸಿಕೊಳ್ಳುತ್ತೇನೆ

ಜಾಕ್: ಆದರೆ ಆ ಹುಡುಗಿ ಬಿಲ್‌ಗೇಟ್ಸ್‌ನ ಮಗಳು

ಮಗ: ಹಾಗಿದ್ದಲ್ಲಿ... ಆಗಬಹುದು.

ತದನಂತರದಲ್ಲಿ ಜಾಕ್ ಬಿಲ್‌ಗೇಟ್ಸ್‌ನನ್ನು ಭೇಟಿಯಾಗುತ್ತಾನೆ.

ಜಾಗತೀಕರಣದ ಈ ಯುಗದಲ್ಲಿ ನಾವು ಮೆರಿಟ್‌ನ್ನು ತಾರ್ಕಿಕವಾಗಿ ಮತ್ತು ಅದರ ನಿಜ ಏನು ಎಂಬುದನ್ನು ಅರಿಯಲೇ ಬೇಕಾದ ಅಗತ್ಯವಿದೆ. ಮೆರಿಟ್ ಎಂದರೆ ಸ್ಪರ್ಧಾತ್ಮಕತೆ ಅಷ್ಟೆ. ಯಾವುದು ಅತ್ಯುತ್ತಮವೋ ಅದು ಬ್ಯುಸಿನೆಸ್‌ನಲ್ಲಿ ಸಾರ್ವಭೌಮವಾಗಿರುತ್ತದೆ. ಇದು ವಾಣಿಜ್ಯದಲ್ಲಾಗಲೀ ಅಥವಾ ಉದ್ಯೋಗದಲ್ಲಾಗಲಿ ನಿಜವಾದುದು. ಆದ್ದರಿಂದ ಈ ಸ್ಪರ್ಧಾತ್ಮಕತೆಯು ಮೆರಿಟ್‌ನ ಬಹು ಮುಖ್ಯ ವಿಚಾರ. ಹೀಗಿರುವಲ್ಲಿ, ಭಾರತದಲ್ಲಿನ ೫೦೦ ಉನ್ನತ ಕಂಪನಿಗಳ ಚರಿತ್ರೆಯನ್ನು ಮೌಲ್ಯೀಕರಿಸಿ, ಮೆರಿಟ್‌ನ ಸುತ್ತ ಲಿರುವ ಗೌಪ್ಯವನ್ನು ನಾವೇಕೆ ಅನಾವರಣ ಗೊಳಿಸಬಾರದು? ಈ ಕಂಪನಿಗಳ ಸಿಇಓಗಳು/ಮಾಲೀಕರು ಸ್ಪರ್ಧೆಯ ಮೂಲಕ ತಮ್ಮ ಸ್ಥಾನಗಳನ್ನು ಪಡೆದುಕೊಂಡರೆ ಅಥವಾ ಪಿತ್ರಾರ್ಜಿತವಾಗಿ ಬಂದುದೇ?

ಅನು: ಡೊಮಿನಿಕ್ ಡಿ

ಜಾಕ್: ನಿನ್ನ ಮಗಳಿಗೆ ಗಂಡನಾಗ್ಬುವವನು ನನ್ನ ...ದ್ದಾನೆ.

ಬಿಲ್‌ಗೇಟ್ಸ್: ಆದರೆ ನನ್ನ ಮಗಳು ಮದುವೆಯಾ ಇನ್ನೂ ಚಿಕ್ಕವಳಾಗಿದ್ದಾಳೆ.

ಜಾಕ್: ಆದರೆ ಆ ಯುವಕ ವರ್ಲ್ಡ್ ಬ್ಯಾಂಕ್‌ನ ...ಧ್ಯಕ್ಷನಾಗಿದ್ದಾನೆ.

ಬಿಲ್‌ಗೇಟ್ಸ್: ಹಾ..ಹ.. ಹಾಗಿದ್ದಲ್ಲಿ ಆಗಬಹುದು.

ಅಂತಿಮವಾಗಿ ಜಾಕ್ ವರ್ಲ್ಡ್‌ಬ್ಯಾಂಕ್‌ನ ಅಧ್ಯ... ಭೇಟಿಯಾಗಲು ಹೋಗುತ್ತಾನೆ.

ಜಾಕ್: ವರ್ಲ್ಡ್‌ಬ್ಯಾಂಕ್‌ನ ಉಪಾಧ್ಯಕ್ಷ ಸ್ಥಾನವನ್ನು ...ಕರಿಸಲು ನನ್ನ ಬಳಿ ಒಬ್ಬ ಯುವಕನಿದ್ದಾನೆ.

ವರ್ಲ್ಡ್‌ಬ್ಯಾಂಕ್‌ನ ಅಧ್ಯಕ್ಷ: ಆದರೆ ಈಗಾಗಲೇ ನನ್ನ ...ಅಗತ್ಯಕ್ಕಿಂತಲೂ ಹೆಚ್ಚು ಮಂದಿ ಉಪಾಧ್ಯಕ್ಷರಿದ್ದಾರೆ

ಜಾಕ್: ಆದರೆ ಈ ಯುವಕ ಬಿಲ್‌ಗೇಟ್ಸ್‌ನ ಅಳಿಯ ...ದ್ದಾನೆ.

ವರ್ಲ್ಡ್‌ಬ್ಯಾಂಕ್‌ನ ಅಧ್ಯಕ್ಷ: ಹಾಂ... ಹಾಗಾದರೆ ಆಗ ...ದು.

ನಾಲಾಯಕ್ಕಾದ ದಲಿತ

ರಾಜಸ್ಥಾನದಲ್ಲಿ ದಲಿತ ಕುಟುಂಬವೊಂದು ತನ್ನ ...ಗೆ ಅದ್ದೂರಿಯಾಗಿ ಮದುವೆ ಮಾಡಲು ಹಣವನ್ನು ...ಟ್ಟಿದ್ದರು. ಈ ಜೂನ್‌ನಲ್ಲಿ ಮದುವೆಯ ದಿಬ್ಬಣವು ...ಮಗಳ ಹಳ್ಳಿಯನ್ನು ಸಮೀಪಿಸಿದಾಕ್ಷಣ, ಸುದ್ದಿ ...ದು ಕೂಡಲೇ ಹರಡಿತು–ಮದುಮಗಳು ಕುದುರೆ ...ಯ ಮೂಲಕ ಎದುರುಗೊಳ್ಳುತ್ತಾಳೆಂದು. ...ದೇ ನಾಗರಿಕ ಸಮಾಜದಲ್ಲಿ ಅದನ್ನು ಸಂತೋಷದ ...ಯಾಗಿ–ನಮ್ಮ **ಅಸ್ಪೃಶ್ಯ** ನಾಗರಿಕರೂ ಮುಂದು ...ದ್ದಾರೆ ಎಂದು ಖುಷಿ ಪಡಬೇಕಿತ್ತು. ಆದರೆ ಹಳ್ಳಿಯ ದಲಿತೇತರರು ಆ ಸುದ್ದಿಯಿಂದ ಆಘಾತಗೊಂಡ ... ಆ ಸುದ್ದಿಗೆ ಮತ್ತಷ್ಟು ಎಣ್ಣೆಸುರಿಯಲಾರಂಬಿಸಿ ಅವರೆಲ್ಲಾ ಒಂದುಗೂಡಿ ಮದುವೆ ದಿಬ್ಬಣದ ಆಕ್ರಮಣ ನಡೆಸಿದರು.

ಜೂನ್ ೧೯ರಂದು ದೆಹಲಿಯಲ್ಲೂ ಇಂಥದ್ದೇ ... ನಡೆದಿತ್ತು. ರಾಷ್ಟ್ರೀಯ ಶಿಕ್ಷಣ ಮತ್ತು ಸಂಶೋ... ತರಬೇತಿ ಕೇಂದ್ರವು ಹಿಂದಿ ಲೆಕ್ಚರರ್‌ಹುದ್ದೆಗೆ ...ರಾತನ್ನು ಹೊರಡಿಸಿತ್ತು. ಅದು ದಲಿತರಿಗೆ ಮೀಸ...ತ್ತು. ೨೦ ಮಂದಿ ದಲಿತರು ಅರ್ಜಿಹಾಕಿದ್ದರು. ಅವ... ೧೭ ಮಂದಿ ಸಂದರ್ಶನಕ್ಕೆ ಬಂದಿದ್ದರು. ಅವರಲ್ಲಿ ...ರು ಪಿಎಚ್‌ಡಿ ಮತ್ತು ಎಂಫಿಲ್‌ಗಳನ್ನು ಹೊಂದಿ... ಅಲ್ಲದೆ ಅವರೆಲ್ಲಾ ನೆಟ್ ಅಥವಾ ತತ್ಸಮಾನ ಅರ್ಹ...ತೆಯನ್ನು ಹೊಂದಿದ್ದರು. ಅವರಲ್ಲಿ ಅರ್ಧಕ್ಕಿಂತಲು ಹೆಚ್ಚು ... ಜೆಎನ್‌ಯುನಲ್ಲಿ ಓದಿದ್ದವರು. ಅವರೆಲ್ಲರನ್ನು ...ರ್ಶನಕ್ಕೆ ಒಳಪಡಿಸಲಾಯಿತು. ಯಾವುದೇ ನಾಗರೀಕ ...ಜಕ್ಕೆ ಇದು ಹೆಮ್ಮೆಯ ವಿಷಯವೇ ಸರಿ–ಏಕೆಂದರೆ ... ೭೦ರಷ್ಟು ದಲಿತರು ಪಿಯು ಓದುವ ವೇಳೆಗೆ ... ಬಿಟ್ಟುಬಿಡುತ್ತಿರುವಾಗ, ಒಂದು ಹುದ್ದೆಗೆ ೧೭ ... ಅರ್ಹರಾಗಿ ಸಂದರ್ಶನಕ್ಕೆ ಹಾಜರಿದ್ದದ್ದು ಪವಾ... ಸರಿ. ಆದರೆ ಅಲ್ಲಿ ಸಂಗತಿ ಬೇರೆಯೇ ಆಗಿತ್ತು. ...ಸಂದರ್ಶನಾ ಮಂಡಲಿ ಆ ದಿನದಾಮತ್ಯದಲ್ಲಿ ...ಷಿಸಿದ್ದೇನೆಂದರೆ ಅವರ್‍ಯಾರೂ ಅರ್ಹರಲ್ಲವೆಂದು. ರಾಷ್ಟ್ರೀಯ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ...ವು (ಎನ್‌ಸಿಇಆರ್‌ಟಿ) ಅರ್ಜುನ್‌ಸಿಂಗ್‌ರಿಂದ ...ನಾದ ಒಬ್ಬ ಲಿಬರಲ್ ವ್ಯಕ್ತಿಯ ನಿರ್ವಹಣೆಯ... ಆದರೀತ ಭಾರತೀಯ ಪ್ರಜಾಪ್ರಭುತ್ವಕ್ಕೆ ಕಳಂಕವೇ

ರಾಷ್ಟ್ರೀಯ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರವು ಹಿಂದಿ ಲೆಕ್ಚರರ್ ಹುದ್ದೆಗೆ ಜಾಹೀರಾತನ್ನು ಹೊರಡಿಸಿತ್ತು. ಅದು ದಲಿತರಿಗೆ ಮೀಸಲಾಗಿತ್ತು. ೨೦ ಮಂದಿ ದಲಿತರು ಅರ್ಜಿಹಾಕಿದ್ದರು. ಅವರಲ್ಲಿ ೧೭ ಮಂದಿ ಸಂದರ್ಶನಕ್ಕೆ ಬಂದಿದ್ದರು. ಅವರಲ್ಲಿ ಅನೇಕರು ಪಿಎಚ್‌ಡಿ ಮತ್ತು ಎಂಫಿಲ್‌ಗಳನ್ನು ಹೊಂದಿದ್ದರು. ಅಲ್ಲದೆ ಅವರೆಲ್ಲಾ ನೆಟ್ ಅಥವಾ ತತ್ಸಮಾನ ಅರ್ಹತೆಯನ್ನು ಹೊಂದಿದ್ದರು. ಅವರಲ್ಲಿ ಅರ್ಧಕ್ಕಿಂತಲು ಹೆಚ್ಚು ಮಂದಿ ಜೆಎನ್‌ಯುನಲ್ಲಿ ಓದಿದ್ದವರು. ಅವರೆಲ್ಲರನ್ನು ಸಂದರ್ಶನಕ್ಕೆ ಒಳಪಡಿಸಲಾಯಿತು. ಯಾವುದೇ ನಾಗರೀಕ ಸಮಾಜಕ್ಕೆ ಇದು ಹೆಮ್ಮೆಯ ವಿಷಯವೇ ಸರಿ–ಏಕೆಂದರೆ ಶೇಕಡ ೭೦ರಷ್ಟು ದಲಿತರು ಪಿಯು ಓದುವ ವೇಳೆಗೆ ಶಾಲೆ ಬಿಟ್ಟುಬಿಡುತ್ತಿರುವಾಗ, ಒಂದು ಹುದ್ದೆಗೆ ೧೭ ಮಂದಿ ಅರ್ಹರಾಗಿ ಸಂದರ್ಶನಕ್ಕೆ ಹಾಜರಿದ್ದದ್ದು ಪವಾಡವೇ ಸರಿ. ಆದರೆ ಅಲ್ಲಿ ಸಂಗತಿ ಬೇರೆಯೇ ಆಗಿತ್ತು. ಸಂದರ್ಶಕ ಮಂಡಲಿ ಆ ದಿನದಾಂತ್ಯದಲ್ಲಿ ಘೋಷಿಸಿದ್ದೇನೆಂದರೆ ಅವರ್‍ಯಾರೂ ಅರ್ಹರಲ್ಲವೆಂದು. ರಾಷ್ಟ್ರೀಯ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರವು(ಎನ್‌ಸಿಇಆರ್‌ಟಿ) ಅರ್ಜುನ್‌ಸಿಂಗ್‌ರಿಂದ ನೇಮಿತನಾದ ಒಬ್ಬ ಲಿಬರಲ್ ವ್ಯಕ್ತಿಯ ನಿರ್ವಹಣೆಯಲ್ಲಿತ್ತು. ಆದರೀತ ಭಾರತೀಯ ಪ್ರಜಾಪ್ರಭುತ್ವಕ್ಕೆ ಕಳಂಕವೇ ಆಗಿದ್ದ. ಈತ ೧೯೯೦ರ ಚುನಾವಣೆಯಲ್ಲಿ ಬಿಎಸ್‌ಪಿ ಅಭ್ಯರ್ಥಿ ಎದುರು ಸೋಲನ್ನು ಅನುಭವಿಸಿದ್ದು, ಅಂದಿನಿಂದಲೇ ಆತ ಹುಚ್ಚುಹಿಡಿದವನಾಗಿ ದಲಿತರ ವಿರುದ್ಧ ಸೇಡನ್ನು ಕಾರಿಕೊಳ್ಳುತ್ತಿದ್ದ. ಸಂದರ್ಶಕ ಮಂಡಲಿಯಲ್ಲಿ ದಲಿತರ್‍ಯಾರು ಇರಲಿಲ್ಲ.

ಆಗಿದ್ದ. ಈತ ೧೯೯೦ರ ಚುನಾವಣೆಯಲ್ಲಿ ಬಿಎಸ್‌ಪಿ ಅಭ್ಯರ್ಥಿ ಎದುರು ಸೋಲನ್ನು ಅನುಭವಿಸಿದ್ದು, ಅಂದಿನಿಂದಲೇ ಆತ ಹುಚ್ಚುಹಿಡಿದವನಾಗಿ ದಲಿತರ ವಿರುದ್ಧ ಸೇಡನ್ನು ಕಾರಿಕೊಳ್ಳುತ್ತಿದ್ದ. ಸಂದರ್ಶನಾ ಮಂಡಲಿಯಲ್ಲಿ ಒಬ್ಬ ಸಿಪಿಎಂ, ಮತ್ತೊಬ್ಬರು ಸಿಪಿಐ ಬ್ರಾಂಡ್ನಿಂದ, ಮೂರನೆಯವರು ಪ್ರತಿಗಾಮಿ ಕಾಂಗ್ರೆಸ್/ಬಿಜೆಪಿಯ ಪಕ್ಷದವರಾಗಿದ್ದರು. ಅಲ್ಲಿ ದಲಿತರ್‍ಯಾರು ಇರಲಿಲ್ಲ.

ಈ ಎರಡು ಘಟನೆಗಳು ಭಾರತೀಯ ವಾಸ್ತವವನ್ನು ಎತ್ತಿ ತೋರುತ್ತವೆ. ಕುದುರೆ ಸವಾರಿ ಮಾಡಲು ಹಣ ಬೇಕೆ ಹೊರೆತು ಬೇರೇನೂ ಅಲ್ಲ. ಈ ಮದುವೆ ಸಮಾರಂಭಗಳಿಗಾಗಿ ತರಬೇತುಗೊಂಡ ಕುದುರೆಗಳನ್ನು ಒಬ್ಬ ಅಂಗವಿಕಲ ವ್ಯಕ್ತಿಯೂ ಸಹ ಸುಲಭವಾಗಿ ಸವಾರಿ ಆಡಬಹುದು.

ಮಾರುಕಟ್ಟೆಯ ಆರ್ಥಿಕ ದೃಷ್ಟಿಯಿಂದಲೂ ಸಹ, ರಾಜಸ್ಥಾನದ ದಲಿತನೊಬ್ಬ ತಾನು ದುಡಿದ ಹಣವನ್ನು ವ್ಯಯಿಸಿ ಕುದುರೆಯನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಾನೆ. ಆದರೆ ಆ ನಿದ್ರಾವಸ್ಥೆಯಲ್ಲಿರುವ ಗ್ರಾಮದಲ್ಲಿ ಚಲಾವಣೆಯಲ್ಲಿರುವುದು ಪೂರ್ವಗ್ರಹ ಪೀಡಿತ ಮನೋಭಾವ ತಾನೆ? ಹಾಗೆಯೇ ೧೭ ಮಂದಿ ಅರ್ಹರಾದ ದಲಿತರನ್ನು ಎನ್‌ಸಿಇಆರ್‌ಟಿ ಸೂಕ್ತರಲ್ಲ ಎನ್ನುವುದು ಭಿನ್ನವೇನೂ ಅಲ್ಲವಲ್ಲ?

ಈ ಎನ್‌ಸಿಇಆರ್‌ಟಿನ ಇತ್ತೀಚಿನ ಘಟನೆ ಭಾರತಾದ್ಯಂತ ಇರುವ ವಿದ್ಯಮಾನಕ್ಕೆ ಸಾಕ್ಷಿಯಾಗಿದೆ. ದೆಹಲಿಯಲ್ಲಿರುವ ಎನ್‌ಸಿಇಆರ್‌ಟಿನಲ್ಲೂ ಇಂಥದೊಂದು ಸಂಭವಿಸುತ್ತದೆಯಾದರೆ ದೇಶದ ಬೇರೆಡೆ ಏನೂ ನಡೆಯಬಹುದಲ್ಲವೇ? ಅಂದರೆ ಎನ್‌ಸಿಇಆರ್‌ಟಿಯ ಆಡಳಿತ ಮಂಡಲಿ ಮತ್ತು ಅಲ್ಲಿನ ಪ್ರಾಧ್ಯಾಪಕರು ಏನೂ ಗೊತ್ತಿಲ್ಲದಂತೆ ತಪ್ಪಿಸಿಕೊಳ್ಳುತ್ತಾರಾದರೆ, ದಲಿತರ ಹಕ್ಕುಗಳನ್ನು ಅಷ್ಟೇ ಸುಲಭವಾಗಿ ಹತ್ತಿಕ್ಕಬಹುದಲ್ಲವೇ?

ಯುಪಿಎ ಸರ್ಕಾರದ ಅಧಿಕೃತ ವರದಿಯ ಮೇರೆಗೆ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ ವಿಶೇಷ ಕಾರ್ಯಕ್ರಮವೊಂದು ಚಾಲ್ತಿಯಲ್ಲಿದೆಯಂತೆ. ನನ್ನ ಪತ್ರಕರ್ತ ಸ್ನೇಹಿತನೊಬ್ಬ ಎಲ್ಲಾ ಸಚಿವಾಲಯಗಳಿಗೆ ಪ್ರಧಾನ ಮಂತ್ರಿಗಳಿಂದ ರವಾನೆಯಾದ ಪತ್ರದ ಪ್ರತಿಯೊಂದನ್ನು ನನಗೆ ನೀಡಿದ. ಆ ಪತ್ರವು ದಿನಾಂಕ ೯–೯೨೦೦೫ರಂದು ಬರೆದಿದ್ದಾಗಿದ್ದು, ಅದರ ಸಾರಾಂಶ ಹೀಗಿದೆ, "ಒಂದು ವರ್ಷದ ಹಿಂದೆ ಆರಂಭವಾದ ಈ ವಿಶೇಷ ಯೋಜನೆಯ ಮೇರೆಗೆ ಮೇ. ೧೬, ೨೦೦೬ರೊಳಗೆ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಮಾಡಬೇಕು" ಅದರ ಪ್ರಕಾರ ಪ್ರಗತಿಯೇನೆಂದು ಪ್ರತಿಯೊಂದು ಸಚಿವಾಲಯವನ್ನು ಪರಿಶೀಲಿಸಿದರೆ ಗುರಿ ಇನ್ನೂ ತೆವಳುತ್ತಿದೆ.

ಗುರಿ ಮುಟ್ಟುವುದರ ಬಗ್ಗೆ ಪ್ರಧಾನಿಯವರು ಹೇಳುವುದು ಹೀಗೆ, "ಡಿಸೆಂಬರ್ ೨೦೦೫ರೊಳಗೆ ಎಸ್‌ಸಿ/ಎಸ್‌ಟಿಗಳಿಗೆ ಮೀಸಲಿಟ್ಟ ಶೇ.೮೦ರಷ್ಟನ್ನು ತುಂಬಿಸಲು ಸರ್ಕಾರ ಬದ್ಧವಾಗಿದೆ ಎಂದು ನಾನು ಒತ್ತಿ ಹೇಳುತ್ತೇನೆ. ಅಲ್ಲದೆ ಡಿಸೆಂಬರ್ ೨೦೦೬ರೊಳಗೆ ಶೇ.೧೦೦ರಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ನೇಮಕಾತಿ ಅಥವಾ ಪ್ರಮೋಷನ್ ಮೂಲಕ ತುಂಬುವ ಗುರಿಯನ್ನು ಸಮರ್ಪಕವಾಗಿ ಸಾಧಿಸಲೇಬೇಕು."

ದಿನಾಂಕ ೯-೯-೨೦೦೫ರಂದು ಬರೆದ ಪತ್ರದ ನಂತರ ಏನನ್ನು ಮಾಡಲಾಗಿದೆ ಎನ್ನುವುದಕ್ಕೆ ಎನ್‌ಸಿಇಆರ್‌ಟಿ ಮಾದರಿಯಾಗಿ ಈ ವಿಶೇಷ ನೇಮಕಾತಿ ಯೋಜನೆಯನ್ನು ಅಣಕಿಸುತ್ತಿದೆಯಾದ್ದರಿಂದ ಅದರ ವಿರುದ್ಧ ತೆಗೆದುಕೊಳ್ಳುವ ಕ್ರಮವೇನು?

ಇದೇ ವಿಶೇಷ ನೇಮಕಾತಿ ಯೋಜನೆ ೧೯೮೯ರಲ್ಲೇ ರಾಜೀವ್ ಗಾಂಧಿಯಿಂದ ಉದ್ಘಾಟನೆಗೊಂಡಿತ್ತು.

ದಿನಾಲು ಸರ್ಕಾರಿ ವಿಭಾಗಗಳು ಜಾಹೀರಾತನ್ನು ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದವು. ಆ ಮೂಲಕ ಸಾವಿರಾರು ಮಂದಿ ದಲಿತರು/ಆದಿವಾಸಿಗಳು ಕೇಂದ್ರ ಸರ್ಕಾರ/ಸಾರ್ವಜನಿಕ ವಲಯದಲ್ಲಿ ನೌಕರಿಯನ್ನು ಪಡೆದರು.

ಇದು ವಿಶೇಷ ನೇಮಕಾತಿ ಯೋಜನೆಯೇ? ಪ್ರಧಾನಿಯವರ ಈ ವಿಶೇಷ ಪ್ರಕಟಣೆಯನ್ನು ಹೊರತು ಪಡಿಸಿದಲ್ಲಿ ಯಾವ ದಲಿತ ಅಭ್ಯರ್ಥಿಯೂ ಅಂತಹ ಸುದ್ದಿಯನ್ನು ಕೇಳಿದ್ದಾನೆಯೇ?

ಸಾವಿರಾರು ಮಂದಿ ದಲಿತ/ಆದಿವಾಸಿಗಳು ಪದವಿಗಳೊಂದಿಗೆ ಅಲೆದಾಡುತ್ತಿರುವಾಗ ಸರ್ಕಾರ ಮಾತ್ರ ಅವರು ನಾಲಾಯಕ್ಕೆಂದು ಪರಿಗಣಿಸುತ್ತಿದೆ.

ಸಮಸ್ಯೆ ಸರಳವಾಗಿದೆ–ಈ ಕೆನೆ ಪದರಿನ ಒಬಿಸಿಗಳು ಒಂದು ಸಾಮಾಜ ಆಳುವ ವರ್ಗವಾಗಿ ಪರಿಣಮಿಸಿದರೂ ಸಹ ಅವರು ಅದಕ್ಕೆ ಅಗತ್ಯವಾದ ಸಾಂಸ್ಕೃತಿಕ ಕುಲೀನವರ್ಗವೊಂದನ್ನು ತಯಾರಿಸಿಲ್ಲ. ಈ ವಿಶೇಷವಾದ ವಿದ್ಯಮಾನವು ಅಷ್ಟೇ ವಿಶೇಷವಾದ ಸಮಸ್ಯೆಯನ್ನು ತಂದೊಡ್ಡಿದೆ–ಈ ಕೆನೆಪದರಿನ ಒಬಿಸಿಗಳೊಳಗೆ ಒಂದು ರಚನಾತ್ಮಕ ಬಿಕ್ಕಟ್ಟನ್ನು ಸೃಷ್ಟಿಸಿದೆ. ಇದನ್ನು ನಿಭಾಯಿಸುವ ಯಾವುದೇ ಸಕಾರಾತ್ಮಕ ಪ್ರಯತ್ನ ತನ್ನೊಳಗೇ ಕಾಣಿಸಿಕೊಳ್ಳದಿದ್ದರೆ, ಅವರು ದೇಶಕ್ಕೆ ಮತ್ತು ದಲಿತ/ಆದಿವಾಸಿಗಳಿಗೆ ಹಾಗೂ ಒಬಿಸಿಗಳಿಗೆ ಮುಜುಗರವನ್ನುಂಟು ಮಾಡುವವರಾಗಿಬಿಡುತ್ತಾರೆ.

ಈ ಆಂತರಿಕ ರಚನಾತ್ಮಕ ಬಿಕ್ಕಟ್ಟು ಕೆನೆಪದರಿನ

ಆಂತರಿಕ ರಚನಾತ್ಮಕ ಬಿಕ್ಕಟ್ಟು ಕೆನೆ ಪದರಿನ ಒಬಿಸಿಗಳಿಗೆ ಚಲನಶೀಲತೆಯನ್ನು ಕಮ್ಮಿಯಾಗಿ ದುರಂತಗಳ ಸರಮಾಲೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಅವರದ್ದೇ ಆದ ಸಾಂಸ್ಕೃತಿಕ ಕುಲೀನ ವರ್ಗದ ಗೈರುಹಾಜರಿಯಲ್ಲಿ ಅವರು ಶಕ್ತಿಹೀನರಾಗಿ, ವಂಚಿತ ಸ್ಥಿತಿಗೆ ಒಳಗಾಗುತ್ತಾರೆ. ಹಾಗಾಗಿ ಈ ಹೊಸ ಸಾಮಾಜಿಕ ಆಳುವ ವರ್ಗಕ್ಕೆ ಸಾಮಾಜಿಕ ಅಂತಃಶಕ್ತಿ ಇಲ್ಲವಾಗಿ ತೇಜೋವಧೆಗೆ ಸಿಲುಕಿಕೊಳ್ಳತ್ತದೆ. ಆದ್ದರಿಂದಲೇ ಈ ಸಮುದಾಯ ತನ್ನ ಸಾಮಾಜಿಕ ಮತ್ತು ರಾಜಕೀಯ ನಡಾವಳಿಯಲ್ಲಿ ಅತಾರ್ಕಿಕವಾಗಿ ದಲಿತರ ವಿರುದ್ಧ ಹಿಂಸಾತ್ಮಕವಾಗಿ ವರ್ತಿಸುತ್ತಿದೆ. ಯಾವುದೇ ರಾಜ್ಯದ ರಾಜಧಾನಿಗಳಲ್ಲಿ ಸುಮಾರು ಒಂದು ಡಜನ್ ದ್ವಿಜ ಬುದ್ಧಿಜೀವಿಗಳಿದ್ದು, ಅಂಥ ಅನೇಕರು ದೆಹಲಿಯಲ್ಲಿದ್ದು ಮಂಡಲ್ I, ಮತ್ತು ಮಂಡಲ್ II ಕ್ಕೆ ಸಮ್ಮತಿ ಸೂಚಿಸುಸವವರಾಗಿದ್ದಾರೆ. ಹೀಗಿರುವಲ್ಲಿ ದೇಶದ ಉದ್ದಗಲಕ್ಕೂ ಈ ಕೆನೆಪದರಿನ ಒಬಿಸಿಗಳಲ್ಲಿ ಒಬ್ಬ ಬುದ್ಧಿಜೀವಿಯೂ ಮಂಡಲ್ ವೀಸಲಾತಿಯನ್ನು ಎತ್ತಿಹಿಡಿದಿರುವ ಈ ದ್ವಿಜರನ್ನು ಪ್ರಶ್ನಿಸಲಾಗುತ್ತಿಲ್ಲ.

ಕೆನೆಪದರಿನ ಒಬಿಸಿಗಳು?

ಒಬಿಸಿಗಳಿಗೆ ಚಲನಶೀಲತೆಯನ್ನು ಕಮ್ಮಿಯಾಗಿ ದುರಂತಗಳ ಸರಮಾಲೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಅವರದ್ದೇ ಆದ ಸಾಂಸ್ಕೃತಿಕ ಕುಲೀನ ವರ್ಗದ ಗೈರುಹಾಜರಿಯಲ್ಲಿ ಅವರು ಶಕ್ತಿಹೀನರಾಗಿ, ವಂಚಿತ ಸ್ಥಿತಿಗೆ ಒಳಗಾಗುತ್ತಾರೆ. ಹಾಗಾಗಿ ಈ ಹೊಸ ಸಾಮಾಜಿಕ ಆಳುವ ವರ್ಗಕ್ಕೆ ಸಾಮಾಜಿಕ ಅಂತಃಶಕ್ತಿ ಇಲ್ಲವಾಗಿ ತೇಜೋವಧೆಗೆ ಸಿಲುಕಿಕೊಳ್ಳತ್ತದೆ. ಆದ್ದರಿಂದಲೇ ಈ ಸಮುದಾಯ ತನ್ನ ಸಾಮಾಜಿಕ ಮತ್ತು ರಾಜಕೀಯ ನಡಾವಳಿಯಲ್ಲಿ ಅತಾರ್ಕಿವಾಗಿ ದಲಿತರ ವಿರುದ್ಧ ಹಿಂಸಾತ್ಮಕವಾಗಿ ವರ್ತಿಸುತ್ತಿದೆ. ಯಾವುದೇ ರಾಜ್ಯದ ರಾಜಧಾನಿಗಳಲ್ಲಿ ಸುಮಾರು ಒಂದು ಡಜನ್ ದ್ವಿಜ ಬುದ್ಧಿಜೀವಿಗಳಿದ್ದು, ಅಂಥ ಅನೇಕರು ದೆಹಲಿಯಲ್ಲಿದ್ದು ಮಂಡಲ್–I, ಮತ್ತು ಮಂಡಲ್–II ಕ್ಕೆ ಸಮ್ಮತಿಸೂಚಿಸುಸವವರಾಗಿದ್ದಾರೆ. ಹೀಗಿರುವಲ್ಲಿ ದೇಶದ ಉದ್ದಗಲಕ್ಕೂ ಈ ಕೆನೆಪದರಿನ ಒಬಿಸಿಗಳಲ್ಲಿ ಒಬ್ಬ ಬುದ್ಧಿಜೀವಿಯೂ ಮಂಡಲ್ ವೀಸಲಾತಿಯನ್ನು ಎತ್ತಿಹಿಡಿದಿರುವ ಈ ದ್ವಿಜರನ್ನು ಪ್ರಶ್ನಿಸಲಾಗುತ್ತಿಲ್ಲ.

ಇದು ಮತ್ತೊಂದು ಮೂಲಭೂತ ಪ್ರಶ್ನೆಯನ್ನು ನಮ್ಮೆದುರು ನಿಲ್ಲಿಸುತ್ತದೆ: ದೇಶದ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಯಾಕೆ ಈ ಕೆನೆಪದರಿನ ಒಬಿಸಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ಇಲ್ಲವಾಗಿದೆ. ಅಂದರೆ ಅವರನ್ನು ಸಾಮಾಜಿಕವಾಗಿ ಹೊರಗುಳಿಯುವಂತೆ ಮಾಡಲಾಗಿದೆಯಾ? ಅವರು ಸಂಪನ್ಮೂಲ ಕೊರತೆಯನ್ನು ಅನುಭವಿಸುತ್ತಿದ್ದಾರೆಯೇ? ಅವರಿಗೆ ಉತ್ತಮ ಶಾಲಾವಕಾಶ ದೊರೆಯದಂತೆ ಮಾಡಲಾಗಿದೆಯಾ? ಯಾವ ದಡ್ಡನೂ ಸಹ ಈ ಪ್ರಶ್ನೆಗಳಿಗೆ ನಕಾರಾತ್ಮಕವಾಗಿ ಉತ್ತರಿಸಬಲ್ಲ.

ಅದರ ಪರಿಣಾಮಗಳತ್ತ ನೋಡಿ. ಇತ್ತೀಚಿನ ಮಂಡಲ್– II ರ ಹೋರಾಟದಲ್ಲಿ ಭಾರತದ ಎರಡು ಮುಖ್ಯ ಸುದ್ದಿ ಜಾಲಾಗಳಾದ ಸಿಎನ್‌–ಐಬಿಎನ್, ಮತ್ತು ಎನ್‌ಡಿಟಿವಿಗಳು ಮೀಸಲಾತಿ ಪರವಾದ ಸಮೀಕ್ಷೆಗಳನ್ನು ನಡೆಸಿದವು. ಶಿಕ್ಷಣ ಮತ್ತು ನೌಕರಿಯಲ್ಲಿ ಮೀಸಲಾತಿಯಿಂದ ಅತ್ಯುತ್ತಮ ಸಾಧನೆ ತೋರಿದವರ ಒಂದು ... ಯನ್ನು ತಯಾರಿಸುವುದು ಅಂತ ಮೀಸಲಾತಿ ... ಧೋರಣೆಯ ಒಂದು ಬಾಗ. ಆದರೆ ಅಂಥ ... ವರದಿಗಳು ದಲಿತ ಸಾಧಕರಿಗೆ ಮಾತ್ರ ಮೀಸಲಿತ್ತು. ... ಮಂಡಲ್– II ಈ ಕೆನೆಪದರಿನ ಒಬಿಸಿಗಳ ಮೀಸಲಾ... ಯನ್ನಷ್ಟೆ ಒಳಗೊಂಡಿದ್ದು ದಲಿತರಿಗೆ ಅದರಿಂದ ಕಿಂಚಿ... ಲಾಭವಿಲ್ಲ.

ಇದರ ಹಿಂದೆ ಒಂದು ಚರಿತ್ರೆ ಇದೆ. ತಮಿ... ನಾಡಿನಲ್ಲಿ ಬ್ರಾಹ್ಮಣೇತರ ಚಳುವಳಿಯನ್ನು ಒಬಿಸಿಗ... ಕೈಗೆತ್ತಿಕೊಂಡಾಗ, ದಲಿತರ ನೋವುಗಳನ್ನು ಎತ್ತಿ ತೋ... ಸುವ ಮೂಲಕ ಅವರ ಧ್ವನಿಯನ್ನು ಸಮರ್ಥಿಸಿಕೊ... ಲಾಗಿತ್ತು. ಹಾಗೆಯೇ ಉತ್ತರದಲ್ಲೂ ಬ್ರಾಹ್ಮಣೇ... ಚಳುವಳಿ ಆರಂಭವಾದಾಗಲೂ ತಮಿಳುನಾಡಿನ ಮಾ... ಯನ್ನೆ ಅನುಸರಿಸಿ ದಲಿತರ ಸಂಕಷ್ಟಗಳನ್ನೆ ಎತ್ತಿ ತೋ... ಲಾಯಿತು. ಹೀಗಿರುವಲ್ಲಿ ಈ ಕೆನೆಪದರು ಒಬಿಸಿಗಳು ... ತರಿಗೆ ಮಾಡಿದ್ದಾದರೂ ಏನಿದೆ? ಇದು ಏಕೆ ಹೀ... ಯಿತು? ಇದಕ್ಕೆ ಈ ಕೆನೆಪದರಿನ ಬುದ್ಧಿಜೀವಿಗಳ ... ವಿವರಣೆ ಇಲ್ಲ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂ... ಯೆಂದರೆ, ಈ ಕೆನೆಪದರಿನ ಒಬಿಸಿ ವರ್ಗವು ... ಒಬಿಸಿ ಚಳುವಳಿಯನ್ನು ವ್ಯಾಖ್ಯಾನಿಸುವುದೆಂದರೆ ... ಕೇವಲ ಒಂದು ಆಯಾಮವಷ್ಟೆ ಆಗುತ್ತದೆ. ಈ ... ವಳಿಯು ತನ್ನೊಳಗಿನ ಮಿತಿಗಳನ್ನು ಗುರುತಿಸಿಕೊಂ... ವಾದ್ದರಿಂದ ಅಲ್ಲಿ ಸ್ವ–ತಿದ್ದುಪಡಿಗೆ ಅವಕಾಶ ಇಲ್ಲವಾಗಿ... ಈ ಚಳುವಳಿಯ ಮುಖ್ಯ ಸಮಸ್ಯೆ ಎಂದರೆ, ಬ್ರಾಹ್... ನಾಯಕತ್ವದ್ದು. ಇದನ್ನು ಗೆಲ್ಲದಹೊರತು ಅಲ್ಲಿ ಬದ... ವಣೆ ಎನ್ನುವುದು ತಿಳಿಯಲಾಗದು.

ಈ ಸಂಗತಿಯನ್ನು ಚೆನ್ನಾಗಿಯೇ ಅರಿತು ಅದ... ಎದುರಿಸಲಾಗಿದೆ. ಆದರೆ ಅದರೊಳಗೆ ಸಮಸ್ಯೆಯೊಂದಿ... ಅದು ರೇಖಾಗಣಿತದೋಪಾದಿಯಲ್ಲಿ ಬೆಳೆಯುತ್ತಿ... ದಲಿತ ಚಳುವಳಿಯಲ್ಲಿ ಸಮಸ್ಯೆ ಬೇರೆಯೇ ಆಗಿತ್ತು.

ಅನೇಕ ದಲಿತೇತರರು ಡಾ. ಅಂಬೇಡ್ಕರ್‌ರವರ... ೨೦ನೇ ಶತಮಾನದ ಬಹು ದೊಡ್ಡ ಸಾಮಾಜಿಕ ಚಿಂ... ನೆಂದು ಒಪ್ಪುತ್ತಾರೆ. ಮನು ಮಾಡಿದ ನಿಯಮದಿಂದಾ... ದಲಿತರು ಶಿಕ್ಷಣದಿಂದ ಹೊರಗುಳಿಯಬೇಕಾಗಿದೆಯೆಂ... ಡಾ.ಅಂಬೇಡ್ಕರ್‌ಗೆ ತಿಳಿದಿರಲಿಲ್ಲವೇ? ಚೆನ್ನಾಗಿ ತಿಳಿದಿ... ಆದ್ದರಿಂದಲೇ ಅವರ ಹೋರಾಟವೂ ತೀಕ್ಷ್ಣವಾಗಿತ್ತು.

ಆದ್ದರಿಂದಲೇ ಅವರು ತನ್ನ ಜನಕ್ಕೆ ಶಿಕ್ಷಿತರಾ... ಎಂಬ ಮೊದಲ ಘೋಷಣೆಯನ್ನು ನೀಡಿದ್ದು. ದಲಿತ... ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದರ ಮೂ... ಅಗತ್ಯ ಪ್ರೊಟೀನ್‌ನನ್ನು ಪಡೆದುಕೊಳ್ಳುತ್ತಿದ್ದರೆಂ... ಡಾ.ಅಂಬೇಡ್ಕರ್‌ಗೆ ತಿಳಿದಿರಲಿಲ್ಲವೇ? ಆದಾಗ್ಯೂ ... ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನು ತನ್ನ ಜನತೆ ಬಿ... ವಂತೆ ಒತ್ತಾಯಿಸಿದರು. ಹೀಗೆ ತನ್ನ ಸಮುದಾಯದೊ... ಗಿನ ಅನೇಕ ಸಂಗತಿಗಳನ್ನು ಅವರು ದಿಟ್ಟವಾ... ಎದುರಿಸುತ್ತಾರೆ.

ಇಂಥದ್ದೇ ಸಂಗತಿಗಳು ಈ ಕೆನೆಪದರಿನ ಒಬಿ... ಚಳುವಳಿಯಲ್ಲಿ ಆಯಿತೇನು? ಭಾರತಾದ್ಯಂತ ಒಬಿ... ಚಳುವಳಿಯು "ಅವರನ್ನು" – ಬ್ರಾಹ್ಮಣರನ್ನು ಹಾಗ... ಬ್ರಾಹ್ಮಣ ಯಾಜಮಾನ್ಯವನ್ನು ಎದುರಿಸಿತು ಹೌದ... ಅಂದರೆ ಇಡೀ ಚಳುವಳಿಯು ಬ್ರಾಹ್ಮಣರ ಮತ್ತು ದ್ವಿಜ... ವಿರುದ್ಧವಿತ್ತೇ ವಿನಃ ಅದು ಜಾತಿ–ವಿರೋಧಿಯಾಗಿರಲಿ...

ತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ ಈ ಕೆನೆಪ ಒಬಿಸಿಗಳು ಬ್ರಾಹ್ಮಣರ ವಿರುದ್ಧ ಹೋರಾಡ ಮಾಡಿ ಹೊರತು ಬ್ರಾಹ್ಮಣ್ಯದ ವಿರುದ್ಧ ಅಲ್ಲ. ಈ ಬ್ರಾಹ್ಮ ರ ಚಳುವಳಿಯು ತಮಿಳ್ನಾಡಿನಲ್ಲಿ ಅತಿಯಾದ ನ್ನು ತಮಿಳು ಭಾಷೆಗೆ ನೀಡಿತು.

ಏಕೆಂದರೆ ಈ ಕೆನೆಪದರಿನ ಒಬಿಸಿಗಳು ತಮ್ಮನ್ನು ತಿದ್ದಿಕೊಳ್ಳಲಾರರು. ಆದ್ದರಿಂದಲೇ ಮೀಸಲಾತಿ ವುದು ವಿವಾದಾತ್ಮಕ ಸಂಗತಿಯಾಗಿಬಿಟ್ಟಿದೆ. ಆದದ ಈಗ ಕಾಲ ಕೂಡಿಬಂದಿದೆ. ಈ ಕೆನೆಪದರಿನ ಗಳನ್ನು ಮತ್ತು ರಿಯಲ್ ಎಸ್ಟೇಟ್‌ಗಳಲ್ಲಿ ಹಣಹೂ ಬದಲು ಶಿಕ್ಷಣವನ್ನು ಗುರಿಯಾಗಿಸಿಕೊಂಡು ಅದ ಹಣ ಹೂಡಲಿ.

ದಲಿತರು ಬ್ರಾಹ್ಮಣ/ದ್ವಿಜರಿಗೆ ಯುಗಗಳಿಂದಲೂ ಸಲ್ಲಿಸಲಾಗಿದೆ. ಹೀಗಿರುವಲ್ಲಿ ಒಳ್ಳೆ ಶಾಲೆಗಳಿಗಿಂತ ವ್‌ಗಳನ್ನು ಬಯಸುವ ಈ ಹೊಸ ಆಳುವ ಸಾಮಾ ವರ್ಗಕ್ಕೆ ದಲಿತರೇಕೆ ಸೇವೆ ಮಾಡಬೇಕು?

ಮಾನವ ಸಮಾಜಕ್ಕೆ ಅತ್ಯುತ್ತಮ ಸೇವೆ ಒದಗಿ ದು ಯಂತ್ರದಿಂದ. ಈ ಯಂತ್ರ ಪ್ರಚೋದಿತ ರೀಕರಣ ನಗರೀಕರಣವನ್ನು ತಯಾರಿಸಿತು. ಅಲ್ಲದೆ, ಮಾನವೀಯ-ಪಾರದರ್ಶಕ ಆಡಳಿತಕ್ಕೆ ಕಾರಣ ಯಿತು. ಈ ಪ್ರಕ್ರಿಯೆಯಲ್ಲಿ ಯಂತ್ರ ಊಳಿಗಮಾನ್ಯ ಗೆ ಆಧಾರವಾಗಿದ್ದ ಕೃಷಿಪದ್ಧತಿಯನ್ನು ನಾಶ ತು.

ನಮ್ಮ ದೇಶದಲ್ಲೇ ಈ ಯಂತ್ರಾಧಾರಿತ ನಗರೀಕರ ಬಹು ದೊಡ್ಡ ಸಾಮಾಜಿಕ ಸಮತೆಯನ್ನು ತಂದಿದೆ. ಒಬ್ಬ ದಲಿತ, ಬ್ರಾಹ್ಮಣ ಸಹಾಯಕನೊಂದಿಗೆ ಲಾರಿ ಕನಾಗುವ ಸಾಧ್ಯತೆ ದೊರೆತಂತಾಗಿದೆ. ಅಲ್ಲದೆ ಈ ಭಾರತದಲ್ಲಿ ಒಬ್ಬ ಬ್ರಾಹ್ಮಣ ಮಹಿಳೆಯು ದಲಿತ ಯಲ್ಲಿ ಕೆಲಸ ಮಾಡುವ ಸಾಧ್ಯತೆ ಉಂಟಾಗಿದೆ. ದನ್ನು ಹಳ್ಳಿಗಳಲ್ಲಿ ಊಹಿಸಲಾಗದು. ದಿನವೊಂದಕ್ಕೆ ೦೦೦೦/- ವೇತನ ನೀಡಿದರೂ ಹಳ್ಳಿಗಳಲ್ಲಿ ಬ್ರಾಹ್ಮಣ ಳೆಯರು ದಲಿತ ಮನೆಗಳಲ್ಲಿ ಪಾತ್ರೆತೊಳೆಯುವು ಯೋಚಿಸಲೂ ಸಾಧ್ಯವಿಲ್ಲ.

ಆದ್ದರಿಂದ ಗ್ರಾಮೀಣ ಭಾರತ ಕೈಗಾರೀಕರಣಗೊಳ್ಳ . ಈ ಪ್ರಕ್ರಿಯೆಯಲ್ಲಿ ಅದು ನಗರೀಕರಣಗೊಳ್ಳ . ಆದರೆ ಇದು ಹಾಗುವುದಾದರೂ ಹೇಗೆ? ದೂರ ಕೊರತೆಯ ಅರ್ಥಶಾಸ್ತ್ರಜ್ಞರಿಂದ ಬೆಂಬಲ ಪಡೆದಿರುವ ರ್ಯರಹಿತ ರಾಜಕಾರಣಿಗಳು ಗ್ರಾಮಗಳನ್ನು ಕೈಗಾರೀ ಗೊಳಿಸುವ ಹುಸಿ ಪ್ರಸ್ತಾವಗಳನ್ನು ಮುಂದಿಡುತ್ತಾರೆ-ಗಳ ಬದಿಯಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದಂತೆ. ದ್ದು ಯೂರೋಪ್ ಮತ್ತು ಅಮೆರಿಕಾದ ಗ್ರಾಮ ನ್ನು ಕೈಗಾರೀಕರಣಗೊಳಿಸಲಿಲ್ಲ. ಯೂರೋಪ್ ಮತ್ತು ಅಮೆರಿಕಾಗಳಲ್ಲಿ ಕೃಷಿಯನ್ನು ಕೈಗಾರೀಕರಣ ಸಲಾಯಿತು. ಹೀಗಿರುವಲ್ಲಿ ಗ್ರಾಮಗಳು ನಗರಗಳಾ -ಬದಲು ನಗರಗಳಂತೆ ಕಾಣಲಾರಂಭಿಸಿದವು. ರೆ ಅಲ್ಲಿನ ಅನೇಕರು ನಗರಗಳಿಗೆ ಪಲ್ಲಟಗೊಂಡರು. ನಗರ ಕೇಂದ್ರಗಳು ಹೆಚ್ಚುತ್ತಿದ್ದಂತೆ ಗ್ರಾಮ-ನಗರಗಳ ವೆ ಇದ್ದ ಮೂಲಭೂತ ಸೌಕರ್ಯಗಳ ಅಂತರ ಮಾಯ ಯಿತು. ಹೀಗೆ, ಗ್ರಾಮಗಳಲ್ಲಿ ವಾಸ ಮಾಡುವವರೂ ನಗರಗಳಲ್ಲಿ ಇದ್ದ ಸೌಕರ್ಯಗಳಿಂದ ವಂಚಿತರಾಗಲಿಲ್ಲ.

ಕಾರ್ಪೊರೇಟ್ ಸಮಾಜ

ಹಾಗಾದರೆ, ಭಾರತೀಯ ಕೃಷಿಯನ್ನು ಏಕೆ ಕೈಗಾರೀಕರಣಗೊಳಿಸಬಾರದು? ಈ ಕಾರ್ಯವನ್ನು ಯಾರು ಸಾಧಿಸುವುದು? ಕೃಷಿಕರಿಂದ ಇದು ಖಂಡಿತ ಸಾಧ್ಯವಿಲ್ಲ. ಕಳೆದ ಆರು ದಶಕಗಳಿಂದ ಈ ಕಿಸಾನ್‌ಗಳು ತಮ್ಮ ಗ್ರಾಮಗಳನ್ನು ಕೈಗಾರೀಕರಣಗೊಳಿಸಲಿಲ್ಲ. ಆದ್ದರಿಂದ ರೈತರಿಂದಲೇ ಅದು ಖಂಡಿತ ಸಾಧ್ಯವಿಲ್ಲ.

ಕೃಷಿಯನ್ನು ಕೈಗಾರೀಕರಣಗೊಳಿಸಲು ಕೆಲವು ಅಗತ್ಯವಾದುವುಗಳನ್ನು ಗುರುತಿಸುವುದಾದರೆ ಅದಕ್ಕೊಂದು ಯೋಜನೆ, ಬಂಡವಾಳ, ದೊಡ್ಡ ಯಂತ್ರಗಳು, ಇಂಜಿನಿಯರ್‌ಗಳು, ನಿರ್ವಾಹಕರು, ಚಾರ್ಟೆಡ್ ಅಕೌಂಟೆಂಟ್‌ಗಳು, ಸಾರಿಗೆ... ಇತ್ಯಾದಿ.

ಹೀಗಿರುವಲ್ಲಿ ಕಾರ್ಪೋರೇಟ್ ಜಗತ್ತು ದೇಶದಲ್ಲಿನ ಎಲ್ಲಾ ಕೃಷಿ ಭೂಮಿಯನ್ನು ಖರೀದಿಸಲು ಮುಂದಾಗಬೇಕು. ಹಾಗಾದಲ್ಲಿ ಅದರ ಪರಿಣಾಮಗಳೇನು? ಇದಕ್ಕೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ- ಮೀರತ್ ಅಥವಾ ಪೂರ್ವಗೋದಾವರಿ ಜಿಲ್ಲೆಗಳಲ್ಲಿ ಆ ರೀತಿ ಆಯಿತ್ತೆಂದು ಭಾವಿಸೋಣ. ಅಲ್ಲಿ ಯಾವುದೋ ಒಂದು ನಿಗಮ ದೊಡ್ಡ ಮಟ್ಟದ ವ್ಯವಸಾಯಕ್ಕಾಗಿ ಅಲ್ಲಿನ ಕೃಷಿ ಭೂಮಿಯೆಲ್ಲವನ್ನು ಖರೀದಿಸುತ್ತದೆ. ಅಲ್ಲಿನ ಮೂಲ ಭೂ ಒಡೆತನದ ಜನ ದೊಡ್ಡ ಮೊತ್ತವನ್ನು ಪಡೆಯುತ್ತಾರೆ. ಆ ಹಣವನ್ನು ನಗರಗಳಲ್ಲಿ ಬ್ಯುಸಿನೆಸ್ ಅಥವಾ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವುದು ಅಥವಾ ಆ ಭೂಮಿ ಕೊಂಡ ನಿಗಮದಲ್ಲೇ ಹೂಡುವುದು ಅಥವಾ ಹಣವನ್ನು ಖರ್ಚು ಮಾಡಿ ಪ್ರಾಲಿಟರೇಟ್ ಆಗಲಿ...

ಆದರೆ ಕಂಪನಿ ಮಾತ್ರ ಲಾಭದಲ್ಲಿ ತೊಡಗುತ್ತದೆ. ಜಾಗತಿಕ ಹೂ-ಮಾರುಕಟ್ಟೆ ಸುಮಾರು $೭೭ ಬಿಲಿಯನ್ ವಾರ್ಷಿಕ ವಹಿವಾಟಿನಲ್ಲಿ ತೊಡಗಿದೆ. ಅಲ್ಲಿ ಅವಕಾಶವಂತೂ ಹೇರಳವಾಗಿದೆ. ಕಂಪನಿಯು ಈ ಹೊಸ ಕೃಷಿ ಭೂಮಿಯಲ್ಲಿ (ಸಾವಿರಾರು ಎಕರೆ) ಈ ಹೂ ಬೆಳೆಸಲು ನಿರ್ಧರಿಸುತ್ತದೆ. ಈ ಉದ್ದೇಶದತ್ತ ಕಂಪನಿಯು ದೊಡ್ಡ ಮೊತ್ತವನ್ನು ಮೂಲಭೂತ ವ್ಯವಸ್ಥೆಯನ್ನು ಸೃಷ್ಟಿಸಲು ತೊಡಗಿಸಬೇಕಾಗುತ್ತದೆ. ಅಂದರೆ ಅದರಿಂದಲೂ ಹೊಸ ಬ್ಯುಸಿನೆಸ್ ಶುರುವಾಗಿ ಸ್ಥಳೀಯರೂ ಸಹ ಪಾಲ್ಗೊಳ್ಳಬಹುದು. ಕಂಪನಿಯು ಹೂ ಸಂಸ್ಕರಿಸುವ ಕೇಂದ್ರವನ್ನು ತೆರೆಯಬೇಕಾಗುತ್ತದೆ. ಅದಕ್ಕಾಗಿ ಶೀತಗಾರಗಳನ್ನು ಕಟ್ಟಬೇಕಾಗುತ್ತದೆ. ಇದೂ ಸಹ ಬ್ಯುಸಿನೆಸ್‌ಅನ್ನು ಮತ್ತಷ್ಟು ತೆರೆಯುತ್ತದೆ.

ಗ್ರಾಮೀಣ ಭಾರತ ಕೈಗಾರೀಕರಣಗೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಅದು ನಗರೀಕರಣಗೊಳ್ಳಬೇಕು. ಆದರೆ ಇದು ಹಾಗುವುದಾದರೂ ಹೇಗೆ? ದೂರದೃಷ್ಟಿಕೊರತೆಯ ಅರ್ಥಶಾಸ್ತ್ರಜ್ಞರಿಂದ ಬೆಂಬಲ ಪಡೆದಿರುವ ಧೈರ್ಯರಹಿತ ರಾಜಕಾರಣಿಗಳು ಗ್ರಾಮಗಳನ್ನು ಕೈಗಾರೀಕರಣಗೊಳಿಸುವ ಹುಸಿ ಪ್ರಸ್ತಾವಗಳನ್ನು ಮುಂದಿಡುತ್ತಾರೆ-ಗ್ರಾಮಗಳ ಬದಿಯಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದಂತೆ. ಇಂಥದ್ದು ಯೂರೋಪ್ ಮತ್ತು ಅಮೆರಿಕಾದ ಗ್ರಾಮಗಳನ್ನು ಕೈಗಾರೀಕರಣಗೊಳಿಸಲಿಲ್ಲ. ಯೂರೋಪ್ ಮತ್ತು ಉತ್ತರ ಅಮೆರಿಕಾಗಳಲ್ಲಿ ಕೃಷಿಯನ್ನು ಕೈಗಾರೀಕರಣಗೊಳಿಸಲಾಯಿತು. ಹೀಗಿರುವಲ್ಲಿ ಗ್ರಾಮಗಳು ನಗರಗಳಾಗಲಿಲ್ಲ-ಬದಲು ನಗರಗಳಂತೆ ಕಾಣಲಾರಂಭಿಸಿದವು. ಅಂದರೆ ಅಲ್ಲಿನ ಅನೇಕರು ನಗರಗಳಿಗೆ ಪಲ್ಲಟಗೊಂಡರು. ಹೀಗೆ ನಗರ ಕೇಂದ್ರಗಳು ಹೆಚ್ಚುತ್ತಿದ್ದಂತೆ ಗ್ರಾಮ-ನಗರಗಳ ನಡುವೆ ಇದ್ದ ಮೂಲಭೂತ ಸೌಕರ್ಯಗಳ ಅಂತರ ಮಾಯವಾಯಿತು. ಹೀಗೆ, ಗ್ರಾಮಗಳಲ್ಲಿ ವಾಸ ಮಾಡುವವರೂ ಸಹ ನಗರಗಳಲ್ಲಿ ಇದ್ದ ಸೌಕರ್ಯಗಳಿಂದ ವಂಚಿತರಾಗಲಿಲ್ಲ.

ಹೀಗೆ ಇಡೀ ಭೂಮಿ ಹೂ ಬೆಳೆಯಲ್ಲಿ ತೊಡಗಿಸಿಬಿಟ್ಟಲ್ಲಿ ಜನ ತಿನ್ನುವುದಾದರೂ ಏನು? ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಗುಲಾಬಿ ಹೂವನ್ನು ಮಾರುವುದರಿಂದ ೫ ಕೆ.ಜಿ ಗೋದಿಯನ್ನು ಆಮದು ಮಾಡಿಕೊಳ್ಳಬಹುದಾಗಿದೆ. ಅಂದರೆ ಒಂದು ಕೇಜಿ ಗೋಧಿಯನ್ನು ಬೆಳೆಯುವ ಜಾಗದಲ್ಲಿ ನೂರಾರು ಗುಲಾಬಿ ಹೂಗಳನ್ನು ಬೆಳೆಸಬಹುದು. ಅಂದರೆ ಭೂಮಿ ಚಿನ್ನ ಬೆಳೆದಂತಾಗುತ್ತದೆಯಲ್ಲವೇ. ಅಥವಾ ಕಂಪನಿ ಕೇವಲ ಗೋಧಿ ಬೆಳೆಯುತ್ತದೆಯೆಂದು ಹೇಳಿದರೂ ಅಲ್ಲಿ ಯಂತ್ರ ಆಧಾರಿತ ಕೃಷಿ ಸಾಧ್ಯವಾಗುತ್ತದೆ. ಅದನ್ನು ಈ ಹಿಂದೆ ರೈತರು ಮಾಡಲು ಸಾಧ್ಯವಿರಲಿಲ್ಲ.

ಇದು ಕೈಗಾರಿಕೆಯ ಮರ್ಮ. ಯಂತ್ರ ಮತ್ತು ಬಂಡವಾಳದ ಲಕ್ಷಣವೇ ಹಾಗೆ-ಅದು ಎಲ್ಲೆಲ್ಲಿ ಹೋಗುತ್ತದೋ ಅಲ್ಲೆಲ್ಲಾ ಅಧಿಕ ಯಂತ್ರ ಮತ್ತು ಬಂಡವಾಳವನ್ನು ಸೃಷ್ಟಿಸುತ್ತದೆ. ಈ ಯಂತ್ರ ಮತ್ತು ಬಂಡವಾಳ ಕಬ್ಬಿಣದ ಅದಿರನ್ನು ಪರಿವರ್ತಿಸಿ ಅದರ ಬೆಲೆಯನ್ನು ಏರಿಸುತ್ತದೆ. ಇದೇ ರೀತಿ ಯಂತ್ರ ಮತ್ತು ಬಂಡವಾಳ ಭೂಮಿಯ ಬೆಲೆಯನ್ನು ಸಹ ಹಿಂದಿಗಿಂತಲೂ ಹೆಚ್ಚಾಗುವಂತೆ ಮಾಡುತ್ತದೆ.

ಈ ವಿಭಾಗದಲ್ಲಿ ಹೊಸ ಸಮಾಜ ಮತ್ತು ಹೊಸ ಆರ್ಥಿಕತೆ ಪ್ರಶ್ನೆಗಳನ್ನು ಮುಂದಿಡುತ್ತದೆ. ಒಬ್ಬನೇ ಭೂಮಾಲೀಕ-ಕಾರ್ಪೋರೇಟ್ ನಿಗಮ, ಉಳಿದವರೆಲ್ಲರೂ ಕೆಲಸಗಾರರು. ಈ ಸನ್ನವೇಶದಲ್ಲಿ ದಲಿತ ಮತ್ತು ಬ್ರಾಹ್ಮಣ ಒಂದೇ ಅಳತೆಗೋಲಿಗೊಳಗಾಗುತ್ತಾರಷ್ಟೆ. □

“ಹಾಗಾದರೆ ಈಗ ಬಲೆ ಬೀಸಲೇ....!?”

ಬುದ್ಧಾಯಣ

೧೩

ಸೇನಕಗಿಡುಗನ ಸಂತೋಷಕ್ಕೆ ಪಾರವೆ ಇಲ್ಲ. ಆಕಾಶದಿಂದ ಕೆಳಗೆ ಇಳಿದು ಒಂದು ಮರದ ಕೊಂಬೆಯ ಮರೆಯಲ್ಲಿ ಅಡಗಿ ಕುಳಿತು ಆ ಹುಂಜಗಳ ದಂಡಿನ ಚಲನವಲವನ್ನು ವೀಕ್ಷಿಸಿತು. ಇವು ಗಳು ನನಗೆ ಒಳ್ಳೆಯ ಭಕ್ಷವೆಂದು ಅನುದಿನವು ಅಲ್ಲಿ ಇಲ್ಲಿ ಅಲೆ ಯುವ ತಾಪತ್ರೆಯ ತಪ್ಪಿತೆಂತು ಹಿರಿಹಿರಿ ಹಿಗ್ಗಿತು. ಪ್ರತಿ ದಿನವು ಸಂಚು ಮಾಡಿ ವಂಚು ಹಾಕಿ ಒಂದೊಂದು ಹುಂಜವನ್ನು ತಿಂದು ಆ ಹಿಂಡನೆಲ್ಲ ಖಾಲಿ ಮಾಡಿತು. ಕೊನೆಗೆ ಉಳಿದದ್ದು ಬೋಧಿ ಹುಂಜ ಒಂದೇ ಬಂತು.

ಸಿ. ಎಚ್. ರಾಜಶೇಖರ್

ಆಗ ಕೋಸಂಬಿ ರಾಜ್ಯವನ್ನು ಕೋಸಂಬಲನೆಂಬ ದೊರೆಯು ಆಳುತ್ತಿದ್ದ. ಆ ರಾಜ್ಯವು ದಟ್ಟ ಅರಣ್ಯದಿಂದಲೂ ದುರ್ಗಮ ಕಣಿವೆಯಿಂದಲೂ ಕೂಡಿತ್ತು. ಆ ಕಾಡಿನಲ್ಲಿ ನೂರಾರು ಹುಂಜಗಳಿಗೆ ಬೋಧಿ ಎಂಬ ಹುಂಜವು ರಾಜನಾಗಿತ್ತು. ಆದರೆ ಅದೇ ಕಾಡಿನಲ್ಲಿ ಸೇನಕ ಎಂಬ ಗಿಡಗವೊಂದು ವಾಸವಾಗಿತ್ತು. ಅದು ಪ್ರತಿ ದಿನವು ಸಣ್ಣಪುಟ್ಟ ಹಕ್ಕಿ ಪಕ್ಷಿಗಳನ್ನು ಮತ್ತು ಸಣ್ಣ ಹಾಗೂ ದೊಡ್ಡ ಹಾವುಗಳನ್ನು ಬೇಟೆಯಾಡಿ ಬದುಕುತ್ತಿತ್ತು. ಒಮ್ಮೆ ಆಕಾಶದಲ್ಲಿ ಹಾರುತ್ತಾ ಸಾಗುತ್ತಿದ್ದಾಗ ಅದರ ಸೂಕ್ಷ್ಮ ಕಣ್ಣಿಗೆ ನೂರಾರು ದಷ್ಟಪುಷ್ಟವಾಗಿ ಬೆಳೆದು ನಿಂತಿದ್ದ ಹುಂಜಗಳು ಕಂಡವು.

ಸೇನಕಗಿಡುಗನ ಸಂತೋಷಕ್ಕೆ ಪಾರವೆ ಇಲ್ಲ. ಆಕಾಶದಿಂದ ಕೆಳಗೆ ಇಳಿದು ಒಂದು ಮರದ ಕೊಂಬೆಯ ಮರೆಯಲ್ಲಿ ಅಡಗಿ ಕುಳಿತು ಆ ಹುಂಜಗಳ ದಂಡಿನ ಚಲನವಲವನ್ನು ವೀಕ್ಷಿಸಿತು. ಇವುಗಳು ನನಗೆ ಒಳ್ಳೆಯ ಭಕ್ಷವೆಂದು ಅನುದಿನವು ಅಲ್ಲಿ ಇಲ್ಲಿ ಅಲೆಯುವ ತಾಪತ್ರೆಯ ತಪ್ಪಿತೆಂತು ಹಿರಿಹಿರಿ ಹಿಗ್ಗಿತು. ಪ್ರತಿ ದಿನವು ಸಂಚು ಮಾಡಿ ವಂಚು ಹಾಕಿ ಒಂದೊಂದು ಹುಂಜವನ್ನು ತಿಂದು ಆ ಹಿಂಡನೆಲ್ಲ ಖಾಲಿ ಮಾಡಿತು. ಕೊನೆಗೆ ಉಳಿದದ್ದು ಬೋಧಿ ಹುಂಜ ಒಂದೇ ಬಂತು.

ಸೇನಕ ಗಿಡುಗವು ಆ ಬೋಧಿಹುಂಜವನ್ನು ಹಿಡಿಯಲು ಮಾಡಬಾರದ ಹರಸಾಹಸವನ್ನು ಮಾಡಿತಾದರೂ ಫಲ ದೊರೆಯಲಿಲ್ಲ. ಬೋಧಿ ಹುಂಜನ ಹುಲುಸಾದ ಮಾಂಸವನ್ನು ನೆನೆ ನೆನೆದು ಶೋಕತಪ್ತವಾಯಿತು. ನಾನು ಬೋಧಿ ಹುಂಜವನ್ನು ಬೇಟೆಯಾಡುವ ತನಕ ಇತರೆ ಬೇಟೆಯನ್ನು ಮಾಡಲಾರೆ ಎಂದು ಶಪಥ ಮಾಡಿತು.

ಒಂದು ದಿನ ಈ ಗಿಡಗವು ಚಿಂತಾಕ್ರಾಂತವಾಗಿ ಕುಳಿತಿರುವುದನ್ನು ಕಂಡ ಬೇಡನು

‘ಅಯ್ಯ ಗಿಡಗ ರಾಜ. ನಿನ್ನ ವ್ಯಸನಕ್ಕೆ ಕಾರಣವೇನು?’ ಎನ್ನಲು ತನ್ನ ದುಃಖವನ್ನು ತೋಡಿಕೊಂಡಿತು. ಆಗ ಆ ಬೇಡನು:

‘ಹಾಗದರೆ ನನ್ನ ಬಾಣದಿಂದ ಅದರ ಹೃದಯವನ್ನು ಭೇಧಿಸಲೆ?’ ಎಂದಿತು ಅದಕ್ಕೆ ಗಿಡಗವು”

‘ನೀನೇನೋ ಭೇಧಿಸಬಲ್ಲೆ ಆದರೆ ಆ ಹುಂಜನ ಮಾಂಸದಲ್ಲಿ ನಿನಗೂ ಸಮಪಾಲು ಕೊಡಬೇಕೆನೋ?!

‘ಹೌದು ಖಂಡಿತವಾಗಿ ಅದು ಬೇಟೆಯ ಧರ್ಮ!’

‘ಹೌದೇನು....? ಹಾಗಾದರೆ ಇಂದು ಬೇಡ ನಾನೊಂದು ಶುಭದಿನವನ್ನು ನೋಡಿ ನಿನಗೆ ತಿಳಿಸುವೆ. ಹಾಗಾದರೆ ನಾನು ನೀನು ಗೆಳೆಯರಾಗೋಣ’ ಎಂದಿತು. ಬೇಟೆಗಾರನು ಅದರ ಮಾತಿಗೆ ಮರುಳಾಗಿ ಹೋದ. ಆದರೆ ಗಿಡುಗವು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿತು. ಈ ಯಕಶ್ಚಿತ್ ಬೇಟೆಗಾರನಿಗೂ ಧರ್ಮವಿದೆಯಂತೆ! ಅವನ ಧರ್ಮವನ್ನು ತೋರಿಸುತ್ತೇನೆ ಎಂದು ಹಲ್ಲಲ್ಲು ಕಡಿಯಿತು.

ಹಿಂದೆಂದಿಗಿಂತಲೂ ಬೋಧಿಹುಂಜವನ್ನು ಹಿಡಿಯುವತ್ತ ತೀವ್ರ ಕಾರ್ಯಾಚರಣೆಯಲ್ಲಿ ತೊಡಗಿ ವಿಫಲವಾಯಿತು. ಆದರೆ ಬೋಧಿಹುಂಜವು ಮೈ ಎಲ್ಲಾ ಕಣ್ಣಾಗಿ ಜೀವಿಸುತ್ತಿತ್ತು. ಹಗಲೆಲ್ಲ ಕಾಳು ಕಡ್ಡಿಯನ್ನು ಆರಿಸಿ ತಿಂದು ಸಂಜೆಯಾಗುತ್ತಿದ್ದಂತೆ ಬಿದುರಿನ ಮೆಳೆಯ ನಡುವೆ ಅಡಗಿ ಕೂರುತ್ತಿತ್ತು.

ಸೇನಕ ಗಿಡುಗನ ಎಲ್ಲಾ ಪ್ರಯತ್ನಗಳು ವಿಫಲವಾದ ಬಳಿಕ ಹುಂಜನನ್ನು ಉದ್ದೇಶಿಸಿ.

‘ಎಲೈ ಕುಕ್ಕಿಜು ರಾಜನೇ, ನೀನೇಕೆ ನನ್ನ ಕಂಡು ಬಿದಿರಿನ ಮೆಳೆಯೊಳಗೆ ಅಡಗಿರುವೆ? ಧೈರ್ಯವಾಗಿ ಹೊರಗೆ ಬಾ. ನಾನು ನಿನ್ನ ಮಿತ್ರತ್ವವನ್ನು ಬಯಸಿ ಬಂದಿರುವೆ ಎನ್ನಲು. ಹುಂಜವು:

‘ಎಲೈ ಸೇನಕನೆ. ನನಗೆ ನಿನ್ನ ಸ್ನೇಹತ್ವವು ಬೇಡ’

‘ಏಕೆ? ನನ್ನಲ್ಲಿ ನೀನು ಕಂಡ ಲೋಪವೇನು?

‘ನೀನು ಆಕಾಶದಲ್ಲಿ ಹಾರುವವನು. ನಾನೋ ನೆಲದಲ್ಲಿ ತೆವಳುವವನು’

‘ಅದೇ ನನ್ನ ದೋಷ ಹೇಗಾದೀತು?’

‘ನೀನು ಬೇಟೆಗಾರ, ನಾನೋ ಬಲಿ’

‘ಅಂದ ಮಾತ್ರಕ್ಕೆ ನಾವಿಬ್ಬರು ಸ್ನೇಹಿತರಾಗಬಾರದೆ?’

‘ನೀನು ನಂಬಿಕೆಗೆ ಅರ್ಹನಲ್ಲ!’

‘ಮಿತ್ರ, ನಾನು ಈ ಹಿಂದೆ ಮಾಡಿದ ಪಾಪ ಕೃತ್ಯಕ್ಕೆ ಕ್ಷಮೆ ಇರಲಿ’

‘ಪಾಪಿಯನ್ನು, ಸುಳ್ಳು ನುಡಿವವನನ್ನು, ಸ್ವಾರ್ಥಿಯನ್ನು ಹಾಗೂ ಅತೀ ಶಾಂತವಾಗಿರುವವನನ್ನು ನಂಬಲಾಗದು’

ಅದಷ್ಟೇ ದೋಷವಾಗಲೂ ಹೇಗೆ ಸಾಧ್ಯ?’

‘ನೀನೊಬ್ಬ ಬಾಯರಿದ ಹಸುವಿನಂತೆ. ನಿನ್ನ ಮತುಗಾರಿಕೆಯಿಂದ ನನ್ನ ಮರಳು ಮಾಡಬಲ್ಲೆಯೇ ಹೊರತು ನಿನ್ನ ‘ಸನ್ಮಾರ್ಗದ’ ನಡೆತೆಯಿಂದಲ್ಲ’

‘ಮಾತುಗಾರಿಕೆಯೇ ದೋಷ ಹೇಗಾದೀತು?’

‘ಮನದಲ್ಲಿ ಒಳಿತಿಲ್ಲದವನು, ಕೈಯಲ್ಲಿ ಮೂರು ಕಾಸಿಲ್ಲದವನು ಇಬ್ಬರೂ ಒಂದೇ’

‘ಹಣವಿಲ್ಲದ್ದು ದೋಷವೇಗಾಗುತ್ತದೆ’

‘ಇಂತಹ ಬಂಡಾಯಗಾರನು ಕೃತಘ್ನನಾಗಿರುತ್ತಾನೆ. ಹಾಗಾಗಿ ನಂಬಬಾರದು’

‘ಹಾಗಾದರೆ ಎಂಥೆಂಥವರನ್ನು ನಂಬಬಾರದು?’

‘ಹೆಂಗಸಾಗಲೀ, ಗಂಡಸಾಗಲೀ ಭಿನ್ನ ಮನಸುಳ್ಳವರನ್ನು ನಂಬಬಾರದು. ನಾನಾ ರೀತಿಯ ಸಂಸರ್ಗ ಹೊಂದಿದ್ದವರನ್ನು ನಂಬಬಾರದು. ಇಂಥವರು ಮರೆಯಲ್ಲಿ ಅಡಗಿರುವ ಕತ್ತಿಯಂತೆಯೇ ಸರಿ’

‘ಮಿತ್ರ ಈ ನಿನ್ನ ಎಲ್ಲಾ ಆರೋಪಗಳು ಊಹಪೋಹಗಳಷ್ಟೇ’ ಎನ್ನುವಷ್ಟರಲ್ಲಿ ಬಸವಳಿದ ಬೇಡನು ಗಿಡುಗನನ್ನ ಕಂಡು ಅವನತ್ತಲೆ ರೋಷದಿಂದ ಬಂದು ಹೀಗೆ ಘರ್ಜಿಸಿದ;

‘ಎಲೈ ಕಪಟಿಯೇ, ಕದ್ದು ತಂದ ನನ್ನ ಬಲೆ ಎಲ್ಲಿ....!?’ □



ಆತ ಮೌನಿಯೋ? ಜ್ಞಾನಿಯೋ....!?'



ಒಮ್ಮೆ ಬೋಧಿಸತ್ವರು ಕಾಶೀ ಗ್ರಾಮದ ಬಡ ಣನ ಮಗನಾಗಿ ಹುಟ್ಟುವರು. ಅವರು ಉನ್ನತ ಗಿ ಅತಿಯಾಗಿ ಹಂಬಲಿಸುತ್ತಿದ್ದರು. ಆದರೆ ಅದನ್ನು ಯಲು ಗುರುದಕ್ಷಿಣೆ ಕೊಡಬೇಕಾಗಿತ್ತು. ಆ ಲ್ಲಿ ಅವರಿರಲಿಲ್ಲ. ಆದರೂ ಸುಮ್ಮನೆ ಕೂರದೆ ರೆಯ ಸ್ನೇಹಿತರು ಮತ್ತು ನೆಂಟರಿಷ್ಟರನ್ನು ರಾಗಿ ತಮ್ಮ ಅಭಿಲಾಷೆಯನ್ನು ವ್ಯಕ್ತ ಪಡಿಸಿದರು. ೂ ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ು ಕುಹಕವಾಡಿದರೆ ಮತ್ತೆ ಕೆಲವು; ಅವರಿವರ ು ಪೂಜೆ ಪುನಸ್ಕಾರ ತಿಥಿ ತಿರುಕನಿಗೆ ಮಹಾ ನಾಗುವ ಹುಚ್ಚು ಕನಸು!' ಎಂದು ಹಂಗಿಸಿ ಯಲ್ಲಿ ಕಳುಹಿಸಿದರು.

ಆದರೂ ಬೋಧಿಸತ್ವರ ಒಳ ಮನಸ್ಸು ತನ್ನ ಛಲ ಬಿಡಲಿಲ್ಲ. ಒಂದು ದಿನ ಮುಂಜಾನೆ ಬೇಗ ಎದ್ದು ವಾರಕ್ಕೆ ಆಗವಷ್ಟು ಬುತ್ತಿಯನ್ನು ಕಟ್ಟಿಕೊಂಡು ತಕ್ಷ ದಾರಿಯನ್ನು ಹಿಡಿದರು. ಅಲ್ಲಿ ಒಬ್ಬ ಸದ್ಗುಣ ನಾದ ಗುರುವನ್ನು ಸಂಧಿಸಿ ತನ್ನ ಮನದ ಮಹಾ ಯನ್ನು ವ್ಯಕ್ತ ಪಡಿಸಿದರು. ಆ ಗುರುಗಳು ಈ ನ ಶ್ರದ್ಧೆಗೆ ಮೆಚ್ಚಿ ಒಂದು ಷರತ್ತನ್ನು ಮತ್ತು ಉಪಾ ು ಹೇಳಿಕೊಟ್ಟರು. ಅದೆಂದರೆ.

ಮಗು, ನಿನ್ನ ಬಳಿ ಏನೂ ಇಲ್ಲ ಎಂದಾಗ ನಿನ್ನನ್ನು ತಿರಸ್ಕರಿಸುತ್ತಾರೆ. ಸಾಲಕೊಡುವವರು ವರಮಾನ ಕೇಳುತ್ತಾರೆ. ಸನ್ಮಾನ ಮಾಡುವಾಗ ನಿನ್ನ ಅರ್ಹತೆಯನ್ನು ಕೇಳುತ್ತಾನೆ. ಮೊದಲು ಯನ್ನು ಪರಿಶ್ರಮದಿಂದ ರೂಢಿಸಿಕೊ. ಅದು ನಿನ್ನ ಯೋಗ್ಯತೆ ಮತ್ತು ಮೂಲ ಬಂಡವಾಳ ೆ. ಬಂಡವಾಳವಿಲ್ಲದೆ ಎಲ್ಲಿಯೂ ಬಡಿವಾರ . ಜನರ ಹಾದಿಯೇ ಒಂದಾದರೆ ಗುರುವಿನ ೀ ಯಾವಾಗಲೂ ಪ್ರತ್ಯೇಕ. ಆದ್ದರಿಂದ ನಾನು ದ್ಯೆಯನ್ನು ದಾನ ಮಾಡುವೆ. ಭವಿಷ್ಯದಲ್ಲಿ ಅದು ಮೂಲ ಬಂಡವಾಳವಾಗುತ್ತದೆ. ಅದನ್ನು ಗಿರವಿ ನನಗೆ ಗುರುದಕ್ಷಿಣೆಯಾಗಿ ಸಲ್ಲಬೇಕಾದ ಏಳು (ಚಿನ್ನದ ವರಹ)ಗಳು ತಂದೊಪ್ಪಿಸುತ್ತೀ ನೆ...?' ಎನ್ನಲು ಬೋಧಿಸತ್ವರು ಗುರುವಿನ ಶ್ರೇಷ್ಠ ಬಾಗಿ:

ತಮ್ಮ ಚಿತ್ತ...!' ಎಂದು ಅಂದಿನಿಂದ ಆತನಿಗೆ ು ವರ್ಷಗಳು ತುಂಬುವ ತನಕ ತಾವು ಕಲಿತ ದ್ಯೆಯನ್ನು ಧಾರೆ ಎರೆದರು. ಒಂದು ದಿನ ಗುರು

ಮಗು, ನೀನು ಈಗ ವಿದ್ಯಾರ್ಥಿಯಲ್ಲ. ಮಹಾ ಶೀಲವಂತನೂ ಯಶವಂತನೂ ಆಗಿ ಬದುಕು. ಗುರುದಕ್ಷಿಣೆಯಿಂದ ಮುಕ್ತನಾಗು...!' ಎನ್ನುತ್ತಾ ಆಶ್ರಮದಿಂದ ಬೀಳ್ಕೊಟ್ಟರು.

ತ ತನ್ನ ಗ್ರಾಮಕ್ಕೆ ಬಂದ. ಗ್ರಾಮಸ್ಥರು ಸ್ವಾಗತಿಸಿ ಮಾಡಿದರು. ಆತನ ಪಾಂಡಿತ್ಯದ ಸುಧೆಯನ್ನು ದೊಗಿದರು. ವಿದ್ಯೆಯೇ ನಿಜವಾದ ಸಂಪತ್ತೆಂದು ಮನೆಗೆ ಮರುಳಿದರು. ಗುರುವಿನ ಋಣಭಾರ ಆತನನ್ನು ಅತಿಯಾಗಿ ಕಾಡಲು ಒಬ್ಬ ಶ್ರೀಮಂತನ ಬಳಿ ತನ್ನ ವಿದ್ಯೆಯನ್ನು ಗಿರವಿ ಇಟ್ಟು ಬಡ್ಡಿಗಾಗಿ ಏಳು ನಿಕಷ ಸಾಲವಾಗಿ ಪಡೆದ. ಹಣವನ್ನು ಗಂಟುಕಟ್ಟಿ ತನ್ನ ಜೋಳಿಗೆಯಲ್ಲಿ ಭದ್ರ ಪಡಿಸಿಕೊಂಡು ಗುರುಗಳ ಆಶ್ರಮದ ಕಡೆ ಬಿರುಸಾಗಿ ಕಾಲನ್ನು ಹಾಕತೊಡಗಿದ. ಇನ್ನೂ ನಾನು ಗುರುವಿನ ಋಣದಿಂದ ಮುಕ್ತನಾದೆ ಎಂಬ ಸಂತೋಷದಿಂದ ಬೀಗಿದ. ಮುಂದೆ ಗಂಗಾನದಿಯು ಸಿಕ್ಕಿತು. ಅದನ್ನು ದಾಟಿ ಆಚೆ ದಡ ಸೇರಿ ಮತ್ತೆ ಕೆಲವು ದಿನಗಳು ಪ್ರಯಾಣಿಸಿದರೆ ತಕ್ಷಶಿಲೆಯು ಸಿಗುತ್ತಿತ್ತು. ಆದರೆ ಆ ಸಂದರ್ಭದಲ್ಲಿ ಗಂಗಾನದಿಯಲ್ಲಿ ನೆರೆ ಬಂದು ಬೋರ್ಗರೆಯುತ್ತಿತ್ತು. ಆದರೂ ಆತ ದೋಣಿಯಲ್ಲಿ ಕುಳಿತು ನದಿ ದಾಟಲು ಪ್ರಯತ್ನಿಸಿದ, ನದಿಯು ಕ್ಷಣದಿಂದ ಕ್ಷಣಕ್ಕೆ ಅಬ್ಬರಿಸತೊಡಗಿತು. ದೋಣಿಯು ನಡು ನದಿಯಲ್ಲಿ ತಲೆಕೆಳಗಾಗಿ ಮುಳುಗಿತು. ಆ ದೋಣಿಯಲ್ಲಿ ಕುಳಿತ ಎಲ್ಲರಂತೆ ಬೋಧಿಸತ್ವರು ನೀರು ಪಾಲಾದರು. ಅದೃಷ್ಟವಶಾತ್ ತೇಲುತ್ತಾ ತೇಲುತ್ತಾ ಬಂದು ಮರದ ದಿಂಬಿಯನ್ನು ಆಸರೆಯಾಗಿ ಹಿಡಿದು ದಡ ಸೇರಿದರು. ಆದರೆ ಆ ಕೋಲಾಹಲದಲ್ಲಿ ಹೆಗಲ ಮೇಲಿದ್ದ ಜೋಳಿಗೆಯು ನೀರು ಪಾಲಾಗಿತ್ತು. ನದಿಯ ತೀರದುದ್ದಕ್ಕೂ ತನ್ನ ಜೋಳಿಗೆಗಾಗಿ ಹುಡುಕಿ ಹುಡುಕಿ ವಿಫಲರಾದರು. ಈ ಅಪರಿಚಿತ ಸ್ಥಳದಲ್ಲಿ ಮತ್ತೆ ಹಣವನ್ನು ಸಂಪಾದಿಸುವ ಬಗೆ ಹೇಗೆದು ಯೋಚಿಸಲು ಅವರ ತಲೆಯಲ್ಲಿ ಒಂದು ಸಮಯೋಚಿತ ಉಪಾಯ ಮೂಡಿತು.

ಮರುದಿನ ಮುಂಜಾನೆ ಬೋಧಿಸತ್ವರು ಆ ಗಂಗಾ ನದಿಯ ತೀರದಲ್ಲಿ ಜನದಟ್ಟಣೆಯ ಜಾಗವನ್ನು ಆಯ್ದುಕೊಂಡು ತಾವು ತೊಟ್ಟ ಉತ್ತರಿಯನ್ನು ಮೈತುಂಬ ಹೊದ್ದು, ಜನಿವಾರವನ್ನು ಹೊರಗೆ ಹಾಕಿ, ಬೆಳ್ಳಿಯ ಹಲಗೆಯಂತೆ ಹೊಳೆಯುತ್ತಿದ್ದ ಮರಳಿನ ದಿಣ್ಣೆಯ ಮೇಲೆ ಚಿನ್ನದ ಕಡೆದ ಪ್ರತಿಮೆಯಂತೆ ಅಮರಣಾಂತ ಉಪವಾಸಕ್ಕೆ ಕುಳಿತರು.

ಅತ್ತಿತ್ತ ಓಡಾಡುವ ಜನಗಳು; ಇಲ್ಲೇಕೆ ಕುಳಿತಿರುವಿರಿ....?' ಎಂದು ಪ್ರಶ್ನಿಸಿದರು ಅವರ ಪ್ರಶ್ನೆಗೆ ಮೌನವೇ ಉತ್ತರವಾಗಿತ್ತು. ಯಾತ್ರಿಕರು ಪ್ರಶ್ನಿಸಿದರು. ಅಕ್ಕ ಪಕ್ಕದ ಗ್ರಾಮಸ್ಥರು ವಿಷ್ಯ ತಿಳಿಯಲು, ಒಬ್ಬ ತೇಜಸ್ವಿಯಾದ ಪಂಡಿತನು ಮುನಿದು ಉಪವಾಸ ಕುಳಿತಿರುವನು ಅವನಿಗೆ ಆಹಾರವ ಅಗತ್ಯವಿರಬೇಕೆಂದು ಹಣ್ಣು ಹಂಪಲವನ್ನು ಕೈಯಲ್ಲಿ ಹಿಡಿದು ಮೂರನೆಯ ದಿನ ಆತನ ಬಳಿ ಬಂದು.

'ತಮ್ಮ ಉಪವಾಸಕ್ಕೆ ಕಾರಣವೇನು?' ಎಂದು ಪ್ರಶ್ನಿಸಿದರು. ಅವರ ಪ್ರಶ್ನೆಗೆ ಮೌನವೇ ಉತ್ತರವಾಗಿತ್ತು. ಅವರುಗಳು ಅವನ ಕಷ್ಟವನ್ನು ಕಂಡು ಅಳುತ್ತಾ ಹಿಂದಿರುಗಿದರು. ನಾಲ್ಕನೇ ದಿನ ಈ ವಿಷಯ ನಗರ ವಾಸಿಗಳಿಗೆ ತಿಳಿಯಲು ಅವರೂ ಬಂದರು ಐದನೇ ದಿನ ಐಶ್ವರ್ಯವಂತರು ಮತ್ತು ರಾಜ ಪರಿಷತ್ತಿನ ಗಣ್ಯರು ಬಂದು ಆರನೇ ದಿನ ಈ ವಿಷಯ ಕಾಶೀ ರಾಜನ ಕಿವಿಗೆ ತಲುಪಲು ಆತ ತನ್ನ ಪರವಾಗಿ ಅಮಾತ್ಯನನ್ನು ಕಳುಹಿಸಿದ. ಆತನ ಪರಿಪರಿ ವಿನಂತಿಗೂ ಮೌನವೇ ಮಾತಾಗಿತ್ತು. ಏಳನೆಯ ದಿನ ರಾಜನಾದ ಬ್ರಹ್ಮದತ್ತನೇ ಖುದ್ದಾಗಿ ಬಂದು ಆ ಪಂಡಿತನಿಗೆ ವಂದಿಸಿ ಆತನನ್ನು ಮೂರು ಸುತ್ತು ಪ್ರದಕ್ಷಣೆ ಹಾಕಿ.

'ಎಲೈ ಮಹಾಪಂಡಿತರೇ, ತಮ್ಮಂತಹ ಮಹಾತ್ಮರು ಹೀಗೆ ಉಪವಾಸ ವ್ರತಕ್ಕೆ ಕೂರುವುದು ರಾಜನಾದ ನನಗೂ ನನ್ನ ರಾಜ್ಯಕ್ಕೂ ಕಳಂಕವೇ ಸರಿ. ತಮ್ಮ ಕೋರಿಕೆಯು ನನ್ನ ಕೈಗೆ ಎಟಕುವಂತಿದ್ದರೆ ಖಂಡಿತ ಪರಿಹರಿಸಿ ತಮ್ಮ ಕೃಪೆಗೆ ಪಾತ್ರನಾಗುವೆ....!' ಎನ್ನಲು;

ಆಗ ಬೋಧಿಸತ್ವರು ತಮ್ಮ ಮೌನವನ್ನು ಮುರಿದು ತಮ್ಮ ಋಣಬಾರದ ಕಥೆಯನ್ನು ವಿನಂತಿಸಿದರು. ಆಗ ರಾಜನು ಸ್ಥಳದಲ್ಲಿಯೇ ಹದಿನಾಲ್ಕು ಚಿನ್ನದ ನಿಕಷಗಳನ್ನು ದಾನವಾಗಿ ಕೊಟ್ಟ ಬಳಿಕ.

'ಎಲೈ ಪಂಡಿತನೇ, ಇಷ್ಟು ಮಾತ್ರಕ್ಕೆ ಇಷ್ಟೊಂದು ದೀರ್ಘ ಮೌನದ ಔಚಿತ್ಯವೇನು...?!' ಎನ್ನಲು.

'ಎಲೈ ರಾಜನ್, ಯಾರ ಬಳಿ ದುಃಖವನ್ನು ನಿವಾರಿಸುವ ಶಕ್ತಿ ಇರುತ್ತದೋ ಆತನ ಬಳಿ ಶರಣಾಗುವುದೇ ಲೇಸು. ಅನ್ಯವೆಲ್ಲವು ವ್ಯರ್ಥವಲ್ಲವೆ. ...!' ಎಂದಾಗ ರಾಜನ;

'ಹೌದು ಬೋಧಿಸತ್ವರೇ, ತಾವುಗಳು ಬರೀ ಮೌನಿಗಳಷ್ಟೇ ಅಲ್ಲ, ಜ್ಞಾನಿಗಳು...!!' ಎಂದು ಮತ್ತೊಮ್ಮೆ ತಲೆ ಬಾಗಿ ಮುನ್ನೆಡೆದ. □

'SAMVADA' Kannada Monthly, Sep 2006 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕರ್ನಾಟಕ–ಉತ್ಕೃಷ್ಟ ಕಲೆ, ಸಾಹಿತ್ಯ, ಸಂಸ್ಕೃತಿ... ಗಳ ಬೀಡು

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ, ಹೃದಯ ವೈಶಾಲ್ಯತೆಯ ಮೂಲ ಸೆಲೆಯಲ್ಲಿ ಮೂಡಿಬಂದ ಈ ನಾಡಿನ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ಸಂದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬುದೇ ಸರ್ಕಾರದ ದೃಢ ಸಂಕಲ್ಪ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು ನೀಡಿರುವ ಸರ್ಕಾರ ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ವಾರ್ತೆ
Karnataka Information